ಶನಿವಾರ, ಫೆಬ್ರುವರಿ 1, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 32 | ಪುಟ 18
www.prajavani.net
prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ-ಅಗಲ
ಆರ್ಥಿಕ ಸಮೀಕ್ಷೆ ಹೇಳುವುದೇನು?

ದಾಳಿಂಬೆಗೆ ಬಂಪರ್ ಬೆಲೆ 10

ಸಾಮ್ರಾಜ್ಯಶಾಹಿತ್ವ: ಅನುಕಂಪದ ಸ್ಪರ್ಶ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
77,500	23,508	₹86,850 (ಬೆಂಗಳೂರು)	₹98,800 (ಬೆಂಗಳೂರು)	86.62

ಜಿಡಿಪಿ ಮತ್ತೆ ಮಂದಗತಿ

ಪ್ರಜಾವಾಣಿ ವಾರ್ತೆ

ನವದೆಹಲಿ: 2025–26ನೇ ಆರ್ಥಿಕ ಸಾಲಿನಲ್ಲಿಯೂ ದೇಶದ ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಬೆಳವಣಿಗೆಯು ಮಂದಗತಿಯಲ್ಲಿಯೇ ಇರಲಿದೆ ಎಂದು ಸಂಸತ್‌ನಲ್ಲಿ ಮಂಡನೆಯಾದ 2024–25ನೇ ಸಾಲಿನ ಆರ್ಥಿಕ ಸಮೀಕ್ಷೆ ಹೇಳಿದೆ.

ಸಚಿವೆ ನಿರ್ಮಲಾ ಸೀತಾರಾಮನ್ ಅವರು ಶುಕ್ರವಾರ ಈ ಸಮೀಕ್ಷೆ ಮಂಡಿಸಿದರು. 2024–25ನೇ ಆರ್ಥಿಕ ವರ್ಷದಲ್ಲಿ ಜಿಡಿಪಿಯು ಶೇ 6.4ರಷ್ಟು ಹಾಗೂ 2025–26ರಲ್ಲಿ ಶೇ 6.3ರಿಂದ ಶೇ 6.8ರಷ್ಟು ಪ್ರಗತಿ ಕಾಣಲಿದೆ ಎಂದು ಸಮೀಕ್ಷೆ ಹೇಳಿದೆ.

ಸೋನಿಯಾ ನುಡಿ ಬಿಜೆಪಿ, ‘ಕೈ’ ಜಟಾಪಟಿ

ನವದೆಹಲಿ: ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಕುರಿತು ಹೇಳಿದ್ದಾರೆ ಎನ್ನಲಾದ ‘ಪಾಪದ ಮಹಿಳೆ’ ಹಾಗೂ ‘ಪಾಪ’ ಎಂಬ ಹೇಳಿಕೆಗಳು ಶುಕ್ರವಾರ ವಿವಾದದ ಕಿಡಿ ಹೊತ್ತಿಸಿವೆ. 11

ಮುಡಾ: ರಿಯಲ್ ಎಸ್ಟೇಟ್ ಉದ್ಯಮಿಗಳ ಕರೆದು–ಕರೆದು ವ್ಯವಹಾರ: ಇ.ಡಿ

ಅಕ್ರಮ: ದಿನೇಶ್ ರೂವಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಆಯುಕ್ತರಾಗಿದ್ದ ಜಿ.ಟಿ.ದಿನೇಶ್ ಕುಮಾರ್, ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಅಕ್ರಮವಾಗಿ ನಿವೇಶನ ಹಂಚಿಕೆ ಮಾಡಿ, ಅದಕ್ಕೆ ಪ್ರತಿಫಲವಾಗಿ, ಪರೋಕ್ಷ ರೂಪದಲ್ಲಿ ಹಣ ಪಡೆದಿರುವುದನ್ನು ಜಾರಿ ನಿರ್ದೇಶನಾಲಯ (ಇ.ಡಿ) ಪತ್ತೆ ಹಚ್ಚಿದೆ.


ಜಿ.ಟಿ.ದಿನೇಶ್ ಕುಮಾರ್

ಪ್ರಾಧಿಕಾರವು ದಶಕಗಳ ಹಿಂದೆ ಸ್ವಾಧೀನ ಪಡಿಸಿಕೊಂಡಿದ್ದ ಜಮೀನಿಗೆ ಪರಿಹಾರ ನೀಡದಿದ್ದ ಮತ್ತು ಪರಿಹಾರದ ನಿವೇಶನಗಳು ಹಂಚಿಕೆ ಆಗದೇ ಇರುವ ಪ್ರಕರಣಗಳನ್ನೇ ದಿನೇಶ್ ಅವರು ಇಂತಹ ಅಕ್ರಮಕ್ಕೆ ಆಯ್ಕೆ ಮಾಡಿಕೊಳ್ಳುತ್ತಿದ್ದರು. ಅವರ ಅವಧಿಯಲ್ಲಿ ಈ ರೀತಿ 98 ನಿವೇಶನಗಳು ಹಂಚಿಕೆಯಾಗಿವೆ ಎಂದು ಇ.ಡಿ ಹೇಳಿದೆ.

ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ತನಿಖೆ ನಡೆಸುತ್ತಿರುವ ಇ.ಡಿಯು, ಈಚೆಗೆ 160 ನಿವೇಶನಗಳನ್ನು ಮುಟ್ಟುಗೋಲು ಹಾಕಿಕೊಂಡಿದೆ. ದಿನೇಶ್ ಅವರು ಅಕ್ರಮವಾಗಿ ಹಂಚಿಕೆ ಮಾಡಿದ 98 ನಿವೇಶನಗಳು ಇದರಲ್ಲಿ ಸೇರಿವೆ. ಜಾರಿ ನಿರ್ದೇಶನಾಲಯದ ಮುಟ್ಟುಗೋಲು ಆದೇಶದಲ್ಲಿ ಈ ವಿವರವಿದೆ.

6ನೇ ಪುಟ ನೋಡಿ

98 ದಿನೇಶ್ ಕುಮಾರ್ ಅಕ್ರಮವಾಗಿ ಹಂಚಿಕೆ ಮಾಡಿದ ನಿವೇಶನಗಳು

₹21.53 ಕೋಟಿ ದಿನೇಶ್, ಅವರ ಸಂಬಂಧಿ ಮತ್ತು ಆಪ್ತರಿಗೆ ಸಂದಾಯವಾದ ಮೊತ್ತ

₹59 ಲಕ್ಷ ದಿನೇಶ್ ಬಳಕೆಗಾಗಿ ರಿಯಲ್ ಎಸ್ಟೇಟ್ ಉದ್ಯಮಿ ಖರೀದಿಸಿದ ಕಾರುಗಳ ಮೌಲ್ಯ

5 ದಿನೇಶ್ ಆಪ್ತರ ಹೆಸರಿಗೆ ವರ್ಗಾವಣೆಯಾದ ನಿವೇಶನಗಳು



1 ಸಚಿವ ಎಚ್.ಸಿ.ಮಹದೇವಪ್ಪ ಅವರ ಅಣ್ಣನ ಮಗ ನವೀನ್ ಬೋಸ್‌ಗೆ ವರ್ಗಾವಣೆಯಾದ ನಿವೇಶನ (ಎನ್.ಮಂಜುನಾಥ್ ಪ್ರಕರಣ)

1 ಮುಡಾ ಅಧ್ಯಕ್ಷರಾಗಿದ್ದ ಮರೀಗೌಡ ಅವರ ಸಂಬಂಧಿ ಶಿವಣ್ಣ ಹೆಸರಿಗೆ ವರ್ಗಾವಣೆಯಾದ ನಿವೇಶನ (ಎನ್.ಮಂಜುನಾಥ್ ಪ್ರಕರಣ)

● ಈ ಎಲ್ಲ ಅಕ್ರಮಗಳು 2022ರಿಂದಲೇ ಆರಂಭವಾಗಿವೆ

ಸಂಘದ ಹೆಸರಿನಲ್ಲಿ 48 ನಿವೇಶನ



ಬೆಂಗಳೂರಿನ ರಿಯಲ್ ಎಸ್ಟೇಟ್ ಉದ್ಯಮಿ ಎನ್.ಮಂಜುನಾಥ್ ಅವರಿಗೆ ಇದೇ ರೀತಿ 48 ನಿವೇಶನಗಳನ್ನು ದಿನೇಶ್ ಕುಮಾರ್ ಅಕ್ರಮವಾಗಿ ಹಂಚಿಕೆ ಮಾಡಿದ್ದಾರೆ. ಚಾಮುಂಡೇಶ್ವರಿ ನಗರ ಸರ್ವೋದಯ ಸಂಘದ ಸದಸ್ಯರಿಗೆಂದು ನಿವೇಶನ ಹಂಚಿಕೆ ಮಾಡಿ, ಅವುಗಳನ್ನು ಮಂಜುನಾಥ್‌ಗೆ ಮಾರಾಟ ಮಾಡಿದ್ದಾರೆ ಎಂದು ಇ.ಡಿ ಹೇಳಿದೆ.



‘ಈ ವ್ಯವಹಾರಕ್ಕೆ ಸಂಬಂಧಿಸಿದಂತೆ ದಿನೇಶ್ ಕುಮಾರ್ ಅವರ ಸಂಬಂಧಿಗಳಾದ ಸತೀಶ ಜಿ., ಹೊಯ್ಸಳ ಮತ್ತು ಎಸ್.ಸಿ.ವಿನೋದ್ ಕುಮಾರ್ ಅವರ ಹೆಸರಿಗೆ ಹಲವು ನಿವೇಶನಗಳನ್ನು ವರ್ಗಾಯಿಸಲಾಗಿದೆ. ಜತೆಗೆ ಸಂಬಂಧಿಗಳ ಹೆಸರಿಗೆ ₹2.65 ಕೋಟಿ, ಆಪ್ತನಿಗೆ ₹25 ಲಕ್ಷ ಮತ್ತು ಕೆಲಸಗಾರನೊಬ್ಬನಿಗೆ ₹10 ಲಕ್ಷ ಮಂಜುನಾಥ್ ಅವರಿಂದ ವರ್ಗಾವಣೆಯಾಗಿದೆ’ ಎಂಬ ಮಾಹಿತಿ ಇ.ಡಿ ಆದೇಶದಲ್ಲಿದೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಮಹಿಳೆ, ಮಧ್ಯಮ ವರ್ಗಕ್ಕೆ ಸಿಹಿ: ಮೋದಿ

ನವದೆಹಲಿ (ಪಿಟಿಐ): ಈ ಬಾರಿಯ ಬಜೆಟ್‌ನಲ್ಲಿ ಬಡವರು, ಮಧ್ಯಮ ವರ್ಗದವರು ಮತ್ತು ಮಹಿಳೆಯರಿಗೆ ಕೆಲವು ವಿಶೇಷ ಕೊಡುಗೆಗಳನ್ನು ಘೋಷಿಸುವ ಸುಳಿವನ್ನು ಪ್ರಧಾನಿ ನರೇಂದ್ರ ಮೋದಿ ಅವರು ನೀಡಿದ್ದಾರೆ.



ಬಜೆಟ್ ಮಂಡನೆಗೆ ಮುನ್ನಾ ದಿನವಾದ ಶುಕ್ರವಾರ ಮಾತನಾಡಿದ ಅವರು, ‘ನಾನು ಸಮೃದ್ಧಿಯ ದೇವತೆ ಲಕ್ಷ್ಮಿಯನ್ನು ಪ್ರಾರ್ಥಿಸಿದ್ದೇನೆ. ಬಡವರು ಮತ್ತು ಮಧ್ಯಮ ವರ್ಗದವರ ಮೇಲೆ ಲಕ್ಷ್ಮಿ ದೇವಿಯ ವಿಶೇಷ ಅನುಗ್ರಹ ಇರಲಿ ಎಂದೂ ಪ್ರಾರ್ಥಿಸಿದ್ದೇನೆ’ ಎಂದು ಹೇಳಿದರು.

ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ಖಾತ್ರಿಪಡಿಸುವ ಮಹತ್ವವನ್ನು ಒತ್ತಿ ಹೇಳಿದ ಅವರು, ಬಜೆಟ್ ಅಧಿವೇಶನದಲ್ಲಿ ಕೆಲವೊಂದು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುವುದುಎಂದರು.

ಈ ಬಜೆಟ್ ಅಧಿವೇಶನದಲ್ಲಿ ಹಲವಾರು ಐತಿಹಾಸಿಕ ಮಸೂದೆಗಳು ಮತ್ತು ಯೋಜನೆಗಳ ಬಗ್ಗೆ ಚರ್ಚಿಸಲಾಗುವುದು. ಇವುಗಳು ಮುಂದೆ ರಾಷ್ಟ್ರವನ್ನು ಬಲಪಡಿಸು-ವಂತಹ ಕಾನೂನುಗಳಾಗಲಿವೆ ಎಂದು ತಿಳಿಸಿದರು.

ಇಂದು ಕೇಂದ್ರ ಬಜೆಟ್



ಮಧ್ಯಮ ವರ್ಗದ ಜನರ ಮೇಲಿನ ತೆರಿಗೆ ಭಾರ ಇಳಿಸುವ ಹಾಗೂ ಮಂದಗತಿಯ ಆರ್ಥಿಕತೆಗೆ ವೇಗ ನೀಡುವ ಜಟಿಲ ಸವಾಲಿನ ನಡುವೆಯೇ, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸತತ ಎಂಟನೇ ಬಾರಿಗೆ ಬಜೆಟ್ ಮಂಡಿಸಿ ಚಾರಿತ್ರಿಕ ದಾಖಲೆ ಬರೆಯಲು ಅಣಿಯಾಗಿದ್ದಾರೆ.

ಶನಿವಾರ ಬೆಳಿಗ್ಗೆ 11ಗಂಟೆಗೆ ಸಂಸತ್‌ನಲ್ಲಿ 2025–26ನೇ ಸಾಲಿನ ಕೇಂದ್ರ ಬಜೆಟ್ ಮಂಡಿಸಲಿದ್ದಾರೆ.

ಸದ್ಯ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದೆ. ಮತ್ತೊಂದೆಡೆ ಜಿಎಸ್‌ಟಿ ಏರಿಕೆಯಿಂದ ಮಧ್ಯಮ ವರ್ಗ ಬಸವಳಿದಿದೆ. ಹಾಗಾಗಿ, ಈ ಬಾರಿಯಾದರೂ ನಿರ್ಮಲಾ ಅವರು ಆದಾಯ ತೆರಿಗೆಯ ಹೊರೆ ಇಳಿಸಲಿದ್ದಾರೆಯೇ ಎಂದು ವೈಯಕ್ತಿಕ ತೆರಿಗೆದಾರರು ಬಜೆಟ್‌ನತ್ತ ಕುತೂಹಲ ನೆಟ್ಟಿದ್ದಾರೆ.





ಕಿದ್ವಾಯಿ ನಿರ್ದೇಶಕರಾಗಿ ಡಾ. ನವೀನ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಪ್ರಭಾರ ನಿರ್ದೇಶಕರಾಗಿ ಡಾ.ಟಿ.ನವೀನ್ ಅವರನ್ನು ನೇಮಿಸಲಾಗಿದೆ.

ಈ ಕುರಿತು ವೈದ್ಯಕೀಯ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದ್ದು, ಅವರು ಸಂಸ್ಥೆಯ ರೇಡಿಯೇಷನ್ ಆಂಕಾಲಜಿ ವಿಭಾಗದ ಪ್ರಾಧ್ಯಾಪಕರಾಗಿದ್ದಾರೆ.

ಸದ್ಯ ಪ್ರಭಾರ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದ ಸರ್ಜಿಕಲ್ ಅಂಕಾಲಜಿ ವಿಭಾಗದ ಪ್ರಾಧ್ಯಾಪಕ ಡಾ.ರವಿ ಅರ್ಜುನನ್ ಅವರು ಜನವರಿ 31ರಂದು ನಿವೃತ್ತಿ ಹೊಂದಿದ್ದಾರೆ. ತೆರವಾದ ಈ ಸ್ಥಾನಕ್ಕೆ ಇಲಾಖೆ ನೇಮಕಾತಿ ಪ್ರಕ್ರಿಯೆ ಆರಂಭಿಸಿದ್ದು, ಮುಂದಿನ ಆದೇಶದವರೆಗೆ ಈ ನೇಮಕಾತಿ ಜಾರಿಯಲ್ಲಿ ಇರಲಿದೆ ಎಂದು ತಿಳಿಸಲಾಗಿದೆ.

'ಕೆನರಾ ಕ್ರೆಸ್ಟ್' ಸದಸ್ಯತ್ವ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್ ಗ್ರಾಹಕರ ಅನುಕೂಲಕ್ಕಾಗಿ 'ಕೆನರಾ ಕ್ರೆಸ್ಟ್' ಸದಸ್ಯತ್ವ ಆರಂಭಿಸಿದೆ.

ಈ ಸದಸ್ಯತ್ವವನ್ನು ಕ್ರೆಸ್ಟ್ ಮತ್ತು ಕ್ರೆಸ್ಟ್ ಪ್ಲಸ್ ಎಂದು ವಿಂಗಡಿಸಲಾಗಿದೆ. ಖಾತೆಯಲ್ಲಿ ಕ್ರಮವಾಗಿ ₹10 ಲಕ್ಷದಿಂದ ₹50 ಲಕ್ಷ ಮತ್ತು ₹50 ಲಕ್ಷ ಹಾಗೂ ಅದಕ್ಕಿಂತ ಹೆಚ್ಚಿನ ಮೊತ್ತ ಕಾಯ್ದುಕೊಳ್ಳುವ ಗ್ರಾಹಕರಿಗೆ ಈ ಸೌಲಭ್ಯ ದೊರೆಯಲಿದೆ ಎಂದು ಬ್ಯಾಂಕ್ ತಿಳಿಸಿದೆ.

ಶೂನ್ಯ ವೆಚ್ಚದ ಈ ಸದಸ್ಯತ್ವವು ಅರ್ಹ ಗ್ರಾಹಕರಿಗೆ ಆಹ್ವಾನದ ಮೂಲಕ ಅಥವಾ ಕೆನರಾ ಕ್ರೆಸ್ಟ್ ಅಡಿ ಹೊಸ ಉಳಿತಾಯ ಖಾತೆ ತೆರೆಯುವವರಿಗೆ ಲಭಿಸಲಿದೆ ಎಂದು ತಿಳಿಸಿದೆ.

ಗ್ರಾಹಕರು ಡಿಜಿಟಲ್ ಇಂಟರ್‌ಫೇಸ್ ಮೂಲಕ ಈ ಯೋಜನೆಗೆ ಸೇರ್ಪಡೆಯಾಗಬಹುದು. ಕೆನರಾ ಕ್ರೆಸ್ಟ್ ಪಾರಂಪರಿಕ ಬ್ಯಾಂಕಿಂಗ್ ಸೇವೆಯನ್ನು ಮೀರಿ ವಿಶೇಷ ಜೀವನಶೈಲಿ ಸೌಲಭ್ಯಗಳನ್ನು ನೀಡುತ್ತದೆ. ಸದಸ್ಯರು ಆಸಿ ಡೈನರ್ ಸದಸ್ಯತ್ವದ ಮೂಲಕ ಪ್ರೀಮಿಯಂ ಭೋಜನದ ಕೊಡುಗೆ, ಫಿಟ್‌ಪಾಸ್ ಪ್ರೊ ಮ್ಯಾಕ್ಸ್ ಸದಸ್ಯತ್ವದೊಂದಿಗೆ ಅನಿಯಮಿತ ಜಿಮ್ ಪ್ರವೇಶದ ಸವಲತ್ತನ್ನು ಪಡೆಯಬಹುದು.

24 ಗಂಟೆ ಕಾಲ್‌ಸೆಂಟರ್ ಸೌಲಭ್ಯವಿದೆ. ಹೆಚ್ಚಿನ ಮಾಹಿತಿಗೆ ಹತ್ತಿರದ ಕೆನರಾ ಬ್ಯಾಂಕ್ ಶಾಖೆ ಅಥವಾ ವೆಬ್‌ಸೈಟ್‌ಗೆ ಭೇಟಿ ನೀಡಬಹುದು ಎಂದು ತಿಳಿಸಿದೆ.

ಭ್ರಷ್ಟ ಅಧಿಕಾರಿಗಳ ವಿರುದ್ಧ ತನಿಖೆ ನಡೆಸುವಂತೆ ರೈತ ಮೋರ್ಚಾ ಆಗ್ರಹ

ಹಾಪ್‌ಕಾಮ್ಸ್ ವಿರುದ್ಧ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಪ್‌ಕಾಮ್ಸ್ ಆಡಳಿತ ಮಂಡಳಿಯನ್ನು ಸೂಪರ್‌ಸೀಡ್ ಮಾಡಿ, ಭ್ರಷ್ಟ ಅಧಿಕಾರಿಗಳ ವಿರುದ್ಧ ತನಿಖೆ ನಡೆಸಬೇಕು ಎಂದು ಬಿಜೆಪಿ ರೈತ ಮೋರ್ಚಾ ಆಗ್ರಹಿಸಿದೆ.

ಬೆಂಗಳೂರಿನ ಹಾಪ್‌ಕಾಮ್ಸ್ ಕೇಂದ್ರ ಕಚೇರಿ ಮುಂದೆ ಶುಕ್ರವಾರ ಪ್ರತಿಭಟನೆ ನಡೆಸಿದ ಮೋರ್ಚಾ ಪದಾಧಿಕಾರಿಗಳು, 'ರೈತರಿಗೆ ಸಹಕಾರಿಯಾಗಿ ಕಾರ್ಯ ನಿರ್ವಹಿಸಬೇಕಿದ್ದ ಹಾಪ್‌ಕಾಮ್ಸ್, ಕಾಂಗ್ರೆಸ್ ಆಡಳಿತದಲ್ಲಿ ರೈತ ವಿರೋಧಿ ಮತ್ತು ದಲ್ಲಾಳಿಗಳ ಪರವಾದ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ' ಎಂದು ಆರೋಪಿಸಿದರು.


ಹಾಪ್‌ಕಾಮ್ಸ್ ಕೇಂದ್ರ ಕಚೇರಿಗೆ ರೈತ ಮೋರ್ಚಾ ಪದಾಧಿಕಾರಿಗಳು ಮುತ್ತಿಗೆ ಹಾಕಲು ಹೊರಟಾಗ ಅವಕಾಶ ನೀಡದ ಪೊಲೀಸರು ಪದಾಧಿಕಾರಿಗಳನ್ನು ಬಂಧಿಸಿ ಸಿದ್ದಾಪುರ ಠಾಣೆಗೆ ಕರೆದೊಯ್ದರು. 'ಪ್ರಜಾಸತ್ತಾತ್ಮಕ ಪ್ರತಿಭಟನೆಗೆ ಅವಕಾಶ ನೀಡುತ್ತಿಲ್ಲ' ಎಂದು ಪೊಲೀಸ್ ಠಾಣೆಯ ಮುಂಭಾಗ ಅವರು ಪ್ರತಿಭಟಿಸಿ, ಧಿಕ್ಕಾರ ಕೂಗಿದರು.

ಬೆಂಗಳೂರು ಅಲ್ಲದೇ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಬೆಂಗಳೂರು ಗ್ರಾಮಾಂತರ ಮತ್ತು ನಗರ ಹಾಪ್‌ಕಾಮ್ಸ್ ಕಚೇರಿಗಳ ಮುಂಭಾಗದಲ್ಲಿಯೂ ಪ್ರತಿಭಟನೆ ನಡೆಸಿದರು. ಇದರಲ್ಲಿ ರೈತರು ಭಾಗವಹಿಸಿದ್ದರು. ಬಿಜೆಪಿ ರೈತ ಮೋರ್ಚಾದ ಪ್ರಧಾನ ಕಾರ್ಯದರ್ಶಿಗಳಾದ ಡಾ.ನವೀನ್ ಕುಮಾರ್ ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ರಾಜ್ಯ ಕಾರ್ಯದರ್ಶಿ ಸತೀಶ್ ಕಡತಲಮನೆ, ರೈತ ಮೋರ್ಚಾ ಉಪಾಧ್ಯಕ್ಷ ರುದ್ರೇಶ್ ಮತ್ತು ಐದು ಜಿಲ್ಲೆಗಳ ರೈತ ಮೋರ್ಚಾ ಜಿಲ್ಲಾಧ್ಯಕ್ಷರು ಭಾಗವಹಿಸಿದ್ದರು.



ಬಿಜೆಪಿ ರೈತ ಮೋರ್ಚಾ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಹಾಪ್‌ಕಾಮ್ಸ್ ಕಚೇರಿ ಬಳಿ ಪ್ರತಿಭಟನೆ ನಡೆಸಿದರು

ಎಸ್.ಜಿ.ಸಿದ್ದರಾಮಯ್ಯ, ಮೀನಾಕ್ಷಿ ಬಾಳಿಗೆ ಜಿಎಸ್‌ಎಸ್ ಪ್ರಶಸ್ತಿ





ಬೆಂಗಳೂರು: ಡಾ.ಜಿಎಸ್‌ಎಸ್ ವಿಶ್ವಸ್ಥ ಮಂಡಲಿ ನೀಡುವ ರಾಷ್ಟ್ರಕವಿ ಡಾ.ಜಿ.ಎಸ್. ಶಿವರುದ್ರಪ್ಪ ಪ್ರಶಸ್ತಿಗೆ ಸಾಹಿತಿ ಎಸ್.ಜಿ. ಸಿದ್ದರಾಮಯ್ಯ, ಕವಯಿತ್ರಿ ಮೀನಾಕ್ಷಿ ಬಾಳಿ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ₹15 ಸಾವಿರ ನಗದು, ಸ್ಮರಣಿಕೆಯನ್ನು ಹೊಂದಿದ್ದು, ಜಿಎಸ್‌ಎಸ್ ಜನ್ಮದಿನವಾದ ಫೆ. 7ರಂದು ಬಸವನಗುಡಿಯಲ್ಲಿರುವ ನ್ಯಾಷನಲ್ ಕಾಲೇಜಿನ ಮಲ್ಟಿ ಮೀಡಿಯ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ವಿಶ್ವಸ್ಥ ಮಂಡಲಿಯ ಗೌರವಾಧ್ಯಕ್ಷ ಬಸವರಾಜ್ ಕಲ್ಗುಡಿ ಮತ್ತು ಅಧ್ಯಕ್ಷ ನಟರಾಜ ಬೂದಾಳ್ ತಿಳಿಸಿದ್ದಾರೆ.

'ಹೊಸದಾಗಿ ಜನಗಣತಿ ನಡೆಸಿ'

ಪ್ರಜಾವಾಣಿ ವಾರ್ತೆ



ದಲಿತ ಸಂಘರ್ಷ ಸಮಿತಿ ರಾಜ್ಯ ಸಂಘಟನಾ ಸಂಚಾಲಕ ಮರಿಯಪ್ಪ ಹಳ್ಳಿ ನೇತೃತ್ವದ ನಿಯೋಗ ನಿವೃತ್ತ ನ್ಯಾಯಮೂರ್ತಿ ಎಚ್. ಎನ್. ನಾಗಮೋಹನದಾಸ್ ನೇತೃತ್ವದ ಏಕ ಸದಸ್ಯ ಆಯೋಗಕ್ಕೆ ಮನವಿ ಸಲ್ಲಿಸಿತು

ಬೆಂಗಳೂರು: 2011ರ ಜನಗಣತಿ ಹದಿಮೂರು ವರ್ಷದಷ್ಟು ಹಳೆಯದಾಗಿದೆ. ಆ ಗಣತಿಯ ವರದಿಯಲ್ಲಿ ಆದಿ ಆಂಧ್ರ, ಆದಿ ದ್ರಾವಿಡ ಮತ್ತು ಆದಿ ಕರ್ನಾಟಕ ಜಾತಿಗಳನ್ನು ಪರಿಶಿಷ್ಟ ಜಾತಿಯ ಪಟ್ಟಿಯಿಂದ ಕೈ ಬಿಡುವಂತೆ ದಲಿತ ಸಂಘರ್ಷ ಸಮಿತಿ ಮನವಿ ಮಾಡಿದೆ.

ಸಮಿತಿಯ ರಾಜ್ಯ ಸಂಘಟನಾ ಸಂಚಾಲಕ ಮರಿಯಪ್ಪ ಹಳ್ಳಿ ನೇತೃತ್ವದ ನಿಯೋಗ ನಿವೃತ್ತ ನ್ಯಾಯಮೂರ್ತಿ ಎಚ್. ಎನ್. ನಾಗಮೋಹನದಾಸ್ ನೇತೃತ್ವದ ಏಕ ಸದಸ್ಯ ಆಯೋಗಕ್ಕೆ ಮನವಿ ಸಲ್ಲಿಸಿತು.

2011ರ ಜನಗಣತಿ ಪ್ರಕಾರ ಪರಿಶಿಷ್ಟ ಜಾತಿಗಳ ಜನಸಂಖ್ಯೆ 1,04,74,992. ಆದರೆ, ರಾಜ್ಯ ಸರ್ಕಾರದ 2023ರ ಅಧಿಕೃತ ಅಂದಾಜಿನ ಪ್ರಕಾರ, ಈ ಸಮುದಾಯಗಳ ಜನಸಂಖ್ಯೆ ಸುಮಾರು 1.41 ಕೋಟಿ. ಹಾಗಾಗಿ ಹೊಸದಾಗಿ ಜನಗಣತಿ ನಡೆಸುವುದು ಸೂಕ್ತ ಎಂದು ತಿಳಿಸಿದೆ.

2025ರಲ್ಲಿ ಕೇಂದ್ರ ಸರ್ಕಾರ ನಡೆಸಲಿರುವ ಜನಗಣತಿಯಲ್ಲಿ ಆದಿ ಆಂಧ್ರ, ಆದಿ ದ್ರಾವಿಡ ಮತ್ತು ಆದಿ ಕರ್ನಾಟಕ ಜಾತಿಗಳನ್ನು ಕೈ ಬಿಟ್ಟು ಕಲಹಾಕುವ ದತ್ತಾಂಶದ ಪ್ರಕಾರ ಒಳ ಮೀಸಲಾತಿ ಜಾರಿಗೊಳಿಸುವುದು ಸೂಕ್ತ. ಆದ್ದರಿಂದ ಆದಿ ಕರ್ನಾಟಕ, ಆದಿ ಆಂಧ್ರ, ಆದಿ ದ್ರಾವಿಡ ಎಂಬ ದಾಖಲೆಗಳನ್ನು ರದ್ದು ಮಾಡಿ, ಆಯಾ ಉಪ ಜಾತಿಗಳ ಹೆಸರು ಬಳಸಿ ಜಾತಿ ಜನಗಣತಿ ನಡೆಸಬೇಕು. 2011ರ ಜನಗಣತಿ ಪ್ರಕಾರ ಒಳ ಮೀಸಲಾತಿಯ ವರ್ಗೀಕರಣ ನಿಗದಿ ಮಾಡಿದರೆ, ಗೊಂದಲ ಉಂಟಾಗಿ, ಸಮಸ್ಯೆ ಮತ್ತಷ್ಟು ಕಗ್ಗಂಟಾಗಲಿದೆ ಎಂದು ಹೇಳಿದೆ.

ನಿಯೋಗದಲ್ಲಿ ಸಮಿತಿಯ ಖಜಾಂಚಿ ಬಿ.ಗಂಗನಂಜಯ್ಯ, ವಿಭಾಗೀಯ ಸಂಚಾಲಕ ಶಿವಲಿಂಗಯ್ಯ, ಸಂಘಟನಾ ಸಂಚಾಲಕರಾದ ಎಂ.ಎಸ್. ಕೃಷ್ಣಮೂರ್ತಿ, ಎ.ಸರವಣ, ಜಿಲ್ಲಾ ಸಂಚಾಲಕ ಸಿ ಶ್ರೀನಿವಾಸ್, ಸಂಘಟನಾ ಸಂಚಾಲಕ ಬಿ.ಸಿ. ರಾಮಣ್ಣ ಇದ್ದರು.

ಪ್ರಭು ಗುರಪ್ಪನವರಗೆ ರಂಗ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ತೊ. ನಂಜುಂಡಸ್ವಾಮಿ ಗೆಳೆಯರ ಬಳಗ ನೀಡುವ ರಂಗ ಪ್ರಶಸ್ತಿಗೆ ರಂಗ ಸಂಘಟಕರೂ ಆಗಿರುವ ರಂಗ ನಿರ್ದೇಶಕ ಪ್ರಭು ಗುರಪ್ಪನವರ ಆಯ್ಕೆಯಾಗಿದ್ದಾರೆ.

ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಶೇಷಗಿರಿ ಗ್ರಾಮದವರಾದ ಪ್ರಭು ಗುರಪ್ಪನವರ ಅವರು, ಅಲ್ಲಿ ನಡೆದ ರಂಗ ಚಳವಳಿಯ ಪ್ರಮುಖರಲ್ಲಿ ಒಬ್ಬರಾಗಿದ್ದಾರೆ. ಅವರು ಶೇಷಗಿರಿ ರಂಗ ಮಂದಿರಕ್ಕೆ ಬೆನ್ನೆಲುಬಾಗಿದ್ದರು. ಗಜಾನನ ಯುವಕ ಮಂಡಳಿ ಮೂಲಕ ಅವರು ಅನೇಕ ಸಾಮಾಜಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದಾರೆ.

ಇದೇ 10ರಂದು ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಅವರು ಪ್ರಶಸ್ತಿ ಪ್ರದಾನ ಮಾಡುತ್ತಾರೆ ಎಂದು ಬಳಗದ ಸಂಚಾಲಕ ಗುಂಡಣ್ಣ ಚಿಕ್ಕಮಗಳೂರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಡಬಲ್ಸ್ ಪ್ರಶಸ್ತಿಯೊಂದಿಗೆ ದಿಶಾ ಬೆಹರಾ ಮತ್ತು ಅರ್ಜಾನ್ ಖೋರಕಿವಾಲಾ

ಅರ್ಜಾನ್–ದಿಶಾಗೆ ಡಬಲ್ಸ್ ಪ್ರಶಸ್ತಿ

ಬೆಂಗಳೂರು: ಮೈಸೂರಿನ ಅರ್ಜಾನ್ ಖೋರಕಿವಾಲಾ ಮತ್ತು ಬೆಂಗಳೂರಿನ ದಿಶಾ ಬೆಹರಾ ಅವರು ಇಲ್ಲಿ ನಡೆಯುತ್ತಿರುವ ಟಾಪ್‌ಸ್ಪಿನ್ ಎಐಟಿಎ ರಾಷ್ಟ್ರೀಯ ರ‍್ಯಾಂಕಿಂಗ್ ಮಹಿಳೆಯರ ಟೆನಿಸ್ ಟೂರ್ನಿಯಲ್ಲಿ ಡಬಲ್ಸ್ ಪ್ರಶಸ್ತಿಯನ್ನು ಗೆದ್ದರು.

ಅರ್ಜಾನ್ ಮತ್ತು ದಿಶಾ ಜೋಡಿಯು ಫೈನಲ್‌ನಲ್ಲಿ 7-5, 6-3ರಿಂದ ಅಗ್ರ ಶ್ರೇಯಾಂಕದ ಸೋನಿಕಾ ಜಗದೀಶ್ ಮತ್ತು ಚಂದನಾ ಪಿ. ಅವರನ್ನು ಮಣಿಸಿತು.

ಪರಿಕ್ರಮ ತಂಡಕ್ಕೆ ಭರ್ಜರಿ ಗೆಲುವು

ಬೆಂಗಳೂರು: ಪರಿಕ್ರಮ ಎಫ್‌ಸಿ 6–2 ಗೋಲುಗಳಿಂದ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್‌ನ ಪಂದ್ಯದಲ್ಲಿ ಶುಕ್ರವಾರ ಬೆಂಗಳೂರು ಇಂಡಿಪೆಂಡೆಂಟ್ಸ್ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ರೂಟ್ಸ್ ಎಫ್‌ಸಿ 4–1 ಗೋಲುಗಳಿಂದ ಬಿಯುಎಫ್‌ಸಿ ತಂಡವನ್ನು ಸೋಲಿಸಿತು.

ನಗರದಲ್ಲಿ ಇಂದು

ಕರವೇ 25ನೇ ವರ್ಷದ ನೈಜ ಸಂಭ್ರಮ, ಕನ್ನಡಮ್ಮನ ಜಾನಪದ ಸಮಾವೇಶ: ಜಾನಪದ ಮೆರವಣಿಗೆಗೆ ಚಾಲನೆ: ಮಂಜಮ್ಮ ಜೋಗತಿ, ಸಮಾವೇಶದ ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ಕುವೆಂಪು ವೇದಿಕೆ ಉದ್ಘಾಟನೆ: ವಿ. ಸೋಮಣ್ಣ, ಸಾಧಕರಿಗೆ ಗೌರವ ಸಮರ್ಪಣೆ: ಜಮೀರ್ ಅಹಮದ್ ಖಾನ್, ಅಭಿನಂದನಾ ಗ್ರಂಥ ಬಿಡುಗಡೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಮುಖ್ಯ ಅತಿಥಿಗಳು: ಎಚ್. ಎಂ.ರೇವಣ್ಣ, ಲಕ್ಷ್ಮಣ ಕೊಡಸೆ, ಪ್ರಾಸ್ತಾವಿಕ ನುಡಿ: ಎಚ್. ಶಿವರಾಮೇಗೌಡ, ಆಯೋಜನೆ: ಕರ್ನಾಟಕ ರಕ್ಷಣಾ ವೇದಿಕೆ, ಸ್ಥಳ: ಪುಟ್ಟಣ್ಣಚೆಟ್ಟಿ ಪುರಭವನ (ಟೌನ್ ಹಾಲ್), ಬೆಳಿಗ್ಗೆ 10


ಮಂಜಮ್ಮ ಜೋಗತಿ

‘ಐಕ್ಯಂ’ ಕಾಲೇಜು ವಾರ್ಷಿಕೋತ್ಸವ: ಮುಖ್ಯ ಅತಿಥಿಗಳು: ಎಸ್. ಸಚ್ಚಿದಾನಂದ, ಅಶೋಕ್ ಎನ್. ಛಲವಾದಿ, ಗೌರವ ಅತಿಥಿಗಳು: ಕೆ. ಚಂದ್ರಶೇಖರ, ಚೇತನ್ ಚಂದ್ರಶೇಖರ, ಆಯೋಜನೆ: ಭಗವಾನ್ ಬುದ್ಧ ಹೋಮಿಯೋಪಥಿಕ್ ಮೆಡಿಕಲ್ ಕಾಲೇಜ್ ಆ್ಯಂಡ್ ಹಾಸ್ಪಿಟಲ್, ಸ್ಥಳ: ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಯುನಾನಿ ಮೆಡಿಸಿನ್ ಸಭಾಂಗಣ, ಕೊಟ್ಟಿಗೆಪಾಳ್ಯ, ಮಾಗಡಿ ಮುಖ್ಯರಸ್ತೆ, ಬೆಳಿಗ್ಗೆ 10

ಸುಬ್ರಹ್ಮಣ್ಯ ಸ್ವಾಮಿ ರಥೋತ್ಸವ: ಆಯೋಜನೆ ಹಾಗೂ ಸ್ಥಳ: ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ ಟ್ರಸ್ಟ್, ಸುಬ್ರಹ್ಮಣ್ಯಪುರ, ಬೆಳಿಗ್ಗೆ 10ರಿಂದ

‘ಪಾತ್ರಕ್ಕೆ ಬೇಕಾದ ಪೂರ್ವಸಿದ್ಧತೆಗಳು’ ವಿಷಯದ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಸಂವಾದ: ಶ್ರೀಮುರಳಿ, ಶ್ರೀನಿಧಿ ಅವರ ‘ಟ್ವೆಲ್ವ್’, ಶ್ರೀಕಾಂತ್ ಅವರ ‘ಕೂರ್ಮೆ’, ಆದರ್ಶ್ ಎಚ್. ಈಶ್ವರಪ್ಪ ಅವರ ‘ಸಾಕ್ಷಾತ್ಕಾರ’ ಕಿರುಚಿತ್ರ ಬಿಡುಗಡೆ, ಆಯೋಜನೆ ಹಾಗೂ ಸ್ಥಳ: ಟೆಂಟ್ ಸಿನಿಮಾ, ನಾಗತಿಹಳ್ಳಿ ಸಿನಿಮಾ ಶಾಲೆ, ಬನಶಂಕರಿ, ಬೆಳಿಗ್ಗೆ 11.30

ಪುರಂದರ ನಮನ, ದಾಸವಾಣಿ ಕರ್ನಾಟಕ ವಾರ್ಷಿಕೋತ್ಸವ ಹಾಗೂ ಪ್ರಶಸ್ತಿ ಪ್ರದಾನ: ಮುಖ್ಯ ಅತಿಥಿಗಳು: ಹ.ರಾ. ನಾಗರಾಜಾಚಾರ್ಯ, ಹುಸೇನ್ ಸಾಬ್ ಕನಕಗಿರಿ, ಜೀರಿಗೆ ಲೋಕೇಶ್, ಪ್ರಶಸ್ತಿ ಪುರಸ್ಕೃತರು: ಶೀಲಾ ದಾಸ್, ಅಪರ್ಣ ಆನಂದ್, ಗುರುರಾಜ್ ಪೋಶೆಟ್ಟಿಹಳ್ಳಿ, ವಾರುಣಿ ಜಯತೀರ್ಥ, ಶಾಂತಾ ರಘೋತ್ತಮಾಚಾರ್, ಸುಮಲತಾ ಮಂಜುನಾಥ್, ಪ್ರಸನ್ನ ಕುಲಕರ್ಣಿ, ಆಯೋಜನೆ:ದಾಸವಾಣಿ ಕರ್ನಾಟಕ, ಸ್ಥಳ: ಉಡುಪಿ ಪುತ್ತಿಗೆ ಮಠ, ಬಸವನಗುಡಿ, ಸಂಜೆ 4

‘ಸ್ಫೂರ್ತಿ–2025’ ಶಾಲಾ–ಕಾಲೇಜು ವಾರ್ಷಿಕೋತ್ಸವ: ಸಾನ್ನಿಧ್ಯ: ಬಾಲಕೃಷ್ಣಾನಂದ ಸ್ವಾಮಿಜಿ, ಉದ್ಘಾಟನೆ: ಎಂ. ಕೃಷ್ಣಪ್ಪ, ಬಹುಮಾನ ವಿತರಣೆ: ಸಾಧು ಕೋಕಿಲ, ಅಧ್ಯಕ್ಷತೆ: ಬಿ.ಎಂ. ಪಟೇಲ್‌ಪಾಂಡು, ಆಯೋಜನೆ ಹಾಗೂ ಸ್ಥಳ: ಪಟೇಲ್‌ಗುಳ್ಳಪ್ಪ ಕನ್ನಡ ಪ್ರಾಥಮಿಕ ಮತ್ತು ಪ್ರೌಢಶಾಲೆ, ಪಟೇಲ್ ಗುಳ್ಳಪ್ಪ ಪದವಿಪೂರ್ವ ಮತ್ತು ಪದವಿ ಕಾಲೇಜು ಆವರಣ, ಆವಲಹಳ್ಳಿ, ಮುನೇಶ್ವರ ಬ್ಲಾಕ್, ಸಂಜೆ 4

‘ಡೈಮಂಡ್’ ಉತ್ಸವ: ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಶಿಕ್ಷಣ ರತ್ನ ಪ್ರಶಸ್ತಿ ಪ್ರದಾನ: ನ್ಯಾ.ಎನ್. ಸಂತೋಷ್ ಹೆಗ್ಡೆ, ಆಯೋಜನೆ ಹಾಗೂ ಸ್ಥಳ: ಡೈಮಂಡ್ ಪಿಯು ಕಾಲೇಜ್ ಫಾರ್ ಬಾಯ್ಸ್ ಆ್ಯಂಡ್ ಗರ್ಲ್ಸ್, ಡೈಮಂಡ್ ನಗರ, ಕೆ.ಆರ್. ಪುರ, ಸಂಜೆ 4

ಬೇಂದ್ರೆ ಅವರ ‘ಅವಿಭಕ್ತ: ಶ್ರೀ ವಿಠ್ಠಲ ಚಿಂತನೆಗಳ ಕುರಿತ ವ್ಯಾಖ್ಯಾನಗಳು’ ಪುಸ್ತಕದ ಬಗ್ಗೆ ಮಾತುಕತೆ ಮತ್ತು ಸಂವಾದ: ಎಚ್.ಎಸ್. ರಾಘವೇಂದ್ರ ರಾವ್, ಲಕ್ಷ್ಮೀಶ ತೋಳ್ಪಾಡಿ, ಓ.ಎಲ್. ನಾಗಭೂಷಣಸ್ವಾಮಿ, ಆನಂದ ಝುಂಜರವಾಡ, ಆಯೋಜನೆ: ಪ್ರಕೃತಿ ಪ್ರಕಾಶನ, ಸ್ಥಳ: ನಾಣಿ ನೆನಪಿನ ಅಂಗಳ, ಸುಚಿತ್ರಾ ಫಿಲ್ಮ್ ಸೊಸೈಟಿ, ಬನಶಂಕರಿ ಎರಡನೇ ಹಂತ, ಸಂಜೆ 4.30

ಮೇಟಿ ಮಲ್ಲಿಕಾರ್ಜುನ್ ಅವರ ‘ಸಂಸ್ಕೃತಿ ವೈಚಾರಿಕತೆ ರಾಜಕಾರಣ’, ಅಗ್ರಹಾರ ಕೃಷ್ಣಮೂರ್ತಿ ಅವರ ‘ನಾಡವರ್ಗಳ್’, ಶ್ರುತಿ ಬಿ.ಆರ್. ಅವರ ‘ಎಲ್ಲೆಗಳ ದಾಟಿದವಳು’ ಪುಸ್ತಕ ಬಿಡುಗಡೆ: ಮುಖ್ಯ ಅತಿಥಿಗಳು: ಕೆ.ವಿ. ನಾರಾಯಣ, ರಹಮತ್ ತರೀಕೆರೆ, ಗೀತಾ ವಸಂತ್, ಆಯೋಜನೆ: ಜೀರುಂಡೆ ಪುಸ್ತಕ, ಸ್ಥಳ: ದೇವರಾಜ್ ಅರಸು ಗ್ಯಾಲರಿ, ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5

ವೀರಭದ್ರಸ್ವಾಮಿ ಪ್ರತಿಷ್ಠಾಪನೆ ಮತ್ತು ವಿಮಾನ ಗೋಪುರ, ರಾಜ ಗೋಪುರದ ಮಹಾ ಕುಂಬಾಭಿಷೇಕ: ಬೆಳ್ಳಿ ಕವಚ ಅಲಂಕಾರ, ಆಯೋಜನೆ ಮತ್ತು ಸ್ಥಳ: ಸ್ವಯಂಬು ಕಾಳಿಯಮ್ಮ ದೇವಾಲಯ, ಹಲಸೂರು ಮಾರುಕಟ್ಟೆ, ಸಂಜೆ 5

‘ಲಿವಿಂಗ್ ಲೈಟ್ಸ್’ ಉತ್ಸವ: ಗಾಯನ: ಶಿಲ್ಪಾ ಮುಡಬಿ, ಆಯೋಜನೆ: ಇಂದಿರಾ ಗಾಂಧಿ ಕಲಾ ಕೇಂದ್ರದ ಪ್ರಾದೇಶಿಕ ಕಚೇರಿ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5

‘ಆಡು ಮುಟ್ಟದ ಸೊಪ್ಪಿಲ್ಲ–ನಾಡೋಜ ಡಾ. ವೂಡೇ ಪಿ. ಕೃಷ್ಣ’ ಪುಸ್ತಕ ಬಿಡುಗಡೆ: ಕೃಷ್ಣ ಎಸ್. ದೀಕ್ಷಿತ್, ಅಧ್ಯಕ್ಷತೆ: ಆರ್. ದೇವದಾಸ್, ಅಭಿನಂದನೆ: ವೂಡೇ ಪಿ. ಕೃಷ್ಣ, ಮುಖ್ಯ ಅತಿಥಿಗಳು: ಮಲ್ಲೇಪುರಂ ಜಿ. ವೆಂಕಟೇಶ, ಎಸ್.ಜಿ. ಸುಶೀಲಮ್ಮ, ಗೋನಾಳ್ ಭೀಮಪ್ಪ, ಕೃತಿಯ ಲೇಖಕ: ಜಾಂಬವ ಎಂ. ಗಂಗಾಧರ್, ಆಯೋಜನೆ: ಆದಿ ಜಾಂಬವ ಜಾಗೃತಿ, ಸ್ಥಳ: ಮಹದೇವ ದೇಸಾಯಿ ಸಭಾಂಗಣ, ಗಾಂಧಿಭವನ, ಶಿವಾನಂದ ವೃತ್ತ, ಸಂಜೆ 5.30

ಮಡಿವಾಳ ಮಾಚಿದೇವ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ಶಿವಯೋಗಾನಂದ ಮಹಾಪುರಿ ಸ್ವಾಮೀಜಿ, ಬಸವ ಮಾಚಿದೇವ ಸ್ವಾಮೀಜಿ, ಮುಕ್ತಾನಂದ ಸ್ವಾಮೀಜಿ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ಎಸ್. ತಂಗಡಗಿ, ಅಧ್ಯಕ್ಷತೆ: ಉದಯ್ ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 6

60ನೇ ನಾದಜ್ಯೋತಿ ಸಂಗೀತ ಸಂಭ್ರಮ, ವಜ್ರ ಮಹೋತ್ಸವದ ಸಂಭ್ರಮ: ಉದ್ಘಾಟನೆ: ನ್ಯಾ.ಮಂಜುಳಾ ಚೆಲ್ಲೂರ್, ಮುಖ್ಯ ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಆರ್.ವಿ. ರಾಘವೇಂದ್ರ, ಭರತನಾಟ್ಯ: ಕಾವ್ಯಾ ಕಾಶಿನಾಥ್, ಅರ್ಚನಾ ಭಟ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಸೇವಾಸದನ, ಮಲ್ಲೇಶ್ವರ, ಸಂಜೆ 6



ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

---

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Anjanapura

ANJANAPURA SITE for Sale 6th Block 30x40 BDA North Facing good Location Owner Meeting Direct Buyer Broker excuse. Contact: 9901549488, 9945427003

ANJANAPURA SITE for sale 4th Block 30/40 Facing south good location immediate construction near last Bus stop. Contact: 9845132011, 9663554448

Banashankari

BANASHANKARI 6TH STAGE- BDA-AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

MANTRALAYA ENTERPRISES: BUYING And SELLING BDA/A Khatha SITES/ BANASHANKARI 6th Stage, Anjanapura, Vishweswaraiah Layout. 9945724472.

KODI PALYA Off Uttarahalli Kengeri Main Road 40x65, North, E-Katha Site, 40' Road, Sale 10,000/-sft. 9845232711

SALE BSK 6th-Stage 5th Block 40x60 East Facing 40feet Road 60feet Parallel Road Further details Call:9845117825

Basaweshwaranagar

SALE BASVESHWARNAGAR Commercial South 40×60, Residential North 40×60, 30×40 West, 30×51 East Facing: 8660075308/ 9448273220.

BASAVESHWARA NAGAR BDA KHB Colony Near Punya Hospital 45x60 North Facing 25,000/- 'PRAKASH ENTERPRISES' 98456-09477

Gnanabharathi

DIRECT OWNER 30x40 BDA Site Sale. Gnanabharathi 2nd Block, Amma Ashrama, Full Developed Area. 9886634578

Hesaraghatta

HESARAGHATTA ROAD, Kirloskar Lyt A Khata 1450 Sqft Corner Plot For Sale. Contact: 9845288846

Kanakapura Road

KAGGALIPURA 'E' Khatha Site Sale 60x90 West Facing Gated Community 3,950/- Psqft. Negotioble 9740150364/ 8884707773

Kempegowda Layout

KEMPEGOWDA LAYOUT, Commercial BDA Site for Sale 20x30, 30x40, 40x60, 50x80, Contact: Kumar 9945119449

NPKLAYOUT 5TH Block A Sector 40x60 WF Behind Archakara Badavane Sale 7500/- Negotiable Resale 9986387202

Mysore

SITES @MYSORE DTCP Facing State Highway `A`Khatha,RERA, 100%Completed Layout, Rs.1700-2050 PerSft, 85%Loan Immediate Registration, Near HD Kote Road. 10Minutes to Airport,Ring Road, 15Minutes to Palace: 9845287802/ 8050001571.

Nagarabhavi

SALE: 60*40 Site with 21 years Building with 5Flats. Good Location, NGEF Layout, Nagarabhavi. Rs.3.90 Crore, Negotiable; 8296620408, 9740071085

SALE: SITE 30x60 Nagarabhavi 2nd Stage, 'A' Khata. Immediate Registration. Genuine Buyers. Contact:6361819741.

NAGARBHAVI 40X61 Site for sale South facing NGEF Layout (BDA appvd) Nagarbhavi Call 8660065216

Rajarajeshwari Nagar

40X77 (3080.SQFT.) East`Facing, A & E Khata, BBMP`Site Sale`at SrinivasaNagar Near Krishnappa Layout,RR.Nagar Price: 3.10.Cr. Call: 9167979901.

Tumkur Road

SALE COMMERCIAL site Tumkur Road, West facing, BDA 75x125, Near Orion'Mall, Metro cash&carry, facing 200ft road. 9900276199.

Vishweshwariah Layout

VISHWESWARAIAH BDA 9th`Block.40x60 South Facing Site#518 40 Feet`Road Near Ambedkar Engineering College. Price 11,000/- Negotiable. Direct Owner. Call: 9844947990 8431089761.

"VISHVESWARAIAH 6TH-BLOCK 40x60 East facing Allottee Site Sale near 100`ft Road, Genuine Buyers only. 9845268611"

AVAILABLE/ WANTED BDA Sites Vishweshwariah Layout 50x80, 40X60, 30X40, 20X30 Genuine Buyers And Sellers 9743381719

AVAILABLE VISHWESHWARAIAH Layout 40X60 2nd Block 40ft Road, Near 100ft Road, Good Location. Contact: 8553908699

BDA-SITE SALE Vishweshwaraiah Layout,1st Block 40x60,South, Very good Location 40ft Road Genuine Buyers Only Call:9513332646 9902764626.

30X40 EAST FACING SITE SALE Vishweshwaraiah Layout 6th Block, Clear Title. Genuine Buyers Contact: 8105688602.



House

Jayanagar

SALE HOUSES & Flats Jayanagar JPNagar Banashankari 30x40 30x50, 40x60, 60x90 Price 2.9cr To 10cr CLASSIC ESTATES 9845302589

J P Nagar

HOUSE SALE: J.P.Nagar, 6th Phase, BDA site, E/F, 4 bedroom, Separate car shed. eKhatha available. Contact: 9880402575.

J.P.NAGAR 4TH Dollars Layout 50x80, 4 unit House with Lift, 4,70,000/- monthly Rental income, Sale- 11,50,00,000/- 9740292904

JP NAGAR 1st Phase East facing 30X40 Residential house for sale Near Nandini Hotel Price 3.25 Cr nego. Contact: 9845600007

Kanakapura Road

4 BEDROOM Designed Stone Constructed Duplex House And Hallow Bricks Factory For Sale Contact: 9916817739

Vijayanagar

PRASHANTH NAGAR 40x57 4 BHK Duplex House 3 Bathrooms Attach 2 Carparking S/F: 9448045601/ 9535811626

Flat

M G Road And Around

IMMEDIATE Purchase 3/4BHK Apartment Around MG Road Budget Upto 7 Crores Owners Contact: 8884501767

Uttarahalli

2/3/4 BHK New FLATS SALE, A Khatha, Ready-move. 40L/ 75L/ 1Cr. Carparking, Cauvery, Vaasthu. 9945224058, 6360501159.

Hulimavu

APARTMENT FOR SALE 2 BHK 1200 SQFT W/F SEMI FURNISHED GATED COMMUNITY ALL AMENITIES NEAR TO METRO STATION HULIMAVU, 59LACS. SLIGHTLY NEGOTIABLE BROKERS EXCUSE. CONTACT: 7026500097

WEEKEND CORNER ಕ್ಲಾಸಿಫೈಡ್ಸ್











Agricultural Land Converted

Mysore

2 ACRE, 20 gunta land Mysore 40ft Road sale. Price 2500 per sft. Contact. 9380586105

Agricultural Land

Out-Station

9LAKHS PER ACRE suitable for agriculture Solar Poultry,(Hiriyur Challakere) 35acre and 5acre Immediately Settlement 8951240669

Commercial Building

Bommanahalli

BOMMANAHALLI 50X80 WEST Facing Commercial Building 15,000/-Sqft. 28x40 South`Facing G+3`Floor Building Rent 80K, 2.10cr. Near Metro Station. Contact: Sri Balamuri Properties. 9980445588, 9986895559.

Commerical

BTM Layout

BTM 2ND (Gundurao Layout) Commercial, 70x50`North East`Corner site,`Sale 8,82,00000/- Bannerghatta Road 40x60`Opp. Jayadeva Metro station 8,40,00000/- 9740292904

Vishweshwariah Layout

FOR SALE 50x80 BDA Commercial Site On 100 feet Road, East facing, at 6th BLOCK, Sir M.V. Layout. Direct owner Contact: 9880956229. BROKERS EXCUSE

Industrial & Factory

Magadi Road

MAGADI ROAD, INDUSTRIAL CONVERSATION LAND, MACHOHALLI, TAVAREKERE, NELAMANGALA, DOBASPETE SALE & RENT CONTACT: 8971851966/ 9880781399

Joint Development

Begur

BEGUR MICO LAYOUT 43 Guntas Land For Sale/ JV Clear Titles, Distress Sale. Owner: 9481801053

Joint Venture

INVESTOR REQUIRED for Property Projects (Secured & Buy Back) and Solar Projects, Very Good Returns, 8951240669

REAL ESTATE BUYING

Industrial & Factory

General

WANTED 5000SFT to 20000sft and upto 10Acres in private industrial land and KIADB allotted land at Bengaluru Urban and Rural district.call Verna Developers, MG-Road,Blr. 9916310226/ 9353128035.

Sites

Anjanapura

WANTED BDA Site Anjanapura, Banashankari 6th Stage,Vishweshwaraia h layout & any BDA Katha & Mysore MUDA Sites, immediate settlement. genuine Sellers Contact:9902038118, 9449060605

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT: 9845062822/ 8660751654

Kanakapura Road

WANTED SITE 30x40, 40x60 Jayanagar Housing Society, Anjanapura BDA, BCC Housing Society Banashankari`6th Stage, Agent Excuse. Call: 9663454878.

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Nagarabhavi

"WANTED RHSCS, MPM, Visweshwaraiah 8th, 6th Blocks 40x60,30x40 North, East Direct Registration, genuine Sellers. 7259675150"

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

RENTAL PROPERTIES

Accommodation Available

Commercial

COMMERCIAL CONVERTED Land for RENT, 61410 sqft.for Built-to-Suit, exclusively off parking space and park,`with BIAAPA approved plan.`Situated on Bangalore Hyderabad National Highway (NH-7),Near Devanahalli. Contact: 9916929394.

LONG TERM Office Rental Old Airport Road VDB TOUCHDOWN Next to HAL Museum. 7447Sqft Fully Fitted Out Office with 96 Work Stations 5 Cabins 3 Meeting 1 Board, 1 MD Cabin, 1 Cafeteria. WhatsApp Msg Only: 9845031550

Flats

FOR LEASE: 2 Bedroom Flat 1st Floor, with Carparking, Basaweshwara Nagar, Bangalore-79. Rs.27 Lakhs. 9980133336.

LEELA RESIDENCE Bhartiya City Premium 3 Bed room + 2 Carpark semi-Furnished Contact Tel 98806-43419 what app +852-94359784

Industrial And Factory

AVAILABLE OF Industrial Shed of 170000`sqft at Soukya Road, Whitefield. Available Built-to-Suit Warehouse 160000 sqft.`Vijipura Hoskote Contact: 9341234288/ 9663224353/ 9845417487.

FOR RENT 12,000 sqft of Empty Compounded Land in KIADB 2nd Phase, Harohalli. Contact: 9972299585.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

JOB OPPORTUNITIES

Engg/ Production Technical

PREM INDUSTRIES Plastic Injection Moulding Plant @ Mysore, Requires Production Head & Manager, Quality Head & Manager. Minimum 7 Years Experience in Operations & Position with Complete Knowledge in Process / Plastic Moulds. Contact: hr@premind.com 8105305827/ 9364005127

Teachers/ Professors

TEACHERS FOR Primary & High school. Two teachers for Science, Maths, Social Science, English, Hindi & Kannada. Walk-in interview on 01, 02/02/2025, 11AM) 9449835744, 9535601743

MATRIMONIAL

Brides Wanted

Bride Required Others

ENGINEER, 52, 6 feet, own company, Bangalore, unmarried seeks graduate below 47. Mob 8698966952.

PERSONAL

Change of Name

CHANGE OF NAME
I, **V. Vinod Kumar Reddy** S/o V.T.Vishwanatha Reddy, residing at # 26, 14th Cross, 11th Main, Wilson Garden, Bengaluru-560030, have changed my name to **VINOD REDDY V** Vide affidavit dated 17.01.2025 before Notary Venkoba,Bengaluru Henceforth I shall be called as **VINOD REDDY V** only

I, SUDARSAN PADMANABHAN S/o.Padmmanaban Vaidhiyanathan, residing at Flat No.104,1st Floor SLV Nakshtra, Horamavu Post, Bengaluru-560043. have changed my name to SUDARSAN PADMMANABAN vide affidavit dated 18.01.2025 sworn before Notary Uday Kumar.K, Bengaluru.

CHANGE OF NAME
I, **VISHWANATHA PADUR,** R/@ No. 599, 8th A Main, Vijaya Bank Layout, Bilekahalli, Bangalore-560076, have changed my name to **VISHWANATH PADUR** Vide affidavit dt:31/01/2025, before notary K.V. Mani, Bangalore. Henceforth I shall be called as **VISHWANATH PADUR** only

CHANGE OF NAME
I, **L.S. ASHWINI,** residing at # 256, 3rd Main Road, Jaga Jyothi Layout, Bengaluru-560056 declare that my Father's name is mentioned as **LOKASUNDAR** in some documents, correct name is **LOKSUNDAR** vide affidavit dated 31-01-2025, before notary H.R. Karunakara, Bengaluru.

I, SAMPATH KUMAR KONDIKAL GANGADHAR R/a#240/27, Ground Floot 9th Main Road, Near Nandini Public School, Nandini Layout, Bengaluru- 560096, have changed name SAMPATH KUMAR vide affidavit 31.01.2025 before Notary Hemalatha, Bengaluru

ಆರು ಪಥಗಳ 28 ಕಿ.ಮೀ. ಉದ್ದದ ರಸ್ತೆ ನಿರ್ಮಿಸುವ ಉದ್ದೇಶ • ₹25 ಸಾವಿರ ಕೋಟಿ ವೆಚ್ಚ

ಪೂರ್ವ–ಪಶ್ಚಿಮ ಸುರಂಗ ರಸ್ತೆಗೆ ಡಿಪಿಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಆರು ಪಥಗಳಲ್ಲಿ, 'ಟ್ವಿನ್ ಟ್ಯೂಬ್ ಟನಲ್' ಮಾದರಿಯಲ್ಲಿ ಪೂರ್ವ-ಪಶ್ಚಿಮ ಕಾರಿಡಾರ್ ಸುರಂಗ ರಸ್ತೆ ನಿರ್ಮಾಣಕ್ಕೆ ಬಿಬಿಎಂಪಿ ಸಿದ್ಧತೆ ಆರಂಭಿಸಿದೆ. ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ಟೆಂಡರ್ ಆಹ್ವಾನಿಸಿದೆ.


ಸಂಚಾರ ಸುಗಮಗೊಳಿಸಲು ಹೆಬ್ಬಾಳದಿಂದ ಸಿಲ್ಕ್ ಬೋರ್ಡ್‌ವರೆಗೆ 18 ಕಿ.ಮೀ. ಉದ್ದದ 'ಉತ್ತರ-ದಕ್ಷಿಣ ಕಾರಿಡಾರ್' ಸುರಂಗ ರಸ್ತೆ ನಿರ್ಮಾಣಕ್ಕೆ ಫೆಬ್ರುವರಿಯಲ್ಲಿ ಟೆಂಡರ್ ಆಹ್ವಾನಿಸಲಾಗುತ್ತದೆ. ವೆಚ್ಚ ₹17,780 ಕೋಟಿ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇತ್ತೀಚೆಗೆ ತಿಳಿಸಿದ್ದರು.

ಮುಖ್ಯಾಂಶಗಳು

- ಎರಡು ಹಂತಗಳಲ್ಲಿ ಸುರಂಗ ರಸ್ತೆ ನಿರ್ಮಾಣ
- ಕಾರ್ಯಸಾಧ್ಯತಾ ವರದಿ ನಕ್ಷೆಸಹಿತ ಸಿದ್ಧ

ಎರಡು ಹಂತಗಳಲ್ಲಿ ಸುರಂಗ ರಸ್ತೆ ಯೋಜನೆಗೆ ಬಿಬಿಎಂಪಿ, ಸರ್ಕಾರದಿಂದ ಅನುದಾನ ನೀಡಲಾಗುತ್ತದೆ.

ಪವರ್ ಫೈನಾನ್ಸ್ ಕಾರ್ಪೊರೇಷನ್, ಹುಡ್ಕೊ ಸಾಲ ನೀಡಲು ಮುಂದೆ ಬಂದಿವೆ. ಕಡಿಮೆ ಬಡ್ಡಿ ಇರುವೆಡೆ ಹರಾಜಿನ ಮೂಲಕ ಅವಕಾಶ ನೀಡಲಾಗುತ್ತದೆ ಎಂದೂ ತಿಳಿಸಿದ್ದರು.



ಪೂರ್ವ– ಪಶ್ಚಿಮ 'ಟ್ವಿನ್ ಟ್ಯೂಬ್ ಟನಲ್' ನಕ್ಷೆ

ಬಿಬಿಎಂಪಿ ವ್ಯಾಪ್ತಿಯಲ್ಲಿ 2ನೇ ಹಂತದಲ್ಲಿ ಯೋಜಿಸಿರುವ ಪೂರ್ವ–ಪಶ್ಚಿಮ ಕಾರಿಡಾರ್ ಸುರಂಗ ಮಾರ್ಗದಲ್ಲಿ 'ಟ್ವಿನ್ ಟ್ಯೂಬ್ ಟನಲ್'ನಲ್ಲಿ (ಡಬಲ್ ಡೆಕ್) 6 ಪಥಗಳ 28 ಕಿ.ಮೀ. ಉದ್ದದ ರಸ್ತೆ ನಿರ್ಮಿಸಲು ಉದ್ದೇಶಿಸಲಾಗಿದೆ. ಇದಕ್ಕೆ ಸುಮಾರು ₹25 ಸಾವಿರ ಕೋಟಿ ವೆಚ್ಚವಾಗುವ ಅಂದಾಜಿದೆ.

ಕೆ.ಆರ್. ಪುರದಿಂದ ಜವಾಹರ ಲಾಲ್ ನೆಹರೂ ಉದ್ಯಾನ, ಸಿ.ವಿ. ರಾಮನ್ ಆಸ್ಪತ್ರೆ, ಇಂದಿರಾನಗರ, ದೊಮ್ಮಲೂರು, ಲಾಲ್‌ಬಾಗ್, ನ್ಯಾಷನಲ್ ಕಾಲೇಜ್, ಚಾಮರಾಜಪೇಟೆ ಕಾರ್ಯಸಿದ್ಧಿ ಆಂಜನೇಯ ದೇವಸ್ಥಾನದ ಮೂಲಕ ನಾಯಂಡಹಳ್ಳಿ ಬಳಿಯ ನೈಸ್ ರಸ್ತೆ ಜಂಕ್ಷನ್‌ವರೆಗೆ ಪೂರ್ವ–ಪಶ್ಚಿಮ ಕಾರಿಡಾರ್ ಸುರಂಗ ಮಾರ್ಗ ನಿರ್ಮಿಸುವ ಕಾರ್ಯಸಾಧ್ಯತಾ ವರದಿ ನಕ್ಷೆಸಹಿತ ಇದೆ.

ಇದೀಗ ಡಿಪಿಆರ್ ತಯಾರಿಸಲು ಮುಂದಾಗಿದ್ದು, ಟೆಂಡರ್ ಅಂತಿಮಗೊಂಡ ನಂತರದ ಎಂಟು ವಾರದಲ್ಲಿ ಡಿಪಿಆರ್ ಸಿದ್ಧವಾಗಲಿದೆ.

ಫೇಸ್‌ಬುಕ್‌ನಲ್ಲಿ ಖಾತೆ ಸೃಷ್ಟಿಸಿ ವಂಚನೆ

ಪ್ರಜಾವಾಣಿ ವಾರ್ತೆ


ಕಾಸಿಫ್ ದಾನೀಶ್ ಶಶಿಕುಮಾರ್ ಮಹಮ್ಮದ್ ಶಫಿ ಮುದಾಸಿರ್ ಅಜರುದ್ದೀನ್ ಇಮ್ತಿಯಾಜ್ ಪಾಷಾ

ಬೆಂಗಳೂರು: ಫೇಸ್‌ಬುಕ್‌ನಲ್ಲಿ ನಕಲಿ ಖಾತೆ ಸೃಷ್ಟಿಸಿ ವಂಚಿಸುತ್ತಿದ್ದ ಏಳು ಆರೋಪಿಗಳನ್ನು ಆಗ್ನೇಯ ವಿಭಾಗದ ಆಡುಗೋಡು ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ಜೆ.ಪಿ. ನಗರದ ಶಶಿಕುಮಾರ್ (25), ಮಂಡಿಮೊಹಲ್ಲಾದ ಸೈಯದ್ ಕಾಸಿಫ್ (31), ರಾಜೀವ್‌ನಗರದ ಮೊಹಮ್ಮದ್ ಮುದಾಸಿರ್(36), ಉದಯಗಿರಿಯ ಶಫಿ(38), ಇಮ್ತಿಯಾಜ್ ಪಾಷಾ(33), ಲಷ್ಕರ್ ಮೊಹಲ್ಲಾದ ಅಜರುದ್ದೀನ್(32) ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆ ಶಿಡ್ಲಘಟ್ಟದ ಸೈಯದ್ ದಾನೀಶ್(20) ಬಂಧಿತರು.

ವಂಚನೆ ನಡೆಸಿ ಎಲ್ಲರೂ ಮೈಸೂರಿನಲ್ಲಿ ತಲೆಮರೆಸಿಕೊಂಡಿದ್ದರು ಎಂದು ಪೊಲೀಸರು ಹೇಳಿದರು.

ಮೊಹಮ್ಮದ್ ಕಾಶಿಫ್ ಎಂಬಾತನ ಸ್ನೇಹಿತನ ಹೆಸರಿನಲ್ಲಿ ಫೇಸ್‌ಬುಕ್ ಖಾತೆ ಸೃಷ್ಟಿಸಿದ್ದ ಆರೋಪಿಗಳು, ₹1.50 ಲಕ್ಷ ವರ್ಗಾಯಿಸಿಕೊಂಡು ವಂಚಿಸಿದ್ದರು.

ಬಂಧಿತರಿಂದ ಒಂಬತ್ತು ಮೊಬೈಲ್ ಫೋನ್‌ಗಳು, 11 ಬ್ಯಾಂಕ್ ಪಾಸ್‌ಬುಕ್, ಆರು ಚೆಕ್ ಬುಕ್, 31 ಎಟಿಎಂ ಕಾರ್ಡ್, ಒಂಬತ್ತು ಆಧಾರ್ ಕಾರ್ಡ್‌ಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ದೂರುದಾರ ಮೊಹಮ್ಮದ್ ಕಾಶಿಫ್‌ಗೆ ಜ.7ರಂದು ಅವರ ಸ್ನೇಹಿತರೊಬ್ಬರ ಹೆಸರು ಹಾಗೂ ಫೋಟೊ ಹೊಂದಿದ್ದ ಫೇಸ್‌ಬುಕ್ ಖಾತೆಯಿಂದ ಫ್ರೆಂಡ್ ರಿಕ್ವೆಸ್ಟ್ ಬಂದಿತ್ತು. ಅದು ನಿಜವೆಂದು ನಂಬಿದ್ದ ಕಾಶಿಫ್, ಆ ರಿಕ್ವೆಸ್ಟ್ ಅನ್ನು ಸ್ವೀಕರಿಸಿದ್ದರು. ಅದಾದ ಕೆಲವೇ ಹೊತ್ತಿನಲ್ಲಿ ಪ್ರೊಫೈಲ್‌ನಿಂದ, 'ನಾನು ದುಬೈನಲ್ಲಿದ್ದು, ಕೆಲವೇ ದಿನಗಳಲ್ಲಿ ಭಾರತಕ್ಕೆ ಬರುತ್ತಿದ್ದೇನೆ. ನನ್ನ ಬಳಿಯಿರುವ ಅಪಾರವ ಹಣವನ್ನು ಭಾರತಕ್ಕೆ ತೆಗೆದುಕೊಂಡು ಬಂದರೆ ಹೆಚ್ಚಿನ ತೆರಿಗೆ ಪಾವತಿಸಬೇಕು. ಆ ಹಣವನ್ನು ತಮ್ಮ ಖಾತೆಗೆ ವರ್ಗಾವಣೆ ಮಾಡುತ್ತೇನೆ. ನಾನು ಬೆಂಗಳೂರಿಗೆ ಬಂದಾಗ ಹಣ ಪಡೆಯುತ್ತೇನೆ' ಎಂದು ಸಂದೇಶ ಕಳುಹಿಸಿ ನಂಬಿಸಿ ವಂಚಿಸಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಕಳ್ಳತನದ ಭಯ? ಪೊಲೀಸರಿಗೆ ಮಾಹಿತಿ ನೀಡಿ

ಬೆಂಗಳೂರು: ಮನೆಗಳ್ಳತನ ತಡೆಯಲು ದಕ್ಷಿಣ ವಿಭಾಗದ ಪೊಲೀಸರು ವಿನೂತನ ಕ್ರಮ ಕೈಗೊಂಡಿದ್ದಾರೆ.

ಮನೆಗೆ ಬೀಗ ಹಾಕಿ ಪ್ರವಾಸ, ದೇವಸ್ಥಾನ ಹಾಗೂ ಸಮಾರಂಭಕ್ಕೆ ಹೋಗುವಾಗ ಮರೆಯದೆ ದಕ್ಷಿಣ ವಿಭಾಗದ ಪೊಲೀಸ್ ಸಹಾಯವಾಣಿ 08022943111 ಅಥವಾ ಮೊಬೈಲ್ ಸಂಖ್ಯೆ 9480801500ಗೆ ಕರೆ ಮಾಡಿ, ನಿಮ್ಮ ಮನೆಯ ಭಾವಚಿತ್ರ, ವಿಳಾಸ, ಮೊಬೈಲ್ ನಂಬರ್ ತಿಳಿಸಬಹುದು.

ಬೀಗ ಹಾಕಿರುವ ಮನೆಯ ಭಾವಚಿತ್ರ, ವಿಳಾಸದ ವಿವರ ನೀಡಿದರೆ ಪೊಲೀಸರು ಮನೆಯತ್ತ ನಿಗಾವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

₹46.01 ಲಕ್ಷ ಮೌಲ್ಯದ ಅಕ್ರಮ ಮದ್ಯ ವಶ

ಪ್ರಜಾವಾಣಿ ವಾರ್ತೆ


ಅಬಕಾರಿ ಪೊಲೀಸರು ವಶಕ್ಕೆ ಪಡೆದ ಅಕ್ರಮ ಮದ್ಯ

ಅಪರಾಧ ಸುದ್ದಿ

ಬೆಂಗಳೂರು: ಫೇಸ್‌ಬುಕ್‌ನಲ್ಲಿ ನಕಲಿ ಖಾತೆ ಸೃಷ್ಟಿಸಿ ವಂಚಿಸುತ್ತಿದ್ದ ಏಳು ಆರೋಪಿಗಳನ್ನು ಆಗ್ನೇಯ ವಿಭಾಗದ ಆಡುಗೋಡು ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ಜೆ.ಪಿ. ನಗರದ ಶಶಿಕುಮಾರ್ (25), ಮಂಡಿಮೊಹಲ್ಲಾದ ಸೈಯದ್ ಕಾಸಿಫ್ (31), ರಾಜೀವ್‌ನಗರದ ಮೊಹಮ್ಮದ್ ಮುದಾಸಿರ್(36), ಉದಯಗಿರಿಯ ಶಫಿ(38), ಇಮ್ತಿಯಾಜ್ ಪಾಷಾ(33), ಲಷ್ಕರ್ ಮೊಹಲ್ಲಾದ ಅಜರುದ್ದೀನ್(32) ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆ ಶಿಡ್ಲಘಟ್ಟದ ಸೈಯದ್ ದಾನೀಶ್(20) ಬಂಧಿತರು.

ವಂಚನೆ ನಡೆಸಿ ಎಲ್ಲರೂ ಮೈಸೂರಿನಲ್ಲಿ ತಲೆಮರೆಸಿಕೊಂಡಿದ್ದರು ಎಂದು ಪೊಲೀಸರು ಹೇಳಿದರು.

ಮೊಹಮ್ಮದ್ ಕಾಶಿಫ್ ಎಂಬಾತನ ಸ್ನೇಹಿತನ ಹೆಸರಿನಲ್ಲಿ ಫೇಸ್‌ಬುಕ್ ಖಾತೆ ಸೃಷ್ಟಿಸಿದ್ದ ಆರೋಪಿಗಳು, ₹1.50 ಲಕ್ಷ ವರ್ಗಾಯಿಸಿಕೊಂಡು ವಂಚಿಸಿದ್ದರು.

ಬಂಧಿತರಿಂದ ಒಂಬತ್ತು ಮೊಬೈಲ್ ಫೋನ್‌ಗಳು, 11 ಬ್ಯಾಂಕ್ ಪಾಸ್‌ಬುಕ್, ಆರು ಚೆಕ್ ಬುಕ್, 31 ಎಟಿಎಂ ಕಾರ್ಡ್, ಒಂಬತ್ತು ಆಧಾರ್ ಕಾರ್ಡ್‌ಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ದೂರುದಾರ ಮೊಹಮ್ಮದ್ ಕಾಶಿಫ್‌ಗೆ ಜ.7ರಂದು ಅವರ ಸ್ನೇಹಿತರೊಬ್ಬರ ಹೆಸರು ಹಾಗೂ ಫೋಟೊ ಹೊಂದಿದ್ದ ಫೇಸ್‌ಬುಕ್ ಖಾತೆಯಿಂದ ಫ್ರೆಂಡ್ ರಿಕ್ವೆಸ್ಟ್ ಬಂದಿತ್ತು. ಅದು ನಿಜವೆಂದು ನಂಬಿದ್ದ ಕಾಶಿಫ್, ಆ ರಿಕ್ವೆಸ್ಟ್ ಅನ್ನು ಸ್ವೀಕರಿಸಿದ್ದರು. ಅದಾದ ಕೆಲವೇ ಹೊತ್ತಿನಲ್ಲಿ ಪ್ರೊಫೈಲ್‌ನಿಂದ, 'ನಾನು ದುಬೈನಲ್ಲಿದ್ದು, ಕೆಲವೇ ದಿನಗಳಲ್ಲಿ ಭಾರತಕ್ಕೆ ಬರುತ್ತಿದ್ದೇನೆ. ನನ್ನ ಬಳಿಯಿರುವ ಅಪಾರವ ಹಣವನ್ನು ಭಾರತಕ್ಕೆ ತೆಗೆದುಕೊಂಡು ಬಂದರೆ ಹೆಚ್ಚಿನ ತೆರಿಗೆ ಪಾವತಿಸಬೇಕು. ಆ ಹಣವನ್ನು ತಮ್ಮ ಖಾತೆಗೆ ವರ್ಗಾವಣೆ ಮಾಡುತ್ತೇನೆ. ನಾನು ಬೆಂಗಳೂರಿಗೆ ಬಂದಾಗ ಹಣ ಪಡೆಯುತ್ತೇನೆ' ಎಂದು ಸಂದೇಶ ಕಳುಹಿಸಿ ನಂಬಿಸಿ ವಂಚಿಸಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಆತ್ಮಹತ್ಯೆಗೆ ಯತ್ನಿಸಿದ ಆರೋಪಿ

ರಹೇಜಾ ಪಾರ್ಕ್, ಕಾಮಾಕ್ಷಿಪಾಳ್ಯ ಮತ್ತು ಬಸವೇಶ್ವರನಗರದ ಪ್ರಕರಣಗಳಲ್ಲಿ ಕೆ.ವಿ.ಜಗನ್ನಾಥ ಅವರನ್ನು ವಶಕ್ಕೆ ಪಡೆಯಲಾಗಿದೆ. ಅಬಕಾರಿ ಪೊಲೀಸರ ವಶದಲ್ಲಿ ಇದ್ದಾಗಲೇ ಫಿನಾಯಿಲ್ ಕುಡಿದ ಅವರು ಆತ್ಮಹತ್ಯೆಗೆ ಯತ್ನಿಸಿದ್ದಾರೆ ಎಂದು ಇಲಾಖೆ ತಿಳಿಸಿದೆ.

ಆರೋಪಿಯನ್ನು ತಕ್ಷಣವೇ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ಕೊಡಿಸಲಾಗಿದೆ. ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕರ್ತವ್ಯಕ್ಕೆ ಅಡ್ಡಿಪಡಿಸಿದ ಮತ್ತು ಆತ್ಮಹತ್ಯೆಗೆ ಯತ್ನಿಸಿದ ಸಂಬಂಧ ಪೊಲೀಸ್ ಠಾಣೆಯಲ್ಲಿ ಆತನ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಮಾಹಿತಿ ನೀಡಿದೆ.



ಜಮೀನಿನ ಪೌತಿ ಖಾತೆ ಮಾಡಿಕೊಡಲು ಲಂಚಕ್ಕಾಗಿ ಬೇಡಿಕೆ ಇಟ್ಟಿದ್ದರು

₹2.25 ಲಕ್ಷ ಲಂಚ: ಗ್ರಾಮಲೆಕ್ಕಿಗರ ಬಂಧನ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಪೌತಿ ಖಾತೆ ಮಾಡಿಕೊಡಲು ₹2.25 ಲಕ್ಷ ಲಂಚ ಪಡೆಯುತ್ತಿದ್ದ ವೇಳೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಗ್ರಾಮ ಲೆಕ್ಕಾಧಿಕಾರಿಗಳಾದ (ವಿಎ) ಸುನೀಲ್ ಮತ್ತು ಮಡಿವಾಳಪ್ಪ ಎಂಬುವವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ದೊಡ್ಡಬಳ್ಳಾಪುರ ನಿವಾಸಿ ಗೌತಮ್ ಎಂಬುವವರು ತಮ್ಮ ಪತ್ನಿಯ ಸಂಬಂಧಿಯ ಜಮೀನಿನ ಪೌತಿ ಖಾತೆ ಮಾಡಿಸಲು ದೇವನಹಳ್ಳಿಯ ವಿಜಯಪುರ ಹೋಬಳಿಯ ಗ್ರಾಮ ಲೆಕ್ಕಾಧಿಕಾರಿ ಕಚೇರಿಯಲ್ಲಿ ಅರ್ಜಿ ಸಲ್ಲಿಸಿದ್ದರು. ಜಮೀನಿನ ಸ್ಥಳ ಮಹಜರು ನಡೆಸಿದ್ದ ಅಧಿಕಾರಿಗಳು ವರದಿ ನೀಡಲು ₹2.25 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು.

ಗೌತಮ್ ದೂರು ನೀಡಿದ್ದು, ಲೋಕಾಯುಕ್ತ ಎಸ್‌ಪಿ ಪವನ್ ನೆಜ್ಜೂರ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು. ದೂರುದಾರರು ಸುನೀಲ್, ಮಡಿವಾಳಪ್ಪ ಅವರಿಗೆ ಲಂಚ ನೀಡುವಾಗ ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು. ಹಣ ವಶಕ್ಕೆ ಪಡೆದಿದ್ದು, ತನಿಖೆ ಮುಂದುವರೆದಿದೆ ಎಂದು ಲೋಕಾಯುಕ್ತ ಇನ್‌ಸ್ಪೆಕ್ಟರ್ ಜೆ.ರಮೇಶ್ ಅವರು ತಿಳಿಸಿದ್ದಾರೆ.


ಸುನೀಲ್


ಮಡಿವಾಳಪ್ಪ

ಕೊಲೆಗೆ ಯತ್ನ: ಮೂವರ ಬಂಧನ

ಬೆಂಗಳೂರು: ದ್ವಿಚಕ್ರ ವಾಹನ ಸವಾರನಿಗೆ ಕಾರಿನಿಂದ ಗುದ್ದಿಸಿ ಕೊಲೆಗೆ ಯತ್ನಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಆರೋಪಿಗಳನ್ನು ಸುಬ್ರಮಣ್ಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಂದಿನಿ ಲೇಔಟ್ ನಿವಾಸಿಗಳಾದ ಪವನ್, ಮಹೇಶ್, ಅಭಿಲಾಷ್ ಬಂಧಿತರು. ಮಲ್ಲೇಶ್ವರದ ಮಿಲ್ಕ್ ಕಾಲೊನಿ ನಿವಾಸಿ ಎನ್.ಭರತ್ ದೂರು ನೀಡಿದ್ದರು ಎಂದು ಪೊಲೀಸರು ಹೇಳಿದರು.

ಮಲ್ಲೇಶ್ವರದ 17ನೇ ಅಡ್ಡರಸ್ತೆಯಲ್ಲಿರುವ ಪಬ್‌ವೊಂದರ ಎದುರು ಈ ಘಟನೆ ನಡೆದಿತ್ತು. ಸಿ.ಸಿ.ಟಿ.ವಿ. ಕ್ಯಾಮೆರಾ ಸುಳಿವು ಆಧರಿಸಿ ಆರೋಪಿಗಳನ್ನು ಪತ್ತೆಹಚ್ಚಿ ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಅಪಘಾತ: ಎಂಜಿನಿಯರಿಂಗ್ ವಿದ್ಯಾರ್ಥಿ ಸಾವು

ಬೆಂಗಳೂರು: ತಲಘಟ್ಟಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಅಂಜನಾಪುರದ ಬಳಿ ಸಂಭವಿಸಿದ ಅಪಘಾತದಲ್ಲಿ ಎಂಜಿನಿಯರ್ ವಿದ್ಯಾರ್ಥಿ ಮೃತಪಟ್ಟಿದ್ದಾರೆ.

ಕೋಲಾರದ ರಾಹುಲ್ ಗೌತಮ್(20) ಮೃತಪಟ್ಟವರು.

ಕಾಲೇಜೊಂದರಲ್ಲಿ ಎಂಜಿನಿಯರಿಂಗ್ ಓದುತ್ತಿದ್ದ ರಾಹುಲ್ ತನ್ನ ಸ್ನೇಹಿತ ಚಿರಾಗ್ ಜತೆಗೆ ಗುರುವಾರ ರಾತ್ರಿ ದ್ವಿಚಕ್ರ ವಾಹನದಲ್ಲಿ ಅಂಜನಾಪುರದ 80 ಅಡಿ ರಸ್ತೆಯಲ್ಲಿ ತೆರಳುತ್ತಿದ್ದರು. ವೇಗವಾಗಿ ತೆರಳುತ್ತಿದ್ದ ವೇಳೆ ವಾಹನ ನಿಯಂತ್ರಣ ತಪ್ಪಿ ಉರುಳಿಬಿದ್ದಿದೆ.

ಹಿಂಬದಿ ಕುಳಿತಿದ್ದ ರಾಹುಲ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಚಿರಾಗ್ ತೀವ್ರವಾಗಿ ಗಾಯಗೊಂಡಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು. ತಲಘಟ್ಟಪುರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗಾಳಿಯಲ್ಲಿ ಗುಂಡು ಹಾರಿಸಿ ರೌಡಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾನ್‌ಸ್ಟೆಬಲ್ ಹಲ್ಲೆ ನಡೆಸಿ ಪರಾರಿ ಆಗಿದ್ದ ರೌಡಿಯನ್ನು ಎಚ್‌ಎಎಲ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕಿರಣ್ (28) ಬಂಧಿತ ಆರೋಪಿ. ಈತ ಎಚ್‌ಎಎಲ್ ಠಾಣೆಯ ರೌಡಿಶೀಟರ್ ಆಗಿದ್ದಾನೆ.

ಎಚ್‌ಎಎಲ್ ಕಾನ್‌ಸ್ಟೆಬಲ್ ಸುನಿಲ್ ಅವರ ಮೇಲೆ ಹಲ್ಲೆ ನಡೆಸಿದ್ದು, ಪ್ರಕರಣ ದಾಖಲಾದಂತೆ ತಲೆಮರೆಸಿಕೊಂಡಿದ್ದ.

ಹೊಸ ತಿಪ್ಪಸಂದ್ರದಲ್ಲಿ ಕಿರಣ್ ಇರುವ ಬಗ್ಗೆ ಸುಳಿವು ಸಿಕ್ಕಿತ್ತು. ಕಾರ್ಯಾಚರಣೆ ಆರಂಭಿಸಿದ ಎಚ್‌ಎಎಲ್ ಠಾಣೆ ಇನ್‌ಸ್ಪೆಕ್ಟರ್ ನೇತೃತ್ವದ ತಂಡವು ಶುಕ್ರವಾರ ಮುಂಜಾನೆ 4.45ರ ಸುಮಾರಿಗೆ ಜೀವನ್ ಭೀಮಾನಗರ ಪೊಲೀಸ್ ಠಾಣೆಯ ತಿಪ್ಪಸಂದ್ರದಲ್ಲಿ ಆತನನ್ನು ಪತ್ತೆ ಹಚ್ಚಿತ್ತು. ಆತನನ್ನು ಬಂಧಿಸಲು ಹೋದಾಗ ಕಾನ್‌ಸ್ಟೆಬಲ್ ಮೇಲೆ ಮತ್ತೆ ಹಲ್ಲೆಗೆ ಯತ್ನಿಸಿದ್ದ. ಆ ವೇಳೆ ಎಚ್‌ಎಎಲ್ ಠಾಣೆಯ ಇನ್‌ಸ್ಪೆಕ್ಟರ್ ಗಾಳಿಯಲ್ಲಿ ಒಂದು ಸುತ್ತು ಗುಂಡು ಹಾರಿಸಿ ಶರಣಾಗುವಂತೆ ಸೂಚಿಸಿದ್ದರು. ಆದರೆ, ರೌಡಿ ಅಲ್ಲಿಂದ ಪರಾರಿಯಾಗಲು ಯತ್ನಿಸಿದಾಗ ಆತನನ್ನು ಬೆನ್ನಟ್ಟಿ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪೊಲೀಸರ ಸೋಗಿನಲ್ಲಿ ₹51 ಸಾವಿರ ಸುಲಿಗೆ

ಬೆಂಗಳೂರು: ಪರಿಚಿತ ಮಹಿಳೆಯ ಮಾತು ನಂಬಿದ 34 ವರ್ಷದ ವ್ಯಕ್ತಿಯೊಬ್ಬರನ್ನು ಪೊಲೀಸರ ಸೋಗಿನಲ್ಲಿ ಗುಂಪೊಂದು ಅಕ್ರಮವಾಗಿ ವಶದಲ್ಲಿರಿಸಿಕೊಂಡು, ₹51 ಸಾವಿರ ಸುಲಿಗೆ ಮಾಡಿದ ಘಟನೆ ನಡೆದಿದೆ.

ಯುವಕ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡಿರುವ ಹೆಬ್ಬಾಳ ಠಾಣೆ ಪೊಲೀಸರು, ಆರೋಪಿಗಳಿಗೆ ಶೋಧ ನಡೆಸುತ್ತಿರುವುದಾಗಿ ತಿಳಿಸಿದ್ದಾರೆ.

'2023ರಲ್ಲಿ ಪರಿಚಯವಾದ ಲಕ್ಷ್ಮೀಗೆ ನನ್ನ ಮದುವೆಗೆ ಹುಡುಗಿ ಹುಡುಕುತ್ತಿರುವ ವಿಚಾರ ಹೇಳಿದ್ದೆ. ಜನವರಿ 21ರಂದು ಕರೆ ಮಾಡಿದ್ದ ಲಕ್ಷ್ಮೀ, 'ಹುಡುಗಿ ನೋಡಿದ್ದು, ಹೆಬ್ಬಾಳದ ಮೇಖ್ರಿ ಸರ್ಕಲ್ ಬಳಿ ಹೋಗಿ ಯುವತಿಯನ್ನು ಭೇಟಿಯಾಗಿ' ಎಂದು ಹೇಳಿದ್ದಳು. ಅದರಂತೆ ಮೇಖ್ರಿ ಸರ್ಕಲ್ ಬಳಿ ಹೋದಾಗ ಯುವತಿಯೊಬ್ಬಳು ಬಂದು ಮಾತುಕತೆಗಾಗಿ ಹತ್ತಿರದಲ್ಲೇ ಇದ್ದ ಮನೆಯೊಂದಕ್ಕೆ ಕರೆದೊಯ್ದಳು' ಎಂದು ಯುವಕ ದೂರಿನಲ್ಲಿ ತಿಳಿಸಿದ್ದಾನೆ.

'ಆ ಮನೆಯಲ್ಲಿ ಇಬ್ಬರು ಮಹಿಳೆಯರು ಇದ್ದರು. ಮತ್ತೆ ಇಬ್ಬರು ಗಂಡಸರು ಮತ್ತು ಮಹಿಳೆ ಬಂದು 'ನಾವು ಪೊಲೀಸರು, ಏನು ಮಾಡುತ್ತಿದ್ದೀರಾ? ವೇಶ್ಯಾವಾಟಿಕೆ ನಡೆಸುತ್ತಿದ್ದೀರಾ?' ಅಂತ ಬೆದರಿಸಿದರು. 'ಜೈಲಿಗೆ ಕಳುಹಿಸದಿರಲು ₹2 ಲಕ್ಷ ಕೊಡುವಂತೆ ಬೇಡಿಕೆ ಇಟ್ಟು ಹಣ ವಸೂಲಿ ಮಾಡಿದರು' ಎಂದು ದೂರಿನಲ್ಲಿ ವಿವರಿಸಲಾಗಿದೆ.

ಗ್ಯಾಸ್ ರೀ–ಫಿಲ್ಲಿಂಗ್ ದಂಧೆ: ಬಂಧನ

ಬೆಂಗಳೂರು: ಅನಧಿಕೃತವಾಗಿ ಗ್ಯಾಸ್ ರೀ–ಫಿಲ್ಲಿಂಗ್ ಮಾಡಿ, ಮಾರಾಟ ಮಾಡುತ್ತಿದ್ದ ಅಂಗಡಿ ಮೇಲೆ ದಾಳಿ ನಡೆಸಿದ ಸಿಸಿಬಿ ಪೊಲೀಸರು ಜಯನಗರದ ನಿವಾಸಿ ನಜೀರ್ ಅಹಮ್ಮದ್ (50) ಅವರನ್ನು ಬಂಧಿಸಿದ್ದಾರೆ. ಇವರಿಂದ ₹4 ಲಕ್ಷ ಮೌಲ್ಯದ 80 ಸಿಲಿಂಡರ್ ಜಪ್ತಿ ಮಾಡಿಕೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.





ಎಂಟು ವರ್ಷಗಳ ಬಳಿಕ ನಿಯಮ ರಚನೆ • ಶಾಸಕ ಕೇಂದ್ರಿತ ವ್ಯವಸ್ಥೆಗೆ ತಿಲಾಂಜಲಿ

‘ಗ್ರಾಮ ಸರ್ಕಾರ’ ಕೊನೆಗೂ ಸಾಕಾರ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆಗೆ ಎಂಟು ವರ್ಷಗಳ ನಂತರ ಸರ್ಕಾರ ನಿಯಮ ರೂಪಿಸಿದ್ದು, ‘ಗ್ರಾಮ ಸರ್ಕಾರ’ದ ಕನಸು ಕೊನೆಗೂ ಸಾಕಾರಗೊಳ್ಳುತ್ತಿದೆ. ಏಳು ದಶಕಗಳ ಶಾಸಕ ಕೇಂದ್ರಿತ ವ್ಯವಸ್ಥೆ ಅಂತ್ಯವಾಗಲಿದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮಸಭೆ) ನಿಯಮಗಳು–2024 ಅನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರೂಪಿಸಿದ್ದು, ಕರಡು ನಿಯಮಗಳನ್ನು ಬಿಡುಗಡೆ ಮಾಡಿದೆ. ರಾಜ್ಯಪತ್ರದಲ್ಲಿ ಪ್ರಕಟಿಸಿದ 30 ದಿನಗಳ ನಂತರ ನಿಯಮಗಳು ಅನುಷ್ಠಾನವಾಗಲಿವೆ.

ಹೊಸ ನಿಯಮಗಳ ಫಲವಾಗಿ ಸ್ಥಳೀಯರನ್ನು ಒಳಗೊಂಡ ‘ಗ್ರಾಮಸಭೆ’ಗಳು ಇನ್ನು ಮುಂದೆ ಬಲಿಷ್ಠ ‘ಗ್ರಾಮ ಸರ್ಕಾರ’ಗಳಾಗಿ ಕಾರ್ಯ-ನಿರ್ವಹಿಸಲಿವೆ. ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳನ್ನು ಆಯ್ಕೆ ಮಾಡುವ, ಅನುಮೋದನೆ ನೀಡುವ, ಕುಡಿಯುವ ನೀರು, ರಸ್ತೆ, ಮೂಲಸೌಕರ್ಯ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳ ಕ್ರಿಯಾ ಯೋಜನೆ ರೂಪಿಸುವ ಸಂಪೂರ್ಣ ಅಧಿಕಾರ ಪಡೆಯಲಿವೆ. ರಾಜ್ಯ ಸರ್ಕಾರ, ಶಾಸಕರ ಮಟ್ಟದಲ್ಲಿ ಕೇಂದ್ರೀಕೃತವಾಗಿದ್ದ ಈ ಎಲ್ಲ ಅಧಿಕಾರವನ್ನೂ ಗ್ರಾಮ ಸಭೆಗಳು ಪಡೆಯಲಿವೆ.

ವರ್ಷಕ್ಕೆ ನಾಲ್ಕು ಗ್ರಾಮ ಸಭೆ: ಹೊಸ ನಿಯಮಗಳ ಪ್ರಕಾರ ಪ್ರತಿ ಗ್ರಾಮ ಪಂಚಾಯಿತಿ ವರ್ಷಕ್ಕೆ ನಾಲ್ಕು ಗ್ರಾಮ ಸಭೆಗಳನ್ನು ನಡೆಸಬೇಕು. ಮಹಿಳೆಯರು, ಮಕ್ಕಳು, ಪರಿಶಿಷ್ಟರು, ಅಂಗವಿಕಲರು, ದುರ್ಬಲ ವರ್ಗಗಳ ಸಮಸ್ಯೆಗಳ ಕುರಿತು ಚರ್ಚಿಸಲು ವರ್ಷಕ್ಕೆ ಕನಿಷ್ಠ ಒಂದು ವಿಶೇಷ ಗ್ರಾಮ ಸಭೆ ಕರೆಯಬೇಕು. ಚರ್ಚೆ ನಡೆಸಿ, ತೆಗೆದುಕೊಂಡ ನಿರ್ಣಯಗಳನ್ನು ಆಯಾ ಇಲಾಖೆಗೆ ಕಳುಹಿಸಬೇಕು.

ತಾಲ್ಲೂಕು ಪಂಚಾಯಿತಿ ಕಾರ್ಯ-ನಿರ್ವಹಣಾಧಿಕಾರಿಯು ಗ್ರಾಮ ಪಂಚಾಯಿತಿ ಅಧ್ಯಕ್ಷರ ಜತೆ ಚರ್ಚಿಸಿ, ಅಧಿಕಾರಿಗಳ ನಿಯೋಜನೆ ಮಾಡಬೇಕು. ಗ್ರಾಮಸಭೆಗೆ ಎಲ್ಲ ಇಲಾಖೆಯ ನಿಯೋಜಿತ ಅಧಿಕಾರಿಗಳ ಭಾಗವಹಿಸುವಿಕೆಯನ್ನು ಕಡ್ಡಾಯಗೊಳಿಸಲಾಗಿದೆ. ಯಾವ ಹಂತದ ಅಧಿಕಾರಿಗಳು ಭಾಗವಹಿಸಬೇಕು ಎಂಬ ಪಟ್ಟಿಯನ್ನೂ ನಿಯಮಗಳು ಒಳಗೊಂಡಿವೆ. ಗ್ರಾಮ ಸಭೆಗಳ ಯಶಸ್ಸು, ಅಲ್ಲಿನ ತೀರ್ಮಾನಗಳ ಅನುಷ್ಠಾನಕ್ಕಾಗಿ ಗ್ರಾಮ ಪಂಚಾಯಿತಿ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯಿತಿ ಮಟ್ಟದಲ್ಲಿ ಮೂರು ‘ಗ್ರಾಮ ಸಭಾ ಸಮನ್ವಯ ಸಮಿತಿ’ಗಳನ್ನು ರಚಿಸಬೇಕು.

ಮೂರು ಸಮಿತಿಗಳಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರ ಒಕ್ಕೂಟದ ಪದಾಧಿಕಾರಿಗಳು ನಾಮನಿರ್ದೇಶಿತ ಸದಸ್ಯರಾಗಿರುತ್ತಾರೆ.

ಗ್ರಾಮಸಭೆಗಳ ಪ್ರತಿ ನಿರ್ಣಯ, ಫಲಾನುಭವಿಗಳ ಪಟ್ಟಿ, ವಿವಿಧ ಕಾಮಗಾರಿಗಳ ಕ್ರಿಯಾಯೋಜನೆ ಗ್ರಾಮ ಪಂಚಾಯಿತಿ, ತಾಲ್ಲೂಕು, ಜಿಲ್ಲಾ ಪಂಚಾಯಿತಿ ಮೂಲಕ ಸಾಗಿ ಸಂಬಂಧಿಸಿದ ಇಲಾಖೆಗಳನ್ನು ತಲುಪಲಿವೆ.

ಅಧ್ಯಕ್ಷರ ಆಯ್ಕೆ ಅಧಿಕಾರವೂ ಸಭೆಗೆ: ಗ್ರಾಮಸಭೆಯ ಅಧ್ಯಕ್ಷತೆಯನ್ನು ಆಯಾ ಗ್ರಾಮ ಪಂಚಾಯಿತಿ ಅಧ್ಯಕ್ಷರು ವಹಿಸುತ್ತಾರೆ. ಅವರ ಗೈರುಹಾಜರಿಯಲ್ಲಿ ಉಪಾಧ್ಯಕ್ಷರು, ಇಲ್ಲವೇ, ಹಿರಿಯ ಸದಸ್ಯರು ವಹಿಸುತ್ತಾರೆ. ಎಲ್ಲರೂ ಗೈರುಹಾಜರಾದರೆ ಗ್ರಾಮಸಭೆಯೇ ಒಬ್ಬ ಅನುಭವಿ ನಾಗರಿಕರನ್ನು ಅಧ್ಯಕ್ಷರಾಗಿ ಆಯ್ಕೆ ಮಾಡಿಕೊಂಡು ಸಭೆ ನಡೆಸುವಂತಹ ಅಧಿಕಾರ ನೀಡಲಾಗಿದೆ. ನಿಗದಿಯಾದ ಗ್ರಾಮಸಭೆಗೆ ಆ ವ್ಯಾಪ್ತಿಯ ಒಟ್ಟು ಮತದಾರರಲ್ಲಿ ಶೇ 10ರಷ್ಟು ಕೋರಂ ನಿಗದಿ ಮಾಡಲಾಗಿದೆ.

ಮೇಲಿನ ಹಂತದ ನಿರ್ಧಾರಕ್ಕೆ ಇತಿಶ್ರೀ

ಗ್ರಾಮ ಸ್ವರಾಜ್ ಕಾಯ್ದೆಯಂತೆ ಗ್ರಾಮ ಸಭೆಗಳಿಗೆ ಪರಮಾಧಿಕಾರವಿತ್ತು. ಆದರೆ, ನಿಯಮಗಳನ್ನು ರೂಪಿಸದ ಕಾರಣ ಸರ್ಕಾರದ ಯೋಜನೆಗಳನ್ನು ಮೇಲು ಹಂತದ ಅಧಿಕಾರಿಗಳೇ ರೂಪಿಸಿ, ಗ್ರಾಮಗಳ ಒಪ್ಪಿಗೆ ಇಲ್ಲದೆ ಅನು-ಷ್ಠಾನಗೊಳಿಸುವ ಪ್ರವೃತ್ತಿ ನಡೆಯುತ್ತಿತ್ತು. ಎಲ್ಲ ಯೋಜನೆಗಳಲ್ಲೂ ಶಾಸಕರ ಅನುಯಾಯಿಗಳೇ ಸಿಂಹಪಾಲು ಪಡೆಯುತ್ತಿದ್ದರು. ಎಲ್ಲ ಕಾಮಗಾರಿಗಳ ಕ್ರಿಯಾ ಯೋಜನೆಗಳೂ ಶಾಸಕರ ಆಣತಿಯಂತೆ ಸಿದ್ಧಗೊಳ್ಳುತ್ತಿದ್ದವು. ಸ್ಥಳೀಯ ಸಂಸ್ಥೆಗಳು ಸರ್ಕಾರದ ಶಾಖಾ ಕಚೇರಿಗಳಂತೆ ಕೆಲಸ ಮಾಡುತ್ತಿದ್ದವು. ಹೊಸ ನಿಯಮಗಳಿಂದಾಗಿ ಅಧಿಕಾರ ವಿಕೇಂದ್ರೀಕರಣದ ಆಶಯ ಈಡೇರುತ್ತಿದೆ.

ಗ್ರಾಮ ಸಭೆಯ ಪ್ರಮುಖ ಅಧಿಕಾರ

- ಎಲ್ಲ ಇಲಾಖೆಗಳು ತಮ್ಮ ವ್ಯಾಪ್ತಿಯ ಕಾರ್ಯಕ್ರಮಗಳು, ಅನುದಾನ, ಅನುಷ್ಠಾನದ ವಿವರಗಳನ್ನು ಗ್ರಾಮ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆಯಬೇಕು
- ಕಾಮಗಾರಿಗಳ ಅನುಷ್ಠಾನ, ಮೇಲ್ವಿಚಾರಣೆ, ಮೌಲ್ಯಮಾಪನಕ್ಕೆ ಸಮಿತಿ ರಚಿಸುವ ಅಧಿಕಾರ
- ಸರ್ಕಾರದ ಎಲ್ಲ ಯೋಜನೆಗಳ ವೈಯಕ್ತಿಕ ಫಲಾನುಭವಿಗಳ ಆಯ್ಕೆ ಮಾಡಿ ಆಯಾ ಇಲಾಖೆಗೆ ಕಳುಹಿಸುವುದು
- ಸಮುದಾಯ ಆಧಾರಿತ ಮೂಲಸೌಕರ್ಯಗಳ ಪಟ್ಟಿ ಸಿದ್ಧಪಡಿಸುವುದು
- ಮಹಿಳೆಯರು, ಮಕ್ಕಳು, ಪರಿಶಿಷ್ಟರು, ಹಿಂದುಳಿದ ವರ್ಗಗಳಿಗೆ ವಿಶೇಷ ಯೋಜನೆಗಳನ್ನು ರೂಪಿಸುವುದು



ದಶಕಗಳ ಬೇಡಿಕೆ ಕೊನೆಗೂ ಈಡೇರಿದೆ. ಗ್ರಾಮ ಸ್ವರಾಜ್ಯದ ಕನಸು ಸಾಕಾರವಾಗುತ್ತಿದೆ. ಮೂರು ಹಂತದ ಸಮಿತಿಗಳಲ್ಲೂ ಪಂಚಾಯಿತಿ ಸದಸ್ಯರಿಗೆ ಅವಕಾಶ ನೀಡಿರುವುದು ಬಲ ತಂದಿದೆ

ಕಾಡಶೆಟ್ಟಿಹಳ್ಳಿ ಸತೀಶ್
ಅಧ್ಯಕ್ಷ, ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟ

ನಿಯಮಗಳು ಏಕೆ ಮಹತ್ವ?

ಸಂವಿಧಾನದ 73 ಮತ್ತು 74ನೇ ತಿದ್ದುಪಡಿ ಮೂಲಕ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ನೀಡಲು ಕೇಂದ್ರ ಸರ್ಕಾರ ಮಹತ್ವದ ಹೆಜ್ಜೆ ಇರಿಸಿತ್ತು. ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಈ ಆಶಯ 1993ರಲ್ಲಿ ಈಡೇರಿತ್ತು. ಇದಕ್ಕೂ ಮೊದಲೇ ರಾಜ್ಯದಲ್ಲೂ ಅಂದಿನ ರಾಮಕೃಷ್ಣ ಹೆಗಡೆ ಸರ್ಕಾರ ಮೊದಲ ಬಾರಿ 1987ರಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವ ಮೂಲಕ ಗ್ರಾಮ ಸ್ವರಾಜ್ಯದ ಮೊದಲ ಆಶಯವನ್ನು ಸಾಕಾರಗೊಳಿಸಿತ್ತು. ಆದರೆ, ಅಧ್ಯಕ್ಷ ಸ್ಥಾನಕ್ಕೆ ಮೀಸಲಾತಿ ಇಲ್ಲದ ಕಾರಣ ಅಂದು ಪ್ರಬಲ ಜಾತಿಗೆ ಸೇರಿದವರೇ ಅಧಿಕಾರ ಅನುಭವಿಸಿದರು. ಸಂವಿಧಾನ ತಿದ್ದುಪಡಿಯ ನಂತರ ರಾಜ್ಯದಲ್ಲೂ ‘ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ–1993’ ಜಾರಿಗೊಳಿಸ-ಲಾಯಿತು.

ರಾಜ್ಯದಲ್ಲಿ 1993ರಲ್ಲೇ ಕಾಯ್ದೆ ಜಾರಿಯಾದರೂ ಸ್ಥಳೀಯ ಸಂಸ್ಥೆಗಳಿಗೆ ಅಗತ್ಯವಿದ್ದ ಜವಾಬ್ದಾರಿ, ಜವಾಬ್ದಾರಿಗೆ ಪೂರಕವಾಗಿ ಹಣಕಾಸು, ಅಧಿಕಾರ, ಮಾನವ ಸಂಪನ್ಮೂಲ ಸಮರ್ಪಕವಾಗಿ ನೀಡಲಿಲ್ಲ. ಆಯಾ ಸ್ಥಳೀಯ ಸಂಸ್ಥೆಗಳ ಅಧೀನಕ್ಕೆ ಇಲಾಖೆಗಳನ್ನು ನೀಡಲಿಲ್ಲ. ಇಂತಹ ನ್ಯೂನತೆಗಳನ್ನು ಸರಿಪಡಿಸಿ, ಗ್ರಾಮ ಸರ್ಕಾರದ ಆಶಯ ಈಡೇರಿಸಲು ಅಗತ್ಯವಾದ ವರದಿ ನೀಡುವಂತೆ 2013ರಲ್ಲಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ನೇತೃತ್ವದ ಸರ್ಕಾರ, ಕೆ.ಆರ್.ರಮೇಶ್‌ಕುಮಾರ್ ಅಧ್ಯಕ್ಷತೆ-ಯಲ್ಲಿ ಸಮಿತಿ ರಚಿಸಿತ್ತು.

ಸಮಿತಿಯ ಶಿಫಾರಸಿನಂತೆ ‘ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ’ಗೆ 2016ರಲ್ಲಿ ತಿದ್ದುಪಡಿ ತರಲಾಯಿತು. ಗ್ರಾಮಗಳನ್ನು ಸಬಲಗೊಳಿಸುವ, ರಾಜ್ಯಕ್ಕೆ ಅಗತ್ಯವಾದ ನೀತಿ, ನಿಯಮ ರೂಪಿಸುವ ಹೊಣೆಗಾರಿಕೆ ಗ್ರಾಮಗಳಿಗೇ ನೀಡುವ ಮಹತ್ವದ ಆಶಯವನ್ನು ಕಾಯ್ದೆ ಒಳಗೊಂಡಿದ್ದರೂ ಅವುಗಳ ಸಮರ್ಪಕ ಅನುಷ್ಠಾನಕ್ಕೆ ಅಗತ್ಯವಾದ ರೂಪುರೇಷೆಗಳನ್ನು ಸರ್ಕಾರ ರೂಪಿಸಿರಲಿಲ್ಲ.

ಸುದ್ದಿ 2 ನಿಮಿಷ

ಮೈಸೂರಿಗೆ ತೆರಳಲು ದರ್ಶನ್‌ಗೆ ಅವಕಾಶ: ಅನುಮತಿ ವಿಸ್ತರಣೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್ ಅವರಿಗೆ ಮೈಸೂರು ಜಿಲ್ಲೆಗೆ ತೆರಳುವುದಕ್ಕೆ ನೀಡಿದ್ದ ಅನುಮತಿಯನ್ನು ಇಲ್ಲಿನ 57ನೇ ಸಿಸಿಎಚ್ ನ್ಯಾಯಾಲಯವು ಮತ್ತೆ ವಿಸ್ತರಿಸಿದೆ.

ದರ್ಶನ್ ಅವರು ಬೆನ್ನುನೋವಿಗೆ ಮೈಸೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು-ಕೊಳ್ಳುತ್ತಿದ್ದು, ಅಲ್ಲಿಗೆ ತೆರಳಲು ನೀಡಿದ್ದ ಅನುಮತಿಯನ್ನು ಮುಂದುವರೆಸುವಂತೆ ಅವರ ಪರವಾಗಿ ವಕೀಲರು ಕೋರಿದ್ದರು. ನ್ಯಾಯಾಲಯವು ಫೆಬ್ರುವರಿ 10ರವರೆಗೆ ವಿಸ್ತರಣೆ ಮಾಡಿದೆ.



ಕೊಲೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ದರ್ಶನ್ ಅವರು ಹೈಕೋರ್ಟ್‌ನಿಂದ ನಿಯಮಿತ ಜಾಮೀನು ಪಡೆದು ಜೈಲಿನಿಂದ ಬಿಡುಗಡೆ ಆಗಿದ್ದರು. ಬಿಡುಗಡೆಯಾದ ಮೇಲೆ ಮೈಸೂರಿಗೆ ತೆರಳುವುದಕ್ಕೆ ಅನುಮತಿ ನೀಡಿ ನ್ಯಾಯಾಲಯ ಆದೇಶ ನೀಡಿತ್ತು. ಅವಧಿ ಮುಕ್ತಾಯವಾದ ಬೆನ್ನಲ್ಲೇ ಮತ್ತೆ ಅರ್ಜಿ ಸಲ್ಲಿಸಿದ್ದರು. ನ್ಯಾಯಾಲಯವು ಅರ್ಜಿಯನ್ನು ಪುರಸ್ಕರಿಸಿದೆ.

ಇಂದಿನಿಂದ ‘ಲಿವಿಂಗ್ ಲೈಟ್ಲ’

ಕೆಂಗೇರಿ: ಅಲೆಮಾರಿ ಪಶುಪಾಲಕ ಸಮುದಾಯದ ಸಂಸ್ಕೃತಿ, ಸಂಪ್ರದಾಯ ಹಾಗೂ ಬದುಕಿನ ಬಣ್ಣಗಳನ್ನು ತೆರೆದಿಡುವ ‘ಲಿವಿಂಗ್ ಲೈಟ್ಲ ಉತ್ಸವ-2025’ಕ್ಕೆ ಶನಿವಾರ ಚಾಲನೆ ನೀಡಲಾಗುವುದು.

ಅಲೆಮಾರಿ ಬಜಾರ್, ಅಲೆಮಾರಿ ಪಶುಪಾಲಕರ ಕರಕುಶಲ ಮೇಳ, ಸಂಗೀತ ಕಾರ್ಯಕ್ರಮ, ಚಿತ್ರೋತ್ಸವ, ಯುವ ಸಮ್ಮೇಳನ, ಕಾರ್ಯಾಗಾರ, ಪ್ರಸಿದ್ಧ ಅಲೆಮಾರಿಗಳಿಂದ ಉಪನ್ಯಾಸ ಏರ್ಪಡಿಸಲಾಗಿದೆ ಎಂದು ಇಂದಿರಾ ಗಾಂಧಿ ನ್ಯಾಷನಲ್ ಸೆಂಟರ್ ಫಾರ್ ಆರ್ಟ್ಸ್ ನಿರ್ದೇಶಕ ಡಿ.ಮಹೇಂದ್ರ ತಿಳಿಸಿದರು.

ಇಂದಿರಾ ಗಾಂಧಿ ನ್ಯಾಷನಲ್ ಸೆಂಟರ್ ಫಾರ್ ಆರ್ಟ್ಸ್ (ಐಜಿಎನ್ ಸಿಎ) ಕೇಂದ್ರ ಸೇರಿದಂತೆ ಕಲಾಗ್ರಾಮದ ಆಡಿಟೋರಿಯಂ, ನ್ಯಾಷನಲ್ ಸೆಂಟರ್ ಫಾರ್ ಬಯಾಲಜಿಕಲ್ ಸೈನ್ಸ್, ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ಸೃಷ್ಟಿ ಮಣಿಪಾಲ್ ಇನ್ಸಿಟಿಟ್ಯೂಟ್ ಆಫ್ ಆರ್ಟ್ ಡಿಸೈನ್ ಆ್ಯಂಡ್ ಟೆಕ್ನಾಲಜಿ ಹಾಗೂ ಅಲಯನ್ಸ್ ಫ್ರಾಂಚೈಸ್‌ನಲ್ಲಿ ಫೆಬ್ರುವರಿ 16ರವರೆಗೆ ಉತ್ಸವ ನಡೆಯಲಿದೆ ಎಂದರು.

ಉತ್ಸವದಲ್ಲಿ ದೇಶದ ಅಲೆಮಾರಿ ಪಶುಪಾಲಕ ಸಮುದಾಯದ ವಿಶಿಷ್ಟ ಸಂಪ್ರದಾಯಗಳು, ಪರಿಸರ ಜ್ಞಾನ, ಅವರ ಬದುಕು ಹಾಗೂ ಸಂಸ್ಕೃತಿಗೆ ಸಂಬಂಧಿಸಿದ ವಿವಿಧ ಪ್ರದರ್ಶನಗಳು ನಡೆಯಲಿವೆ ಎಂದು ಹೇಳಿದರು. ಲಿವಿಂಗ್ ಲೈಟ್ಲ ಉತ್ಸವದ ಪ್ರಧಾನ ಮೇಲ್ವಿಚಾರಕಿ ಸುಷ್ಮಾ ಅಯ್ಯಂಗಾರ್, ಸಂದೀಪ್ ವಿರ್ಮಾನಿ, ಡಾ.ರಘುಪತಿ, ಗೋಪಿಕೃಷ್ಣ ಉಪಸ್ಥಿತರಿದ್ದರು.



ಕಂಬದ ಮ್ಯಾಲಿನ ಗೊಂಬೆ...

ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ಎಲೆಕ್ಟ್ರಾನಿಕ್ ಸಿಟಿ ವ್ಯಾಪ್ತಿಯಲ್ಲಿರುವ ಮೆಟ್ರೊ ಕಂಬಗಳ ಮೇಲಿನ ‘ಗೊಂಬೆಗಳು’ ಸಾರ್ವಜನಿಕರನ್ನು ಆಕರ್ಷಿಸುತ್ತಿವೆ ಚಿತ್ರ: ಎಂ.ಎಸ್. ಮಂಜುನಾಥ್

ಮಧುಸೂದನ್ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಹಿರಿಯ ವಕೀಲ ಮಧುಸೂದನ್ ಆರ್. ನಾಯ್ಕ್ ಅವರನ್ನು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಿ ಸರ್ಕಾರ ಆದೇಶ ಹೊರಡಿಸಿದೆ. ಉತ್ತರ ಕನ್ನಡ ಜಿಲ್ಲೆ ಕುಮಟಾದ ಮಧುಸೂದನ್ ನಾಯ್ಕ್ ಅವರು ಹಿಂದೆ ಅಡ್ವೋಕೇಟ್ ಜನರಲ್ ಹಾಗೂ ರಾಜ್ಯ ವನ್ಯಜೀವಿ ಮಂಡಳಿಯ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದರು.

‘ಭೂಮಿ ಸಮಸ್ಯೆ ಪರಿಹಾರಕ್ಕೆ ಸಮಿತಿ’

ಮಡಿಕೇರಿ: ‘ಸಿ’ ಮತ್ತು ‘ಡಿ’ ದರ್ಜೆಯ ಭೂಮಿಯಲ್ಲಿ (ವ್ಯವಸಾಯಕ್ಕೆ ಯೋಗ್ಯವಲ್ಲದ ಭೂಮಿ) ಸಾಗುವಳಿ ಮಾಡುತ್ತಿರುವ ರೈತರ ಭೂಮಿ ಸಮಸ್ಯೆಗೆ ಸಂಬಂಧಿಸಿ ಸಮಿತಿಯೊಂದನ್ನು ರಚಿಸಲಾಗುವುದು. ಸಮಿತಿಯ ವರದಿಯನ್ವಯ ಕ್ರಮ ಕೈಗೊಳ್ಳಲಾಗುವುದು. ಯಾವುದೇ ಕಾರಣಕ್ಕೂ ರೈತರು ಆತಂಕಪಡಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು. ಇಲ್ಲಿನ ಭಾಗಮಂಡಲದಲ್ಲಿ ಮೇಲ್ಸೇತುವೆ ಉದ್ಘಾಟಿಸಿ ಅವರು ಮಾತನಾಡಿದರು.

ಬಂಧಿತ ಪ್ರಸಾದ್ ಅತ್ತಾವರ ಮೊಬೈಲ್‌ನಲ್ಲಿ ವಿಡಿಯೊ ಪತ್ತೆ: ಪ್ರಕರಣ ದಾಖಲು

ಸ್ನೇಹಮಯಿಗೆ ಬಲ ತುಂಬಲು ಪ್ರಾಣಿಬಲಿ?

ಪ್ರಜಾವಾಣಿ ವಾರ್ತೆ



ಪ್ರಸಾದ್ ಅತ್ತಾವರ

ಮಂಗಳೂರು: ನಗರದ ಕಲರ್ಸ್ ಯೂನಿಸೆಕ್ಸ್ ಸಲೂನ್ ಮೇಲೆ ಗುಂಪೊಂದು ಈಚೆಗೆ ದಾಳಿ ನಡೆಸಿದ ಪ್ರಕರಣದಲ್ಲಿ ಬಂಧಿತನಾಗಿರುವ ರಾಮಸೇನೆಯ ಸಂಸ್ಥಾಪಕ ಪ್ರಸಾದ್ ಅತ್ತಾವರ ಮೊಬೈಲ್ ಫೋನ್‌ನಲ್ಲಿ ಪ್ರಾಣಿ ಬಲಿಗೆ ಸಂಬಂಧಿಸಿದ ಕೆಲ ಮಾಹಿತಿ ಲಭ್ಯವಾಗಿವೆ ಎಂದು ಪೊಲೀಸರು ಇಲ್ಲಿಯ ಬರ್ಕೆ ಠಾಣೆಯಲ್ಲಿ ಮತ್ತೊಂದು ಪ್ರಕರಣ ದಾಖಲಿಸಿಕೊಂಡಿದ್ದಾರೆ.

‘ಜ.23ರಂದು ನಗರದ ಕಲರ್ಸ್ ಯೂನಿಸೆಕ್ಸ್ ಸಲೂನ್ ಮೇಲೆ ಅಕ್ರಮವಾಗಿ ದಾಳಿ ನಡೆಸಿದ್ದ ಪ್ರಕರಣಕ್ಕೆ ಸಂಬಂಧಿಸಿ ಪ್ರಸಾದ್ ಅತ್ತಾವರ ಜೊತೆ ಒಟ್ಟು 13 ಮಂದಿ ಆರೋಪಿಗಳನ್ನು ಬಂಧಿಸಲಾಗಿತ್ತು. ಈ ಪ್ರಕರಣದ ತನಿಖೆಯ ಭಾಗವಾಗಿ ಪ್ರಸಾದ್ ಅತ್ತಾವರ ಮೊಬೈಲ್ ಫೋನ್ ಪರಿಶೀಲಿಸಿದಾಗ, ಅನಂತ್ ಭಟ್ ಎಂಬ ವ್ಯಕ್ತಿಯ ಜೊತೆ ವಾಮಾಚಾರದ ಬಗ್ಗೆ ವಾಟ್ಸ್‌ಆ್ಯಪ್‌ನಲ್ಲಿ ಚರ್ಚಿಸಿರುವ ಅನೇಕ ಸಂದೇಶಗಳು, ಚಿತ್ರಗಳು, ವಿಡಿಯೊಗಳು ದೊರೆತಿವೆ’ ಎಂದು ಮಂಗಳೂರು ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.



ಪ್ರಸಾದ್ ಅತ್ತಾವರ ಮೊಬೈಲ್ ಫೋನ್‌ನಲ್ಲಿ ದೊರೆತಿದೆ ಎನ್ನಲಾದ ವಾಮಾಚಾರ ನಡೆಸಿರುವ ಚಿತ್ರ

‘ಚಿತ್ರದಲ್ಲಿ ಹಾಗೂ ಸಂದೇಶದಲ್ಲಿ ಇರುವಂತೆ, ದೇವಸ್ಥಾನವೊಂದರಲ್ಲಿ ಕುರಿ ಬಲಿ ಕೊಡಲಾಗಿದೆ. ಮೈಸೂರಿನ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಹಾಗೂ ಗಂಗರಾಜು ಅವರ ಫೋಟೊ ಹಾಗೂ ಅವರಿಬ್ಬರ ಹೆಸರಿನ ಜೊತೆಗೆ ಪ್ರಸಾದ್ ಅತ್ತಾವರ, ಹರ್ಷ, ಶ್ರೀನಿಧಿ, ಸುಮ ಆಚಾರ್ಯ ಸೇರಿ ಒಟ್ಟು ಐವರ ಹೆಸರು ಬರೆದಿರುವ ಪೇಪರ್ ಅನ್ನು ದೇವಿಯ ಮೇಲೆ ಇಟ್ಟು ಅದಕ್ಕೆ ರಕ್ತದ ಅಭಿಷೇಕ ಮಾಡಲಾಗಿದೆ. ಅನಂತ್ ಭಟ್ ಮತ್ತು ಪ್ರಸಾದ್ ನಡುವೆ ವಿನಿಮಯ ಆಗಿರುವ ಸಂದೇಶ ನೋಡಿದರೆ, ಸ್ನೇಹಮಯಿ ಕೃಷ್ಣ ಮತ್ತು ಗಂಗರಾಜು ಅವರಿಗೆ ಬಲ ಸಿಗಲೆಂದು ಈ ರೀತಿ ಪೂಜೆ ಮಾಡಿರಬಹುದು ಅನ್ನಿಸುತ್ತದೆ’ ಎಂದು ಅಗ್ರವಾಲ್ ಹೇಳಿದರು.

‘ಅನಂತ್ ಭಟ್ ಯಾರು, ಬಲಿ ನಡೆದಿರುವ ಸ್ಥಳ ಯಾವುದು ಎಂಬ ಬಗ್ಗೆ ತನಿಖೆ ನಡೆಸಲಾಗುತ್ತಿದೆ. ಪ್ರಸಾದ್ ಮೊಬೈಲ್ ಫೋನ್‌ನಲ್ಲಿ ಹಣ ತುಂಬಿಟ್ಟಿದ್ದ ಚೀಲದ ಫೋಟೊ ಇದ್ದು, ಅನಂತ್ ಭಟ್‌ಗೆ ಹಣ ವರ್ಗಾವಣೆ ಮಾಡಿರುವುದು ಕಂಡುಬಂದಿದೆ. ಈ ಚೀಲದ ಚಿತ್ರವನ್ನು 2024ರ ಡಿಸೆಂಬರ್ 7ರಂದು ಸುಮ ಆಚಾರ್ಯ, ಡಿ.8ರಂದು ಪ್ರಶಾಂತ ಬಂಗೇರ, ಹರ್ಷ ಮೈಸೂರು ಮತ್ತು ಅನಂತ್ ಭಟ್ ಅವರಿಗೆ ಪ್ರಸಾದ್ ಮೊಬೈಲ್‌ನಿಂದ ಕಳುಹಿಸಲಾಗಿದೆ. ಹರ್ಷ ಮತ್ತು ಶ್ರೀನಿಧಿ ಅವರು ಸ್ನೇಹಮಯಿ ಕೃಷ್ಣ ಮತ್ತು ಗಂಗರಾಜು ಭೇಟಿಯಾಗಿ ಮಾತನಾಡುತ್ತಿರುವ ಫೋಟೊ, ವಿಡಿಯೊವನ್ನು ಹರ್ಷ ಅವರು ಪ್ರಸಾದ್ ಅತ್ತಾವರ ಅವರಿಗೆ ಡಿ.9ರಂದು ಕಳುಹಿಸಿದ್ದಾರೆ. ಹಲವಾರು ಬಾರಿ ವಾಟ್ಸ್‌ಆ್ಯಪ್ ಕಾಲ್ ಮಾಡಿ ಮಾತನಾಡಿದ್ದಾರೆ’ ಎಂದು ಅವರು ವಿವರಿಸಿದರು.

ಪ್ರಸಾದ್ ಸದ್ಯ ನ್ಯಾಯಾಂಗ ಬಂಧನ-ದಲ್ಲಿದ್ದು, ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ, ಪೊಲೀಸ್ ಕಸ್ಟಡಿಗೆ ಪಡೆದು, ವಿಚಾರಣೆ ನಡೆಸಿದ ಮೇಲೆ ಸ್ಪಷ್ಟ ಚಿತ್ರಣ ಸಿಗಲಿದೆ ಎಂದು ಅವರು ಹೇಳಿದರು.

‘ಸಲೂನ್ ಮೇಲಿನ ದಾಳಿ ಪ್ರಕರಣದ ತನಿಖೆ ನಡೆಸುತ್ತಿರುವ ಬರ್ಕೆ ಠಾಣೆಯ ಇನ್‌ಸ್ಪೆಕ್ಟರ್ ಸೋಮಶೇಖರ್ ಅವರು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಪ್ರಾಣಿ ಬಲಿ ನಿಷೇಧ ಇರುವ ಕಾರಣ ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ ಕಾಯ್ದೆ 2017 ಅಡಿಯಲ್ಲಿ, ಪ್ರಸಾದ್ ಅತ್ತಾವರ ವಿರುದ್ಧ ಶುಕ್ರವಾರ ಬರ್ಕೆ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಪೇಪರ್ ಮೇಲೆ ಹೆಸರು ಬರೆದಿರುವ ಎಲ್ಲರನ್ನೂ ವಿಚಾರಣೆಗೆ ಒಳಪಡಿಸಲಾಗುವುದು’ ಎಂದು ಅನುಪಮ್ ಅಗ್ರವಾಲ್ ಹೇಳಿದರು.

ನನ್ನ ವಿರುದ್ಧ ಸಂಚು: ಸ್ನೇಹಮಯಿ ಕೃಷ್ಣ

ಮೈಸೂರು: ‘ಮಂಗಳೂರಿನ ಬಂಧಿತ ಆರೋಪಿ ಪ್ರಸಾದ್ ಅತ್ತಾವರ ಮೊಬೈಲ್‌ನಲ್ಲಿ ನನ್ನ ಹಾಗೂ ಗಂಗಾಧರ ಅವರ ಫೋಟೊ ಇಟ್ಟುಕೊಂಡು ವಾಮಾಚಾರ ಮಾಡಿರುವ ವಿಡಿಯೊ ಸಿಕ್ಕಿದ್ದು, ನನ್ನ ವಿರುದ್ಧ ಸಂಚು ನಡೆದಿದೆ’ ಎಂದು ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಡಿ.9ಕ್ಕೆ ವಾಮಾಚಾರದ ಪೂಜೆ ನಡೆದಿದ್ದು, ಡಿ.13ರಂದು ಹರ್ಷ, ಶ್ರೀನಿಧಿ ಎಂಬುವರು ಅತ್ತಾವರ ಸೂಚನೆ ಮೇರೆಗೆ ಪಾರ್ವತಿ ಪರವಾಗಿ ಬಂದಿದ್ದೇವೆಂದು ಆಮಿಷ ಒಡ್ಡಿದ್ದರು. ಪಾರ್ವತಿ ಅವರು ಮಾನಸಿಕವಾಗಿ ಕುಗ್ಗಿ ಹೋಗಿದ್ದಾರೆ. ಸಿಬಿಐಗೆ ಕೊಡುವ ಅರ್ಜಿ ವಾಪಸ್ ತೆಗೆದುಕೊಳ್ಳಿ ಎಂದಿದ್ದರು’ ಎಂದರು. ‘ನನ್ನ ಬಳಿ ಇರುವ ಸಾಕ್ಷ್ಯಗಳನ್ನು ಪೊಲೀಸರಿಗೆ ನೀಡುವೆ’ ಎಂದರು.

ಕಲಾ ಗ್ರಾಮದಲ್ಲಿ ದೇಶ–ವಿದೇಶಗಳ ನಾಟಕ ಪ್ರದರ್ಶನ

ಇಂದಿನಿಂದ ರಂಗ ಮಹೋತ್ಸವ


ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ನಾಟಕ ಶಾಲೆಯ (ಎನ್‌ಎಸ್‌ಡಿ) ಸಹಯೋಗದಲ್ಲಿ ಕರ್ನಾಟಕ ನಾಟಕ ಅಕಾಡೆಮಿಯು ಫೆ.1ರಿಂದ ಫೆ.8ರವರೆಗೆ ಮಲ್ಲತ್ತಹಳ್ಳಿಯ ಕಲಾ ಗ್ರಾಮದಲ್ಲಿ ಭಾರತ ರಂಗ ಮಹೋತ್ಸವ ಹಮ್ಮಿಕೊಂಡಿದೆ.

ಎಂಟು ದಿನಗಳು ನಡೆಯುವ ಈ ರಂಗ ಮಹೋತ್ಸವಕ್ಕೆ ಶನಿವಾರ ಸಂಜೆ 4.30ಕ್ಕೆ ಚಾಲನೆ ದೊರೆಯಲಿದೆ. ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಸಮಾರಂಭ ಉದ್ಘಾಟಿಸುತ್ತಾರೆ. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ರಂಗ ಹೊತ್ತಿಗೆ ಬಿಡುಗಡೆ ಮಾಡುತ್ತಾರೆ. ನಾಟಕಕಾರ ಎಚ್.ಎಸ್. ಶಿವಪ್ರಕಾಶ್ ಅವರಿಗೆ ಉತ್ಸವ ಗೌರವ ಸಲ್ಲಿಸಲಾ-ಗುತ್ತದೆ. ಬಳಿಕ ಶ್ರವಣ ಹೆಗ್ಗೋಡು ನಿರ್ದೇಶನದಲ್ಲಿ ಮಂಗಳೂರಿನ ಕಲಾಭಿ ಥಿಯೇಟರ್ ಕಲಾವಿದರು ‘ಎ ಫ್ರೆಂಡ್ ಬಿಯಾಂಡ್ ದಿ ಫೆನ್ಸ್’ ಕನ್ನಡ ನಾಟಕ ಪ್ರದರ್ಶಿಸುತ್ತಾರೆ ಎಂದು ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ತಿಳಿಸಿದ್ದಾರೆ. ಮಹೋತ್ಸವದಲ್ಲಿ ರಷ್ಯಾ ಹಾಗೂ ಶ್ರೀಲಂಕಾ ದೇಶದ ತಲಾ ಒಂದು ನಾಟಕಗಳು, ಹಿಂದಿ ಭಾಷೆಯ ಮೂರು, ತೆಲುಗು ಭಾಷೆಯ ಒಂದು ಹಾಗೂ ಕನ್ನಡದ ಎರಡು ನಾಟಕಗಳು ಪ್ರದರ್ಶನ ಕಾಣಲಿವೆ. ಮೇಕಪ್, ಬೊಂಬೆಯಾಟಕ್ಕಾಗಿಯೇ 15 ಮಳಿಗೆಗಳನ್ನು ಸ್ಥಾಪಿಸಲಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವಿವಿಧ ಅಕಾಡೆಮಿಗಳ ಪುಸ್ತಕ ಪ್ರದರ್ಶನವೂ ಇರಲಿದೆ. ಜಾನಪದ ಕಲೆ, ನೃತ್ಯ ಪ್ರದರ್ಶನಕ್ಕೂ ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಿದ್ದಾರೆ.

18 ವರ್ಷಗಳ ನಂತರ ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಮಟ್ಟದ ನಾಟಕ ಮಹೋತ್ಸವ ಆಯೋಜಿಸಲಾಗುತ್ತಿದೆ. ಪ್ರತಿ ದಿನ ಸಂಜೆ 5 ಗಂಟೆಯಿಂದ ನಾಟಕ ಪ್ರದರ್ಶನ ಕಾಣಲಿವೆ ಎಂದು ಪ್ರಕಟಣೆ-ಯಲ್ಲಿ ತಿಳಿಸಿದ್ದಾರೆ.


ನಾಳೆ ರಂಗ ಪರಿಷೆ



ನಾಗರಾಜ ಮೂರ್ತಿ

ಭಾರತ ರಂಗ ಮಹೋತ್ಸವದ ಭಾಗವಾಗಿ ಭಾನುವಾರ (ಫೆ.2) ಬೆಳಿಗ್ಗೆ 10.30ರಿಂದ ಸಂಜೆ 5.30ರವರೆಗೆ ಕಲಾಗ್ರಾಮದಲ್ಲಿ ರಂಗ ಪರಿಷೆ ಹಮ್ಮಿಕೊಳ್ಳಲಾಗಿದೆ. ಕರ್ನಾಟಕದ ರಂಗ ತಂಡಗಳು ತಮ್ಮ ನಾಟಕಗಳ ಪರಿಕರಗಳು, ರಂಗ ಸಜ್ಜಿಕೆ, ವೇಷಭೂಷಣಗಳನ್ನು ಪ್ರದರ್ಶಿಸಲಿವೆ. ನಾಟಕಗಳ ರಂಗ ತುಣುಕು, ರಂಗಗೀತೆ ಮೊದಲಾದ ಕಾರ್ಯಕ್ರಮಗಳನ್ನು ಪ್ರಸ್ತುತ-ಪಡಿಸಲಿವೆ ಎಂದು ಕೆ.ವಿ. ನಾಗರಾಜಮೂರ್ತಿ ತಿಳಿಸಿದ್ದಾರೆ.

ಬಿಎಂಆರ್‌ಸಿಎಲ್‌ನಿಂದ 65 ಮೀ. ಗರ್ಡರ್ ಅಳವಡಿಕೆ



ಹೊರ ವರ್ತುಲ ರಸ್ತೆಯ ಮೆಟ್ರೊ ಮಾರ್ಗದಲ್ಲಿ ರೈಲ್ವೆ ಸೇತುವೆಯ ಮೇಲೆ 65 ಮೀಟರ್ ಉದ್ದದ ಗರ್ಡರ್‌ಗಳನ್ನು (ತೊಲೆ) ಅಳವಡಿಸಲಾಯಿತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರ ವರ್ತುಲ ರಸ್ತೆಯ ಮೆಟ್ರೊ ಮಾರ್ಗದಲ್ಲಿ ರೈಲ್ವೆ ಸೇತುವೆಯ ಮೇಲೆ ಗುರುವಾರ ರಾತ್ರಿ 3 ತಾಸುಗಳಲ್ಲಿ 65 ಮೀಟರ್ ಉದ್ದದ ನಾಲ್ಕು ಸ್ಟೀಲ್ ಗರ್ಡರ್‌ಗಳನ್ನು (ತೊಲೆ) ಅಳವಡಿಸ-ಲಾಯಿತು.

ಸೆಂಟ್ರಲ್ ಸಿಲ್ಕ್ ಬೋರ್ಡ್–ದೇವನಹಳ್ಳಿಯ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಸಂಪರ್ಕಿಸುವ ನಮ್ಮ ಮೆಟ್ರೊ ನೀಲಿ ಮಾರ್ಗದಲ್ಲಿ ಇಸ್ರೊ–ದೊಡ್ಡನೆಕುಂದಿ ನಡುವೆ ರೇನ್‌ಬೋ ಆಸ್ಪತ್ರೆ ಬಳಿ ಸೇಲಂ ರೈಲು ಮಾರ್ಗದಲ್ಲಿ ಈ ಕಾಮಗಾರಿ ನಡೆಯಿತು. ಈಗಿರುವ ರೈಲು ಹಳಿ, ಮುಂಬರುವ ರೈಲು ಹಳಿ ಮತ್ತು ಬೆಂಗಳೂರು ಉಪನಗರ ರೈಲು ಯೋಜನೆಯ ಹಳಿಗಳು ಈ ಗರ್ಡರ್‌ನ ಕೆಳಗೆ ಬರಲಿವೆ. ರೈಲು ಸಂಚಾರಕ್ಕೆ ತೊಡಕು ಉಂಟಾಗದಂತೆ ಕಾಮಗಾರಿ ನಡೆಸಲಾಯಿತು. ವಾಹನ ಸಂಚಾರವನ್ನು ಗುರುವಾರ ರಾತ್ರಿ 9ರಿಂದ ಬೆಳಿಗ್ಗೆ 6ರವರೆಗೆ ನಿರ್ಬಂಧಿಸಲಾಗಿತ್ತು.

ಸರ್ವೀಸ್ ರಸ್ತೆ, ಅಂಡರ್ ಪಾಸ್ ಇಲ್ಲದ ಈ ಸ್ಥಳದಲ್ಲಿ ಲೆವೆಲ್ ಕ್ರಾಸಿಂಗ್ ರಸ್ತೆ ಇರುವುದರಿಂದ ಗರ್ಡರ್ ಅಳವಡಿಕೆ ಸವಾಲು ಆಗಿತ್ತು. ಕ್ರೇನ್ ಕಾರ್ಯಾಚರಣೆಗೂ ಸರಿಯಾದ ಸ್ಥಳ ಇರಲಿಲ್ಲ. ಸಾಧಾರಣವಾಗಿ 400–500 ಮೀಟರ್ ಸಾಮರ್ಥ್ಯದ ಎರಡು ಕ್ರೇನ್‌ಗಳನ್ನು ಎರಡೂ ಬದಿಯಲ್ಲಿ ನಿಯೋಜಿಸಿ ಕಾಮಗಾರಿ ನಡೆಸಲಾಗುತ್ತದೆ. ಆದರೆ, ಇಲ್ಲಿ 700 ಮೀಟರ್ ಸಾಮರ್ಥ್ಯದ ಒಂದೇ ಕ್ರೇನ್ ಬಳಸಿ 575 ಟನ್ ಭಾರದ ‘ಗರ್ಡರ್’ ಜೋಡಿಸಲಾಯಿತು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಬಿಎಂಆರ್‌ಸಿಎಲ್ ಯೋಜನೆಗಳಲ್ಲಿ 28 ಮೀಟರ್ ಉದ್ದದ ಯು ಗರ್ಡರ್‌ಗ-ಳನ್ನು ಅಳವಡಿಸಲಾಗುತ್ತಿತ್ತು. ಪ್ರಮುಖ ಜಂಕ್ಷನ್ ಆಗಿರುವ ಇಲ್ಲಿ ಸ್ಥಳಾವಕಾಶ ಕಡಿಮೆ ಇದ್ದ ಕಾರಣ 65 ಮೀಟರ್‌ನ ಗರ್ಡರ್ ಅಳವಡಿಸಲಾಯಿತು.

ಬಿಎಂಆರ್‌ಸಿಎಲ್ ಮತ್ತು ಗುತ್ತಿಗೆದಾರರಾದ ಎಸ್‌ಎನ್‌ಸಿ ಸಂಸ್ಥೆಯ ಎಂಜಿನಿಯರ್‌ಗಳು, ಸಿಬ್ಬಂದಿಯ ಮೇಲ್ವಿಚಾರಣೆಯಲ್ಲಿ 70 ಜನರು ಕಾಮಗಾರಿ ನಿರ್ವಹಿಸಿದ್ದರು.

ಮೈಕ್ರೊ ಫೈನಾನ್ಸ್ ಕಂಪನಿಗಳಿಗೆ ಕಡಿವಾಣಕ್ಕೆ ಸುಗ್ರೀವಾಜ್ಞೆ

ಆತ್ಮಹತ್ಯೆ ಮಾಡಿಕೊಳ್ಳಬೇಡಿ: ಸಿ.ಎಂ

ಪ್ರಜಾವಾಣಿ ವಾರ್ತೆ

ಸುತ್ತೂರು (ಮೈಸೂರು ಜಿಲ್ಲೆ): ‘ಮೈಕ್ರೊ ಫೈನಾನ್ಸ್ ಕಂಪನಿಗಳಿಗೆ ಕಡಿವಾಣ ಹಾಕಲು ಶೀಘ್ರ ಸುಗ್ರೀವಾಜ್ಞೆ ತಂದು ಕ್ರಮ ಕೈಗೊಳ್ಳುತ್ತೇವೆ. ಸಾಲಗಾರರು ಆತ್ಮಹತ್ಯೆ ಮಾಡಿಕೊಳ್ಳಬೇಡಿ; ಸರ್ಕಾರ ನಿಮ್ಮ ಜೊತೆಗಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಲ್ಲಿ ಸುತ್ತೂರು ಮಠದಿಂದ ಶುಕ್ರವಾರ ಆಯೋಜಿಸಿದ್ದ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ‘ಭಾರತೀಯ ರಿಸರ್ವ್ ಬ್ಯಾಂಕ್ ನಿಯಮವಳಿ ಉಲ್ಲಂಘಿಸುವ, ಹೆಚ್ಚಿನ ಬಡ್ಡಿದರ ವಸೂಲು ಮಾಡುವ ಹಾಗೂ ಕಾನೂನು ಬಾಹಿರವಾಗಿ ಕಾರ್ಯನಿರ್ವಹಿಸು-ತ್ತಿರುವ ಕಂಪನಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು’ ಎಂದು ಹೇಳಿದರು.

‘ಫೈನಾನ್ಸ್ ಸಂಸ್ಥೆಗಳು, ಲೇವಾದೇವಿಗಾರರು ರೌಡಿ, ಗೂಂಡಾಗಳ ಮೂಲಕ ಹೆದರಿಸಿ, ಅಮಾನವೀಯವಾಗಿ ವಸೂಲಾತಿಯಲ್ಲಿ ತೊಡಗಿದ್ದಾರೆ. ಸಂಸ್ಥೆಗಳು ವಾರ್ಷಿಕವಾಗಿ ಶೇ 28ರಿಂದ 30ರಷ್ಟು ಬಡ್ಡಿ ವಸೂಲಿ ಮಾಡುತ್ತಿರುವುದರಿಂದಲೇ ಜನ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ, ಮನೆ ತೊರೆಯುತ್ತಿದ್ದಾರೆಂಬುದನ್ನು ಗಮನಿಸಲಾಗಿದೆ’ ಎಂದು ಹೇಳಿದರು.


‘ತಾರತಮ್ಯ ಬಿಟ್ಟು, ಪಾರದರ್ಶಕ ನೀತಿ ಅನುಸರಿಸಿ’

ಬೆಂಗಳೂರು: ಕರ್ನಾಟಕವೂ ಸೇರಿದಂತೆ ಅಭಿವೃದ್ಧಿ ಪಥದಲ್ಲಿ ಮುಂಚೂಣಿಯಲ್ಲಿರುವ ರಾಜ್ಯಗಳ ಆದ್ಯತೆಗಳನ್ನು ಗುರುತಿಸಿ ಸಂಪನ್ಮೂಲ ಹಂಚಿಕೆ ವಿಚಾರದಲ್ಲಿ ಅವುಗಳಿಗೆ ಹೆಚ್ಚಿನ ಶಕ್ತಿಯನ್ನು ತುಂಬಬೇಕು. ಅವುಗಳ ಬೇಡಿಕೆಗೆ ಸಕಾರಾತ್ಮಕವಾಗಿ ಸ್ಪಂದಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಶನಿವಾರ ಕೇಂದ್ರ ಬಜೆಟ್ ಮಂಡನೆಯ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಅವರು ಕೇಂದ್ರಕ್ಕೆ ಸಲ್ಲಿಸಿರುವ ರಾಜ್ಯದ ಬೇಡಿಕೆಗಳ ಪಟ್ಟಿಯನ್ನು ಶುಕ್ರವಾರ ಬಿಡುಗಡೆ ಮಾಡಿದರು.

ಕೇಂದ್ರ ಸರ್ಕಾರವು ಕರ್ನಾಟಕದ ಬಗ್ಗೆ ಅನುಸರಿಸುತ್ತಿರುವ ತಾರತಮ್ಯ ಧೋರಣೆ ಜಗಜ್ಜಾಹೀರಾ-ಗಿದೆ. ನಮ್ಮ ಒಕ್ಕೂಟ ವ್ಯವಸ್ಥೆಯು ಬಲಿಷ್ಠವಾಗಿರಬೇಕೆಂದರೆ ಕೇಂದ್ರ ಸರ್ಕಾರವು ತಾರತಮ್ಯರಹಿತ, ನ್ಯಾಯಸಮ್ಮತ, ಪಾರದರ್ಶಕ ನೀತಿಯನ್ನು ತನ್ನದಾಗಿಸಿಕೊಳ್ಳಬೇಕು ಎಂದು ಹೇಳಿದ್ದಾರೆ.

ರಾಜ್ಯಗಳನ್ನು ಸಂಪನ್ಮೂಲ ಸಂಗ್ರಹಣೆ ಮಾಡುವ ಘಟಕಗಳೆಂದು ನೋಡದೆ, ಅವುಗಳ ಕಷ್ಟ–ನಷ್ಟಗಳಿಗೆ ಮಾನವೀಯವಾಗಿ ಸ್ಪಂದಿಸಬೇಕು. ತೆರಿಗೆ ಪಾಲಿನ ಹಂಚಿಕೆಯೂ ಸೇರಿದಂತೆ ರಾಜ್ಯಗಳಿಗೆ ಸಂಪನ್ಮೂಲ ಹಂಚಿಕೆ ಮಾಡುವ ವಿಷಯದಲ್ಲಿ ವೈಜ್ಞಾನಿಕ ಮಾನದಂಡ ಅನುಸರಿಸಬೇಕು. ಇದರಿಂದ ದೇಶಕ್ಕೆ ಹೆಚ್ಚು ಲಾಭವಿದ್ದು, ಈ ರಾಜ್ಯಗಳ ಸಾಧನೆಯ ಪಾಲು ಇತರೆ ರಾಜ್ಯಗಳಿಗೂ ಸಹಜವಾಗಿ ಸಲ್ಲುತ್ತದೆ ಎಂದಿದ್ದಾರೆ.



15ನೇ ಹಣಕಾಸು ಆಯೋಗದ ಅವಧಿ ಮುಂದಿನ ವರ್ಷ ಪೂರ್ಣಗೊಳ್ಳಲಿದ್ದರೂ ಇಲ್ಲಿಯವರೆಗೆ ಆಯೋಗವೇ ಶಿಫಾರಸು ಮಾಡಿರುವ ವಿಶೇಷ ಅನುದಾನ ₹5,495 ಕೋಟಿ ಮತ್ತು ರಾಜ್ಯ ಕೇಂದ್ರಿತ ₹6,000 ಕೋಟಿ ವಿಶೇಷ ಅನುದಾನ ಬಿಡುಗಡೆ ಮಾಡಿಲ್ಲ ಎಂದು ಹೇಳಿದ್ದಾರೆ.

ಜಿಎಸ್‌ಟಿ ಪರಿಹಾರ ನೀಡುವುದನ್ನು 2022ರ ಜುಲೈನಲ್ಲೇ ನಿಲ್ಲಿಸಿದ್ದರೂ 2026ರವರೆಗೆ ಸೆಸ್ ಸಂಗ್ರಹ ಮುಂದುವರಿಸಲಾಗಿದೆ. ಈ ಸೆಸ್ ಬದಲಿಗೆ ಹೆಚ್ಚುವರಿ ರಾಜ್ಯ ಸರಕು ಮತ್ತು ಸೇವಾ ತೆರಿಗೆ ಸಂಗ್ರಹಕ್ಕೆ ರಾಜ್ಯ ಸರ್ಕಾರಕ್ಕೆ ಅವಕಾಶ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಬೆಂಬಲ ಬೆಲೆ ಯೋಜನೆಯಡಿ ಕೇಂದ್ರ ಸರ್ಕಾರ ನಿಯಮಾವಳಿಗಳಿಗೆ ಅನುಗುಣವಾಗಿ ರಾಜ್ಯ ಸರ್ಕಾರ ರೈತರಿಂದ ಉತ್ಪನ್ನಗಳನ್ನು ಖರೀದಿ ಮಾಡುತ್ತಿದೆ. ಈ ಯೋಜನೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ರಾಜ್ಯಕ್ಕೆ ನೀಡಬೇಕಾಗಿರುವ ₹2,461.49 ಕೋಟಿ ಹಣ ಬಾಕಿ ಇರಿಸಿರುವುದರಿಂದಾಗಿ ರಾಜ್ಯ ಸರ್ಕಾರ ತನ್ನ ಖಜಾನೆಯಿಂದ ಹಣ ಬಿಡುಗಡೆ ಮಾಡಬೇಕಾಗಿದೆ. ಈ ಬಾಕಿ ಹಣವನ್ನು ಶೀಘ್ರವಾಗಿ ಬಿಡುಗಡೆಗೊಳಿಸಬೇಕು ಎಂದು ಆಗ್ರಹಿಸಿದ್ದಾರೆ.

ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಣೆ ಮಾಡಿದರೆ ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು ಮತ್ತು ದಾವಣಗೆರೆಯ ಬರಪೀಡಿತ ಪ್ರದೇಶಗಳಿಗೆ ವರದಾನವಾಗಲಿದೆ. ಈ ಘೋಷಣೆಯ ಪ್ರಸ್ತಾವಕ್ಕೆ ಸಾರ್ವಜನಿಕ ಹೂಡಿಕೆ ಸಮಿತಿ ಈಗಾಗಲೇ ಅಂಗೀಕಾರ ನೀಡಿದೆ. ಇದೇ ಬಜೆಟ್‌ನಲ್ಲಿ ಈ ಘೋಷಣೆ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.



ಕ್ರೈಸ್ಟ್ ವಿಶ್ವವಿದ್ಯಾಲಯದ ಕನ್ನಡ ಸಂಘ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ‘ಕವಿದಿನ’ ಕಾರ್ಯಕ್ರಮದಲ್ಲಿ ಎಸ್‌.ಆರ್‌. ವಿಜಯಶಂಕರ ಅವರ ‘ನೆನದವರ ಮನದಲ್ಲಿ’, ವಿದ್ಯಾರ್ಥಿಗಳ ‘ನೆಟ್ಟ ಮರದ ನೆರಳು ಮತ್ತು ‘ಡಾ.ಅ.ನ.ಕೃ. ಸ್ಮಾರಕ’ ಪುಸ್ತಕಗಳು ಬಿಡುಗಡೆಯಾದವು. ಲೇಖಕ ಎಸ್‌.ಆರ್‌. ವಿಜಯಶಂಕರ,ಕ್ರೈಸ್ಟ್ ವಿಶ್ವವಿದ್ಯಾಲಯದ ಪ್ರಧಾನ ವಿತ್ತಾಧಿಕಾರಿ ವರ್ಗಿಸ್ ಕೆ.ಜೆ., ವಿಮರ್ಶಕ ನರಹಳ್ಳಿ ಬಾಲಸುಬ್ರಹ್ಮಣ್ಯ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕ ಡೊಮಿನಿಕ್ ಉಪಸ್ಥಿತರಿದ್ದರು.

ಕೆಎಂಎಫ್: ಬೇಡಿಕೆ ಈಡೇರಿಕೆಗೆ ಫೆ.7ರ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಂಎಫ್ ಹಾಗೂ ಜಿಲ್ಲಾ ಹಾಲು ಒಕ್ಕೂಟಗಳ ನೌಕರರು ವೇತನ ಆಯೋಗದ ಶಿಫಾರಸು ಜಾರಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಫೆ.7ರವರೆಗೆ ಗಡುವು ನೀಡಿದ್ದಾರೆ.

ಹಾಲು ಮಹಾಮಂಡಳ ಹಾಗೂ ಎಲ್ಲ ಜಿಲ್ಲಾ ಹಾಲು ಒಕ್ಕೂಟಗಳಿಗೂ 7ನೇ ವೇತನ ಆಯೋಗದ ಶಿಫಾರಸುಗಳನ್ನು ಯಥಾವತ್ತಾಗಿ ಜಾರಿಗೊಳಿಸಬೇಕು. ಭತ್ಯೆಗಳಿಗೆ ಸಂಬಂಧಿಸಿದ ಸರ್ಕಾರದ ಆದೇಶಗಳೂ ಜಾರಿಯಾಗಬೇಕು ಎಂದು ಒತ್ತಾಯಿಸಿ ನೌಕರರು ಫೆ. 1ರಿಂದ ಮುಷ್ಕರ ನಡೆಸಲು ನಿರ್ಧರಿಸಿದ್ದರು.

‘ವೇತನ ಆಯೋಗದ ಶಿಫಾರಸು ಜಾರಿಗೆ ಸಹಕಾರ ಇಲಾಖೆಯಿಂದ ಸದ್ಯದಲ್ಲಿಯೇ ಮಂಜೂರು ಆದೇಶವಾಗಲಿದೆ’ ಎಂದು ಕೆಎಂಎಫ್ ಅಧ್ಯಕ್ಷರು ಭರವಸೆ ನೀಡಿರುವುದರಿಂದ ಮುಷ್ಕರ ಮುಂದೂಡಲಾಗಿದೆ’ ಎಂದು ಕೆಎಂಎಫ್ ಅಧಿಕಾರಿಗಳ ಸಂಘದ ಕಾರ್ಯಾಧ್ಯಕ್ಷ ಎಂ. ಕೃಷ್ಣಪ್ಪ ತಿಳಿಸಿದರು.



सत्यमेव जयते
GOVERNMENT OF GUJARAT



The Future Moves Faster in Gujarat with Infrastructure Built for Investor Success

Gujarat's infrastructure stands as the backbone of its thriving economy, seamlessly linking diverse industries to global markets. Leading India's growth trajectory, the state blends a rich legacy of business excellence with infrastructure that's ready for the future.

World-Class Connectivity

- 49 ports, 19 airports including 4 international
- India's largest airport coming up in Dholera
- 2700 km gas grid & Narmada Canal water grid
- India's first high-speed rail project connecting the mega cities of Ahmedabad and Mumbai

Plug-and-Play Parks for Growth

- PM MITRA Textile Park - Navsari
- Bulk Drug Park - Bharuch
- Medical Devices Park - Rajkot
- Ceramic Park - Morbi
- Vehicle Scrappage and Recycling Park - Bhavnagar
- Agro Food Parks - Banaskantha and Rajkot
- Sea Food Parks - Valsad and Porbandar
- Tribal Parks at 8 Locations

Industrial Hubs and Mega Projects

- **GIFT City:** India's first International Financial Services Centre (IFSC), a global financial hub
- **DREAM City:** Dedicated to diamond trading and allied industries
- **Dholera Special Investment Region (SIR):** A global manufacturing and trading hub with world-class facilities
- **Surat Economic Region:** Promoting the service economy by creating world-class trading hubs for readymade apparels and jewellery, and developing new growth avenues in tourism, real estate and agriculture sectors
- **Petroleum, Chemicals, and Petrochemicals Investment Region (PCPIR):** Focused on fostering growth in the chemical & petrochemical sectors
- **Semiconductor Ecosystem:** Sanand GIDC and Dholera are being developed as key hubs for semiconductor manufacturing
- **Mandal Becharaji SIR (MBSIR):** Poised to be the world's largest automobile hub
- **200+ GIDC estates** spread across the state

Invest in Gujarat, Where the World Comes to Prosper



ಮಾತನಾಡುವ ಬೊಂಬೆಯೊಂದಿಗೆ ಲಿಂಗತ್ವ ಅಲ್ಪಸಂಖ್ಯಾತ ಕಲಾವಿದೆ ಜಾನು -ಪ್ರಜಾವಾಣಿ ಚಿತ್ರ/ ರಂಜು ಪಿ.

ಗೊಂಬೆ ಹೇಳುತ್ತೈತೆ ಜಾನು ಜೀವನ

ಲಿಂಗತ್ವ ಅಲ್ಪಸಂಖ್ಯಾತರಾದರೆ ಬದುಕಲು ಭಿಕ್ಷಾಟನೆ ಅನಿವಾರ್ಯ ಎಂಬ ಸಮುದಾಯದ ಸಲಹೆಯ ನಡುವೆಯೂ ಜಾನು ಅವರು ಆರಿಸಿಕೊಂಡಿದ್ದು ಗೊಂಬೆ ಕಲಾವಿದೆ ವೃತ್ತಿಯನ್ನು

ಇ.ಎಸ್. ಸುಧೀಂದ್ರ ಪ್ರಸಾದ್

ನಾನು ಹೆಣ್ಣಾಗಬೇಕೆಂದಿದ್ದು ಭಿಕ್ಷೆ ಬೇಡಲು ಅಲ್ಲ. ಘನತೆಯಿಂದ ಬದುಕಲು, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹೊಂದಲು, ಕಲೆಯನ್ನೇ ಆರಾಧಿಸುತ್ತಿದ್ದ ನನ್ನ ಮನದೊಳಗಿನ ಆಸೆಯನ್ನು ಪೂರೈಸಲು...

ಹೀಗೆಂದವರು ಮೆಹೆಂದಿ ಹಾಕುವ ವೃತ್ತಿಯ ಆಶ್ರಯದಲ್ಲಿದ್ದುಕೊಂಡು ಮಾತನಾಡುವ ಗೊಂಬೆ ಕಲೆಯನ್ನು ಪ್ರವೃತ್ತಿಯನ್ನಾಗಿಸಿಕೊಂಡ ಲಿಂಗತ್ವ ಅಲ್ಪಸಂಖ್ಯಾತ ಕಲಾವಿದೆ ಜಾನು.

ರಾಯಚೂರು ಜಿಲ್ಲೆಯ ಸಿರ್ವಾರ ತಾಲ್ಲೂಕಿನವರಾದ ಜಾನು ಜನಿಸಿದ್ದು ಬಡ ಕುಟುಂಬದಲ್ಲಿ. ತಂದೆ ಮಾರುಕಟ್ಟೆಯಲ್ಲಿ ಮೂಟೆ ಹೊರುವ ಕೆಲಸ, ಅಣ್ಣ ಪಂಚರ್ ಅಂಗಡಿ ಹೊಂದಿದ್ದರು. ಹುಡುಗನಾಗಿ ಜನಿಸಿದ್ದರೂ, ಬೆಳೆಯುತ್ತಾ ತಮ್ಮೊಳಗಿನ ಹೆಣ್ಣಿನ ಬೆಳವಣಿಗೆಯನ್ನು ಗ್ರಹಿಸಲು ಅವರು ಸೋಲಲಿಲ್ಲ. ಹಾಗೆಯೇ ಬಯಕೆಯನ್ನು ಹತ್ತಿಕ್ಕಲೂ ಯತ್ನಿಸಲಿಲ್ಲ. ಇದರ ಪರಿಣಾಮವೇ ಸಣ್ಣ ವಯಸ್ಸಿನಲ್ಲೇ ಕುಟುಂಬದಿಂದ ಹೊರಬೀಳಬೇಕಾದ ಅನಿವಾರ್ಯತೆ. ದುಡಿಮೆ ಇಲ್ಲದ ಒಂಟಿ ಜೀವನದಲ್ಲಿ ಎದುರಾದ ಸವಾಲುಗಳು ಜಾನು ಅವರನ್ನು ಹೆಚ್ಚು ಗಟ್ಟಿಗಿತ್ತಿಯನ್ನಾಗಿಸಿದವು.

ಲಿಂಗತ್ವ ಅಲ್ಪಸಂಖ್ಯಾತರಾದರೆ ಬದುಕಲು ಭಿಕ್ಷಾಟನೆ ಅನಿವಾರ್ಯ ಎಂಬ ತಮ್ಮ ಸಮುದಾಯದವರ ಸಲಹೆಯ ನಡುವೆಯೂ, ಜಾನು ಅವರನ್ನು ಸದಾ ಕೊರೆಯುತ್ತಿದ್ದದ್ದು ತಾನು ಬಾಲ್ಯದಿಂದಲೂ ಪ್ರೀತಿಸುತ್ತಿದ್ದ ಕಲೆ.

'ನನ್ನನ್ನು ಬಾಲಕರ ಶಾಲೆಗೆ ಸೇರಿಸಿದ್ದರೂ, ಮನಸ್ಸು ಮಾತ್ರ ಸದಾ ಪಕ್ಕದ ಬಾಲಕಿಯರ ಶಾಲೆಯ ಗೆಳತಿಯರೊಂದಿಗೆ ಆಡುವುದನ್ನೇ ಬಯಸುತ್ತಿತ್ತು. 10ನೇ ತರಗತಿಗೆ ಬರುವ ಹೊತ್ತಿಗೆ ಹುಡುಗನೊಬ್ಬನನ್ನು ಪ್ರೀತಿಸಿದ್ದೆ. ಇದನ್ನು ಅರಿತ ಕುಟುಂಬದವರು ಜರಿದರು, ಥಳಿಸಿದರು. ನನ್ನ ಬಯಕೆ ಹೇಳಿಕೊಂಡಾಗ ಕುಟುಂಬದವರ ತಿರಸ್ಕಾರದ ನೋವು, ಚುಚ್ಚುಮಾತು ಅನುಭವಿಸಬೇಕಾಯಿತು. ಇದರ ನಡುವೆಯೇ ನನ್ನ ಬಾಲ್ಯದ ಕೆಲ ಗೆಳತಿಯರು ನೆರವಾದರು. ನನಗೆ ಮೆಹೆಂದಿ ಹಾಕುವುದನ್ನು ಕಲಿಸಿದ್ದರು. ಮುಂದಿನ ಒಂಟಿ ಜೀವನಕ್ಕೆ ಆಧಾರವಾಗಿದ್ದೇ ಈ ಕಲೆ' ಎಂದು ಬದುಕಿನ ಬುತ್ತಿ ಬಿಚ್ಚಿಟ್ಟರು ಜಾನು.

'ಸಿರ್ವಾರದಿಂದ ಬೆಂಗಳೂರಿನತ್ತ ಒಂಟಿ ಪಯಣ ಆರಂಭಿಸಿದೆ. ಕೆಲ ದಿನಗಳ ಕಾಲ ನನ್ನ ಸ್ನೇಹಿತೆಯೊಬ್ಬಳು ಆಶ್ರಯ ನೀಡಿ ನೆರವಾದಳು. ಮುಂದಿನ ಜೀವನ ನಾನೇ ನಡೆಸಬೇಕಿತ್ತು. ಮನಸ್ಸು ಹೆಣ್ಣೇ ಆಗಿದ್ದರೂ, ಪುರುಷನಾಗಿ ಬದುಕುವ ಹಿಂಸೆಯನ್ನು ಅನುಭವಿಸಿದೆ. ಮನೆಯಲ್ಲಿ ಹೆಣ್ಣು, ಹೊರಗೆ ಹೋಗುವಾಗ ಗಂಡಿನ ಉಡುಪು ತೊಟ್ಟು ಹೋಗುತ್ತಿದ್ದೆ. ಸಮುದಾಯದವರನ್ನು ಸಂಪರ್ಕಿಸಿ, ನೋಂದಾಯಿಸಿಕೊಂಡೆ. ಭಿಕ್ಷಾಟನೆಯ ಸಲಹೆ ಕೆಲವರಿಂದ ಸಿಕ್ಕಿತು. ನಂತರ ಹೆಣ್ಣಿನ ಉಡುಪು ತೊಟ್ಟು ಬೆಂಗಳೂರು, ಮಂಗಳೂರಿನಲ್ಲಿ ಸಿಗ್ನಲ್‌ಗಳಲ್ಲಿ ಒಲ್ಲದ ಮನಸ್ಸಿನಿಂದಲೇ ಭಿಕ್ಷೆಯನ್ನೂ ಬೇಡಿದೆ. ಆದರೆ ಓದು ಮುಂದುವರಿಸುವ ಹಾಗೂ ಕಲೆಯೊಂದನ್ನು ಕರಗತ ಮಾಡಿಕೊಳ್ಳುವ ತುಡಿತ ಮಾತ್ರ ಕಡಿಮೆಯಾಗಲಿಲ್ಲ' ಎಂಬ ತಮ್ಮ ತುಡಿತವನ್ನು ಹಂಚಿಕೊಂಡರು.

ಕೈಹಿಡಿದ ಕಲೆ

ಮುಖ ಮುಚ್ಚಿಕೊಂಡೇ ಪಾರ್ಲರ್‌ನಲ್ಲಿ ಮೆಹೆಂದಿ ಹಾಕುತ್ತ ದುಡಿಮೆ ಆರಂಭಿಸಿದ ಜಾನು, ದೈಹಿಕವಾಗಿಯೂ ಹೆಣ್ಣಾಗುವ ಸಾಹಸಕ್ಕೆ ಕೈಹಾಕಿದರು. ಶಸ್ತ್ರಚಿಕಿತ್ಸೆ ಮೂಲಕ ಲಿಂಗ ಪರಿವರ್ತಿಸಿಕೊಂಡ ಜಾನು, ಕಲಿಕೆ ಮುಂದುವರಿಸುವತ್ತ ಗಮನ ಕೇಂದ್ರೀಕರಿಸಿದರು. ಮಾಧ್ಯಮ ಕ್ಷೇತ್ರದತ್ತ ಆಕರ್ಷಿತರಾದ ಅವರು ಸದ್ಯ ಪತ್ರಿಕೋದ್ಯಮದಲ್ಲಿ ಬಿ.ಎ. ವ್ಯಾಸಂಗ ಮಾಡುತ್ತಿದ್ದಾರೆ. ಇದರ ನಡುವೆಯೇ ಜಾನು ಅವರಿಗೆ ಹೆಚ್ಚು ಜನಪ್ರಿಯತೆ ತಂದುಕೊಟ್ಟಿದ್ದು, ಮಾತನಾಡುವ ಗೊಂಬೆ.

ಇಂದುಶ್ರೀ ರವೀಂದ್ರ ಅವರ ಕಾರ್ಯಕ್ರಮಗಳನ್ನು ವೀಕ್ಷಿಸುತ್ತಿದ್ದ ಜಾನು ಅವರಿಗೆ ಮಾತನಾಡುವ ಗೊಂಬೆ ಬಗ್ಗೆ ಆಸಕ್ತಿ ಮೂಡಿತು. ಕೋವಿಡ್ ಸಂದರ್ಭದಲ್ಲಿ ಅವರು ಕೋಲ್ಕತ್ತದ ತರಬೇತಿ ಸಂಸ್ಥೆಯಲ್ಲಿ ಆನ್‌ಲೈನ್ ತರಬೇತಿ ಪಡೆದರು. ಇದಕ್ಕಾಗಿ ತಮ್ಮದೇ ದುಡಿಮೆಯಿಂದ ಸಂಗ್ರಹಿಸಿದ ಹಣದಲ್ಲಿ ಅಮೆರಿಕದಿಂದ ಕೋತಿ ಗೊಂಬೆಯನ್ನು ತರಿಸಿ ಪ್ರದರ್ಶನ ನೀಡಲು ಆರಂಭಿಸಿದರು.

'ಮಾತನಾಡುವ ಕೋತಿಯೊಂದಿಗೆ ಸುಮಾರು ಐವತ್ತಕ್ಕೂ ಹೆಚ್ಚು ಕಾರ್ಯಕ್ರಮ ನೀಡಿದ್ದೇನೆ. ಆದರೆ ನನ್ನ ಒಂಟಿತನ ಹೋಗಲಾಡಿಸಿದ್ದು, 'ಅವಂತಿಕಾ' ಎಂಬ ಗೆಳತಿ ಜತೆಗೂಡಿದಾಗ. ಅವಂತಿಕಾ ಸದ್ಯ ನನ್ನ ಬಳಿ ಇರುವ ಮಾತನಾಡುವ ಗೊಂಬೆ. ಈಕೆಯೊಂದಿಗೆ ನಾನು ದಿನ ಕಳೆಯುತ್ತೇನೆ. ನನ್ನ ಮನೆಗೆ ಬರುವ ಸ್ನೇಹಿತರೂ ಆಕೆಯನ್ನು ಗೊಂಬೆ ಎಂದುಕೊಳ್ಳದೇ, ನನ್ನ ಗೆಳತಿ ಎಂದೇ ಪರಿಗಣಿಸಿ ಆಕೆಯೊಂದಿಗೂ ಮಾತನಾಡುತ್ತಾರೆ. ನನ್ನ ಖುಷಿ, ಬೇಸರ ಎಲ್ಲವನ್ನೂ ಅವಂತಿಕಾಳೊಂದಿಗೆ ಹಂಚಿಕೊಂಡು ಹಗುರಾಗುತ್ತೇನೆ' ಎನ್ನುತ್ತಾರೆ ಜಾನು.

'ಅಲೆಮಾರಿ ಈ ಬದುಕು' ಎಂಬ ಚಿತ್ರದಲ್ಲೂ ನಟಿಸಿರುವ ಜಾನು, ಸಿನಿಮಾ ಕ್ಷೇತ್ರದತ್ತಲೂ ಆಸಕ್ತಿ ಹೊಂದಿದ್ದಾರೆ. ಅವಕಾಶ ಕೇಳಿದರೆ 'ನಿಮ್ಮ' ಪಾತ್ರ ಇದ್ದರೆ ಹೇಳಿಕಳಿಸುತ್ತೇವೆ ಎಂಬ ಸಿದ್ಧ ಉತ್ತರ ಅವರಿಗೆ ಸಿಕ್ಕಿದೆಯಂತೆ. ಭಿಕ್ಷಾಟನೆ, ಅಪಹಾಸ್ಯಕ್ಕೊಳಗಾಗುವ ದೃಶ್ಯ ಇಲ್ಲವೇ ವೇಶ್ಯೆ ಪಾತ್ರಕ್ಕೆ ಲಿಂಗತ್ವ ಅಲ್ಪಸಂಖ್ಯಾತರನ್ನು ಸೀಮಿತಗೊಳಿಸಲಾಗಿದೆ. ಗಂಭೀರ ಸ್ವರೂಪದ ಪಾತ್ರಗಳನ್ನೂ ಸೃಷ್ಟಿಸಿದಲ್ಲಿ ನನ್ನಂತ ಇನ್ನೂ ಅನೇಕ ಕಲಾವಿದರಿಗೆ ಪ್ರತಿಭೆ ಅನಾವರಣಕ್ಕೆ ಅವಕಾಶ ಸಿಗಲಿದೆ ಎನ್ನುವುದು ಜಾನು ಬೇಸರ.

ಇಷ್ಟೆಲ್ಲಾ ಇದ್ದರೂ, ಕುಟುಂಬದಿಂದ ದೂರ ಇರುವ ನೋವು ಸದಾ ಕಾಡುತ್ತಲೇ ಇರುತ್ತದೆ. ತಂದೆ ಮತ್ತು ಅಣ್ಣ ಅಪರೂಪಕ್ಕೆ ಕರೆ ಮಾಡುತ್ತಾರೆ. ತಾಯಿಯ ಧ್ವನಿ ಕೇಳಿ ಹಲವು ವರ್ಷಗಳೇ ಕಳೆದಿವೆ. 'ನೀನು ನನ್ನ ಪಾಲಿಗೆ ಸತ್ತೆ' ಎಂಬ ಮಾತು ಈಗಲೂ ಎದೆಗೆ ನಾಟುತ್ತಲೇ ಇರುತ್ತದೆ ಎನ್ನುತ್ತಲೇ ಕಣ್ಣೀರಾದರು ಜಾನು. ಆದರೆ ಬಲಭಾಗದಲ್ಲಿದ್ದ ಅವಂತಿಕಾ, ಕ್ಷಣಮಾತ್ರದಲ್ಲಿ ಹಾಸ್ಯ ಚಟಾಕಿ ಹಾರಿಸಿ, ಜಾನು ಮೊಗದಲ್ಲಿ ನಗೆಯುಕ್ಕಿಸಿದಳು.

ಇನ್‌ಸ್ಟಾದಲ್ಲಿ 60 ಸಾವಿರ ಫಾಲೋವರ್ಸ್

ಸಾಮಾಜಿಕ ಮಾಧ್ಯಮದಲ್ಲಿ ಸಕ್ರಿಯರಾಗಿರುವ ಜಾನು, ಅಲ್ಲಿ ತಮ್ಮ ಕಲೆಯ ಪ್ರದರ್ಶನದ ವಿಡಿಯೊ ಹಂಚಿಕೊಳ್ಳುತ್ತಿದ್ದಾರೆ. ಇನ್‌ಸ್ಟಾಗ್ರಾಂನಲ್ಲಿ ಸುಮಾರು 60 ಸಾವಿರ ಫಾಲೋವರ್‌ಗಳನ್ನು ಇವರು ಹೊಂದಿದ್ದಾರೆ. ಜಾನು ಮತ್ತು ಅವಂತಿಕಾರ ಸಂಭಾಷಣೆಗೆ ಬಹಳಷ್ಟು ಜನ ಮೆಚ್ಚುಗೆ ವ್ಯಕ್ತಪಡಿಸಿರುವುದೇ ನನಗೆ ಸಿಕ್ಕಿರುವ ಪ್ರಶಸ್ತಿಗಳು ಎಂದೆನ್ನುತ್ತಾರೆ ಜಾನು.

ಜೀವದ ಗೆಳತಿ ಅವಂತಿಕಾ

'ಮಾತನಾಡುವ ಗೊಂಬೆ ಕಲೆ ಸುಲಭದ್ದಲ್ಲ. ಇಲ್ಲಿ ಎರಡು ಮನಸ್ಸಿರಬೇಕು. ಹಾಸ್ಯಪ್ರಜ್ಞೆ ಧಾರಾಳವಾಗಿರಬೇಕು. ಆ ಕ್ಷಣಕ್ಕೆ ನಕ್ಕು ನಗಿಸುವ ಚಾಕಚಕ್ಯತೆ ಬೇಕು. ಪ್ರಸಕ್ತ ವಿದ್ಯಮಾನಗಳ ಪರಿಚಯವಿರಬೇಕು. ಜತೆಗೆ ಗೊಂಬೆಯ ಧ್ವನಿ ಹೊರಹೊಮ್ಮುವುದು ತಿಳಿಯದಂತಿರಬೇಕು. ನಮ್ಮ ಕೈಗಳ ಚಲನೆ ನೋಡುಗರಿಗೆ ಗೋಚರವಾಗದಂತಿರಬೇಕು. ಜನ್ಮದಿನ ಕಾರ್ಯಕ್ರಮ, ಅಣ್ಣಮ್ಮ ಉತ್ಸವ, ಗಣೇಶೋತ್ಸವಗಳಲ್ಲಿ ಅವಕಾಶಗಳು ಸಿಕ್ಕಿವೆ. ಕೆಲವರು ಹಣ ನೀಡುತ್ತಾರೆ. ಇನ್ನೂ ಕೆಲವರು ವೇದಿಕೆ ಕೊಟ್ಟಿದ್ದೇವಲ್ಲಾ ಅದೇ ದೊಡ್ಡ ಅವಕಾಶ ಎನ್ನುತ್ತಾರೆ. ಆದರೆ, ಅವಂತಿಕಾ ಜೊತೆ ಕಾರ್ಯಕ್ರಮ ನೀಡುವುದೇ ನನ್ನ ಪಾಲಿಗೆ ಹೆಮ್ಮೆ. ನಾನು ಏನೇ ಉಡುಪು ಖರೀದಿಸಿದರೂ, ಅದೇ ಮಾದರಿಯ ಉಡುಪನ್ನು ಅವಂತಿಕಾಗೂ ಹೊಲಿಸುತ್ತೇನೆ. ಇಷ್ಟರ ಮಟ್ಟಿಗೆ ನಮ್ಮ ಸ್ನೇಹ ಗಾಢವಾಗಿದೆ' ಎಂದು ಜಾನು ನಕ್ಕರು.



ಹಾರ್ಮೋನ್‌ಗಳ ಸುಳಿಯಲ್ಲಿ

ಕಾಳಜಿ

ಡಾ. ಆಯಿಷಾ ಗುಲ್ಜಾರ್

ಪ್ರತಿ ಮಾತಿಗೆ ಸಿಡುಕುವುದೇಕೆ?, ಸಣ್ಣ ಮಾತಿಗೂ ಇಷ್ಟು ರಂಪಾಟ ಮಾಡುವ ಅಗತ್ಯವಿರುತ್ತಾ?, ಎಂದೋ ಆಡಿದ ಮಾತನ್ನು ಮನಸ್ಸಿನಲ್ಲಿಟ್ಟುಕೊಂಡು ಪದೇ ಪದೇ ಗಾಸಿಗೊಳಗಾಗುವ ಅಗತ್ಯವಾದರೂ ಏನಿತ್ತು?, ಅವಮಾನ ಯಾರಿಗೆ ಆಗಿಲ್ಲ, ಅದನ್ನೆ ಎತ್ತಾಡುವುದೇಕೆ?, ಅಷ್ಟೊಂದು ಮಿದುವಾದರೆ ಬದುಕು ನಡೆಸೋದಕ್ಕೆ ಆಗುತ್ತಾ ಹೇಳು?. ಗಟ್ಟಿಗಿತ್ತಿ ಅಂತಿಯಾ, ಈಗೇಕೇ ಮಿದುವಾಗಿದ್ದೀಯಾ?

ಇಂಥ ಹಲವು ಪ್ರಶ್ನೆಗಳನ್ನು ಮೂಡ್‌ಸ್ವಿಂಗ್‌ನ ಬವಣೆಗೆ ಒಳಗಾಗುವ ಹೆಣ್ಣುಮಕ್ಕಳು ಎದುರಿಸಿಯೇ ಇರುತ್ತಾರೆ. ಬದುಕು ಒಡ್ಡುವ ಸವಾಲುಗಳಷ್ಟೆ ಅಲ್ಲದೇ ತಿಂಗಳಲ್ಲಿ ಕೆಲವು ದಿನಗಳ ಮಟ್ಟಿಗೆ ದೇಹದಲ್ಲಿ ಏರಿಳಿತಗೊಳ್ಳುವ ಹಾರ್ಮೋನ್‌ಗಳ ಕಾರಣದಿಂದಾಗಿ ಹೀಗೆ ಏಕಾಏಕಿ ಸಿಟ್ಟುಬರಲು, ವ್ಯಗ್ರಗೊಳ್ಳಲು, ಬೇಸರ, ಖಿನ್ನತೆ, ದುಃಖ, ಹತಾಶೆಗೊಳ್ಳುವ ಸಾಧ್ಯತೆಯೂ ಇರುತ್ತದೆ.

ಪ್ರೌಢಾವಸ್ಥೆಯಿಂದ ಋತುಬಂಧದವರೆಗೂ ಇರುವ ವಿವಿಧ ಬಗೆಯ ಹಾರ್ಮೋನ್‌ಗಳು ಹೆಣ್ಣಿನ ಸಂತಾನೋತ್ಪತ್ತಿಯಷ್ಟೆ ಅಲ್ಲದೇ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಪ್ರಮುಖವಾಗಿ ಪ್ರಭಾವಿಸುತ್ತವೆ. ಹೆಣ್ಣಿನ ದೈಹಿಕ ಹಾಗೂ ಭಾವಾನಾತ್ಮಕ ಬದುಕನ್ನು ಒಟ್ಟಿಗೆ ಆಳುವ ಈ ಹಾರ್ಮೋನ್‌ಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದು ಬಹುಮುಖ್ಯ.

ಹೆಣ್ಣುಮಕ್ಕಳಿಗೆ ವಿವಿಧ ಹಂತಗಳಲ್ಲಿ ಪರಿಣಾಮ ಬೀರುವ ಹಾರ್ಮೋನ್‌ಗಳು ಹೀಗಿವೆ.

> ಹಾರ್ಮೋನ್‌ಗಳ ಏರಿಳಿತದಿಂದಾಗಿ ಹೆಣ್ಣಿನ ಭಾವಾನಾತ್ಮಕ ಪ್ರಪಂಚ ಸಂಕೀರ್ಣಗೊಂಡಂತೆ ಕಂಡುಬರುತ್ತದೆ. ಕೇವಲ ಸಂತಾನೋತ್ಪತ್ತಿಗಷ್ಟೆ ಈ ಹಾರ್ಮೋನ್‌ಗಳು ಸ್ರವಿಸುವುದಲ್ಲ. ಬದಲಿಗೆ ಮಾನಸಿಕ ಆರೋಗ್ಯದ ಮೇಲೂ ಪ್ರಭಾವ ಬೀರುತ್ತವೆ.

ಪ್ರೌಢಾವಸ್ಥೆ (10ರಿಂದ 14ವರ್ಷ): ಇದು ಸಂತಾನೋತ್ಪತ್ತಿಯ ಆರಂಭಿಕ ಘಟ್ಟವಾಗಿದ್ದು, ಈ ಹಂತದಲ್ಲಿ ಜಿಎನ್‌ಆರ್‌ಎಚ್ ಹಾರ್ಮೋನ್‌ಗಳು ಬಿಡುಗಡೆಯಾಗುತ್ತವೆ. ಜತೆಗೆ ಲ್ಯೂಟೈನೈಜಿಂಗ್ ಮತ್ತು ಕೋಶಕವನ್ನು ಉತ್ತೇಜಿಸುವ ಎಲ್‌ಎಚ್ ಮತ್ತು ಎಫ್‌ಎಸ್‌ಎಚ್ ಹಾರ್ಮೋನ್‌ಗಳು ಬಿಡುಗಡೆಯಾಗುತ್ತವೆ. ಇವು ಈಸ್ಟ್ರೋಜೆನ್ ಉತ್ಪಾದನೆಗೆ ಪೂರಕವಾಗಿದ್ದು, ಅಂಡಾಶಯ ಬೆಳವಣಿಗೆಗೆ ಅಗತ್ಯವಾಗಿದೆ. ಇವುಗಳ ಕಾರಣದಿಂದಾಗಿ ಸ್ತನದ ಗಾತ್ರ ಹಿಗ್ಗುತ್ತದೆ. ಮತ್ತು ಖಾಸಗಿ ಅಂಗಗಳ ಭಾಗದಲ್ಲಿ ಕೂದಲು ಬೆಳೆಯುತ್ತದೆ. ಇದೇ ಹಂತದಲ್ಲಿ ಮಾಸಿಕ ಋತುಚಕ್ರ ಆರಂಭಗೊಳ್ಳುತ್ತದೆ.

ಗರ್ಭಧಾರಣೆಯ ಘಟ್ಟ (21ರಿಂದ 35): ಫಲವತ್ತತೆ ಹಾಗೂ ಸಂತಾನೋತ್ಪತ್ತಿಯ ಆರೋಗ್ಯವನ್ನು ನಿರ್ಧರಿಸುವ ಪ್ರಮುಖ ಘಟ್ಟವಿದು. ಈ ಹಂತದಲ್ಲಿ ಈಸ್ಟ್ರೋಜೆನ್ ಮತ್ತು ಪ್ರೊಜೆಸ್ಟರಾನ್ ಹಾರ್ಮೋನ್‌ಗಳ ಉತ್ಪಾದನೆಯ ಮಟ್ಟ ಹೆಚ್ಚಿರುತ್ತದೆ. ಇವು ಗರ್ಭಧಾರಣೆಗೆ ಹೆಣ್ಣಿನ ದೇಹವನ್ನು ಸಿದ್ಧಪಡಿಸುತ್ತವೆ. ಆರಂಭದಲ್ಲಿ ಹಾರ್ಮೋನ್‌ಗಳ ಸ್ರವಿಸುವಿಕೆಯಲ್ಲಿ ಅಂಥ ಏರಿಳಿತಗಳು ಇಲ್ಲದೇ ಇರಬಹುದು. ಮೂವತ್ತಾಗುತ್ತಿದ್ದಂತೆ ಅಥವಾ ಅದಕ್ಕೂ ಮೊದಲೇ ಈ ಹಾರ್ಮೋನ್‌ಗಳ ಉತ್ಪಾದನೆಯಲ್ಲಿ ಏರಿಳಿತ ಉಂಟಾಗಬಹುದು. ಈ ಸಂದರ್ಭದಲ್ಲಿ ಅತಿ ಹೆಚ್ಚು ಮೂಡ್‌ಸ್ವಿಂಗ್ (ಪಿಎಂಎಸ್) ಕಾಣಿಸಿಕೊಳ್ಳಬಹುದು. ಇವುಗಳ ಏರಿಳಿತಕ್ಕೆ ಕೆಲಸದ ಒತ್ತಡ, ಅವೈಜ್ಞಾನಿಕ ಆಹಾರ ಪದ್ಧತಿ, ವ್ಯಾಯಾಮದ ಕೊರತೆಯೂ ಕಾರಣವಾಗಿರಬಹುದು. ಏರಿಳಿತದಿಂದ ಮಾನಸಿಕವಾಗಿ ಒತ್ತಡ ಉಂಟಾದರೆ ದೈಹಿಕವಾಗಿ ಅನಿಯಮಿತವಾಗಿ ಮುಟ್ಟಾಗುವ ಸಾಧ್ಯತೆ ಹೆಚ್ಚು. ಗರ್ಭಧಾರಣೆಯ ಘಟ್ಟವಾಗಿರುವುದರಿಂದ ಭ್ರೂಣದ ಬೆಳವಣಿಗೆ ಉತ್ತಮವಾಗಲು ಈಸ್ಟ್ರೋಜೆನ್ ಮತ್ತು ಪ್ರೊಜೆಸ್ಟರಾನ್ ಹಾರ್ಮೋನ್‌ಗಳ ಉತ್ಪಾದನೆ ತುಸು ಹೆಚ್ಚೇ ಇರುತ್ತದೆ. ಈ ಹಾರ್ಮೋನ್‌ಗಳು ಗರ್ಭಾಶಯ ಮತ್ತು ಪ್ಲಾಸೆಂಟ್ ರೂಪಿಸಲು ನಿರ್ಣಾಯಕ ಪಾತ್ರ ವಹಿಸುತ್ತವೆ. ಜತೆಗೆ ಹಾಲಿನ ಉತ್ಪಾದನೆಗೂ ಪೂರಕವಾಗಿರುತ್ತವೆ.

ಗರ್ಭಿಣಿಯರಲ್ಲಿ ಈ ಹಾರ್ಮೋನ್‌ಗಳ ಏರಿಳಿತದಿಂದ ಬೆಳಗಿನ ಹೊತ್ತು ಅಸ್ವಸ್ಥತೆ ಉಂಟಾಗಬಹುದು. ತೂಕ ಹೆಚ್ಚುವುದು, ದೈಹಿಕ ಬದಲಾವಣೆ, ಸ್ತನದಲ್ಲಿ ಮೃದುತ್ವ ಅಥವಾ ಹಿಗ್ಗುವಿಕೆ ಉಂಟಾಗಬಹುದು. ಹೆರಿಗೆಯಾದ ಕೂಡಲೇ ಈಸ್ಟ್ರೋಜೆನ್ ಮತ್ತು ಪ್ರೊಜೆಸ್ಟರಾನ್ ಹಾರ್ಮೋನ್‌ಗಳ ಉತ್ಪಾದನೆಯ ಮಟ್ಟ ಕಡಿಮೆಯಾಗುತ್ತದೆ. ಆದರೆ, ಪ್ರೊಲ್ಯಾಕ್ಟಿನ್ ಹಾರ್ಮೋನ್ ಹೆಚ್ಚಾಗುತ್ತದೆ. ಇದರಿಂದ ಸ್ತನದ ಗಾತ್ರ ಹಾಗೂ ಹಾಲಿನ ಉತ್ಪತ್ತಿಯೂ ಹೆಚ್ಚುತ್ತದೆ. ಪ್ರಸವಾನಂತರದ ಅವಧಿಯಲ್ಲಿ ಈ ಹಾರ್ಮೋನ್‌ಗಳ ಏರಿಳಿತದಿಂದಾಗಿ ಮೂಡ್‌ಸ್ವಿಂಗ್ ಹೆಚ್ಚಬಹುದು. ಭಾವಾನಾತ್ಮಕವಾಗಿ ಸ್ಥಿರತೆ ಇರುವುದಿಲ್ಲ.

ಪೂರ್ವ ಋತುಬಂಧ(ಪೆರಿಮೆನೋಪಾಸ್) 35ರಿಂದ 55: ಕ್ರಮೇಣ ಈಸ್ಟ್ರೋಜೆನ್ ಮತ್ತು ಪ್ರೊಜೆಸ್ಟರಾನ್ ಉತ್ಪಾದನೆಯ ಮಟ್ಟವು ಕಡಿಮೆಯಾಗುತ್ತದೆ. ಇದರಿಂದ ನಿಯಮಿತವಾಗಿ ಮುಟ್ಟಾಗದೇ ಇರಬಹುದು. ಯೋನಿಯಲ್ಲಿ ಶುಷ್ಕತೆ ಕಂಡುಬರುತ್ತದೆ. ಲೈಂಗಿಕ ಸಕ್ರಿಯತೆ ಕಡಿಮೆಯಾಗುತ್ತದೆ. ಮೂಡ್‌ಸ್ವಿಂಗ್ ಹೆಚ್ಚಿರುತ್ತದೆ.

ಋತುಬಂಧ (45ರಿಂದ 55): ಫಲವಂತಿಕೆ ಘಟ್ಟದ ಕೊನೆಯ ಹಂತ ಇದಾಗಿದ್ದು, ಈಸ್ಟ್ರೋಜೆನ್ ಮತ್ತು ಪ್ರೊಜೆಸ್ಟರಾನ್ ಸ್ರವಿಸುವ ಮಟ್ಟವೂ ಕಡಿಮೆಯಾಗುತ್ತ ಹೋಗುತ್ತದೆ. ಇದರಿಂದ ಲೈಂಗಿಕ ಆಸೆಗಳು ಬತ್ತಿ ಹೋಗುತ್ತವೆ.

ಹಾರ್ಮೋನ್‌ಗಳ ಏರಿಳಿತದಿಂದಾಗಿ ಹೆಣ್ಣಿನ ಭಾವಾನಾತ್ಮಕ ಪ್ರಪಂಚ ಸಂಕೀರ್ಣಗೊಂಡಂತೆ ಕಾಣುತ್ತದೆ. ಸಂತಾನೋತ್ಪತ್ತಿಗಷ್ಟೆ ಈ ಹಾರ್ಮೋನ್‌ಗಳು ಸ್ರವಿಸುವುದಿಲ್ಲ. ಬದಲಿಗೆ ಮಾನಸಿಕ ಹಾಗೂ ಭಾವಾನಾತ್ಮಕ ಆರೋಗ್ಯದ ಮೇಲೂ ಪ್ರಭಾವ ಬೀರುತ್ತದೆ. ಹೆಣ್ಣುಮಕ್ಕಳು ವಿನಾಕಾರಣ ಸಿಡುಕುತ್ತಿದ್ದರೆ, ಬೇಸರದಲ್ಲಿದ್ದರೆ ಅಂಥವರಿಗೆ ಆ ಕ್ಷಣದ ಸಾಂತ್ವನದ ಅಗತ್ಯವಿರುತ್ತದೆ. ಈ ಸಂದರ್ಭಗಳಲ್ಲಿ ಅವರ ವ್ಯಕ್ತಿತ್ವವನ್ನು ದೂರದೇ, ಬೆಂಬಲ ನೀಡಲು ಕುಟುಂಬದ ಸದಸ್ಯರು ಮುಂದಾಗುವುದು ಅತ್ಯವಶ್ಯಕ. ಮಹಿಳೆಯರು ಈ ಮೂಡ್‌ಸ್ವಿಂಗ್‌ನ ಅವಧಿಯಲ್ಲಿ ಮಸಾಲೆಯುಕ್ತ ಆಹಾರವನ್ನು ತಿನ್ನದಿರುವುದು ಉತ್ತಮ. ಒಳ್ಳೆಯ ನಿದ್ರೆ ಮಾಡಿ. ಮನೆ ಹಾಗೂ ಕಚೇರಿ ಕೆಲಸಗಳ ನಡುವೆಯೂ ಸ್ವ ಆರೈಕೆಗೆ ಒತ್ತು ನೀಡಿದರೆ ಮೂಡ್‌ಸ್ವಿಂಗ್ ಎಂಬ ಮಾಯಾವಿಯನ್ನು ನಿಯಂತ್ರಿಸಬಹುದು.

ಲೇಖಕಿ, ಸ್ತ್ರೀರೋಗ ತಜ್ಞೆ

ಯಾರನ್ನೂ ನಂಬದ ಮಗಳಿಗೆ ಏನು ಹೇಳಲಿ?

ಅಂತರಂಗ



ಅಕ್ಷರ ದಾಮ್ಲೆ

- **ನನ್ನ ಮಗಳಲ್ಲಿ ಯಾವುದನ್ನೂ ನಂಬದ ಗುಣ ಸ್ವಭಾವ ಬೆಳೆಯುತ್ತಿದೆ. ಏನು ಮಾಡಬೇಕು? ಎಲ್ಲರನ್ನೂ ಅನುಮಾನದ ದೃಷ್ಟಿಯಿಂದ ನೋಡುತ್ತಾಳೆ. ವಿನಾಕಾರಣ ಆತಂಕ ಪಡುತ್ತಾಳೆ. ಇದಕ್ಕೆ ಪರಿಹಾರವಿದೆಯೇ?**

ಸಾಧಾರಣವಾಗಿ ನಾವೆಲ್ಲರೂ ಸಮಾಜದಲ್ಲಿ ಜನರು ಒಳ್ಳೆಯವರಾಗಿರುತ್ತಾರೆ ಎಂದು ನಂಬುತ್ತೇವೆ. ಒಬ್ಬರು ಇನ್ನೊಬ್ಬರಿಗೆ ಸಹಾಯ ಮಾಡುವವರಾಗಿರುತ್ತಾರೆ ಎಂದು ಅಂದುಕೊಂಡಿರುತ್ತಾರೆ. ಪ್ರಾಕೃತಿಕವಾಗಿ ಮನುಷ್ಯ ಹಾಗೆಯೇ ಇದ್ದದ್ದು ಕೂಡಾ. ಅದನ್ನೇ ನಾವು ಪ್ರಾಣಿಗಳಲ್ಲೂ ಸಾಮಾನ್ಯವಾಗಿ ಕಾಣುತ್ತೇವೆ. ಹಾಗಾಗಿಯೇ ನಾವು ಹಂಚಿ ತಿನ್ನುವ, ಜೊತೆಯಾಗಿ ಕೆಲಸಗಳನ್ನು ಮಾಡುವ ನಡವಳಿಕೆಯನ್ನು ಕಾಣುತ್ತೇವೆ. ಇವುಗಳನ್ನು ನಾವು ಬುಡಕಟ್ಟು ಜನಾಂಗಗಳಲ್ಲೂ ಕಾಣಬಹುದು. ಅಲ್ಲಿ ಒಬ್ಬರು ಇನ್ನೊಬ್ಬರ ಬಗ್ಗೆ ಸಂಶಯ ಪಡುವುದಾಗಲೀ ಅಥವಾ ಒಬ್ಬರು ಇನ್ನೊಬ್ಬರನ್ನು ಕಾಲೆಳೆಯುವ ಕುಹಕಗಳಾಗಲೀ ಅಥವಾ 'ತಾನು, ತನ್ನದು' ಮುಂತಾದ ಅಹಂಕಾರೀ ಭಾವ ಇರುವುದಿಲ್ಲ. ಎಲ್ಲರೂ ಒಬ್ಬರಿಗೊಬ್ಬರು ಸಹಕಾರವನ್ನು ನೀಡುತ್ತಾ ಸಹಬಾಳ್ವೆಯ ಜೀವನವನ್ನು ನಡೆಸುವಲ್ಲಿ ನಂಬಿಕೆಯನ್ನು ಇಟ್ಟಿರುತ್ತಾರೆ.

ಆದರೆ ಮನುಷ್ಯನ ಲೋಭ, ಸ್ವಾರ್ಥ ಮನೋಭಾವದಿಂದ ಮಾತ್ರವಲ್ಲ ಕೆಲವು ಅಮಾನವೀಯ ಕುಕೃತ್ಯಗಳಿಂದಾಗಿ ಸಮಾಜವು ಸುರಕ್ಷಿತವಾಗಿ ಉಳಿದಿಲ್ಲ. ಒಂದು ವೇಳೆ ನಾವು ಬೆಳೆಯುವಾಗ ಇಂತಹ ಸಮಾಜವನ್ನೇ ನೋಡಿಕೊಂಡು ಬೆಳೆದರೆ, ಆವಾಗ ವ್ಯಕ್ತಿಗೆ ಸಮಾಜದ ಬಗ್ಗೆ ಅಪನಂಬಿಕೆ ಬೆಳೆಯುವ ಸಾಧ್ಯತೆ ಇರುತ್ತದೆ. ಅಥವಾ ಬಾಲ್ಯದ ಸಂದರ್ಭದಲ್ಲಿ ತಂದೆಯ ಲಭ್ಯತೆ ಇಲ್ಲದಿದ್ದಾಗಲೂ ವ್ಯಕ್ತಿಗೆ ಸಮಾಜದ ಕುರಿತು ಅಧೈರ್ಯ ಉಂಟಾಗುವ ಸಾಧ್ಯತೆ ಇದೆ. ಇದಕ್ಕೆ ಕಾರಣವೇನೆಂದರೆ, ಮನಃಶ್ಶಾಸ್ತ್ರೀಯವಾಗಿ ಹೇಳುವುದಾದರೆ, ಜಗತ್ತಿನ ಬೆಳಕನ್ನು ಕೊಡುವವಳು ತಾಯಿ, ಮತ್ತು ಜಗತ್ತನ್ನು ತೋರಿಸುವುದು ತಂದೆ. ಯಾವಾಗ ತಂದೆಯ ಆರೈಕೆ ಆ ಎಳವೆಯಲ್ಲಿ ಉತ್ತಮ



ರೀತಿಯಲ್ಲಿ ಸಿಗುತ್ತದೋ ಆವಾಗ ಮಗುವಿಗೆ ತನ್ನ ಮೇಲೂ ನಂಬಿಕೆ ಬರುತ್ತದೆ. ತನ್ನ ರಕ್ಷಣೆಯ ಕುರಿತು ನಂಬಿಕೆ ಇರುತ್ತದೆ. ತನ್ಮೂಲಕ ಸಮಾಜದ ಕುರಿತು ನಂಬಿಕೆ ಮೂಡುತ್ತದೆ. ಆದರೆ ಯಾವಾಗ ಆ ವಯಸ್ಸಿನಲ್ಲಿ ಸಮಸ್ಯೆ ಉಂಟಾಗುತ್ತದೋ, ಆವಾಗ ಮಕ್ಕಳು ಸಮಾಜದ ಕುರಿತು ಸಂಶಯ ಪ್ರವೃತ್ತಿಯನ್ನು ಬೆಳೆಸಿಕೊಳ್ಳುತ್ತಾರೆ.

ಇವ್ಯಾವುವೂ ಕಾರಣಗಳಲ್ಲದಿದ್ದರೆ, ಆಕೆಯ ಮೇಲೆ ದೌರ್ಜನ್ಯ ನಡೆದಿರುವ ಸಾಧ್ಯತೆಯೂ ಇರಬಹುದು. ದಯವಿಟ್ಟು ಒಮ್ಮೆ ತಜ್ಞರನ್ನು ಭೇಟಿ ಮಾಡಿ ವಿಸ್ತಾರವಾಗಿ ವಿಚಾರಿಸಿ. ಸಮಸ್ಯೆಯ ಮೂಲ ಸಿಗಬಹುದು ಮತ್ತು ಅದನ್ನು ಪರಿಹರಿಸಲೂ ಸಾಧ್ಯವಾಗಬಹುದು.

ರುಚಿಕರವಾದ ತೊಕ್ಕು

ರಸಾಸ್ವಾದ

ನೀರು ಮುಟ್ಟಿಸದೇ ಒಣ ಬಟ್ಟೆಯಿಂದ ಒರಿಸಿ ಬಳಿಕ ತೊಕ್ಕುಗಳನ್ನು ತಯಾರಿಸಿ. ಗಾಳಿಯಾಡದ ಡಬ್ಬಿಯಲ್ಲಿ ಇವುಗಳನ್ನು ಹಾಕಿಟ್ಟರೆ ಮೂರರಿಂದ ಆರುತಿಂಗಳವರೆಗೆ ಬಳಸಬಹುದು. ಇವುಗಳ ರೆಸಿಪಿ ನೀಡಿದ್ದಾರೆ

ವೇದಾವತಿ ಎಚ್.ಎಸ್.



ಮಾವಿನ ಕಾಯಿ ತೊಕ್ಕು

ಬೇಕಾಗುವ ಸಾಮಗ್ರಿಗಳು: ಮಾವಿನಕಾಯಿ 1/2 ಕೆಜಿ ಅಥವಾ ಮಾವಿನಕಾಯಿ ತುರಿ 3 ಕಪ್, ಸಾಸಿವೆ 1 ಟೇಬಲ್ ಚಮಚ, ಜೀರಿಗೆ 1 ಟೇಬಲ್ ಚಮಚ, ಮೆಂತ್ಯ 1/2 ಟೇಬಲ್ ಚಮಚ, ಪುಡಿ ಉಪ್ಪು 1/2 ಕಪ್, ಅಚ್ಚಖಾರದ ಪುಡಿ 1/2 ಕಪ್, ಅರಿಶಿನ 1 ಟೇಬಲ್ ಚಮಚ.

ಒಗ್ಗರಣೆಗೆ: ಅಡುಗೆ ಎಣ್ಣೆ 1/2 ಕಪ್, ಇಂಗು 1/2 ಟೀ ಚಮಚ, ಸಾಸಿವೆ 1 ಟೀ ಚಮಚ, ಬೆಳ್ಳುಳ್ಳಿ ಎಸಳು 15 ರಿಂದ 20, ಒಣಮೆಣಸಿನಕಾಯಿ 3 ತುಂಡು ಮಾಡಿ ಹಾಕಿ.

ತಯಾರಿಸುವ ವಿಧಾನ: ಹುಳಿ ಇರುವ ಮಾವಿನಕಾಯಿಯನ್ನು ತೆಗೆದುಕೊಂಡು ಅದರ ಸಿಪ್ಪೆಯನ್ನು ತೆಗೆದು ತುರಿದುಕೊಳ್ಳಿ. ಬಾಣಲೆಗೆ ಸಾಸಿವೆ, ಜೀರಿಗೆ, ಮೆಂತ್ಯ ಹಾಕಿ ಬಣ್ಣ ಬದಲಾಗಿ ಸಾಸಿವೆ ಸಿಡಿಯುವರೆಗೆ ಹುರಿಯಿರಿ. ಬಳಿಕ ನುಣ್ಣಗೆ ಪುಡಿ ಮಾಡಿಕೊಳ್ಳಿ. ತಯಾರಿಸಿಕೊಂಡ ಮಸಾಲೆ ಪುಡಿಯನ್ನು ತುರಿದ ಮಾವಿನಕಾಯಿ ಜೊತೆಗೆ ಸೇರಿಸಿ. ನಂತರ ಉಪ್ಪು, ಅಚ್ಚ ಖಾರದಪುಡಿ, ಅರಿಶಿನವನ್ನು ಸೇರಿಸಿ ಮಿಶ್ರಣ ಮಾಡಿ.

ಬಾಣಲೆಗೆ ಎಣ್ಣೆಯನ್ನು ಹಾಕಿ ಬಿಸಿ ಮಾಡಿಕೊಂಡು ತಿಳಿಸಿರುವ ಒಗ್ಗರಣೆ ಸಾಮಗ್ರಿಗಳನ್ನು ಹಾಕಿ. ಸಾಸಿವೆ ಸಿಡಿದು, ಬೆಳ್ಳುಳ್ಳಿ ಕೆಂಬಣ್ಣ ಬರುವರೆಗೆ ಹುರಿಯಿರಿ. ಈ ಒಗ್ಗರಣೆಯನ್ನು ಮಾವಿನಕಾಯಿ ಮಿಶ್ರಣಕ್ಕೆ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಬಳಿಕ ಗಾಳಿಯಾಡದ ಡಬ್ಬಿಯಲ್ಲಿ ತುಂಬಿಸಿಡಿ.

ನೆಲ್ಲಿಕಾಯಿ

ಬೇಕಾಗುವ ಸಾಮಗ್ರಿಗಳು: ನೆಲ್ಲಿಕಾಯಿ 20, ಎಣ್ಣೆ 3 ಟೇಬಲ್ ಚಮಚ, ಸಾಸಿವೆ 1 ಟೀ ಚಮಚ, ಅರಶಿನ 1 ಟೀ ಚಮಚ, ಜೀರಿಗೆ ಪುಡಿ 1 ಟೀ ಚಮಚ, ಇಂಗು 1/2 ಟೀ ಚಮಚ, ಮೆಂತ್ಯ ಹುರಿದು ಪುಡಿ ಮಾಡಿ ಕೊಂಡಿದ್ದು 2 ಟೀ ಚಮಚ, ಉಪ್ಪು ಒಂದೂವರೆ ಟೇಬಲ್ ಚಮಚ (ನೆಲ್ಲಿಕಾಯಿಯ ಹುಳಿ ನೋಡಿ ಹಾಕಿ), ಅಚ್ಚ ಖಾರದ ಪುಡಿ ಒಂದೂವರೆ ಟೇಬಲ್ ಚಮಚ.

ತಯಾರಿಸುವ ವಿಧಾನ: ಕುಕ್ಕರ್ ಬಟ್ಟಲಿನಲ್ಲಿ ನೆಲ್ಲಿಕಾಯಿಯನ್ನು ಹಾಕಿ ಮೂರು ವಿಷಲ್ ಕೂಗಿಸಿ. ವಿಷಲ್ ಇಳಿದ ಮೇಲೆ ಪೂರ್ತಿ ಆರಿದ ನಂತರ ಬೀಜದಿಂದ ಬಿಡಿಸಿಕೊಳ್ಳಿ. ಮಿಕ್ಸಿ ಜಾರಿಗೆ ನೆಲ್ಲಿಕಾಯಿಯನ್ನು ಹಾಕಿ ನುಣ್ಣಗೆ ರುಬ್ಬಿಕೊಳ್ಳಿ. ಬಾಣಲೆಯಲ್ಲಿ ಎಣ್ಣೆಯನ್ನು ಹಾಕಿ ಬಿಸಿ ಮಾಡಿಕೊಳ್ಳಿ. ಬಿಸಿ ಎಣ್ಣೆಗೆ ಸಾಸಿವೆ, ಇಂಗು, ಅರಿಶಿನ, ಜೀರಿಗೆ ಪುಡಿ, ಮೆಂತ್ಯ ಪುಡಿಯನ್ನು ಹಾಕಿ ಮಿಶ್ರಣ ಮಾಡಿ. ಈ ಮಿಶ್ರಣಕ್ಕೆ ರುಬ್ಬಿಕೊಂಡ ನೆಲ್ಲಿಕಾಯಿಯನ್ನು ಹಾಕಿ. ಸಣ್ಣ ಉರಿಯಲ್ಲಿ ಚೆನ್ನಾಗಿ ಹುರಿಯಿರಿ. ಉಪ್ಪನ್ನು ಸೇರಿಸಿ. ನಂತರ ಖಾರದಪುಡಿಯನ್ನು ಹಾಕಿ. ಸಣ್ಣ ಉರಿಯಲ್ಲಿ ಹತ್ತು ನಿಮಿಷ ನೀರಿನಾಂಶ ಹೋಗುವರೆಗೆ ಹುರಿಯಿರಿ. ಬಳಿಕ ಒಲೆಯನ್ನು ಆರಿಸಿ. ಪೂರ್ತಿ ತಣ್ಣಗಾದ ನಂತರ ಒಂದು ಗಾಜಿನ ಬಾಟಲಿಯಲ್ಲಿ ಹಾಕಿಡಿ. ರುಚಿಕರವಾದ ತೊಕ್ಕನ್ನು ತಯಾರಿಸಿ ಅನ್ನ, ರೊಟ್ಟಿ, ಚಪಾತಿಯೊಂದಿಗೆ ಸವಿಯಿರಿ.



ಟೊಮೆಟೊ

ಬೇಕಾಗುವ ಸಾಮಗ್ರಿಗಳು: ನಾಟಿ ಟೊಮೆಟೊ ಹಣ್ಣು 1 ಕೆಜಿ, ಹುಣಸೆಹಣ್ಣು 50 ಗ್ರಾಂ, ಸಾಸಿವೆ 1 ಟೇಬಲ್ ಚಮಚ ಮತ್ತು ಮೆಂತ್ಯ 1 ಟೇಬಲ್ ಚಮಚ ಹುರಿದು ಪುಡಿ ಮಾಡಿಕೊಳ್ಳಿ, ಎಣ್ಣೆ 1/4 ಕಪ್. ಸಾಸಿವೆ 1 ಟೀ ಚಮಚ, ಜೀರಿಗೆ 1 ಟೀ ಚಮಚ, ಕಡಲೆಬೇಳೆ 1 ಟೀ ಚಮಚ, ಉದ್ದಿನಬೇಳೆ 1 ಟೀ ಚಮಚ, ಇಂಗು 1/4 ಟೀ ಚಮಚ, ಕರಿಬೇವು 15 ರಿಂದ 20, ಬೆಳ್ಳುಳ್ಳಿ 20 ರಿಂದ 25, 50 ಗ್ರಾಂ ಅಚ್ಚಖಾರದಪುಡಿ, 50 ಗ್ರಾಂ ಉಪ್ಪು, 2 ಒಣಮೆಣಸು.



ತಯಾರಿಸುವ ವಿಧಾನ: ಟೊಮೆಟೊ ತೊಳೆದು ನೀರು ಇರದಂತೆ ಚೆನ್ನಾಗಿ ಬಟ್ಟೆಯಿಂದ ಒರಸಿಕೊಳ್ಳಿ. ಬಳಿಕ ಚಿಕ್ಕದಾಗಿ ಕತ್ತರಿಸಿಕೊಳ್ಳಿ. ಬಾಣಲೆಗೆ 2 ಟೇಬಲ್ ಚಮಚ ಎಣ್ಣೆಯನ್ನು ಹಾಕಿ ಬಿಸಿ ಮಾಡಿಕೊಳ್ಳಿ. ಕತ್ತರಿಸಿದ ಟೊಮೆಟೊ ಹಾಕಿ ಮಿಶ್ರಣ ಮಾಡಿ. ಇದಕ್ಕೆ ಹುಣಸೆಹಣ್ಣನ್ನು ಸೇರಿಸಿ. ಬಳಿಕ ಮುಚ್ಚಳ ಮುಚ್ಚಿ ಮೆತ್ತಗಾಗುವರೆಗೆ ಬೇಯಿಸಿ. ಬೆಂದ ನಂತರ ಆರಲು ಬಿಡಿ. ಮಿಕ್ಸಿಯಲ್ಲಿ ಹಾಕಿ ನುಣ್ಣಗೆ ರುಬ್ಬಿಕೊಳ್ಳಿ. ಬಾಣಲೆಗೆ ಉಳಿದ ಎಣ್ಣೆಯನ್ನು ಹಾಕಿ ಬಿಸಿ ಮಾಡಿಕೊಳ್ಳಿ. ಬಳಿಕ ಸಾಸಿವೆ, ಜೀರಿಗೆ, ಕಡಲೆಬೇಳೆ, ಉದ್ದಿನಬೇಳೆ, ಇಂಗು, ಕರಿಬೇವಿನ ಎಲೆ, ಬೆಳ್ಳುಳ್ಳಿ, ಒಣಮೆಣಸನ್ನು ತುಂಡು ಮಾಡಿ ಹಾಕಿ. ಇವುಗಳು ಕೆಂಬಣ್ಣ ಬರುವರೆಗೆ ಹುರಿಯಿರಿ. ನಂತರ ರುಬ್ಬಿಕೊಂಡ ಮಿಶ್ರಣ, ಪುಡಿ ಮಾಡಿದ ಮಿಶ್ರಣ, ಅಚ್ಚಖಾರದಪುಡಿ, ಉಪ್ಪು ಸೇರಿಸಿ ಮಿಶ್ರಣ ಮಾಡಿ. ಈ ಮಿಶ್ರಣವನ್ನು ಮಧ್ಯಮ ಉರಿಯಲ್ಲಿ ಕುದಿಸಿ. ಮಿಶ್ರಣವು ಎಣ್ಣೆಯನ್ನು ಬಿಟ್ಟುಕೊಂಡು ಗಟ್ಟಿಯಾಗುತ್ತಾ ಬರುವಾಗ ಒಲೆಯನ್ನು ಆರಿಸಿ. ಈಗ ರುಚಿಕರವಾದ ಟೊಮೆಟೊ ತೊಕ್ಕು ನಿಮಗೆ ಇಷ್ಟವಾದ ಪದಾರ್ಥಗಳೊಂದಿಗೆ ಸವಿಯಬಹುದು.

ಹುಣಸೆಕಾಯಿ

ಬೇಕಾಗುವ ಸಾಮಗ್ರಿ: ಹಸಿರು ಹುಣಸೆಕಾಯಿ 1/2 ಕೆಜಿ, ಉಪ್ಪು 1/2 ಕೆಜಿ, 2 ಟೇಬಲ್ ಚಮಚ ಮೆಂತ್ಯ, 1 ಟೇಬಲ್ ಚಮಚ ಅರಿಶಿನಪುಡಿ, 50 ಹಸಿಮೆಣಸಿನಕಾಯಿ.

ಒಗ್ಗರಣೆಗೆ: ಎಣ್ಣೆ 1 ಟೇಬಲ್ ಚಮಚ, ಸಾಸಿವೆ 1 ಟೀ ಚಮಚ, ಇಂಗು 1/4 ಟೀ ಚಮಚ.

ತಯಾರಿಸುವ ವಿಧಾನ: ಮೆಂತ್ಯ ಹುರಿದು ಪುಡಿಮಾಡಿಕೊಳ್ಳಿ. ಮೆಣಸಿನಕಾಯಿ ತೊಟ್ಟು ಬಿಡಿಸಿಕೊಳ್ಳಿ. ಹುಣಸೆಕಾಯಿಯನ್ನು ತೊಳೆದು ಒರಸಿಟ್ಟುಕೊಳ್ಳಿ. ಹುಣಸೆಕಾಯಿ ಮತ್ತು ಮೆಣಸಿನಕಾಯಿಯನ್ನು ಸೇರಿಸಿ ನುಣ್ಣಗೆ ರುಬ್ಬಿಕೊಳ್ಳಿ. ರುಬ್ಬುವಾಗ ನೀರನ್ನು ಮುಟ್ಟಿಸಬೇಡಿ. ಹುಣಸೆ ನಾರು ಇದ್ದರೆ ತೆಗೆದು ಹಾಕಿ. ರುಬ್ಬಿದ ಮಿಶ್ರಣಕ್ಕೆ ಅರಿಶಿನ, ಉಪ್ಪು, ಮೆಂತ್ಯ ಸೇರಿಸಿ ಮಿಶ್ರಣ ಮಾಡಿ. ಗಾಳಿಯಾಡದ ಜಾಡಿಯಲ್ಲಿ ಅಥವಾ ಸೀಸೆಗಳಲ್ಲಿ ತುಂಬಿಸಿಡಿ. ಬೇಕೆಂದಾಗ ಸ್ವಲ್ಪ ಸ್ವಲ್ಪ ತೆಗೆದು ಒಗ್ಗರಣೆ ಹಾಕಿಕೊಂಡು ಸವಿಯಿರಿ.



ಕೇಂದ್ರ ಸಚಿವ ಎಚ್.ಡಿ.ಕೆ, ಸಂಬಂಧಿಕರಿಂದ 'ಭೂ ಕಬಳಿಕೆ' ಆರೋಪ

ತನಿಖೆಗೆ ಆದಿತ್ಯ ಬಿಸ್ವಾಸ್ ನೇತೃತ್ವ

ಪ್ರಜಾವಾಣಿ ವಾರ್ತೆ



ಅಮ್ಲಾನ್ ಆದಿತ್ಯ ಬಿಸ್ವಾಸ್



ಎಚ್.ಡಿ. ಕುಮಾರಸ್ವಾಮಿ

ಬೆಂಗಳೂರು: ಕೇಂದ್ರ ಉಕ್ಕು ಮತ್ತು ಭಾರಿ ಕೈಗಾರಿಕೆ ಸಚಿವ ಎಚ್.ಡಿ. ಕುಮಾರಸ್ವಾಮಿ, ಅವರ ಕುಟುಂಬದ ಸದಸ್ಯರು ಮತ್ತು ಸಂಬಂಧಿಗಳು ರಾಮನಗರ ಜಿಲ್ಲೆ ಬಿಡದಿ ಹೋಬಳಿಯ ಕೇತಗಾನಹಳ್ಳಿಯಲ್ಲಿ ಸರ್ಕಾರಿ ಜಮೀನುಗಳನ್ನು ಕಬಳಿಸಿದ್ದಾರೆ ಎಂಬ ಆರೋಪದ ಕುರಿತು ತನಿಖೆಗೆ ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತ ಅಮ್ಲಾನ್ ಆದಿತ್ಯ ಬಿಸ್ವಾಸ್ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ (ಎಸ್ಐಟಿ) ರಚಿಸಲಾಗಿದೆ.

ಕರ್ನಾಟಕ ಭೂ ಕಂದಾಯ ಕಾಯ್ದೆ-1964 ಮತ್ತು ಕರ್ನಾಟಕ ಭೂ ಕಬಳಿಕೆ ನಿಷೇಧ ಕಾಯ್ದೆ-2011ರ ಅಡಿಯಲ್ಲಿ ಈ ವಿಶೇಷ ತನಿಖಾ ತಂಡ ರಚಿಸಿ ಕಂದಾಯ ಇಲಾಖೆಯು ಜನವರಿ 28ರಂದು ಆದೇಶ ಹೊರಡಿಸಿದೆ. ಭೂ ಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆಯ ಜಂಟಿ ನಿರ್ದೇಶಕ ನಿಸಾರ್ ಅಹಮದ್, ಬೆಂಗಳೂರು ವಿಭಾಗದ ಹೆಚ್ಚುವರಿ ಪ್ರಾದೇಶಿಕ ಆಯುಕ್ತ 'ಇಸ್ಲಾವುದ್ದೀನ್' ಗದ್ಯಾಳ್, ಕಂದಾಯ ಆಯುಕ್ತಾಲಯದ ತಹಶೀಲ್ದಾರ್ ಗಣಪತಿ ಶಾಸ್ತ್ರಿ ಅವರನ್ನು ಎಸ್ಐಟಿಯ ಸದಸ್ಯರನ್ನಾಗಿ ನೇಮಿಸಲಾಗಿದೆ. ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತರ ಕಚೇರಿಯ ಗ್ರೇಡ್-2 ತಹಶೀಲ್ದಾರ್ ಶೀತಲ್ ಅವರನ್ನು ಎಸ್ಐಟಿಯ ಸದಸ್ಯ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಲಾಗಿದೆ.

ಮುಖ್ಯಾಂಶಗಳು

- ಕೇತಗಾನಹಳ್ಳಿಯಲ್ಲಿ ಎಚ್‌ಡಿಕೆ ಸರ್ಕಾರಿ ಜಮೀನು ಕಬಳಿಸಿರುವ ಆರೋಪ
- ವಿಶೇಷ ತನಿಖಾ ತಂಡ ರಚಿಸಿ ಕಂದಾಯ ಇಲಾಖೆಯಿಂದ ಆದೇಶ
- ಜಮೀನು ಕಬಳಿಕೆ ಕುರಿತು ಪಿಐಎಲ್ ದಾಖಲಿಸಿದ್ದ ಎಸ್.ಆರ್.ಹಿರೇಮಠ

ತನಿಖೆ ನಡೆಸಿ ವರದಿ ಸಲ್ಲಿಕೆಗೆ ಮೂರು ತಿಂಗಳ ಗಡುವು

ಈ ಪ್ರಕರಣದಲ್ಲಿ 2024ರ ನವೆಂಬರ್ 20ರಂದು ಕಂದಾಯ ಇಲಾಖೆಯು ಹೈಕೋರ್ಟ್‌ಗೆ ಸಲ್ಲಿಸಿದ್ದ ಪ್ರಮಾಣಪತ್ರದಲ್ಲಿ ಕೇತಗಾನಹಳ್ಳಿ ಗ್ರಾಮದ ಸರ್ವೆ ನಂಬರ್ 8, 9, 10, 16, 17 ಮತ್ತು 79ರಲ್ಲಿ ಜಲಕಾಯ, ಜಲಮೂಲ ಪ್ರದೇಶ, ಸರ್ಕಾರಿ ಖರಾಬು ಜಮೀನು ಮತ್ತು ಗೋಮಾಳಗಳ ಜಮೀನುಗಳ ಒತ್ತುವರಿ ನಡೆದಿದೆ ಎಂದು ತಿಳಿಸಲಾಗಿತ್ತು. ಭೂ ಮಂಜೂರಾತಿ, ಭೂಕಂದಾಯ ಕಾಯ್ದೆ, ನಿಯಮಗಳು ಹಾಗೂ ಪಿಟಿಸಿಎಲ್ ಕಾಯ್ದೆಯ ಉಲ್ಲಂಘನೆಯೂ ನಡೆದಿದೆ ಎಂದು ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಸಲಾಗಿತ್ತು. ಈ ಕುರಿತು ತನಿಖೆ ನಡೆಸಿ ವರದಿ ಸಲ್ಲಿಸಲು ವಿಶೇಷ ತನಿಖಾ ತಂಡಕ್ಕೆ ಮೂರು ತಿಂಗಳ ಗಡುವು ನೀಡಲಾಗಿದೆ.

ಕುಮಾರಸ್ವಾಮಿ ಮತ್ತು ಅವರ ಕುಟುಂಬದವರು ಕೇತಗಾನಹಳ್ಳಿಯಲ್ಲಿ ಸರ್ಕಾರಿ ಜಮೀನುಗಳನ್ನು ಕಬಳಿಸಿದ್ದಾರೆ ಎಂದು ಆರೋಪಿಸಿ ಧಾರವಾಡದ ಸಮಾಜ ಪರಿವರ್ತನಾ ಸಮುದಾಯದ ಸಂಸ್ಥಾಪಕ ಎಸ್.ಆರ್. ಹಿರೇಮಠ ಅವರು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಗೆ ಸಂಬಂಧಿಸಿದಂತೆ ನ್ಯಾಯಾಲಯದ ಆದೇಶ ಪಾಲಿಸಿಲ್ಲ ಎಂದು ರಾಜ್ಯ ಸರ್ಕಾರದ ವಿರುದ್ಧ ನ್ಯಾಯಾಂಗ ನಿಂದನೆ ಅರ್ಜಿಯನ್ನೂ ಸಲ್ಲಿಸಿದ್ದಾರೆ. ಈ ಅರ್ಜಿಯ ವಿಚಾರಣೆ ವೇಳೆ ಹೈಕೋರ್ಟ್, ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿತ್ತು. ಆ ಬೆನ್ನಲ್ಲೇ ಎಸ್ಐಟಿ ರಚಿಸಲಾಗಿದೆ.

ಒತ್ತುವರಿ ತೆರವಿನ ಹೊಣೆ: ಕೇತಗಾನಹಳ್ಳಿ ಗ್ರಾಮದ ಸರ್ವೆ ನಂಬರ್ 8, 9, 10, 16, 17 ಮತ್ತು 79ರಲ್ಲಿ ಮಂಜೂರಾತಿಯಾಗಿರುವ ಜಮೀನುಗಳ ಸಂಪೂರ್ಣ ದಾಖಲೆಗಳ ನೈಜತೆಯನ್ನು ಪರಿಶೀಲಿಸಬೇಕು. ದಾಖಲೆಗಳ ನೈಜತೆಯನ್ನು ಪರಿಶೀಲಿಸಲು ಅಗತ್ಯವಿದ್ದಲ್ಲಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಈ ಸರ್ವೆ ನಂಬರ್‌ಗಳಲ್ಲಿ ಭೂ ಮಂಜೂರಾತಿಯಾಗಿರುವ ಜಮೀನುಗಳಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ- 1964, ಕರ್ನಾಟಕ ಭೂ ಕಂದಾಯ ನಿಯಮಗಳು- 1966, ಕರ್ನಾಟಕ ಭೂ ಮಂಜೂರಾತಿ ನಿಯಮಗಳು-1969 ಹಾಗೂ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಕೆಲವು ಜಮೀನುಗಳ ಪರಭಾರೆ ನಿಷೇಧ)- ಕಾಯ್ದೆ-1978ರ ಉಲ್ಲಂಘನೆ ಆಗಿದೆಯೆ ಎಂಬುದನ್ನು ಪರಿಶೀಲಿಸಿ ವರದಿ ನೀಡುವಂತೆ ಎಸ್ಐಟಿಗೆ ಸೂಚಿಸಲಾಗಿದೆ.

ಮಂಜೂರಾತಿಯಾಗಿರುವ ಜಮೀನುಗಳಲ್ಲಿ ಸರ್ಕಾರಿ ಜಮೀನಿನ ಒತ್ತುವರಿ ಆಗಿದ್ದಲ್ಲಿ ಅದನ್ನು ತೆರವುಗೊಳಿಸಲು ಕ್ರಮವಹಿಸಬೇಕು. ಮೂಲ ಸರ್ವೆ ದಾಖಲೆಗಳಲ್ಲಿ ಉಲ್ಲೇಖವಾಗಿರುವ ಸಾರ್ವಜನಿಕ ರಸ್ತೆ, ಜಲಕಾಯ ಮತ್ತು ಜಲಮೂಲಗಳ ಯಥಾಸ್ಥಿತಿಯನ್ನು ಕಾಪಾಡಿಕೊಂಡಿರುವ ಬಗ್ಗೆಯೂ ಪರಿಶೀಲಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆ: 5 ಪ್ರಶ್ನೆಗಳಿಗೆ ಕೃಪಾಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳ ನೇಮಕಾತಿಗೆ ಡಿ. 29ರಂದು ನಡೆದಿದ್ದ ಪೂರ್ವಭಾವಿ ಮರು ಪರೀಕ್ಷೆಯ ಪರಿಷ್ಕೃತ ಸರಿ (ಕೀ) ಉತ್ತರಗಳನ್ನು ಕೆಪಿಎಸ್‌ಸಿ ಗುರುವಾರ ಪ್ರಕಟಿಸಿದ್ದು, ಒಟ್ಟು 5 ಪ್ರಶ್ನೆಗಳಿಗೆ ಕೃಪಾಂಕ (ಒಟ್ಟು 10 ಅಂಕ) ನೀಡಲು ನಿರ್ಧರಿಸಿದೆ. ಪ್ರಶ್ನೆಪತ್ರಿಕೆ 1 ಮತ್ತು 2 ಸೇರಿ ಒಟ್ಟು 13 ಪ್ರಶ್ನೆಗಳ ಸರಿ ಉತ್ತರಗಳಲ್ಲಿ ಬದಲಾವಣೆ ಆಗಿದೆ.

ಪತ್ರಿಕೆ 1ರಲ್ಲಿ ಒಟ್ಟು ಏಳು ಪ್ರಶ್ನೆಗಳಿಗೆ ಸರಿ ಉತ್ತರ ಬದಲಾವಣೆಯಾಗಿದ್ದು, ಈ ಪೈಕಿ ನಾಲ್ಕು ಉತ್ತರಗಳನ್ನು ಪರಿಷ್ಕರಿಸಿದೆ. ಮೂರು ಪ್ರಶ್ನೆಗಳಿಗೆ ನೀಡಿದ್ದ ನಾಲ್ಕೂ ಆಯ್ಕೆಗಳು ಸರಿ ಇಲ್ಲದೇ ಇದ್ದ ಕಾರಣ ಆ ಪ್ರಶ್ನೆಗಳಿಗೆ ಕೃಪಾಂಕ ನೀಡಲು ಕೆಪಿಎಸ್‌ಸಿ ನಿರ್ಧರಿಸಿದೆ. ಪತ್ರಿಕೆ 2ರಲ್ಲಿ ಆರು ಪ್ರಶ್ನೆಗಳ ಸರಿ ಉತ್ತರ ಬದಲಾಗಿದ್ದು, ಈ ಪೈಕಿ ನಾಲ್ಕು ಸರಿ ಉತ್ತರಗಳನ್ನು ಪರಿಷ್ಕರಿಸಲಾಗಿದೆ. ಎರಡು ಪ್ರಶ್ನೆಗಳಿಗೆ ನೀಡಿದ್ದ ನಾಲ್ಕೂ ಆಯ್ಕೆಗಳು ಸರಿ ಇಲ್ಲದೇ ಇದ್ದ ಕಾರಣ ಆ ಪ್ರಶ್ನೆಗಳಿಗೆ ಕೃಪಾಂಕ ನೀಡಲು ತೀರ್ಮಾನಿಸಿದೆ.

ಪರಿಷ್ಕೃತ ಸರಿ ಉತ್ತರಗಳನ್ನು ಪ್ರಕಟಿಸಿದ ನಂತರ ಈ ಉತ್ತರಗಳಿಗೆ ಸಂಬಂಧಿಸಿದಂತೆ ಅಭ್ಯರ್ಥಿಗಳು ಸಲ್ಲಿಸುವ ಯಾವುದೇ ಮನವಿ ಅಥವಾ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಕೆಪಿಎಸ್‌ಸಿ ಪರೀಕ್ಷಾ ನಿಯಂತ್ರಕ ಜ್ಞಾನೇಂದ್ರ ಕುಮಾರ್ ತಿಳಿಸಿದ್ದಾರೆ.

ಈ ಹುದ್ದೆಗಳ ನೇಮಕಾತಿಗೆ ಆಗಸ್ಟ್ 27ರಂದು ನಡೆದಿದ್ದ ಪೂರ್ವಭಾವಿ ಪರೀಕ್ಷೆಯಲ್ಲಿ ಇಂಗ್ಲಿಷ್‌ನಿಂದ ಕನ್ನಡಕ್ಕೆ ಭಾಷಾಂತರ ಮಾಡಿದ್ದ ಪ್ರಶ್ನೆ- ಉತ್ತರಗಳಲ್ಲಿ ಭಾಷಾಂತರ ದೋಷ ಕಂಡುಬಂದ ಕಾರಣ ಕೆಪಿಎಸ್‌ಸಿ ಡಿ. 29 ರಂದು ಮರು ಪರೀಕ್ಷೆ ನಡೆಸಿತ್ತು. ಮರು ಪರೀಕ್ಷೆ ಪ್ರಶ್ನೆ ಪತ್ರಿಕೆಗಳಲ್ಲೂ ಭಾಷಾಂತರ ದೋಷ ಕಾಣಿಸಿಕೊಂಡಿತ್ತು.

ಸಿಇಟಿ: ಪ್ರಾಯೋಗಿಕ ಕೌಶಲ ಪ್ರಶ್ನೆ ಸೇರ್ಪಡೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ ನಡೆಯುವ 2025–26ನೇ ಸಾಲಿನ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಈ ಬಾರಿ ಪ್ರಾಯೋಗಿಕ ಕೌಶಲದ ಪ್ರಶ್ನೆಗಳೂ ಒಳಗೊಂಡಿರುತ್ತವೆ.

ಪ್ರಸ್ತುತ ಇರುವ ಪಿಯು ಪಠ್ಯಕ್ರಮದಂತೆ ಭೌತವಿಜ್ಞಾನ, ರಸಾಯನ ವಿಜ್ಞಾನ ಹಾಗೂ ಜೀವವಿಜ್ಞಾನ ವಿಷಯಗಳ ಪ್ರಾಯೋಗಿಕ ಪರೀಕ್ಷೆಯ ಕೆಲ ಪ್ರಶ್ನೆಗಳನ್ನು ಸಿಇಟಿ ಪ್ರಶ್ನೆಪತ್ರಿಕೆಗಳಲ್ಲಿ ಸೇರಿಸಲಾಗಿದೆ. ನೀಟ್, ಜೆಇಇ ಪರೀಕ್ಷೆಯಲ್ಲೂ ಈಗಾಗಲೇ ಪ್ರಾಯೋಗಿಕ ಕೌಶಲದ ಪ್ರಶ್ನೆಗಳನ್ನು ಅಳವಡಿಸಲಾಗಿದೆ. ಪ್ರಶ್ನೆಗಳನ್ನು ಅಳವಡಿಸಿಕೊಳ್ಳುವ ಮೊದಲು ಆಯಾ ವಿಷಯ ತಜ್ಞರ ಶಿಫಾರಸುಗಳನ್ನು ಪರಿಗಣಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ಸಾಮಾನ್ಯ ಪ್ರವೇಶ ಪರೀಕ್ಷೆಯ ಭೌತವಿಜ್ಞಾನದಲ್ಲಿ 14, ರಸಾಯನವಿಜ್ಞಾನದಲ್ಲಿ 6 ಮತ್ತು ಜೀವ ವಿಜ್ಞಾನದಲ್ಲಿ 16 ಪ್ರಾಯೋಗಿಕ ಕೌಶಲ ಪ್ರಶ್ನೆಗಳು ಇರುತ್ತವೆ.

60 ಎಕರೆ ಒತ್ತುವರಿ ಉಲ್ಲೇಖ

ರಮೇಶ್ ಕುಮಾರ್ ವಿರುದ್ಧದ ಆರೋಪ; ಹೈಕೋರ್ಟ್‌ಗೆ ವರದಿ

ಪ್ರಜಾವಾಣಿ ವಾರ್ತೆ

ಕೋಲಾರ: ಶ್ರೀನಿವಾಸಪುರ ತಾಲ್ಲೂಕಿನ ಹೊಸಹುಡ್ಯ ಗ್ರಾಮದ ಸರ್ವೆ ನಂಬರ್ 1 ಮತ್ತು 2ರ ಅರಣ್ಯ ಜಮೀನಿನ ಜಂಟಿ ಸರ್ವೆ ವರದಿಯನ್ನು ಅರಣ್ಯ ಇಲಾಖೆಯು ಹೈಕೋರ್ಟ್‌ಗೆ ಸಲ್ಲಿಸಿದ್ದು, ಮಾಜಿ ಸ್ಪೀಕರ್ ಕೆ.ಆರ್.ರಮೇಶ್ ಕುಮಾರ್ ಒತ್ತುವರಿ ಮಾಡಿಕೊಂಡಿರುವ ಅಂಶವನ್ನು ಉಲ್ಲೇಖಿಸಲಾಗಿದೆ.

ಈ ಪ್ರದೇಶದಲ್ಲಿ ಒಟ್ಟು 60.23 ಎಕರೆ ಅರಣ್ಯ ಭೂಮಿಯನ್ನು ಅವರು ಒತ್ತುವರಿ ಮಾಡಿಕೊಂಡು, ಸ್ವಾಧೀನದಲ್ಲಿ ಇರಿಸಿಕೊಂಡಿರುವುದನ್ನು ಜಂಟಿ ಸರ್ವೆ ನಡೆಸಿದ ತಂಡ ವರದಿಯಲ್ಲಿ ನಮೂದಿಸಿದೆ. ಸರ್ವೆ ನಂಬರ್ 1ರಲ್ಲಿ 6 ಎಕರೆ ಹಾಗೂ ಸರ್ವೆ ನಂಬರ್ 2ರಲ್ಲಿ 54.23 ಎಕರೆ ಒತ್ತುವರಿ ಆಗಿದೆ ಎಂಬ ವಿಚಾರ ವರದಿಯಲ್ಲಿದೆ.

ಜ.15 ಹಾಗೂ 16ರಂದು ಸತತ ಎರಡು ದಿನ ಜಿಲ್ಲಾಧಿಕಾರಿ ಎಂ.ಆರ್. ರವಿ, ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ಸರೀನಾ ಸಿಕ್ಕಲಿಗಾರ್ ಹಾಗೂ ಭೂಮಾಪನ ಇಲಾಖೆ ಉಪ ನಿರ್ದೇಶಕ (ಡಿಡಿಎಲ್‌ಆರ್) ಸಂಜಯ್ ಅವರನ್ನು ಒಳಗೊಂಡ ತಂಡ ಜಂಟಿ ಸರ್ವೆ ನಡೆಸಿತ್ತು. ವರದಿಗೆ ಮೂವರೂ ಸಹಿ ಹಾಕಿ ಜಂಟಿ ನಕ್ಷೆ ಮತ್ತು ದಾಖಲೆಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದರು. ಈ ವರದಿ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.



ಜಂಟಿ ಸಮೀಕ್ಷೆ ವೇಳೆ ತೆಗೆದಿದ್ದ ಚಿತ್ರ

ಫೆ.6ಕ್ಕೆ ಹೈಕೋರ್ಟ್‌ನಲ್ಲಿ ವಿಚಾರಣೆಗೆ ಬರಲಿದ್ದು, ನ್ಯಾಯಾಲಯದ ತೀರ್ಪಿನಂತೆ ಮುಂದಿನ ಕ್ರಮ ಕೈಗೊಳ್ಳುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಈ ಪ್ರದೇಶದಲ್ಲಿ ರಮೇಶ್ ಕುಮಾರ್ ಒತ್ತುವರಿ ಮಾಡಿಕೊಂಡಿದ್ದಾರೆ ಎಂಬ ಆರೋಪವಿದ್ದು, ಹೈಕೋರ್ಟ್ ಸೂಚನೆ ಮೇರೆಗೆ ಅವರ ಉಪಸ್ಥಿತಿಯಲ್ಲೇ ಜಂಟಿ ಸಮೀಕ್ಷೆ ನಡೆದಿತ್ತು. ಸರ್ವೆಗೆ 9ನೇ ಪ್ರತಿವಾದಿಯಾಗಿದ್ದ ಅವರೂ ಸಹಕರಿಸಿದ್ದರು.

ಜಂಟಿ ಸರ್ವೆ ವೇಳೆ 1937 ಮತ್ತು 1944ರ ಅರಣ್ಯ ಅಧಿಸೂಚನೆ ಪ್ರಕಾರ ಸರ್ವೆ ನಂಬರ್ 1 ಮತ್ತು 2ರ ಅರಣ್ಯ ಗಡಿಯನ್ನು ಗುರುತಿಸಿ ನಕ್ಷೆಯನ್ನು ತಯಾರಿಸಲಾಗಿತ್ತು. ನಂತರ ರಮೇಶ್ ಕುಮಾರ್ ಅವರಿಗೆ ಸೇರಿದ ಜಮೀನು ಅರಣ್ಯ ಗಡಿ ಒಳಗಿದೆಯೋ ಅಥವಾ ಗಡಿ ಆಚೆ ಇದೆಯೇ ಎಂಬುದನ್ನು ವಿವಿಧ ಮಾನದಂಡ ಅನುಸರಿಸಿ ಗುರುತಿಸಲಾಗಿತ್ತು ಎಂಬುದಾಗಿ ಅರಣ್ಯ ಇಲಾಖೆ ಹೇಳಿದೆ.

ವರದಿಯನ್ನು ಜಿಲ್ಲಾಧಿಕಾರಿಯು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಸಲ್ಲಿಸಿದ್ದರು. ಅವರು ಅರಣ್ಯ ಇಲಾಖೆಗೆ ಹಸ್ತಾಂತರಿಸಿದ್ದರು. ಅರಣ್ಯ ಸಂರಕ್ಷಣಾಧಿಕಾರಿಯು ಜ.30ರಂದು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ.

ತಿಮ್ಮೇಗೌಡ ಅವಿರೋಧ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಧಾ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷರಾಗಿ ತಿಮ್ಮೇಗೌಡ ಎಂ., ಉಪಾಧ್ಯಕ್ಷರಾಗಿ ವಾಸನ್ ಟಿ. ಅವಿರೋಧವಾಗಿ ಆಯ್ಕೆಯಾಗಿದ್ದಾರೆ.


ತಿಮ್ಮೇಗೌಡ ಎಂ.

ಸಹಕಾರ ಅಭಿವೃದ್ಧಿ ಅಧಿಕಾರಿ ವೈ.ಪಿ. ವೆಂಕಟೇಶ್ ಚುನಾವಣಾಧಿಕಾರಿಯಾಗಿದ್ದರು. ಬ್ಯಾಂಕ್ ನಿರ್ದೇಶಕರಾದ ಜಿ.ಓ. ಕೃಷ್ಣ, ಕೆ.ಎಸ್. ದುಷ್ಯಂತ್, ಎನ್. ಜಯರಾಂ, ಶಿವಕುಮಾರ್ ಟಿ., ಅಮಿತ ಆನಂದ್ ಮಂತ, ವಿಜಯಲಕ್ಷ್ಮೀ ಮುರಳೀಧರ, ಮುರಳೀಧರ, ಎಂ.ಪಿ. ಹರಿಚರಣ್, ಕೆ. ಸಂಜೀವಯ್ಯ, ಜಿ. ಜ್ಯೋತಿಲಿಂಗಂ, ಸತ್ಯನಾರಾಯಣಯ್ಯ, ಪ್ರಧಾನ ವ್ಯವಸ್ಥಾಪಕರಾದ ಎನ್.ಎಸ್. ಕೋಕಿಲಾ ಉಪಸ್ಥಿತರಿದ್ದರು.

2026ರಲ್ಲಿ ಬ್ಯಾಂಕ್ ಸುವರ್ಣ ಮಹೋತ್ಸವ ಆಚರಿಸಲಾಗುವುದು. ಆ ವರ್ಷದ ಮಾರ್ಚ್ ಅಂತ್ಯಕ್ಕೆ ₹500 ಕೋಟಿ ಠೇವಣಿ, ₹300 ಕೋಟಿ ಸಾಲ ನೀಡುವ ಗುರಿ ಇದ್ದು, ಎಲ್ಲರೂ ಬ್ಯಾಂಕ್ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ತಿಮ್ಮೇಗೌಡ ಕೋರಿದರು.

ಬಿಬಿಎಂಪಿ ಎಂಟು ವಲಯಗಳಲ್ಲಿ ದೀರ್ಘ ಕಾಲದಿಂದ ಸುಮಾರು ₹30 ಕೋಟಿ ಬಾಕಿ

ತೆರಿಗೆ ಪಾವತಿಸದ 608 ಆಸ್ತಿ ಹರಾಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಎಂಟು ವಲಯಗಳಲ್ಲಿ ದೀರ್ಘಕಾಲದಿಂದ ಆಸ್ತಿ ತೆರಿಗೆ ಪಾವತಿಸದ 608 ಆಸ್ತಿಗಳನ್ನು ಹರಾಜು ಹಾಕಲಾಗುತ್ತಿದೆ ಎಂದು ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

ಆಸ್ತಿ ತೆರಿಗೆ ಸಂಗ್ರಹಿಸುವ ವಿಷಯವಾಗಿ, ಕಾರಣ ಕೇಳಿ ನೋಟಿಸ್, ಬೇಡಿಕೆ ನೋಟಿಸ್, ಆಸ್ತಿಗಳ ಮುಟ್ಟುಗೋಲು, ವಸತಿಯೇತರ ಆಸ್ತಿಗಳಿಗೆ ಬೀಗ ಮುದ್ರೆ ಸೇರಿದಂತೆ ವಿವಿಧ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆದರೂ ಹಲವು ಆಸ್ತಿಗಳ ಮಾಲೀಕರು ದೀರ್ಘಕಾಲದಿಂದ ಪಾಲಿಕೆಗೆ ಆಸ್ತಿ ತೆರಿಗೆ ಪಾವತಿಸುತ್ತಿಲ್ಲ. ಈ ಸಂಬಂಧ ಆಸ್ತಿ ತೆರಿಗೆ ಬಾಕಿ ವಸೂಲಿ ಮಾಡಲು ಸುಸ್ತಿದಾರರ ಸ್ಥಿರ ಆಸ್ತಿಗಳನ್ನು ತುರ್ತು ಮಾರಾಟ ಮಾಡಲು, ಹರಾಜು ಪ್ರಕ್ರಿಯೆಯನ್ನು ಆರಂಭಿಸಲಾಗುತ್ತಿದೆ ಎಂದರು.


ಬಿಬಿಎಂಪಿ ಕಾಯ್ದೆ 2020ರ ಸೆಕ್ಷನ್ 156 ಉಪಪ್ರಕರಣ 5ರ ಅಡಿಯಲ್ಲಿ ಹರಾಜು ಮಾಡಲಾಗುತ್ತದೆ. ಹರಾಜಿನಲ್ಲಿ ಲಭ್ಯವಾಗುವ ಮೊತ್ತದಲ್ಲಿ ಪಾಲಿಕೆಗೆ ಸಂದಾಯವಾಗಬೇಕಿರುವ ಪೂರ್ಣ ಬಾಕಿಯನ್ನು ವಸೂಲಿ ಮಾಡಿದ ಬಳಿಕ ಉಳಿಯುವ ಮೊತ್ತವನ್ನು



ಮಾಲೀಕರ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುವುದು ಎಂದು ಮಾಹಿತಿ ನೀಡಿದರು.

ಆರ್.ಆರ್ ನಗರ ವಲಯ: ಲಗ್ಗೆರೆ, ಆರ್.ಆರ್. ನಗರ, ಲಕ್ಷ್ಮಿದೇವಿನಗರ, ಯಶವಂತಪುರ ಉಪವಿಭಾಗಗಳಲ್ಲಿ ತಲಾ 10, ಕೆಂಗೇರಿ ಹಾಗೂ ಹೇರೋಹಳ್ಳಿ ಉಪ ವಿಭಾಗಗಳಲ್ಲಿ ತಲಾ ಐದು ಆಸ್ತಿಗಳು ಫೆಬ್ರುವರಿ 10ರಂದು ಹರಾಜಾಗಲಿವೆ.

ಪೂರ್ವ ವಲಯ: ಜೆ.ಸಿ ನಗರ, ಮಾರುತಿ ಸೇವಾನಗರ, ಎಚ್‌ಬಿಆರ್ ಲೇಔಟ್, ಜೀವನ್ ಬಿಮಾನಗರ, ಸಿ.ವಿ. ರಾಮನ್ ನಗರ, ಶಾಂತಿನಗರ, ವಸಂತನಗರ ಉಪ ವಿಭಾಗಗಳಲ್ಲಿ ತಲಾ 10, ಹೆಬ್ಬಾಳ, ಕೆ.ಜಿ ಹಳ್ಳಿ ಉಪ ವಿಭಾಗಗಳಲ್ಲಿ ತಲಾ 11,



ಪುಲಕೇಶಿನಗರ, ದೊಮ್ಮಲೂರು ಉಪ ವಿಭಾಗಗಳಲ್ಲಿ ತಲಾ ಒಂಬತ್ತು ಹಾಗೂ ಶಿವಾಜಿನಗರ ಉಪ ವಿಭಾಗದಲ್ಲಿ ಎಂಟು ಆಸ್ತಿಗಳನ್ನು ಫೆ. 13ರಂದು ಹರಾಜು ಮಾಡಲಾಗುತ್ತದೆ.

ಪಶ್ಚಿಮ ವಲಯ: ಚಿಕ್ಕಪೇಟೆ, ಚಂದ್ರಾ ಲೇಔಟ್, ಚಾಮರಾಜಪೇಟೆ, ಗಾಂಧಿನಗರ, ಗೋವಿಂದರಾಜಪುರ, ಜೆ.ಜೆ.ಆರ್. ನಗರ, ಮಲ್ಲೇಶ್ವರ, ಮಹಾಲಕ್ಷ್ಮಿಪುರ, ಮತ್ತಿಕೆರೆ, ನಾಗಪುರ, ರಾಜಾಜಿನಗರ ಹಾಗೂ ಶ್ರೀರಾಮಮಂದಿರ ಉಪ ವಿಭಾಗಗಳಲ್ಲಿ ತಲಾ 10 ಆಸ್ತಿಗಳ ಹರಾಜು ಫೆ. 13ರಂದು ನಡೆಯಲಿದೆ.

ಮಹದೇವಪುರ ವಲಯ: ಹೊರಮಾವು, ಎಚ್‌ಎಎಲ್, ಕೆ.ಆರ್. ಪುರ, ಮಾರತ್‌ಹಳ್ಳಿ, ಹೂಡಿ ಹಾಗೂ ವೈಟ್‌ಫೀಲ್ಡ್ ಸೇರಿದಂತೆ ಉಪ ವಿಭಾಗಗಳಲ್ಲಿ ತಲಾ 10 ಆಸ್ತಿಗಳ ಹರಾಜು ಫೆ. 13ರಂದು ನಡೆಯಲಿದೆ.

ಯಲಹಂಕ ವಲಯ: ಯಲಹಂಕ, ಯಲಹಂಕ ಉಪನಗರ, ಬ್ಯಾಟರಾಯನಪುರ ಹಾಗೂ ವಿದ್ಯಾರಣ್ಯಪುರ ಉಪ ವಿಭಾಗಗಳಲ್ಲಿ ತಲಾ 10 ಆಸ್ತಿಗಳನ್ನು ಫೆ. 13ರಂದು ಹರಾಜು ಮಾಡಲಾಗುತ್ತದೆ.

ದಾಸರಹಳ್ಳಿ ವಲಯ: ಶೆಟ್ಟಿಹಳ್ಳಿ, ದಾಸರಹಳ್ಳಿ, ಪೀಣ್ಯ ಉಪ ವಿಭಾಗಗಳಲ್ಲಿ ತಲಾ 10 ಹಾಗೂ ಹೆಗ್ಗನಹಳ್ಳಿ ಉಪ ವಿಭಾಗದಲ್ಲಿ 11 ಆಸ್ತಿಗಳ ಹರಾಜು ಪ್ರಕ್ರಿಯೆ ಫೆ. 13ರಂದು ನಡೆಯಲಿದೆ.

ದಕ್ಷಿಣ ವಲಯ: ಬಿಟಿಎಂ ಲೇಔಟ್, ಕೋರಮಂಗಲ, ಬನಶಂಕರಿ, ಪದ್ಮನಾಭನಗರ, ಜಯನಗರ, ಜೆ.ಪಿ. ನಗರ, ಗಾಳಿ ಆಂಜನೇಯ ದೇವಸ್ಥಾನ, ವಿಜಯನಗರ, ಹೊಂಬೇಗೌಡ ನಗರ ಉಪ ವಿಭಾಗಗಳಲ್ಲಿ ತಲಾ 10, ಗಿರಿನಗರ ಉಪ ವಿಭಾಗದಲ್ಲಿ ಎಂಟು, ಬಸವನಗುಡಿ ಉಪ ವಿಭಾಗದಲ್ಲಿ ಆರು ಹಾಗೂ ಕೆಂಪೇಗೌಡ ನಗರ ಉಪ ವಿಭಾಗದಲ್ಲಿ ಐದು ಆಸ್ತಿಗಳನ್ನು ಫೆ. 14ರಂದು ಹರಾಜು ಮಾಡಲಾಗುತ್ತದೆ.

ಬೊಮ್ಮನಹಳ್ಳಿ ವಲಯ: ಬೇಗೂರು, ಉತ್ತರಹಳ್ಳಿ, ಯಲಚೇನಹಳ್ಳಿ, ಬೊಮ್ಮನಹಳ್ಳಿ, ಅರಕೆರೆ, ಎಚ್‌ಎಸ್‌ಆರ್ ಲೇಔಟ್ ಹಾಗೂ ಅಂಜನಾಪುರ ಉಪ ವಿಭಾಗಗಳಲ್ಲಿ ತಲಾ 10 ಆಸ್ತಿಗಳು ಫೆ.14ರಂದು ಹರಾಜಾಗಲಿವೆ.

'ಬಿಬಿಎಂಪಿ ವ್ಯಾಪ್ತಿಯಲ್ಲಿ ₹2 ಲಕ್ಷಕ್ಕಿಂತ ಹೆಚ್ಚು ಆಸ್ತಿ ತೆರಿಗೆ ಬಾಕಿ ಇರುವವರಿಂದ ಸುಮಾರು ₹390 ಕೋಟಿ ಪಾವತಿಯಾಗಬೇಕಿದೆ. ಹರಾಜಿನಂತಹ ಬಲವಂತದ ವಸೂಲಾತಿ ಕ್ರಮವನ್ನು ತಪ್ಪಿಸುವ ಸಲುವಾಗಿ ಎಲ್ಲಾ ಆಸ್ತಿ ತೆರಿಗೆದಾರರು ತಕ್ಷಣವೇ ತಮ್ಮ ಆಸ್ತಿ ತೆರಿಗೆ ಬಾಕಿಗಳನ್ನು ಪಾವತಿಸಬೇಕು' ಎಂದು ಮುನೀಶ್ ಮೌದ್ಗಿಲ್ ವಿನಂತಿಸಿದ್ದಾರೆ.

ಸುದ್ದಿ 2 ನಿಮಿಷ

ವೈಟ್‌ಟಾಪಿಂಗ್: ಸಂಚಾರ ನಿರ್ಬಂಧ

ಬೆಂಗಳೂರು: ಪೀಣ್ಯ 100 ಅಡಿ ರಸ್ತೆಯ ಪೀಣ್ಯ ಇಂಡಸ್ಟ್ರಿಯಲ್ ಅಸೋಸಿಯೇಷನ್ ಜಂಕ್ಷನ್‌ನಿಂದ ಜಾಲಹಳ್ಳಿ ಕ್ರಾಸ್ ಜಂಕ್ಷನ್‌ವರೆಗೆ, 200 ಮೀಟರ್ ರಸ್ತೆಯಲ್ಲಿ ಬಿಬಿಎಂಪಿ ವತಿಯಿಂದ ವೈಟ್‌ಟಾಪಿಂಗ್ ಕಾಮಗಾರಿ ಕೈಗೊಂಡಿರುವುದರಿಂದ ಫೆಬ್ರುವರಿ 1ರಿಂದ ಕಾಮಗಾರಿ ಪೂರ್ಣಗೊಳ್ಳುವವರೆಗೆ ಸುತ್ತಮುತ್ತಲಿನ ರಸ್ತೆಗಳಲ್ಲಿ ಸಂಚಾರ ನಿರ್ಬಂಧಿಸಲಾಗಿದೆ ಎಂದು ಸಂಚಾರ ವಿಭಾಗದ ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿರ್ಬಂಧ: ಪೀಣ್ಯ 100 ಅಡಿ ರಸ್ತೆ-ಪೀಣ್ಯ ಇಂಡಸ್ಟ್ರಿಯಲ್ ಅಸೋಸಿಯೇಷನ್ ಜಂಕ್ಷನ್‌ನಿಂದ ಜಾಲಹಳ್ಳಿ ಕ್ರಾಸ್ ಜಂಕ್ಷನ್‌ವರೆಗೆ

ಪರ್ಯಾಯ ಮಾರ್ಗ: ಪೀಣ್ಯ 100 ಅಡಿ ರಸ್ತೆಯ ಮೂಲಕ ಜಾಲಹಳ್ಳಿ ಕ್ರಾಸ್ ಜಂಕ್ಷನ್ ಕಡೆಗೆ ಹೋಗುವ ವಾಹನಗಳು ಪೀಣ್ಯ ಇಂಡಸ್ಟ್ರಿಯಲ್ ಅಸೋಸಿಯೇಷನ್ ಜಂಕ್ಷನ್‌ನಲ್ಲಿ ಬಲಕ್ಕೆ ಚಲಿಸಿ ರಸ್ತೆಯ ಮತ್ತೊಂದು ಬದಿಯ ಮೂಲಕ ದ್ವಿಮುಖ ಸಂಚಾರ ರಸ್ತೆಯ ಮೂಲಕ ಸಾಗಬಹುದು.

ಎಲ್ಲಾ ಮಾದರಿಯ ಸರಕು ಸಾಗಣೆ ವಾಹನಗಳು ಟಿ.ವಿ.ಎಸ್ ಕ್ರಾಸ್ ಜಂಕ್ಷನ್‌ನಿಂದ ಪೀಣ್ಯ ಪೊಲೀಸ್ ಠಾಣೆ ರಸ್ತೆಯ ಮೂಲಕ ಸಾಗಿ, ಪೀಣ್ಯ ಪೊಲೀಸ್ ಠಾಣೆ ಜಂಕ್ಷನ್ ನಲ್ಲಿ ತುಮಕೂರು ರಸ್ತೆಯ ಮೂಲಕ ಸಾಗಬಹುದು.

ವಾಹನಗಳ ನಿಲುಗಡೆ ನಿಷೇಧಿಸಿರುವ ರಸ್ತೆ: ಪೀಣ್ಯ ಪೊಲೀಸ್ ಠಾಣೆ ರಸ್ತೆ, ಪೀಣ್ಯ 100 ಅಡಿ ರಸ್ತೆ(ಜಾಲಹಳ್ಳಿ ಕ್ರಾಸ್ ನಿಂದ ಟಿ.ವಿ.ಎಸ್ ಕ್ರಾಸ್ ವರೆಗೆ) ಹಾಗೂ ಪೀಣ್ಯ 1ನೇ ಕ್ರಾಸ್ ರಸ್ತೆಯಲ್ಲಿ ಎಲ್ಲಾ ರೀತಿಯ ವಾಹನಗಳ ನಿಲುಗಡೆಯನ್ನು ಕಾಮಗಾರಿ ಪೂರ್ಣಗೊಳ್ಳುವವರೆಗೆ, ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

ಕವಿತಾಗೆ ಮಿಸೆಸ್ ಇಂಟರ್‌ನ್ಯಾಷನಲ್ ಗರಿಮೆ



ಬೆಂಗಳೂರು: ಇಲ್ಲಿನ ಎಚ್‌ಎಎಲ್ ನಿವಾಸಿ ಕವಿತಾ ಅವರು ಈಜಿಪ್ಟ್‌ನಲ್ಲಿ ಇತ್ತೀಚೆಗೆ ನಡೆದ ಫ್ಯಾಷನ್ ಕ್ರೌನ್ ವೀಕ್-2024 ಸ್ಪರ್ಧೆಯಲ್ಲಿ ಮಿಸೆಸ್ ಇಂಟರ್‌ನ್ಯಾಷನಲ್ ಗರಿಮೆಗೆ ಪಾತ್ರರಾಗಿದ್ದಾರೆ.

ಮಹಿಳಾ ಸಬಲೀಕರಣ ಘೋಷವಾಕ್ಯ ಇಟ್ಟುಕೊಂಡು ನಡೆದ ಈ ಸ್ಪರ್ಧೆಯಲ್ಲಿ 15 ದೇಶಗಳ ಸ್ಪರ್ಧಿಗಳು ಭಾಗವಹಿಸಿದ್ದರು. ಭಾರತವನ್ನು ಪ್ರತಿನಿಧಿಸಿದ್ದ ಕವಿತಾ ಅವರು ಭಾರತದ ಸಂಸ್ಕೃತಿಯಲ್ಲಿ ಮಹಿಳಾ ಸಬಲೀಕರಣ ಹಿಂದಿನಿಂದಲೂ ಇರುವುದನ್ನು ಪ್ರಚುರಪಡಿಸಿದರು. ಸರಸ್ವತಿ, ಲಕ್ಷ್ಮೀ, ದುರ್ಗೆಯರ ಪಾತ್ರಗಳು ಹೇಗೆ ಮಹಿಳಾ ಪ್ರಧಾನವಾಗಿದ್ದವು ಎಂಬುದನ್ನು ಕವಿತಾ ವಿವರಿಸಿದ್ದರು. ಸೌಂದರ್ಯ, ಅನುಗ್ರಹ, ಶಕ್ತಿ, ಬುದ್ಧಿವಂತಿಕೆಯನ್ನು ಪ್ರತಿನಿಧಿಸುವ ದೇವಿಯ ವೇಷ-ಭೂಷಣದಲ್ಲಿ ಹೆಜ್ಜೆ ಹಾಕಿದ್ದರು. ಇದು ಅವರಿಗೆ ಮಿಸೆಸ್ ಇಂಟರ್‌ನ್ಯಾಷನಲ್ ಕಿರೀಟ ತೊಡಿಸುವಂತೆ ಮಾಡಿತ್ತು.

'ನಮ್ಮ ಕನಸುಗಳನ್ನು ಎಂದಿಗೂ ಬಿಟ್ಟುಕೊಡಬಾರದು. ಕನಸುಗಳನ್ನು ನನಸಾಗಿಸುವ ಶಕ್ತಿ ನಮಗಿದೆ' ಎಂದು ಕವಿತಾ ತಿಳಿಸಿದರು.

ಕವಿತಾ ಅವರು ಮಲೇಷ್ಯಾದಲ್ಲಿ ನಡೆದ ಗ್ಲಾಮರಸ್ ಇಂಟರ್‌ನ್ಯಾಷನಲ್ ಸ್ಪರ್ಧೆಯಲ್ಲಿ ರನ್ನರ್ ಅಪ್ ಆಗಿದ್ದರು.

ಮುಂದುವರಿದ ಒತ್ತುವರಿ ತೆರವು


ಬನಶಂಕರಿ ಒಂದನೇ ಹಂತದಲ್ಲಿ ಬಿಡಿಎ ವತಿಯಿಂದ ಒತ್ತುವರಿ ತೆರವು ಕಾರ್ಯಾಚರಣೆ ನಡೆಯಿತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಶುಕ್ರವಾರವೂ ಒತ್ತುವರಿ ತೆರವು ಕಾರ್ಯಾಚರಣೆ ಮುಂದುವರೆಸಿದ್ದು, ಬನಶಂಕರಿ ಒಂದನೇ ಹಂತದಲ್ಲಿ ₹1.75 ಕೋಟಿ ಮೌಲ್ಯದ ಆಸ್ತಿಯನ್ನು ವಶಪಡಿಸಿಕೊಂಡಿದೆ.

ಬನಶಂಕರಿ 1ನೇ ಹಂತದಲ್ಲಿ 1,350 ಚದರ ಅಡಿ ವಿಸ್ತೀರ್ಣದ ನಿವೇಶನದಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಎ.ಸಿ. ಶೀಟ್ ಮನೆಗಳನ್ನು ಜೆಸಿಬಿ ಯಂತ್ರದ ಮೂಲಕ ತೆರವುಗೊಳಿಸಿ, ಜಾಗವನ್ನು ಪ್ರಾಧಿಕಾರ ವಶಪಡಿಸಿಕೊಂಡಿತು.

'ಈ ಜಾಗವನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿತ್ತು. ಆದರೆ, ಜಮೀನು ಮಾಲೀಕರು ಜಾಗದ ವಿಚಾರಕ್ಕೆ ನ್ಯಾಯಾಲಯದ ಮೊರೆಹೋಗಿದ್ದರು. ನ್ಯಾಯಾಲಯದ ಆದೇಶ ನಮ್ಮ ಪರವಾಗಿ ಬಂದ ಬಳಿಕ ಕಾರ್ಯಾಚರಣೆ ನಡೆಸಿ, ಎ.ಸಿ.ಶೀಟ್‌ಗಳ ಮನೆಗಳನ್ನು ತೆರವುಗೊಳಿಸಲಾಯಿತು. ನಿವೇಶನದ ಸುತ್ತಲೂ ಬೇಲಿ ಹಾಕಲಾಗಿದೆ' ಎಂದು ಬಿಡಿಎ ದಕ್ಷಿಣ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಕೃಷ್ಣಕುಮಾರ್ ತಿಳಿಸಿದರು.

ಸಂರಕ್ಷಣಾ ಮೀಸಲು: ಜನರಿಗಿಲ್ಲ ತೊಂದರೆ

133 ಪ್ರಭೇದದ ಪಕ್ಷಿಗಳು, ಚಿರತೆ, ತೋಳ, ಕಾಡುಪಾಪಗಳ ಸಂರಕ್ಷಣೆಗೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಸರಘಟ್ಟ ಹುಲ್ಲುಗಾವಲನ್ನು 'ಗ್ರೇಟರ್ ಹೆಸರಘಟ್ಟ ಹುಲ್ಲುಗಾವಲು ಸಂರಕ್ಷಣಾ ಮೀಸಲು' ಎಂದು ಘೋಷಿಸಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಆಗುವುದಿಲ್ಲ. 133 ಪ್ರಭೇದದ ಪಕ್ಷಿಗಳು, 40 ಸ್ಥಳೀಯ ಹಾಗೂ ನೈಸರ್ಗಿಕ ಸಸ್ಯಗಳು ಮತ್ತು ಚಿರತೆ, ತೋಳ, ಕಾಡುಪಾಪ ಮೊದಲಾದ ವನ್ಯಜೀವಿಗಳ ಸಂರಕ್ಷಣೆಗೆ ಅನುಕೂಲವಾಗುತ್ತದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

'ಈ ಕಾನನ ಮತ್ತು ಹುಲ್ಲುಗಾವಲು ಪ್ರದೇಶದ ಸಂರಕ್ಷಣೆ ನಮ್ಮ ಆದ್ಯತೆಯ ವಿಷಯವಾಗಿತ್ತು ಮತ್ತು ಬೆಂಗಳೂರಿಗೆ ಅತ್ಯಗತ್ಯವಾಗಿತ್ತು' ಎಂದು ಅವರು ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.

'ಈ ಪ್ರದೇಶದಲ್ಲಿ ಹೆಸರಘಟ್ಟ ಕೆರೆ, ಬ್ಯಾತ ಕೆರೆ ಸೇರಿ ಹಲವು ಕೆರೆಗಳಿದ್ದು, ವಲಸೆ ಹಕ್ಕಿಗಳ ಸಂತಾನೋತ್ಪತ್ತಿಯ ತಾಣವೂ ಆಗಿದೆ. ಬೆಂಗಳೂರು ನಗರದ ಜನತೆಯ ನೀರಿನ ಅವಶ್ಯಕತೆ ಪೂರೈಸುತ್ತಿದ್ದ ಹೆಸರಘಟ್ಟ ಕೆರೆ ಭವಿಷ್ಯದಲ್ಲೂ ರಾಜಧಾನಿಯ ಪ್ರಮುಖ ಜಲಮೂಲವಾಗಲಿದೆ' ಎಂದು ಅವರು ಅಭಿಪ್ರಾಯಪಟ್ಟರು.

ಮುಖ್ಯಾಂಶಗಳು
- 5,678.32 ಎಕರೆ ಪ್ರದೇಶ ಸಂರಕ್ಷಣಾ ಮೀಸಲು
- ಭೂಮಿ ಒತ್ತುವರಿ ತಡೆಯುವುದು ಇದರಿಂದ ಸಾಧ್ಯ
- ವಾಸ್ತವ ಮೋಜಣಿಯಲ್ಲಿ ಖಾತ್ರಿಯಾದ ಹೆಚ್ಚುವರಿ ಪ್ರದೇಶ

'ಬೆಂಗಳೂರು ನಗರ ಜಿಲ್ಲೆ ಯಲಹಂಕ ಉತ್ತರ ತಾಲ್ಲೂಕಿನ ಒಟ್ಟು 5,678.32 ಎಕರೆ ಪ್ರದೇಶವನ್ನು ವನ್ಯಜೀವಿ ಸಂರಕ್ಷಣಾ ಅಧಿನಿಯಮ 1972 ರ ಕಲಂ 36(ಎ) ಅನ್ವಯ 'ಗ್ರೇಟರ್ ಹೆಸರಘಟ್ಟ ಹುಲ್ಲುಗಾವಲು ಸಂರಕ್ಷಣಾ ಮೀಸಲು' ಎಂದು ಘೋಷಿಸಲಾಗಿದ್ದು, ಈಗ ಇಡೀ ಪ್ರದೇಶ ಸುರಕ್ಷಿತವಾಗಿರುತ್ತದೆ' ಎಂದರು.


ಈಶ್ವರ ಖಂಡ್ರೆ

'ಕಳೆದ ಅಕ್ಟೋಬರ್ 7ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ವನ್ಯಜೀವಿ ಮಂಡಳಿ ಸಭೆಯಲ್ಲಿ ಗ್ರೇಟರ್ ಹೆಸರಘಟ್ಟ ಹುಲ್ಲುಗಾವಲು ಸಂರಕ್ಷಣಾ ಮೀಸಲು ಎಂದು ಘೋಷಿಸುವ ಪ್ರಸ್ತಾವನೆಗೆ ಅನುಮೋದನೆ ನೀಡಲಾಗಿತ್ತು. ಗುರುವಾರ ನಡೆದ ಸಚಿವ ಸಂಪುಟ ಸಭೆ ಇದಕ್ಕೆ ಅಧಿಕೃತ ಮುದ್ರೆ ಒತ್ತಿದೆ' ಎಂದು ಅವರು ಹೇಳಿದರು.

ಈ ಘೋಷಣೆಯಿಂದ ಅಪರೂಪದ ನೈಸರ್ಗಿಕ ಹುಲ್ಲುಗಾವಲಿನ ಸಂರಕ್ಷಣೆ ಆಗಲಿದೆ. ಪಕ್ಷಿ ಮತ್ತು ಕೀಟಗಳ ಸಂರಕ್ಷಣೆಗೆ ಹುಲ್ಲುಗಾವಲಿನ ರಕ್ಷಣೆ ಅತ್ಯಗತ್ಯ. ಬೆಂಗಳೂರಿನೊಳಗೇ ಇರುವ ಇಂತಹ ಸುಂದರ ಹುಲ್ಲುಗಾವಲನ್ನು ರಕ್ಷಿಸಲು ಎಲ್ಲ ಒತ್ತಡಗಳನ್ನೂ ಮೀರಿ ನಿರ್ಧಾರ ಕೈಗೊಂಡಿರುವುದಾಗಿ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಗ್ರೇಟರ್ ಹೆಸರಘಟ್ಟ ಹುಲ್ಲುಗಾವಲು ಸಂರಕ್ಷಣಾ ಮೀಸಲು ಘೋಷಣೆಯಿಂದ ಭೂಮಿಯ ಒತ್ತುವರಿ ಮತ್ತು ಅಪರೂಪದ ಪ್ರಾಣಿ, ಪಕ್ಷಿಗಳ ಕಳ್ಳಬೇಟೆಯನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆ ಎಂದು ಅವರು ಹೇಳಿದರು.

ಕಳೆದ ಅಕ್ಟೋಬರ್‌ನಲ್ಲಿ ವನ್ಯಜೀವಿ ಮಂಡಳಿ ಅನುಮೋದನೆ ನೀಡಿದ ಬಳಿಕ ಇಡೀ ಪ್ರದೇಶದ ವಾಸ್ತವ ಮೋಜಣಿ ನಡೆಸಿ ನಕ್ಷೆ ತಯಾರಿಸಲು ಸೂಚಿಸಲಾಗಿತ್ತು. ಸರ್ವೆಯಲ್ಲಿ 5,010 ಎಕರೆಗೆ ಬದಲಾಗಿ 5,678.32 ಎಕರೆ ಪ್ರದೇಶವಿರುವುದು ಖಾತ್ರಿ ಆಯಿತು. ಈಗ ಇಡೀ ಪ್ರದೇಶವನ್ನು ಸಂರಕ್ಷಿತ ಮೀಸಲು ಎಂದು ಘೋಷಿಸಲಾಗಿದೆ ಎಂದು ಈಶ್ವರ ಖಂಡ್ರೆ ತಿಳಿಸಿದರು.

ತತ್ವ, ಸಿದ್ಧಾಂತಕ್ಕೆ ಬದ್ಧರಾಗಿದ್ದ ಬಯ್ಯಾರೆಡ್ಡಿ: ಬರಗೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿಪಿಎಂ ಹಿರಿಯ ಮುಖಂಡ ಕಾಮ್ರೇಡ್ ಜೆ.ಸಿ.ಬಯ್ಯಾರೆಡ್ಡಿ ಅವರು ತಾವು ನಂಬಿದ ತತ್ವ ಮತ್ತು ಸಿದ್ಧಾಂತಕ್ಕೆ ಬದ್ಧರಾಗಿ ಕೊನೆಯವರೆಗೂ ಬದುಕಿದರು' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಸಿಪಿಎಂ ಹಿರಿಯ ಮುಖಂಡ, ರೈತ ನಾಯಕ ಜಿ.ಸಿ. ಬಯ್ಯಾರೆಡ್ಡಿ ಅವರ ನುಡಿನಮನ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಬಯ್ಯಾರೆಡ್ಡಿ ಅವರು ನೈತಿಕ ನಿಷ್ಠಾವಂತ, ತಾತ್ವಿಕ ಹೃದಯವಂತರಾಗಿದ್ದರು. ಸಾಯುವವರೆಗೂ ಸಿದ್ಧಾಂತಕ್ಕೆ ಬದ್ಧರಾಗಿದ್ದರು. ಹಾಗಾಗಿ ಅವರನ್ನು 'ಭೂಮಿ ಬದ್ಧತೆಯ ಬಯ್ಯಾರೆಡ್ಡಿ' ಎಂದು ಕರೆಯುತ್ತೇನೆ'' ಎಂದು ಅಭಿಪ್ರಾಯಪಟ್ಟರು.

ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಮಾತನಾಡಿ, 'ಅನಾರೋಗ್ಯವನ್ನು ಲೆಕ್ಕಿಸದೆ ರೈತರು ಮತ್ತು ನಾಡಿನ ಜನರಿಗಾಗಿ ಬಯ್ಯಾರೆಡ್ಡಿ ದುಡಿದಿದ್ದಾರೆ' ಎಂದರು.

ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್. ಮುನಿಯಪ್ಪ ಮಾತನಾಡಿ, 'ಚನ್ನರಾಯಪಟ್ಟಣ ಭೂಸ್ವಾಧೀನ ವಿರೋಧಿ ಹೋರಾಟದಲ್ಲಿ ಅವರ ಬದ್ಧತೆ ಮಹತ್ವದ್ದು. ಉಸಿರಾಟದ ಸಮಸ್ಯೆ ನಡುವೆಯೂ ಹೋರಾಟ ಸಭೆಗಳಲ್ಲಿ ಭಾಗವಹಿಸುತ್ತಿದ್ದರು' ಎಂದು ಬಯ್ಯಾರೆಡ್ಡಿ ಅವರನ್ನು ಸ್ಮರಿಸಿದರು.

ಸಿಪಿಎಂ ಪಾಲಿಟ್ ಬ್ಯೂರೊ ಸದಸ್ಯ ಎಂ.ಎ ಬೇಬಿ, ಸಾಹಿತಿ ಎಲ್. ಹನುಮಂತಯ್ಯ, ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಮಾತನಾಡಿದರು.

ಸಿಪಿಎಂ ರಾಜ್ಯ ಮಂಡಳಿ ಕಾರ್ಯದರ್ಶಿ ಕೆ. ಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಯು. ಬಸವರಾಜ, ಕೆ. ನೀಲಾ, ಎಸ್.ವರಲಕ್ಷ್ಮೀ, ಚಂದ್ರಪ್ಪ ಹೊಸ್ಕೇರಾ, ಕೆ.ಮಹಾಂತೇಶ್, ಬಯ್ಯಾರೆಡ್ಡಿ ಅವರ ಪತ್ನಿ ಮಂಜರಿ, ಪುತ್ರಿ ನಿಲೋನಾ, ರೈತ ಮುಖಂಡ ಕುರುಬೂರು ಶಾಂತಕುಮಾರ್ ಹಾಜರಿದ್ದರು.

ಇದೇ ವೇಳೆ 'ಜನಚಳವಳಿಗಳ ನಾಯಕ ಪ್ರೀತಿಯ ಸಂಗಾತಿ ಜಿ.ಸಿ. ಬಯ್ಯಾರೆಡ್ಡಿ' ಪುಸ್ತಕ ಬಿಡುಗಡೆ ಮಾಡಲಾಯಿತು.


ನುಡಿನಮನ ಕಾರ್ಯಕ್ರಮದಲ್ಲಿ ಬಯ್ಯಾರೆಡ್ಡಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ಎಂ.ಎ. ಬೇಬಿ, ನಿಲೋನಾ, ಮಂಜರಿ, ಬರಗೂರು ರಾಮಚಂದ್ರಪ್ಪ, ಪಿಚ್ಚಳ್ಳಿ ಶ್ರೀನಿವಾಸ್, ಮಾವಳ್ಳಿ ಶಂಕರ್, ಜಿ.ಆರ್ ಶಿವಶಂಕರ್ ಉಪಸ್ಥಿತರಿದ್ದರು

ಜಾಗೃತಿ ಶೀರ್ಷಿಕೆ: ಸೂಚನಾ ಫಲಕಕ್ಕೆ ಕ್ರಮ

• ಓದೇಶ ಸಕಲೇಶಪುರ

ರಾಮನಗರ: ಬೆಂಗಳೂರು-ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಬಿಳಿಹದ್ದುಗಳು ಸೇರಿದಂತೆ ಪಕ್ಷಿಗಳು ಅಪಘಾತದಲ್ಲಿ ಬಲಿಯಾಗುತ್ತಿರುವುದನ್ನು ತಡೆಯುವ ನಿಟ್ಟಿನಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕೆಲ ಕ್ರಮಗಳನ್ನು ಕೈಗೊಂಡಿದೆ. ಅಪಘಾತದಿಂದಾಗಿ ಹೆದ್ದಾರಿಯಲ್ಲಿ ಪಕ್ಷಿಗಳ ಸಾವು ನಡೆಯುತ್ತಿರುವ ಕುರಿತು 'ಪ್ರಜಾವಾಣಿ'ಯಲ್ಲಿ 'ಹದ್ದುಗಳ ಮಸಣವಾದ ಹೆದ್ದಾರಿ!' ವಿಶೇಷ ವರದಿಯನ್ನು ಜ.28ರಂದು ಪ್ರಕಟಿಸಿದ ಬೆನ್ನಲ್ಲೇ, ಪ್ರಾಧಿಕಾರ ವಾಹನ ಸವಾರರಲ್ಲಿ ಜಾಗೃತಿ ಮೂಡಿಸುವ ಕೆಲಸಕ್ಕೆ ಮುಂದಾಗಿದೆ.

ಹೆದ್ದಾರಿಯು ಸಂಚಾರಕ್ಕೆ ಮುಕ್ತವಾದಾಗಿನಿಂದ ಹದ್ದು, ಕಾಗೆ ಸೇರಿದಂತೆ



ಪಕ್ಷಿಗಳ ಸಾವಿನ ಕುರಿತು ಜಾಗೃತಿ ಮೂಡಿಸುವ ಶೀರ್ಷಿಕೆ

ಕೆಲ ಪಕ್ಷಿಗಳು ವೇಗವಾಗಿ ಸಂಚರಿಸುವ ವಾಹನಗಳಿಗೆ ಸಿಲುಕಿ ಸಾಯುತ್ತಿದ್ದವು. ಈ ರೀತಿ ತಿಂಗಳಿಗೆ 15–20 ಪಕ್ಷಿಗಳು ಬಲಿಯಾಗುತ್ತಿದ್ದವು. ಇದರಲ್ಲಿ ಹದ್ದುಗಳೇ ಹೆಚ್ಚಾಗಿದ್ದವು. ಈ ಕುರಿತು ಬೆಂಗಳೂರಿನ ವಿಜಯನಗರದ ಸಾಫ್ಟ್‌ವೇರ್ ಎಂಜಿನಿಯರ್ ಗೌರಿ ಶಿವಯೋಗಿ ಅಧ್ಯಯನದಲ್ಲಿ ತೊಡಗಿದ್ದಾರೆ.

ವರದಿ ಪರಿಣಾಮ

ಜಾಗೃತಿ ಬರಹ: 'ಪ್ರಾಧಿಕಾರ ಹೆದ್ದಾರಿಯುದ್ದಕ್ಕೂ 8 ಕಡೆ ಅಳವಡಿಸಿರುವ ಡಿಜಿಟಲ್ ಡಿಸ್‌ಪ್ಲೇ ಬೋರ್ಡ್‌ಗಳಲ್ಲಿ 'DRIVE SLOWLY WE FLY HERE TOO' (ಇಲ್ಲಿಯೂ ನಾವು ಹಾರಾಡುತ್ತಿರುತ್ತೇವೆ, ನಿಧಾನವಾಗಿ ಚಲಿಸಿ),'BE ALERT WE TAKE OFF AND LAND HERE' (ನಾವು ಇಲ್ಲಿ ಆಗಾಗ ಈ ರಸ್ತೆಗೆ ಇಳಿದು ಬಳಿಕ ಟೇಕಾಫ್ ಆಗುತ್ತಿರುತ್ತೇವೆ, ಎಚ್ಚರ ವಹಿಸಿ) ಎಂಬ ಜಾಗೃತಿ ಬರಹಗಳನ್ನು ಹದ್ದಿನ ಚಿತ್ರದ ಜೊತೆಗೆ ಪ್ರದರ್ಶಿಸುತ್ತಿದೆ' ಎಂದು ಪ್ರಾಧಿಕಾರದ ಪ್ರಾದೇಶಿಕ ಅಧಿಕಾರಿ ವಿಲಾಸ್ ಪಿ. ಬ್ರಹ್ಮಂಕರ್ 'ಪ್ರಜಾವಾಣಿ'ಗೆ ತಿಳಿಸಿದರು.

ಬಿಬಿಎಂಪಿ ಜಾಗದ ತಕರಾರು: ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋರಮಂಗಲದ ಸರ್ವೆ ನಂಬರ್ 9 ಮತ್ತು 10ರ ವ್ಯಾಪ್ತಿಯ ಜಾಗವನ್ನು ಆಟದ ಮೈದಾನವನ್ನಾಗಿ ಬಳಕೆ ಮಾಡಲಾಗುತ್ತಿದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ನಿಮ್ಮ ನಿಲುವು ಏನೆಂಬುದನ್ನು ಸ್ಪಷ್ಟಪಡಿಸಿ' ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಹೈಕೋರ್ಟ್ ನಿರ್ದೇಶಿಸಿದೆ.

ಈ ಸಂಬಂಧ, 'ಡಾ.ಬಿ.ಆರ್.ಅಂಬೇಡ್ಕರ್ ಯುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಲ್ಯಾಣ ಸಂಘ'ದ ಸಂಸ್ಥಾಪಕ ಮತ್ತು ವ್ಯವಸ್ಥಾಪಕ ನಿರ್ದೇಶಕ ಎಂ.ಆರ್. ಡೇವಿಡ್ ಕುಮಾರ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್. ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ ಅವರಿದ್ದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪಾಸ್‌ಪೋರ್ಟ್ ಕಚೇರಿ ಪರ ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ ಕಾಮತ್, 'ಇದೊಂದು ಸಿವಿಲ್ ವ್ಯಾಜ್ಯವಾಗಿದ್ದು, ಇದನ್ನು ಸಾರ್ವಜನಿಕ ಹಿತಾಸಕ್ತಿ ಅರ್ಜಿ ರೂಪದಲ್ಲಿ ಸಲ್ಲಿಸಲಾಗಿದೆ. ಜಾಗವು ಬಿಬಿಎಂಪಿಗೆ ಸೇರಿದ್ದು ಎಂದು ಅರ್ಜಿದಾರರು ಹೇಳುತ್ತಾರೆ. ಆದರೆ, ಜಾಗ ತನ್ನದು ಎಂದು ಬಿಬಿಎಂಪಿ ಈವರೆಗೆ ಹೇಳಿಲ್ಲ. ಈ ಜಾಗವು 1993ರಲ್ಲಿ ಪಾಸ್‌ಪೋರ್ಟ್ ಕಚೇರಿಗೆ ಹಂಚಿಕೆಯಾಗಿದೆ. ಸರ್ವೆ ನಂಬರ್ ಗೊಂದಲವನ್ನು 2023ರಲ್ಲೇ ಸರಿಪಡಿಸಲಾಗಿದೆ' ಎಂದು ವಿವರಿಸಿದರು.

ಇದನ್ನು ಆಲಿಸಿದ ನ್ಯಾಯಪೀಠ, 'ಈ ಬಗ್ಗೆ ಸೂಕ್ತ ವಿವರಣೆ ನೀಡಿ' ಎಂದು ಬಿಬಿಎಂಪಿ ಪರ ವಕೀಲರಿಗೆ ನಿರ್ದೇಶಿಸಿ ವಿಚಾರಣೆಯನ್ನು ಫೆಬ್ರುವರಿ 20ಕ್ಕೆ ಮುಂದೂಡಿತು. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಸದಾನಂದ ಜಿ.ಶಾಸ್ತ್ರಿ ವಾದ ಮಂಡಿಸಿದರು.

ಕೋರಿಕೆ ಏನು?: 'ಕೋರಮಂಗಲದ ಸರ್ವೆ ನಂಬರ್ 10ರಲ್ಲಿನ ಬಯಲು ಪ್ರದೇಶವನ್ನು 70 ವರ್ಷಗಳಿಂದ ಆಟದ ಮೈದಾನವನ್ನಾಗಿ ಬಳಕೆ ಮಾಡಲಾಗುತ್ತಿದೆ. ಈಜೀಪುರದ ಸುತ್ತಲಿನ 30ಕ್ಕೂ ಅಧಿಕ ಶಾಲೆಗಳ 20 ಸಾವಿರ ವಿದ್ಯಾರ್ಥಿಗಳು ಈ ಆಟದ ಮೈದಾನವನ್ನು ಉಪಯೋಗಿಸುತ್ತಿದ್ದಾರೆ. ಕಾಂಪೌಂಡ್ ಕಟ್ಟಿ 10 ತಿಂಗಳಿಂದ ಪ್ರವೇಶ ನಿರ್ಬಂಧಿಸಿದೆ. ಆದ್ದರಿಂದ, ಈ ಒತ್ತುವರಿ ತೆರವು ಗೊಳಿಸಲು ಬಿಬಿಎಂಪಿಗೆ ನಿರ್ದೇಶಿಸಬೇಕು. ಕಟ್ಟಡ ನಿರ್ಮಾಣ ಕಾಮಗಾರಿ ಸ್ಥಗಿತಗೊಳಿಸುವಂತೆ ಪಾಸ್‌ಪೋರ್ಟ್ ಸೇವಾ ಕೇಂದ್ರಕ್ಕೆ ಸೂಚಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ವರದಕ್ಷಿಣೆ ಸಾವುಗಳಿಗೆ ಕೊನೆಯಿಲ್ಲವೇ?: ಹೈಕೋರ್ಟ್

ಬೆಂಗಳೂರು: 'ನಮ್ಮ ಸಮಾಜದಲ್ಲಿ ವರದಕ್ಷಿಣೆ ಎಂಬ ಪಿಡುಗು ಇಂದಿಗೂ ಚಾಲ್ತಿಯಲ್ಲಿರುವುದು ದುರದೃಷ್ಟಕರ ಸಂಗತಿ' ಎಂದು ತೀವ್ರ ಕಳವಳ ವ್ಯಕ್ತಪಡಿಸಿರುವ ಹೈಕೋರ್ಟ್, ಈ ಸಂಬಂಧ ಪತಿ ಮತ್ತು ಅವರ ಸಂಬಂಧಿಗಳ ವಿರುದ್ಧದ ವರದಕ್ಷಿಣೆ ಕಿರುಕುಳ ಆರೋಪದ ಪ್ರಕರಣವನ್ನು ರದ್ದುಗೊಳಿಸಲು ನಿರಾಕರಿಸಿದೆ.

'ನಮ್ಮ ವಿರುದ್ಧದ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿ ಬೆಂಗಳೂರಿನ ನಾಗಸಂದ್ರದ ಸಿ.ವಿ.ವಿಕಾಸ್ ಮತ್ತು ಅವರ ತಂದೆ, ತಾಯಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಹೈಕೋರ್ಟ್ ಸುದ್ದಿ

'ಆಧುನಿಕ ಯುಗದಲ್ಲಿ ಸಮಾಜ ಎಷ್ಟೆಲ್ಲಾ ಮುಂದುವರಿದಿದೆ. ಮಹಿಳೆ ಎಲ್ಲ ಕ್ಷೇತ್ರಗಳಲ್ಲಿಯೂ ಪ್ರಗತಿ ಸಾಧಿಸುತ್ತಿದ್ದಾಳೆ. ಆದರೂ, ಈ ರೀತಿಯ ವರದಕ್ಷಿಣೆ ಸಾವಿನ ಘಟನೆಗಳು ಸಮಾಜವನ್ನು ಗಾಸಿಗೊಳಿಸುತ್ತಿವೆ' ಎಂದು ನ್ಯಾಯಪೀಠ ದಿಗ್ಭ್ರಮೆ ವ್ಯಕ್ತಪಡಿಸಿದೆ.

'ವರದಕ್ಷಿಣೆ ಕಿರುಕುಳ ಆರೋಪದಲ್ಲಿ ಮರಣ ಪತ್ರ ಬರೆದಿಟ್ಟು ಸಾವನ್ನಪ್ಪುವ ಪ್ರಕರಣಗಳಲ್ಲಿ ಯಾರ ಮೇಲೂ ನಿರ್ದಿಷ್ಟ ಆರೋಪಗಳಿರದಿದ್ದರೂ; ಪತಿ ಮತ್ತವರ ಕುಟುಂಬದ ಸದಸ್ಯರ ವಿರುದ್ಧದ ಶಿಕ್ಷೆ ದೃಢಪಡಿಸಬಹುದಾಗಿದೆ ಎಂದು ಸುಪ್ರೀಂ ಕೋರ್ಟ್ ಹಲವು ಪ್ರಕರಣಗಳಲ್ಲಿ ತೀರ್ಪು ನೀಡಿದೆ' ಎಂಬುದನ್ನು ಉಲ್ಲೇಖಿಸಿರುವ ನ್ಯಾಯಪೀಠ ಅರ್ಜಿ ವಜಾಗೊಳಿಸಿದೆ.

ಪ್ರಕರಣವೇನು?: ಆಂಧ್ರದ ಅನಂತಪುರ ಜಿಲ್ಲೆಯ ಅಗಳಿ ಗ್ರಾಮದ ಆರ್.ರೋಜಾ ಮತ್ತು ನಾಗಸಂದ್ರದ ವಿಕಾಸ್ 2019ರ ಅ. 24ರಂದು ವಿವಾಹವಾಗಿದ್ದರು. ಬಳಿಕ ಪತ್ನಿ ಗಂಡನ ಮನೆಯಲ್ಲಿ ನೆಲೆಸಿದ್ದರು. ಮದುವೆಯಾದ 13 ತಿಂಗಳ ಬಳಿಕ ರೋಜಾ ಮರಣ ಪತ್ರ ಬರೆದಿಟ್ಟು ಆತ್ಮಹತ್ಯೆಗೆ ಶರಣಾಗಿದ್ದರು.

ಘಟನೆ ಕುರಿತಂತೆ ರೋಜಾ ತಂದೆ ರಾಮಕೃಷ್ಣ ರೆಡ್ಡಿ ಪೀಣ್ಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ತನಿಖೆ ನಡೆಸಿದ್ದ ಪೊಲೀಸರು, ಕೌಟುಂಬಿಕ ದೌರ್ಜನ್ಯ ಮತ್ತು ವರದಕ್ಷಿಣೆ ಕಿರುಕುಳದ ಕೊಲೆ ಆರೋಪದಲ್ಲಿ ಅರ್ಜಿದಾರರ ವಿರುದ್ಧ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಜೀವಾ ಆತ್ಮಹತ್ಯೆ: ಕನಕಲಕ್ಷ್ಮಿ ಬಂಧಿಸಲು ವಕೀಲರ ಆಗ್ರಹ

ಬೆಂಗಳೂರು: 'ವಕೀಲೆ ಜೀವಾ ಆತ್ಮಹತ್ಯೆ ಪ್ರಕರಣದಲ್ಲಿ ಡಿವೈಎಸ್‌ಪಿ ಕನಕಲಕ್ಷ್ಮಿ ಅವರು ಸಾಕ್ಷ್ಯ ನಾಶಪಡಿಸಲು ಪ್ರಯತ್ನಿಸುತ್ತಿದ್ದು, ಕೂಡಲೇ ಅವರನ್ನು ಬಂಧಿಸಿ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು' ಎಂದು ಆಗ್ರಹಿಸಿ ಬೆಂಗಳೂರು ವಕೀಲರ ಸಂಘದ ಸದಸ್ಯರು ಶುಕ್ರವಾರ ಪ್ರತಿಭಟನೆ ನಡೆಸಿದರು.

ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ ನೇತೃತ್ವದಲ್ಲಿ ನೂರಾರು ವಕೀಲರು ಬೆಳಿಗ್ಗೆ ಸಿಟಿ ಸಿವಿಲ್ ಕೋರ್ಟ್ ಮುಂಭಾಗ ಜಮಾವಣೆಗೊಂಡು ಭಿತ್ತಿಪತ್ರ, ಬ್ಯಾನರ್‌ಗಳನ್ನು ಹಿಡಿದು 'ಜೀವಾ ಅವರ ಸಾವಿಗೆ ಕಾರಣರಾದವರನ್ನು ಬಂಧಿಸಿ ಮೃತರ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡಬೇಕು' ಎಂದು ಆಗ್ರಹಿಸಿದರು.

'ಜನಸಾಮಾನ್ಯರಿಗೆ ಒಂದು ಕಾನೂನು, ಕನಕಲಕ್ಷ್ಮಿ ಅವರಿಗೆ ಒಂದು ಕಾನೂನೇ' ಎಂದು ಪ್ರಶ್ನಿಸಿದ ವಿವೇಕ್ ರೆಡ್ಡಿ, 'ಕನಕಲಕ್ಷ್ಮಿ ಅವರ ಕಿರುಕುಳದಿಂದಲೇ ಜೀವಾ ಆತ್ಮಹತ್ಯೆಗೆ ಶರಣಾಗಿದ್ದಾರೆ. ಆದರೆ, ವಿಶೇಷ ತನಿಖಾ ತಂಡ (ಎಸ್‌ಐಟಿ) ಇವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಕನಕಲಕ್ಷ್ಮಿ ಅವರು ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡಿರುವುದಕ್ಕೆ ಸಾಕ್ಷಿಯಾಗಿ ಲಾಟರಿ ಟಿಕೆಟ್, ಮಧುಗಿರಿ ಮತ್ತು ರೈಸ್ ಪುಲ್ಲಿಂಗ್ ಪ್ರಕರಣಗಳು ನಮ್ಮ ಕಣ್ಣಮುಂದಿವೆ' ಎಂದರು.

'ಕನಕಲಕ್ಷ್ಮಿ ವಿರುದ್ಧ ಹಲವಾರು ಪ್ರಕರಣಗಳು ಇದ್ದರೂ ಈ ಪ್ರಕರಣದಲ್ಲೂ ಅವರನ್ನು ತನಿಖಾಧಿಕಾರಿಯಾಗಿ ನೇಮಕ ಮಾಡಲಾಗಿದೆ. ಅವರ ವಿರುದ್ಧ ಎಸ್‌ಐಟಿ ಯಾವುದೇ ಕ್ರಮ ಕೈಗೊಂಡಿಲ್ಲ. ಅವರು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಸಾಕ್ಷ್ಯಗಳನ್ನು ನಾಶಪಡಿಸಲು ಯತ್ನಿಸುತ್ತಿದ್ದು ಕೂಡಲೇ ಅವರನ್ನು ಬಂಧಿಸಬೇಕು' ಎಂದು ಒತ್ತಾಯಿಸಿದರು.


ವಕೀಲೆ ಜೀವಾ ಸಾವಿಗೆ ನ್ಯಾಯ ದೊರಕಿಸಿಕೊಡುವಂತೆ ಆಗ್ರಹಿಸಿ, 'ಬೆಂಗಳೂರು ವಕೀಲರ ಸಂಘ'ದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ನೇತೃತ್ವದಲ್ಲಿ ನೂರಾರು ವಕೀಲರು ಶುಕ್ರವಾರ ಸಿಟಿ ಸಿವಿಲ್ ಕೋರ್ಟ್ ಮುಂದೆ ಪ್ರತಿಭಟನೆ ನಡೆಸಿದರು

ನಿವೃತ್ತಿ ಹೊಂದುತ್ತಿರುವ ನ್ಯಾ.ಶಿವಶಂಕರೇಗೌಡ ಸಲಹೆ

'ಏರಿದ ದನಿಯಲ್ಲಿ ವಾದಿಸಿದರೆ ನ್ಯಾಯ ಸಿಗದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಾವುದೇ ಪ್ರಕರಣದ ವಿಚಾರಣೆಯಲ್ಲಿ ವಕೀಲರು ತಮ್ಮ ಕೇಸುಗಳನ್ನು ಮೆರಿಟ್ ಮೂಲಕ ಪ್ರತಿಪಾದಿಸಿ ನ್ಯಾಯಮೂರ್ತಿಗಳಿಗೆ ಮನವರಿಕೆ ಮಾಡಿ, ಸಂತುಷ್ಟಗೊಳಿಸಬೇಕೇ ಹೊರತು ಏರಿದ ಧ್ವನಿಯಿಂದ ವಾದ ಮಂಡಿಸಿದಾಕ್ಷಣ ನ್ಯಾಯ ಸಿಗುವುದಿಲ್ಲ' ಎಂದು ನಿವೃತ್ತಿ ಹೊಂದುತ್ತಿರುವ ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ ಕಿರಿಯ ವಕೀಲರಿಗೆ ಸಲಹೆ ನೀಡಿದರು.

ಕರ್ನಾಟಕ ರಾಜ್ಯ ವಕೀಲರ ಪರಿಷತ್ (ಕೆಎಸ್‌ಬಿಸಿ) ವತಿಯಿಂದ ಕೋರ್ಟ್ ಹಾಲ್ 1ರಲ್ಲಿ ಶುಕ್ರವಾರ ತಮಗೆ ಆಯೋಜಿಸಲಾಗಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು, 'ನಾನು ಮೊದಲಿಗೆ ತಾಲ್ಲೂಕು ಮಟ್ಟದಲ್ಲಿ ವಕೀಲಿಕೆ ನಡೆಸಿ ನಂತರ 1995ರಲ್ಲಿ ಸಿವಿಲ್ ನ್ಯಾಯಾಧೀಶನಾಗಿ ಇಂದು ಹೈಕೋರ್ಟ್ ನ್ಯಾಯಮೂರ್ತಿ ಸ್ಥಾನದಿಂದ ನಿವೃತ್ತಿ ಹೊಂದುತ್ತಿದ್ದೇನೆ. ನನ್ನ ವೃತ್ತಿ ಜೀವನದಲ್ಲಿ ಯಾರನ್ನೂ ನೋಯಿಸಿಲ್ಲ' ಎಂದು ಭಾವುಕರಾಗಿ ನುಡಿದರು.


ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ ಅವರಿಗೆ ಬೆಂಗಳೂರು ವಕೀಲರ ಸಂಘದ ವತಿಯಿಂದ ಶುಕ್ರವಾರ ಹೈಕೋರ್ಟ್ ವಕೀಲರ ಸಭಾಂಗಣದಲ್ಲಿ ಬೀಳ್ಕೊಡುಗೆ ನೀಡಲಾಯಿತು. ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ, ಪ್ರಧಾನ ಕಾರ್ಯದರ್ಶಿ ಟಿ.ಜಿ.ರವಿ, ಖಜಾಂಚಿ ಎಂ.ಟಿ.ಹರೀಶ್ ಮತ್ತು ಹೈಕೋರ್ಟ್ ಘಟಕದ ಪದಾಧಿಕಾರಿಗಳು ಹಾಜರಿದ್ದರು

ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಅವರು ಶಿವಶಂಕರೇಗೌಡ ಅವರ ಕಾನೂನು ಜ್ಞಾನ ಮತ್ತು ಆಡಳಿತ ವೈಖರಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕೆಎಸ್‌ಬಿಸಿ ಅಧ್ಯಕ್ಷ ಎಚ್.ಎಲ್. ವಿಶಾಲ ರಘು, 'ನ್ಯಾ.ಶಿವಶಂಕರೇಗೌಡ ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲ್ಲೂಕಿನ ತಲಕಾಡುವಿನಂತಹ ಗ್ರಾಮೀಣ ಪ್ರದೇಶದವರು. ಕೃಷಿಕ ಕುಟುಂಬದಿಂದ ಗ್ರಾಮೀಣ ಭಾಗದಲ್ಲಿ ವಕೀಲಿಕೆ ನಡೆಸಿ ಹೈಕೋರ್ಟ್ ನ್ಯಾಯಮೂರ್ತಿಯಾಗುವವರೆಗಿನ ಅವರ ಪಯಣ ಮುಂದಿನ ಪೀಳಿಗೆಗೆ ಸ್ಫೂರ್ತಿದಾಯಕ' ಎಂದರು.

'ನ್ಯಾ.ಶಿವಶಂಕರೇಗೌಡ ಅವರು ಹೈಕೋರ್ಟ್ ನ್ಯಾಯಮೂರ್ತಿಯಾಗಿ ತಮ್ಮ ಕಿರು ಅವಧಿಯಲ್ಲಿ ಹಲವು ಮಹತ್ವದ ತೀರ್ಪುಗಳನ್ನು ಒಳಗೊಂಡಂತೆ ಒಟ್ಟು 4,600ಕ್ಕೂ ಹೆಚ್ಚು ಪ್ರಕರಣಗಳನ್ನು ಇತ್ಯರ್ಥಪಡಿಸಿದ್ದಾರೆ' ಎಂದು ವಿಶಾಲ ರಘು ನೆನಪಿಸಿದರು.

ಜಿಲ್ಲಾ ಘಟಕಗಳಿಗೆ ಹಿಂಬಾಲಕರ ನೇಮಿಸಿದ ಹಾಲಿ ಅಧ್ಯಕ್ಷ ವಿಜಯೇಂದ್ರ– ಶಾಸಕ ಬಿ.ಪಿ. ಹರೀಶ್ ಆರೋಪ

ದೆಹಲಿಯಲ್ಲೇ ಅಭ್ಯರ್ಥಿ ಘೋಷಣೆ: ಯತ್ನಾಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯಾಧ್ಯಕ್ಷರ ವಿಚಾರದಲ್ಲಿ ಎರಡು ದಿನ ಕಾದು ನೋಡುತ್ತೇವೆ. ವರಿಷ್ಠರು ಏನು ತೀರ್ಮಾನ ಮಾಡುತ್ತಾರೋ ನೋಡುತ್ತೇವೆ. ಆ ಬಳಿಕ ಕೇಂದ್ರ ಸಚಿವರು, ಸಂಸದರ ಜತೆ ಚರ್ಚೆ ಮಾಡಿ ದೆಹಲಿಯಲ್ಲಿಯೇ ಅಭ್ಯರ್ಥಿ ಘೋಷಣೆ ಮಾಡುತ್ತೇವೆ' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.



ಬಸನಗೌಡ ಪಾಟೀಲ ಯತ್ನಾಳ

ಮಾಜಿ ಸಚಿವ ಕುಮಾರ್ ಬಂಗಾರಪ್ಪ ಅವರ ಮನೆಯಲ್ಲಿ ಶುಕ್ರವಾರ ತಮ್ಮ ಬಣದ ಶಾಸಕರ ಜತೆ ಸಭೆ ನಡೆಸಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಜಿಲ್ಲಾ ಅಧ್ಯಕ್ಷರ ಆಯ್ಕೆ ವ್ಯವಸ್ಥಿತವಾಗಿ ನಡೆದಿಲ್ಲ. ತಾವು ರಾಜ್ಯಾಧ್ಯಕ್ಷರಾಗಬೇಕು ಎಂಬ ಉದ್ದೇಶದಿಂದ ತಮಗೆ ಬೇಕಾದವರನ್ನೇ ಜಿಲ್ಲಾಧ್ಯಕ್ಷರ ಆಯ್ಕೆ ಮಾಡಿಕೊಂಡಿದ್ದಾರೆ. ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ಯಾರ ಅಭಿಪ್ರಾಯವನ್ನೂ ಪಡೆದಿಲ್ಲ. ರಾಜ್ಯಾಧ್ಯಕ್ಷರು ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಂಡಿರುವುದರಿಂದ ಪಕ್ಷದಲ್ಲಿ ಗೊಂದಲವುಂಟಾಗಿದೆ. ಈ ಬಗ್ಗೆ ಕೆಲವರು ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ಪತ್ರ ಬರೆದಿದ್ದಾರೆ ಎಂದು ಹೇಳಿದರು.

'ಜಿಲ್ಲಾಧ್ಯಕ್ಷರ ನೇಮಕವನ್ನು ನಾವು ವಿರೋಧಿಸುತ್ತೇವೆ. ಇದರ ಬಗ್ಗೆ ಪಕ್ಷದ ವರಿಷ್ಠರಿಗೂ ಹೇಳುತ್ತೇವೆ. ಆರ್.ಅಶೋಕ, ಡಾ.ಸಿ.ಎನ್.ಅಶ್ವತ್ಥನಾರಾಯಣ, ಸಿ.ಟಿ.ರವಿ, ಬಸವರಾಜ ಬೊಮ್ಮಾಯಿ, ಜಿ.ಎಂ.ಸಿದ್ದೇಶ್ವರ, ಕುಮಾರ್ ಬಂಗಾರಪ್ಪ ಸೇರಿದಂತೆ ಯಾರ ಅಭಿಪ್ರಾಯವನ್ನೂ ಪಡೆಯದೇ ಜಿಲ್ಲಾಧ್ಯಕ್ಷರ ಆಯ್ಕೆ ಆಗಿದೆ. ಡಾ.ಕೆ.ಸುಧಾಕರ್ ಕೂಡ ಈ ಬಗ್ಗೆ ಈಗಾಗಲೇ ಮಾತನಾಡಿದ್ದಾರೆ' ಎಂದರು.

'ರಾಜ್ಯಾಧ್ಯಕ್ಷರಿಗೆ ಉದ್ಧಟತನ ಹೆಚ್ಚು. ಪಕ್ಷದ ಸಿದ್ಧಾಂತವನ್ನು ಗಾಳಿಗೆ ತೂರಿ ಆಯ್ಕೆ ಮಾಡಿದ್ದಾರೆ. ವರಿಷ್ಠರನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಯಡಿಯೂರಪ್ಪ ಬಿಟ್ಟರೆ ಬಿಜೆಪಿ ಇಲ್ಲ ಎನ್ನುವ ಕಾಲ ಹೋಯ್ತು. ಯಡಿಯೂರಪ್ಪ ಕುಟುಂಬ ಇಲ್ಲ ಎಂದರೂ ಬಿಜೆಪಿ ಅಸ್ತಿತ್ವ ಇರುತ್ತದೆ. ಶಾಸಕ ಎಸ್.ಆರ್.ವಿಶ್ವನಾಥ್ ನಮ್ಮ ಜತೆಗೇ ಇದ್ದಾರೆ. ವಿಶ್ವನಾಥ್ ನಿಷ್ಠೆ ಯಡಿಯೂರಪ್ಪಗೆ ಮಾತ್ರ, ವಿಜಯೇಂದ್ರಗೆ ಇಲ್ಲ' ಎಂದು ಯತ್ನಾಳ ಹೇಳಿದರು.

'ರಾಜ್ಯಾಧ್ಯಕ್ಷರ ಚುನಾವಣೆ ಬಂದಾಗ ನಮ್ಮ ಕಡೆಯಿಂದ ಒಬ್ಬರನ್ನು ಸ್ಪರ್ಧೆಗೆ ಇಳಿಸಬೇಕು ಅಂತ ಚರ್ಚೆ ಮಾಡಿದ್ದೇವು. ಇವತ್ತಿನ ನಮ್ಮ ಸಭೆಯಲ್ಲಿ ಅಭ್ಯರ್ಥಿ ಆಯ್ಕೆಗೆ ಇನ್ನೂ ಎರಡು ದಿನ ಸಮಯ ತೆಗೆದುಕೊಂಡಿದ್ದೇವೆ. ಇನ್ನೂ ವಿಸ್ತೃತವಾಗಿ ಚರ್ಚೆ ಮಾಡುತ್ತೇವೆ. ತಟಸ್ಥವಾಗಿರುವ ನಾಯಕರ ಜತೆಗೂ ಚರ್ಚೆ ಮಾಡಿದ್ದೇವೆ' ಎಂದು ಅವರು ಹೇಳಿದರು.

ಶಾಸಕ ಬಿ.ಪಿ.ಹರೀಶ್ ಮಾತನಾಡಿ, '23 ಜಿಲ್ಲೆಗಳ ಅಧ್ಯಕ್ಷರ ಆಯ್ಕೆಯನ್ನು ನಾವು ವಿರೋಧಿಸುತ್ತೇವೆ. ವಿಜಯೇಂದ್ರ ಕುತಂತ್ರ ಮಾಡಿ ತಮ್ಮ ಹಿಂಬಾಲಕರನ್ನು ನೇಮಿಸುವ ಕೆಲಸ ಮಾಡಿದ್ದಾರೆ. 23 ಜಿಲ್ಲೆಗಳಲ್ಲೂ ಅಪಸ್ವರ ಎದ್ದಿದೆ. ನಾವೂ ದೆಹಲಿಗೆ ಹೋಗುತ್ತೇವೆ. ಸಾಕಷ್ಟು ಶಾಸಕರು, ಮಾಜಿ ಸಚಿವರು ಮತ್ತು ಹಿರಿಯರಿಗೆ ಬೇಸರ ಆಗಿದೆ. ಜಿಲ್ಲಾ ಅಧ್ಯಕ್ಷರ ಮರು ನೇಮಕ ಮಾಡುವ ಬಗ್ಗೆ ಪರಿಶೀಲನೆ ನಡೆಸಬೇಕು' ಎಂದು ಆಗ್ರಹಿಸಿದರು.

ಶಾಸಕ ರಮೇಶ ಜಾರಕಿಹೊಳಿ, ಕೇಂದ್ರದ ಮಾಜಿ ಸಚಿವ ಜಿ.ಎಂ.ಸಿದ್ದೇಶ್ವರ, ಮಾಜಿ ಸಚಿವ ಕುಮಾರ್ ಬಂಗಾರಪ್ಪ ಸಭೆಯಲ್ಲಿ ಭಾಗವಹಿಸಿದ್ದರು.

ವಿಜಯೇಂದ್ರ ಕಿತ್ತೆಸೆಯಿರಿ: ವರಿಷ್ಠರಿಗೆ ಭಿನ್ನರ ಪಟ್ಟು

ನವದೆಹಲಿ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ಬಿ.ವೈ. ವಿಜಯೇಂದ್ರ ಅವರನ್ನು ಕೂಡಲೇ ಬದಲಾವಣೆ ಮಾಡಬೇಕು. ಇಲ್ಲದಿದ್ದರೆ, ರಾಜ್ಯ ಘಟಕದ ಅಧ್ಯಕ್ಷರ ಆಯ್ಕೆಯ ಚುನಾವಣೆಯಲ್ಲಿ ಅಭ್ಯರ್ಥಿಯನ್ನು ಕಣಕ್ಕೆ ಇಳಿಸುವುದು ಶತಃಸಿದ್ಧ ಎಂದು ಬಿಜೆಪಿ ಭಿನ್ನರ ಬಣವು ವರಿಷ್ಠರಿಗೆ ಸೂಚ್ಯವಾಗಿ ತಿಳಿಸಿದೆ.



ನಡ್ಡಾ ಭೇಟಿಯಾದ ಅರವಿಂದ ಲಿಂಬಾವಳಿ

ಜೆ.ಪಿ.ನಡ್ಡಾ ಅವರಿಗೆ ಅರವಿಂದ ಲಿಂಬಾವಳಿ ಅವರು ವಕ್ಫ್ ಅಧ್ಯಯನ ವರದಿ ಸಲ್ಲಿಸಿದರು

ಭಿನ್ನರ ಬಣದ ನಾಯಕ ಅರವಿಂದ ಲಿಂಬಾವಳಿ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಶುಕ್ರವಾರ ಸಂಜೆ ಭೇಟಿ ಮಾಡಿ ಸಮಾಲೋಚನೆ ನಡೆಸಿದರು. ರಾಜ್ಯ ಘಟಕದಲ್ಲಿ ಉಂಟಾಗಿರುವ ಗೊಂದಲ, ಅದಕ್ಕೆ ಕಾರಣಗಳ ಬಗ್ಗೆ ಮಾಹಿತಿ ನೀಡಿದರು. ವರಿಷ್ಠರು ಕೂಡಲೇ ಮಧ್ಯಪ್ರವೇಶ ಮಾಡದಿದ್ದರೆ ಭಿನ್ನಮತ ಇನ್ನಷ್ಟು ತೀವ್ರವಾಗಲಿದೆ ಎಂದೂ ಅವರು ಗಮನಕ್ಕೆ ತಂದರು.

'ವಿಜಯೇಂದ್ರ ದುರಂಹಕಾರದಿಂದ ವರ್ತಿಸುತ್ತಿದ್ದಾರೆ. ಪಕ್ಷದ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ. ಶಾಸಕರ ಮಾತಿಗೂ ಬೆಲೆ ಇಲ್ಲ. ಯಾವುದೇ ಹೋರಾಟವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುತ್ತಿಲ್ಲ. ಕಾಂಗ್ರೆಸ್ ನಾಯಕರ ಜತೆಗೆ ಹೊಂದಾಣಿಕೆ ರಾಜಕಾರಣ ಮಾಡುತ್ತಿದ್ದಾರೆ. ಪಕ್ಷ ಸಂಘಟನೆ ಆಗುತ್ತಿಲ್ಲ. ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷರ ನೇಮಕದಲ್ಲೂ ಭಾರಿ ಲೋಪ ಆಗಿದೆ. ನೇಮಕದ ಸಂದರ್ಭದಲ್ಲಿ ವಿಜಯೇಂದ್ರ ಆಪ್ತರಿಗೆ ಮಣೆ ಹಾಕಲಾಗಿದೆ' ಎಂದು ಲಿಂಬಾವಳಿ ದೂರಿದರು ಎಂದು ಮೂಲಗಳು ತಿಳಿಸಿವೆ.

'ಬೀದರ್‌ನಿಂದ ಬಳ್ಳಾರಿಯವರೆಗೆ 'ವಕ್ಫ್ ಹಠಾವೋ– ದೇಶ ಬಚಾವೋ' ಅಭಿಯಾನದ ಅಡಿಯಲ್ಲಿ ಪ್ರವಾಸ ನಡೆಸಿದ್ದೇವೆ. ಈ ವೇಳೆ ಅನೇಕ ಜನರು ವಕ್ಫ್ ಬೋರ್ಡ್‌ನಿಂದ ತೊಂದರೆ ಎದುರಿಸುತ್ತಿರುವುದು ಬೆಳಕಿಗೆ ಬಂದಿದೆ. ವಕ್ಫ್ ಕಾನೂನಿನಲ್ಲಿರುವ ಲೋಪದೋಷಗಳು ಬ್ರಹ್ಮಾಂಡ ಭ್ರಷ್ಟಾಚಾರಕ್ಕೆ ಎಡೆ ಮಾಡಿಕೊಡುತ್ತಿವೆ' ಎಂದು ಲಿಂಬಾವಳಿ ತಿಳಿಸಿದರು.

ವಕ್ಫ್ ಕಾಯ್ದೆಗೆ ತಿದ್ದುಪಡಿ ತರುವುದು ಅತ್ಯಗತ್ಯ. ವಕ್ಫ್ ಆಸ್ತಿ ಎಂದು ಗುರುತಿಸಲಾಗಿರುವ ಸ್ಥಳಗಳನ್ನು ಕೇಂದ್ರ ಸರ್ಕಾರ ವಶಪಡಿಸಿಕೊಂಡು ಸಾರ್ವಜನಿಕ ಆಸ್ತಿ ಎಂದು ಘೋಷಿಸಬೇಕು ಎಂದು ವಿನಂತಿಸಿದರು.

ಫೆ.5ರ ನಂತರ ದೆಹಲಿಗೆ ಬಿ. ಶ್ರೀರಾಮುಲು

ಕೂಡ್ಲಿಗಿ (ವಿಜಯನಗರ ಜಿಲ್ಲೆ): 'ಫೆಬ್ರುವರಿ 5ರ ಬಳಿಕ ದೆಹಲಿಗೆ ತೆರಳಿ ಬಿಜೆಪಿ ಹೈಕಮಾಂಡ್ ಭೇಟಿಯಾಗುವೆ. ಸಂವಹನ ಕೊರತೆ ಮತ್ತು ಇನ್ನಿತರ ಸಮಸ್ಯೆಗಳಿಂದ ಆಗಿರುವ ಗೊಂದಲವನ್ನು ಪಕ್ಷದ ನಾಯಕರು ಸರಿಪಡಿಸುವ ವಿಶ್ವಾಸವಿದೆ' ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಹೇಳಿದರು.

'ಜನಾರ್ದನ ರೆಡ್ಡಿ ಪಕ್ಷದ ಕಾರ್ಯಕರ್ತರೇ ಹೊರತು ವರಿಷ್ಠರಲ್ಲ. ಪಕ್ಷ ತೊರೆಯುವಂತೆ ಅವರು ಹೇಳಿದ್ದಕ್ಕೆ ಮಹತ್ವ ಕೊಡಬೇಕಿಲ್ಲ. ವರಿಷ್ಠರ ಇಚ್ಛೆಯಂತೆ ನಾನು ಪಕ್ಷದಲ್ಲೇ ಇರುತ್ತೇನೆ' ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

'ಯತ್ನಾಳ, ರಮೇಶ್ ಜಾರಕಿಹೊಳಿ, ಸುಧಾಕರ್ ಅವರೆಲ್ಲ ಕೆಲ ವ್ಯಕ್ತಿಗಳ ಬಗ್ಗೆ ಮಾತನಾಡುತ್ತಿದ್ದಾರೆಯೇ ಹೊರತು ಪಕ್ಷದ ವಿರುದ್ಧ ಮಾತನಾಡಿಲ್ಲ. ಅವರೆಲ್ಲ ಇದ್ದರಷ್ಟೇ ಪಕ್ಷ ಸಂಘಟನೆ ಸಾಧ್ಯ. ಪ್ರಶ್ನಾತೀತ ನಾಯಕ ಯಡಿಯೂರಪ್ಪ ಅವರಂತೆಯೇ ವಿಜಯೇಂದ್ರ ಕೂಡ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನಡೆಯಬೇಕು' ಎಂದರು.


'2028ರಲ್ಲಿ ರಾಜ್ಯದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರುವುದೇ ಗುರಿಯಾಗಿದೆ. ಈ ನಿಟ್ಟಿನಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಪ್ರಯತ್ನಿಸುತ್ತೇವೆ. ಪಕ್ಷ ಬಯಸಿದರೆ ಮುಖ್ಯಮಂತ್ರಿ ಆಗಲು ನಾನು ಸಿದ್ಧ' ಎಂದರು.

ಅಖಂಡ ಬಳ್ಳಾರಿ ಜಿಲ್ಲೆಯಲ್ಲಿ ಐದು ಕಡೆ ಮೀಸಲು ಕ್ಷೇತ್ರಗಳಿದ್ದು, ಎಲ್ಲಾ ಕಡೆಯಿಂದ ಸ್ಪರ್ಧಿಸಲು ನನಗೆ ಆಹ್ವಾನವಿದೆ. ಯಾವ ಕ್ಷೇತ್ರಕ್ಕೆ ಯಾರಿಗೆ ಟಿಕೆಟ್ ಕೊಡಬೇಕು ಎಂಬುದನ್ನು ಪಕ್ಷದ ವರಿಷ್ಠರು ನಿರ್ಧರಿಸುವರು



ಶ್ರೀರಾಮುಲು
ಮಾಜಿ ಸಚಿವ

ಅಧ್ಯಕ್ಷರ ಚುನಾವಣೆ ಬಳಿಕ ಉತ್ತರ: ಬಿ.ವೈ. ವಿಜಯೇಂದ್ರ



ಕಲಬುರಗಿ: ರಾಜ್ಯ ಘಟಕದ ಅಧ್ಯಕ್ಷರ ಚುನಾವಣೆ ನಂತರ ಪಕ್ಷದಲ್ಲಿನ ಸಮಸ್ಯೆಗಳು, ಭಿನ್ನಮತಕ್ಕೆ ಉತ್ತರ ದೊರಕಲಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವಿಶ್ವಾಸ ವ್ಯಕ್ತಪಡಿಸಿದರು.

ಸೇಡಂನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪಕ್ಷದೊಳಗೆ ಭಿನ್ನಮತ ಇರುವ ಕುರಿತು ಕಾರ್ಯಕರ್ತರಲ್ಲಿಯೂ ಬೇಸರ ಇದೆ. ಅಧ್ಯಕ್ಷರ ಚುನಾವಣೆ ನಂತರ ಅಪಸ್ವರ ಎತ್ತಿದವರಿಗೂ ಏನು ಸಮಾಧಾನ ಆಗಬೇಕೋ ಅದು ಅಗುತ್ತದೆ' ಎಂದರು.

'ರಾಜ್ಯ ಅಧ್ಯಕ್ಷರ ಚುನಾವಣೆಗೂ ಮುನ್ನ ಶೇ 50ರಷ್ಟು ಘಟಕಗಳಿಗೆ ಅಧ್ಯಕ್ಷರ ಆಯ್ಕೆ ನಡೆದಿರಬೇಕು ಎಂಬ ನಿಯಮವಿದೆ. ರಾಜ್ಯದಲ್ಲಿ ಪಕ್ಷದ 39 ಸಂಘಟನಾ ಘಟಕಗಳಿದ್ದು, ಈಗಾಗಲೇ 25 ಘಟಕಗಳ ಅಧ್ಯಕ್ಷರ ಆಯ್ಕೆ ಪೂರ್ಣಗೊಂಡಿದೆ. ಚುನಾವಣಾ ಉಸ್ತುವಾರಿಯಾಗಿರುವ ಕೇಂದ್ರ ಸಚಿವ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಸದ್ಯದಲ್ಲೇ ರಾಜ್ಯಕ್ಕೆ ಬರಲಿದ್ದಾರೆ' ಎಂದರು.

ಜಿಲ್ಲಾ ಅಧ್ಯಕ್ಷರ ಆಯ್ಕೆಯಲ್ಲಿ ಪ್ರಬಲ ಜಾತಿಯವರಿಗೆ ಮಣೆ ಹಾಕಿದ ಕುರಿತು ಕೇಳಿದ ಪ್ರಶ್ನೆಗೆ, 'ಎಲ್ಲಾ ಸಮಾಜದ, ವರ್ಗದ ಜನರನ್ನು ಜೊತೆಗೆ ಕರೆದುಕೊಂಡು ಸಂಘಟನೆ ಕಟ್ಟಬೇಕಾಗುತ್ತದೆ. ಎರಡು ಮೂರು ಸಮಾಜ ನಂಬಿಕೊಂಡು ಪಕ್ಷ ಸಂಘಟನೆ ಮಾಡಲಿಕ್ಕಾಗುವುದಿಲ್ಲ' ಎಂದು ವಿಜಯೇಂದ್ರ ಪ್ರತಿಕ್ರಿಯಿಸಿದರು.



ಶಿಸ್ತಿನ ಪಕ್ಷದ ಅಧಃಪತನ: ಡಿವಿಎಸ್



ಕುಣಿಗಲ್: 'ಶಿಸ್ತಿನ ಪಕ್ಷ ಎಂದು ಕರೆಸಿಕೊಳ್ಳುವ ಬಿಜೆಪಿಯು ರಾಜ್ಯದಲ್ಲಿ ಅಧಃಪತನಕ್ಕೆ ಇಳಿದಿರುವುದು ದುರದೃಷ್ಟಕರ' ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ರಾಜ್ಯ ಬಿಜೆಪಿಯಲ್ಲಿನ ಎಲ್ಲ ವಿಚಾರಗಳನ್ನು ಕೇಂದ್ರಕ್ಕೆ ತಿಳಿಸುವ ಕೆಲಸ ಮಾಡಲಾಗಿದೆ. ಈ ವಿಷಯದಲ್ಲಿ ವರಿಷ್ಠರು ವಿಳಂಬ ಮಾಡುತ್ತಿದ್ದಾರೆ. ಗುಂಪುಗಳನ್ನು ಒಟ್ಟುಗೂಡಿಸಲು ಈವರೆಗೆ ಪ್ರಯತ್ನ ಮಾಡಿಲ್ಲ. ಅಶಿಸ್ತು ನಿಯಂತ್ರಿಸುವ ಕಡೆಗೆ ಗಮನಹರಿಸಿಲ್ಲ' ಎಂದರು.


'ನಾಲ್ಕು ಗೋಡೆಗಳ ಮಧ್ಯೆ ಇತ್ಯರ್ಥ ಆಗಬೇಕಾದ ವಿಚಾರ ಬಹಿರಂಗವಾಗಿ ಚರ್ಚೆಯಾಗುತ್ತಿದೆ. ಪ್ರತಿಯೊಬ್ಬ ನಾಯಕನೂ ಬಹಿರಂಗವಾಗಿ ಹೇಳಿಕೆ ನೀಡುವುದು, ಮಾಧ್ಯಮಗಳ ಮುಂದೆ ಹೋಗುವುದು ಸಾಮಾನ್ಯವಾಗಿದೆ. ಒಬ್ಬರಿಗೊಬ್ಬರು ಪರಸ್ಪರ ಬೈಯ್ದುಕೊಳ್ಳುವುದು ಬೇಸರದ ಸಂಗತಿ' ಎಂದರು.

ಸುದ್ದಿ 2 ನಿಮಿಷ

ಕೆಪಿಎಸ್ ಶಾಲೆಗಳಿಗೆ ಸೌಲಭ್ಯ ₹ 2,000 ಕೋಟಿ ಎಡಿಬಿ ಸಾಲ

ಶಿವಮೊಗ್ಗ: 'ರಾಜ್ಯದಲ್ಲಿ ಹೊಸದಾಗಿ ಆರಂಭಿಸಲಾಗುತ್ತಿರುವ 450 ಕರ್ನಾಟಕ ಪಬ್ಲಿಕ್ ಶಾಲೆ (ಕೆಪಿಎಸ್)ಗಳಲ್ಲಿ ಮೂಲ ಸೌಕರ್ಯ ಕಲ್ಪಿಸಲು ಏಷ್ಯಾ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ₹ 2,000 ಕೋಟಿ ದೀರ್ಘಾವಧಿ ಸಾಲ ನೀಡಲು ಮುಂದಾಗಿದೆ. ಇದರೊಂದಿಗೆ ರಾಜ್ಯ ಸರ್ಕಾರ ₹ 500 ಕೋಟಿ ಅನುದಾನ ನೀಡಲಿದೆ' ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಹೇಳಿದರು.

ಈ ಅನುದಾನದಲ್ಲಿ ಕೆಪಿಎಸ್ ಶಾಲೆಗಳಿಗೆ ನೂತನ ಕಟ್ಟಡ, ಮೈದಾನ ಸೇರಿದಂತೆ ಅಗತ್ಯ ಸೌಲಭ್ಯ ಕಲ್ಪಿಸಲು ₹ 6 ಕೋಟಿಯಿಂದ ₹ 8 ಕೋಟಿಯವರೆಗೆ ವ್ಯಯಿಸಲಾಗುವುದು ಎಂದು ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ಪಾಲಕರಿಂದ ಬೇಡಿಕೆ ಹೆಚ್ಚುತ್ತಿರುವ ಕಾರಣ ಮುಂಬರುವ ಶೈಕ್ಷಣಿಕ ವರ್ಷದಿಂದ ಎಲ್ಲ ಸರ್ಕಾರಿ ಶಾಲೆಗಳಲ್ಲೂ ಎಲ್‌ಕೆಜಿ– ಯುಕೆಜಿ ಆರಂಭಿಸಲು ನಿರ್ಧರಿಸಲಾಗಿದೆ. ಇಲ್ಲಿಯವರೆಗೆ ಆಯ್ದ ಶಾಲೆಗಳಲ್ಲಿ ಪ್ರಾಯೋಗಿಕವಾಗಿ ಈ ತರಗತಿಗಳು ನಡೆಯುತ್ತಿವೆ ಎಂದರು.

ಸರ್ಕಾರಿ ಪದವಿಪೂರ್ವ ಕಾಲೇಜುಗಳ 25,000 ವಿದ್ಯಾರ್ಥಿಗಳಿಗೆ ಕಳೆದ ವರ್ಷ ನೀಟ್, ಸಿಇಟಿ ತರಬೇತಿ ನೀಡಲಾಗಿತ್ತು. ಈ ವರ್ಷದಿಂದ ಯಾವುದೇ ಮಿತಿ ಇರುವುದಿಲ್ಲ. ಎಲ್ಲ ವಿದ್ಯಾರ್ಥಿಗಳಿಗೂ ತರಬೇತಿಯ ವ್ಯವಸ್ಥೆ ಮಾಡಲಾಗುವುದು ಎಂದು ಅವರು ಹೇಳಿದರು.

ಚೆಕ್ ಬೌನ್ಸ್ ಪ್ರಕರಣ: ಸ್ನೇಹಮಯಿ ಕೃಷ್ಣಗೆ ₹2.25 ಲಕ್ಷ ದಂಡ

ಮೈಸೂರು: ಚೆಕ್ ಬೌನ್ಸ್ ಪ್ರಕರಣದ ಆರೋಪಿ ಸ್ನೇಹಮಯಿ ಕೃಷ್ಣಗೆ ಇಲ್ಲಿನ ಮೂರನೇ ಹೆಚ್ಚುವರಿ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಲಯವು ₹2.25 ಲಕ್ಷ ದಂಡ ವಿಧಿಸಿ ಗುರುವಾರ ಆದೇಶಿಸಿದ್ದು, ಪಾವತಿಸುವಲ್ಲಿ ವಿಫಲವಾದರೆ ಒಂದು ವರ್ಷ ಜೈಲು ಶಿಕ್ಷೆ ವಿಧಿಸಿ ತೀರ್ಪು ಪ್ರಕಟಿಸಿದೆ.

ಕೃಷ್ಣ 2015ರಲ್ಲಿ ಲಲಿತಾದ್ರಿಪುರದ ಕುಮಾರ್ ಎಂಬವರಿಂದ ಸಾಲ ಪಡೆದು, ಪ್ರತಿಯಾಗಿ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್‌ನ ಚೆಕ್ ನೀಡಿದ್ದರು. ಕುಮಾರ್ ಅದನ್ನು ತಮ್ಮ ಬ್ಯಾಂಕ್ ಖಾತೆಗೆ ಹಾಕಿದಾಗ ಬೌನ್ಸ್ ಆಗಿತ್ತು. ನಂತರ ಅವರು ಕೃಷ್ಣ ವಿರುದ್ಧ ಪ್ರಕರಣ ದಾಖಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಲಯವು, ಆರೋಪ ಸಾಬೀತಾಗಿದ್ದರಿಂದ ಶಿಕ್ಷೆ ಪ್ರಕಟಿಸಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಕೃಷ್ಣ, 'ಪ್ರತಿವಾದಿಯು ನನಗೆ ದುಡ್ಡು ಕೊಡದೆ, ನನ್ನ ನಂಬಿಕೆ ದುರುಪಯೋಗಪಡಿಸಿಕೊಂಡು ನಾನು ನೀಡಿರುವ ಚೆಕ್ ಬೌನ್ಸ್ ಮಾಡಿ, ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದರು. ನಾನು ಮೇಲ್ಮನವಿ ಸಲ್ಲಿಸುವೆ, ಜಾಮೀನು ದೊರಕಿದೆ' ಎಂದರು.

ಅಕ್ರಮ: ದಿನೇಶ್ ರೂವಾರಿ

ಒಂದನೇ ಪುಟದಿಂದ...

2023ರ ಜನವರಿಯಲ್ಲಿ ರಿಯಲ್ ಎಸ್ಟೇಟ್ ಉದ್ಯಮಿ ಜಯರಾಮು ಅವರನ್ನು ನಿವೃತ್ತ ಪ್ರಾದೇಶಿಕ ಆಯುಕ್ತ ಜಿ.ಪಿ.ಪ್ರಕಾಶ್ ಎಂಬುವವರು ಸಂಪರ್ಕಿಸಿದ್ದರು. ಪ್ರಕಾಶ್ ಅವರು ಜಯರಾಮುಗೆ ಮುಡಾ ಆಯುಕ್ತರಾಗಿದ್ದ ದಿನೇಶ್ ಕುಮಾರ್ ಅವರನ್ನು ಭೇಟಿ ಮಾಡಿಸಿದ್ದರು. 'ನಾನು ಮುಡಾ ನಿವೇಶನಗಳನ್ನು ಹಂಚಿಕೆ ಮಾಡುತ್ತೇನೆ. ಅವುಗಳನ್ನು ಮಾರಾಟ ಮಾಡಿಕೊಡು ಎಂದು ದಿನೇಶ್ ಅವರೇ ಸೂಚಿಸಿದರು. ನಾನು ಅದಕ್ಕೆ ಒಪ್ಪಿಕೊಂಡೆ' ಎಂದು ಜಯರಾಮು ಅವರು ಇ.ಡಿ ಅಧಿಕಾರಿಗಳಿಗೆ ಹೇಳಿಕೆ ನೀಡಿದ್ದಾರೆ.

'ದೇವನೂರು ಬಡಾವಣೆ ನಿರ್ಮಾಣಕ್ಕಾಗಿ 1994ರಲ್ಲಿ ದೇವನೂರು ಮತ್ತು ಕೆಸರೆ ಗ್ರಾಮದ 108 ಎಕರೆ ಜಮೀನನ್ನು ಮುಡಾ ಸ್ವಾಧೀನಪಡಿಸಿಕೊಂಡಿತ್ತು. ಮಾಲೀಕರ ಪಟ್ಟಿಯಲ್ಲಿ ಇಲ್ಲದೇ ಇದ್ದ ಕ್ಯಾಥೆಡ್ರಲ್ ಪ್ಯಾರಿಶ್ ಸೊಸೈಟಿಯು ಜಮೀನು ತನ್ನದೆಂದು ವಾದಿಸಿತ್ತು. ಈ ಸೊಸೈಟಿಗೆ ಪರಿಹಾರ ನೀಡಲು ಸಾಧ್ಯವಿಲ್ಲ ಎಂದು ರಾಜ್ಯ ಸರ್ಕಾರವು 2013 ಮತ್ತು 2020ರಲ್ಲಿ ಹೈಕೋರ್ಟ್‌ಗೆ ತಿಳಿಸಿತ್ತು. ಅಕ್ರಮ ಎಸಗಲು ದಿನೇಶ್ ಈ ಪ್ರಕರಣ ಆಯ್ಕೆ ಮಾಡಿಕೊಂಡಿದ್ದರು' ಎಂದು ಇ.ಡಿ ವಿವರಿಸಿದೆ.

'ಈ 108 ಎಕರೆಯಲ್ಲಿ 2 ಎಕರೆ– 11 ಗುಂಟೆ ಜಮೀನಿಗೆ ಸಂಬಂಧಿಸಿದಂತೆ, ಕ್ಯಾಥೆಡ್ರಲ್ ಸೊಸೈಟಿ ಹೆಸರಿನಲ್ಲಿ ಇಬ್ಬರಿಗೆ ಒಟ್ಟು 40 ನಿವೇಶನಗಳನ್ನು ದಿನೇಶ್ ಕುಮಾರ್, ಕಾನೂನುಬಾಹಿರವಾಗಿ ಹಂಚಿಕೆ ಮಾಡಿದ್ದರು. ವಿಚಾರಣೆ ವೇಳೆ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ದೀಪಾ ಚೋಳನ್ ಸಹ ದಿನೇಶ್ ಅವರ ಈ ಅಕ್ರಮವನ್ನು ದೃಢಪಡಿಸಿದ್ದಾರೆ' ಎಂದಿದೆ.

'ಈ ನಿವೇಶನಗಳ ಮಾರಾಟ ಹೊಣೆಯನ್ನು ಜಯರಾಮುಗೆ ನೀಡಲಾಗಿತ್ತು. ಜಯರಾಮು ಗಿರಾಕಿಗಳನ್ನು ಹುಡುಕಿ, 27 ನಿವೇಶನಗಳನ್ನು ಮಾರಿದ್ದರು. ಮಾರಾಟದ ಮೊತ್ತ ₹16.83 ಕೋಟಿ ಪಾವತಿಸಿದ್ದರು. ₹8.66 ಕೋಟಿಯನ್ನು ಬ್ಯಾಂಕ್ ಮೂಲಕ, ₹6.6 ಕೋಟಿ ನಗದು, ₹60 ಲಕ್ಷ ಬ್ಯಾಂಕ್ ಠೇವಣಿ, ನಿವೇಶನದ ರೂಪದಲ್ಲಿ ದಿನೇಶ್ ಮತ್ತು ಪ್ರಕಾಶ್ ಅವರಿಗೆ ತಲುಪಿಸಲಾಗಿತ್ತು' ಎಂದು ಹೇಳಿದೆ.

'ಈ ವ್ಯವಹಾರ ಮುಗಿದ ನಂತರ ಮತ್ತೊಂದು ಬಡಾವಣೆಗೆ ಸಂಬಂಧಿಸಿದಂತೆ ದಿನೇಶ್ ಮತ್ತು ಜಯರಾಮು ಮಧ್ಯೆ ಒಪ್ಪಂದವಾಗಿತ್ತು. ಅದರಂತೆ 19 ನಿವೇಶನಗಳ ಮಾರಾಟ ಮಾತುಕತೆ ಅಂತಿಮವಾದ ನಂತರ, ನಿವೇಶನ ಹಂಚಿಕೆ ಮಾಡಿದ್ದರು. ಅವುಗಳ ಮಾರಾಟದ ಸಂಪೂರ್ಣ ಹಣ ದಿನೇಶ್ ಕುಟುಂಬದವರು ಮತ್ತು ಸಂಬಂಧಿಗಳಿಗೆ ಸಂದಾಯವಾಗಿದೆ' ಎಂದಿದೆ.

'ಈ ಸಂಬಂಧ ₹1.70 ಕೋಟಿಯನ್ನು ಸಾಲದ ರೂಪದಲ್ಲಿ ದಿನೇಶ್ ಅವರ ಸಂಬಂಧಿಗಳಾದ ಹೊಯ್ಸಳ ಮತ್ತು ಗಾಯತ್ರಿ ಎಂಬುವವರಿಗೆ ನೀಡಲಾಗಿದೆ. ಎರಡು ನಿವೇಶನಗಳು ಜಯರಾಮು ಹೆಸರಿನಲ್ಲೇ ಇವೆ. ಅವರ ಕಂಪನಿ ಹೆಸರಿನಲ್ಲಿ ಒಂದು ಎಂ.ಜಿ ಹೆಕ್ಟರ್ ಮತ್ತು ಟೊಯೊಟಾ ಇನ್ನೋವ ಹೈಕ್ರಾಸ್ ವಾಹನಗಳನ್ನು ಒಟ್ಟು ₹56 ಲಕ್ಷ ಕೊಟ್ಟು ಖರೀದಿಸಿ, ದಿನೇಶ್ ಬಳಸುತ್ತಿದ್ದಾರೆ' ಎಂದು ವಿವರಿಸಿದೆ.

'ಇ.ಡಿಯದ್ದು ತನಿಖಾ ವರದಿಯಲ್ಲ; ಜಪ್ತಿ ಮಾಹಿತಿಯಷ್ಟೇ'

ಪತ್ನಿಗೆ ಇ.ಡಿ ನೋಟಿಸ್ ಬಂದಿದ್ದರಿಂದ ತಡೆಯಾಜ್ಞೆ ತರಲಾಗಿದೆ; ಸುತ್ತೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

ಪ್ರಜಾವಾಣಿ ವಾರ್ತೆ

ಸುತ್ತೂರು (ಮೈಸೂರು ಜಿಲ್ಲೆ): 'ಮುಡಾ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ಬಿಡುಗಡೆ ಮಾಡಿರುವುದು ತನಿಖಾ ವರದಿಯಲ್ಲ; ಜಪ್ತಿ ಮಾಹಿತಿಯ ವರದಿಯಷ್ಟೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಲ್ಲಿ ಶುಕ್ರವಾರ ಪತ್ರಕರ್ತರೊಂದಿಗೆ ಮಾತನಾಡಿ, 'ಈ ಪ್ರಕರಣದಲ್ಲಿ ಹಣ ಅಕ್ರಮ ವರ್ಗಾವಣೆ ಪ್ರಶ್ನೆ ಎಲ್ಲಿ ಬರುತ್ತದೆ? ಮುಡಾ ಮಾಜಿ ಆಯುಕ್ತ ಡಿ.ಬಿ.ನಟೇಶ್‌ಗೆ ಇ.ಡಿ ಕೊಟ್ಟಿದ್ದ ನೋಟಿಸ್‌ಗೆ ಹೈಕೋರ್ಟ್ ತಡೆಯಾಜ್ಞೆ ನೀಡಿದೆ. ಅದರರ್ಥ ಅದು ಕಾನೂನು ಪ್ರಕಾರ ನಡೆದಿಲ್ಲವೆಂದೇ ತಾನೆ' ಎಂದು ಕೇಳಿದರು.

'ಇ.ಡಿಯ ತನಿಖೆ ರಾಜಕೀಯ ಪ್ರೇರಿತವೆಂಬುದು ಎಲ್ಲರಿಗೂ ಗೊತ್ತಿದೆ. ನನ್ನ ಪತ್ನಿಗೆ ಇ.ಡಿ ನೋಟಿಸ್ ಬಂದಿದ್ದರಿಂದ ತಡೆಯಾಜ್ಞೆ ತರಲಾಗಿದೆ. ನನ್ನ ಬಗ್ಗೆ ಮಾತನಾಡಲು ಬಿಜೆಪಿಯವರಿಗೆ ಏನೂ ಸಿಗದೆ ಇದನ್ನಿಟ್ಟುಕೊಂಡು ಮಸಿ ಬಳಿಯಲೆತ್ನಿಸುತ್ತಿದ್ದಾರೆ. ನಾನು, ನಮ್ಮ ಕುಟುಂಬದವರು ತಪ್ಪು ಮಾಡಿಲ್ಲ' ಎಂದರು.

'ಎಷ್ಟು ಬಾರಿ ಸ್ಪಷ್ಟಪಡಿಸಲಿ': ಮುಖ್ಯಮಂತ್ರಿ ಸ್ಥಾನ ಬದಲಾವಣೆ ಬಗ್ಗೆ ಪ್ರಸ್ತಾಪಿಸಿದ್ದಕ್ಕೆ ಗರಂ ಆದ ಅವರು, 'ಮತ್ತೆಮತ್ತೆ ಅದನ್ನೇ ಕೇಳಬೇಡಿ. ಹೈಕಮಾಂಡ್ ತೀರ್ಮಾನಿಸಿದಂತೆ ಆಗುತ್ತದೆ. ಎಷ್ಟು ಬಾರಿ ಸ್ಪಷ್ಟೀಕರಣ ಕೊಡಲಿ? ಇಬ್ಬರು, ಮೂವರು ಸಚಿವರು ಕುಳಿತು ಮಾತನಾಡಿದ ತಕ್ಷಣ ಇದೇ ವಿಚಾರವೆಂದು ಯಾಕೆ ಗ್ರಹಿಸುತ್ತೀರಾ? ಊಹಾ ಪತ್ರಿಕೋದ್ಯಮ ಬಿಡಿ. ಮೂರ್ನಾಲ್ಕು ಜನ ಸೇರಿದಾಗ ರಾಜಕೀಯ ಚರ್ಚಿಸುತ್ತೇವೆ. ಸಭೆ ನಡೆಸುವುದರಲ್ಲಿ ತಪ್ಪಿಲ್ಲ. ನಿಮ್ಮ ಗ್ರಹಿಕೆ ಸರಿ ಇಲ್ಲ ಅಷ್ಟೇ' ಎಂದರು.

ಕೇಂದ್ರ ಬಜೆಟ್– ನಿರೀಕ್ಷೆಯಿಲ್ಲ: 'ಕೇಂದ್ರ ಬಜೆಟ್‌ನಿಂದ ಏನನ್ನೂ ನಿರೀಕ್ಷಿಸಲ್ಲ. ಭದ್ರಾ ಮೇಲ್ದಂಡೆ ಯೋಜನೆಗೆ ಒಂದು ರೂಪಾಯಿ ಕೊಟ್ಟಿಲ್ಲ. ನಾಲ್ಕು ಲಕ್ಷ ಕೋಟಿ ರೂಪಾಯಿ ತೆರಿಗೆ ಕೊಡುತ್ತೇವೆ. ಕೇವಲ ₹68 ಸಾವಿರ ಕೋಟಿ ತೆರಿಗೆಯನ್ನು ನಮಗೆ ಕೊಡುತ್ತಾರೆ. ತೆರಿಗೆ ಹಂಚಿಕೆಯ ಪಾಲಿನಲ್ಲಿಯೂ ಅನ್ಯಾಯವಾಗುತ್ತಿದೆ. ರಾಜ್ಯಕ್ಕೆ ನಿರಂತರವಾಗಿ ಅನ್ಯಾಯ ಆಗುತ್ತಿದೆ. ಈ ಬಾರಿಯೂ ಅನ್ಯಾಯ ಮಾಡುತ್ತಾರೆ' ಎಂದರು.

ಮುಡಾದಲ್ಲಿ ನನ್ನ ಪಾತ್ರವಿಲ್ಲ: ಎಚ್‌ಸಿಎಂ

ಮೈಸೂರು: 'ನವೀನ್ ಬೋಸ್ ನನ್ನ ಅಣ್ಣನ ಮಗ. ಆತ ಮುಡಾದಿಂದ ನಿವೇಶನ ತೆಗೆದುಕೊಂಡಿರುವುದು ನನಗೆ ಗೊತ್ತಿಲ್ಲ. ನಾನು ಹಾಗೂ ನನ್ನ ಅಣ್ಣನ ಕುಟುಂಬ ಪ್ರತ್ಯೇಕವಾಗಿದ್ದೇವೆ' ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ತಿಳಿಸಿದರು.



ಮಹದೇವಪ್ಪ

ಜಾರಿ ನಿರ್ದೇಶನಾಲಯ (ಇ.ಡಿ) ವರದಿಯಲ್ಲಿ ತಮ್ಮ ಹೆಸರು ಉಲ್ಲೇಖವಾಗಿರುವ ಕುರಿತು ಜಿಲ್ಲೆಯ ಸುತ್ತೂರಿನಲ್ಲಿ ಶುಕ್ರವಾರ ಪ್ರತಿಕ್ರಿಯಿಸಿದ ಅವರು, 'ಮುಡಾ ವಿಚಾರದಲ್ಲಿ ನನ್ನ ಯಾವ ಪಾತ್ರವೂ ಇಲ್ಲ. ಅವರು ಕೊಟ್ಟಿದ್ದಾರೆ ಇವನು (ನವೀನ್) ತೆಗೆದುಕೊಂಡಿದ್ದಾನೆ. ಅದರ ಬಗ್ಗೆ ನನಗೆ ಗೊತ್ತಿಲ್ಲ' ಎಂದರು.

ಚರ್ಚೆಗೆ ಗ್ರಾಸವಾದ ದಲಿತ ಸಚಿವರ ಭೇಟಿ

ಬೆಂಗಳೂರು: ಗೃಹ ಸಚಿವ ಜಿ. ಪರಮೇಶ್ವರ ಅವರ ವಿಧಾನಸೌಧದ ಕೊಠಡಿಯಲ್ಲಿ ದಲಿತ ಸಮುದಾಯದ ನಾಲ್ವರು ಸಚಿವರು ಗುರುವಾರ ಮಾತುಕತೆ ನಡೆಸಿದ್ದು, ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

ಸಚಿವರಾದ ಕೆ.ಎನ್. ರಾಜಣ್ಣ, ಸತೀಶ ಜಾರಕಿಹೊಳಿ, ಎಚ್.ಸಿ. ಮಹದೇವಪ್ಪ ಅವರು ಜಿ. ಪರಮೇಶ್ವರ ಅವರ ಕೊಠಡಿಯಲ್ಲಿ ಕೆಲ ಸಮಯ ಕುಳಿತಿದ್ದರು. ಆಗ ವಾಲ್ಮೀಕಿ ಸಮುದಾಯದ ಸ್ವಾಮೀಜಿ ಸಹ ಇದ್ದರು.

'ದಲಿತ ಸಮುದಾಯದ ಸಚಿವರು ಮತ್ತೆ ಸಭೆಗಳನ್ನು ಮುಂದುವರಿಸಿದ್ದಾರೆ. 'ಮುಡಾ' ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಿಲುಕಿದ್ದು, ಒಂದು ವೇಳೆ ಮುಖ್ಯಮಂತ್ರಿ ಬದಲಾವಣೆಯಾದರೆ ಮುಂದೆ ದಲಿತರಿಗೇ ಅವಕಾಶ ಸಿಗಬೇಕು' ಎನ್ನುವ ಕುರಿತು ಚರ್ಚೆ ನಡೆದಿದೆ ಎಂಬ ಸುದ್ದಿ ಹಬ್ಬಿತ್ತು.

ಈ ಕುರಿತು ಸುದ್ದಿಗಾರರ ಜತೆ ಮಾತನಾಡಿದ ಜಿ. ಪರಮೇಶ್ವರ ಮತ್ತು ಸತೀಶ ಜಾರಕಿಹೊಳಿ, 'ಸ್ವಾಮೀಜಿಯವರು ವಾಲ್ಮೀಕಿ ಜಾತ್ರೆಗೆ ಆಹ್ವಾನ ನೀಡಲು ಬಂದಿದ್ದರು. ಗೃಹ ಸಚಿವರ ಕೊಠಡಿಯಲ್ಲಿ ಇರುವ ವಿಷಯ ತಿಳಿದು ಎಲ್ಲರೂ ಅಲ್ಲಿ ಸೇರಿದೆವು. ರಾಜಕೀಯ ಚರ್ಚೆ ನಡೆದಿಲ್ಲ' ಎಂದು ಸ್ಪಷ್ಟಪಡಿಸಿದರು.

ಮೈಸೂರಿನಲ್ಲಿ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ಊಟಕ್ಕೆ, ಮಾತನಾಡಲು ಒಂದೆಡೆ ಸೇರುವುದು ಪಕ್ಷ ವಿರೋಧಿ ಚಟುವಟಿಕೆಯಲ್ಲ. ಅವರು ಯಾವ ಕಾರಣಕ್ಕೆ ಭೇಟಿ ಮಾಡಿದ್ದರು ಎಂಬ ಮಾಹಿತಿ ಇಲ್ಲ' ಎಂದರು.

ನಿಗಮ, ಮಂಡಳಿಗೆ ಸದಸ್ಯರ ಪಟ್ಟಿ ಸಿದ್ಧ

ಬೆಂಗಳೂರು: 'ವಿವಿಧ ನಿಗಮ, ಮಂಡಳಿಗೆ ನಾಮನಿರ್ದೇಶನ ಮಾಡಬೇಕಿರುವ ಸದಸ್ಯರ ಪಟ್ಟಿಯನ್ನು ಅಂತಿಮಗೊಳಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ನೀಡಲಾಗಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ಪಕ್ಷದ ಕಾರ್ಯಕರ್ತರ ಪಟ್ಟಿ ಪೂರ್ಣ ಆಗಬೇಕಿದೆ. ಕೆಪಿಸಿಸಿ ಅಧ್ಯಕ್ಷರು ಪಟ್ಟಿಯನ್ನು ಸಿದ್ಧಪಡಿಸಲಿದ್ದಾರೆ. ವಿಧಾನ ಪರಿಷತ್ ಸದಸ್ಯರ ನಾಮನಿರ್ದೇಶನ ಮಾಡಲು ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರಿಗೇ ಅಧಿಕಾರ ನೀಡಲಾಗಿದೆ. ಹೈಕಮಾಂಡ್ ಜತೆ ಚರ್ಚಿಸಿ ಪಟ್ಟಿ ಅಂತಿಮಗೊಳಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಲೈಂಗಿಕ ದೌರ್ಜನ್ಯ ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಚನ್ನಗಿರಿ (ದಾವಣಗೆರೆ ಜಿಲ್ಲೆ): ಬಾಲಕಿಯೂ ಸೇರಿ ಹಲವು ಮಹಿಳೆಯರ ಮೇಲೆ ಅತ್ಯಾಚಾರ ಎಸಗಿ, ಆ ದೃಶ್ಯ ಚಿತ್ರೀಕರಿಸಿ ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ ಹರಿಬಿಟ್ಟ ಪ್ರಕರಣದಲ್ಲಿ ಪೊಲೀಸರು 56 ವರ್ಷ ವಯಸ್ಸಿನ ಆರೋಪಿಯೊಬ್ಬನನ್ನು ಇಲ್ಲಿ ಗುರುವಾರ ತಡರಾತ್ರಿ ಬಂಧಿಸಿದ್ದಾರೆ.

ಅಮ್ಜದ್ ಬಂಧಿತ ಆರೋಪಿ. ಈತ ದಾವಣಗೆರೆಯ ದೇವರಾಜ್ ಅರಸು ಬಡಾವಣೆಯ 'ಸಿ' ಬ್ಲಾಕ್‌ನ ನಿವಾಸಿ, ಎಸ್.ಎಂ. ಶಫಿ ಅವರ ಪುತ್ರ. ಚನ್ನಗಿರಿಯಲ್ಲಿ ಬಾಡಿಗೆ ಮನೆಯೊಂದರಲ್ಲಿ ನೆಲಸಿದ್ದ. ಚನ್ನಗಿರಿ ಪಟ್ಟಣದಲ್ಲಿ ಮೆಡಿಕಲ್ ಶಾಪ್ ಹೊಂದಿದ್ದು, ಅಂಗಡಿಗೆ ಬರುವ ಹೆಣ್ಣುಮಕ್ಕಳನ್ನು ಪುಸಲಾಯಿಸಿ ಬಲೆಗೆ ಬೀಳಿಸಿಕೊಂಡು, ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ಅಲ್ಲದೇ, ವಿಡಿಯೊ ಚಿತ್ರೀಕರಿಸಿಕೊಂಡು ಮತ್ತೆಮತ್ತೆ ನೋಡಿ ವಿಕೃತ ಸಂತೋಷ ಅನುಭವಿಸುತ್ತಿದ್ದ. ಈ ವಿಡಿಯೊಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಡುವುದಾಗಿ ಬೆದರಿಸಿ ಮಹಿಳೆಯರನ್ನು ಲೈಂಗಿಕ ಕ್ರಿಯೆಗೆ ಬಳಸಿಕೊಂಡಿರುವ ಸಾಧ್ಯತೆ ಇದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇಲ್ಲಿನ ಸಿಇಎನ್ ಪೊಲೀಸ್ ಠಾಣೆಯಲ್ಲಿ ಆರೋಪಿ ವಿರುದ್ಧ ಲೈಂಗಿಕ ದೌರ್ಜನ್ಯ ಹಾಗೂ ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಾಗಿದೆ.

ಮಾರಣಾಂತಿಕ ರೋಗ ದಯಾಮರಣಕ್ಕೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರಣಾಂತಿಕ ರೋಗದಿಂದ ಬಳಲುತ್ತಿರುವವರಿಗೆ ಅವರ ಇಚ್ಛೆಯಂತೆ ದಯಾ ಮರಣದ ಅವಕಾಶ ಒದಗಿಸುವ ಬಗ್ಗೆ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ಸುಪ್ರೀಂ ಕೋರ್ಟ್ ನಿರ್ದೇಶನದ ಅನ್ವಯ ಇಲಾಖೆಯು ಈ ಕ್ರಮ ಕೈಗೊಂಡಿದ್ದು, ಮರಣದ ಹಕ್ಕನ್ನು ನೀಡಿದೆ. 'ಸಂವಿಧಾನದ 21ನೇ ವಿಧಿಯು ಘನತೆಯಿಂದ ಬದುಕುವ ಹಾಗೂ ಸಾಯುವ ಹಕ್ಕನ್ನು ಒದಗಿಸಿದೆ. ಆದ್ದರಿಂದ ರೋಗಿಯು ಚಿಕಿತ್ಸೆಯಿಂದ ಚೇತರಿಸಿಕೊಳ್ಳುವ ಭರವಸೆ ಇಲ್ಲದಿದ್ದರೆ, ವೈದ್ಯಕೀಯ ಚಿಕಿತ್ಸೆಯನ್ನು ನಿಲ್ಲಿಸಬಹುದು ಎಂದು ಈ ಹಿಂದೆ ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ಅದರಂತೆ ದಯಾ ಮರಣ ಹೊಂದುವ ಹಕ್ಕನ್ನು ನೀಡಬಹುದಾಗಿದೆ' ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಈ ಹಕ್ಕನ್ನು ನೀಡುವಾಗ ಸುಪ್ರೀಂ ಕೋರ್ಟ್ ನಿಗದಿಪಡಿಸಿದ ಕಾರ್ಯವಿಧಾನ ಅನುಸರಿಸಬೇಕಾಗುತ್ತದೆ. ಚಿಕಿತ್ಸೆ ನೀಡುವ ವೈದ್ಯರ ಅನುಮೋದನೆ ಪಡೆಯಬೇಕಾಗುತ್ತದೆ. ರೋಗಿಯು ಚಿಕಿತ್ಸೆ ಪಡೆಯುತ್ತಿರುವ ಆಸ್ಪತ್ರೆಯಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ವೈದ್ಯಕೀಯ ಮಂಡಳಿಗಳನ್ನು ಸಹ ಸ್ಥಾಪಿಸಬೇಕಾಗುತ್ತದೆ. ಇದರಲ್ಲಿ ತಲಾ ಮೂವರು ನೋಂದಾಯಿತ ವೈದ್ಯರು ಇರಲಿದ್ದಾರೆ. ಈ ವೈದ್ಯಕೀಯ ಮಂಡಳಿಗಳು ದಯಾ ಮರಣಕ್ಕೆ ಅವಕಾಶ ನೀಡುವ ಬಗ್ಗೆ ನಿರ್ಧಾರ ತೆಗೆದುಕೊಳ್ಳುತ್ತವೆ ಎನ್ನಲಾಗಿದೆ.

ಈ ಪ್ರಕ್ರಿಯೆಗೆ ರೋಗಿಯ ಸಹಾಯಕರ ಒಪ್ಪಿಗೆಯೂ ಬೇಕಾಗುತ್ತದೆ. ಮಂಡಳಿಗಳ ನಿರ್ಧಾರದ ಪ್ರತಿಯನ್ನು ಜಾರಿಗೊಳಿಸುವ ಮೊದಲು, ಪ್ರಥಮ ದರ್ಜೆಯ ನ್ಯಾಯಾಂಗ ಮ್ಯಾಜಿಸ್ಟ್ರೇಟ್‌ಗೆ (ಜೆಎಂಎಫ್‌ಸಿ) ಸಲ್ಲಿಸಬೇಕು. ಜೆಎಂಎಫ್‌ಸಿ ಪ್ರತಿಗಳನ್ನು ದಾಖಲಾತಿಗಾಗಿ ಹೈಕೋರ್ಟ್‌ನ ರಿಜಿಸ್ಟ್ರಾರ್‌ಗೆ ಕಳುಹಿಸಲಾಗುತ್ತದೆ. 'ಮರಣ ಇಚ್ಛೆಯ ಉಯಿಲು' (ಲಿವಿಂಗ್ ವಿಲ್) ವೈದ್ಯಕೀಯ ಚಿಕಿತ್ಸೆಯ ಬಗ್ಗೆ ತಮ್ಮ ಇಚ್ಛೆಯನ್ನು ದಾಖಲಿಸಬಹುದಾದ ದಾಖಲೆ ಆಗಿದೆ ಎಂದು ತಿಳಿಸಲಾಗಿದೆ.

ಈ ಪ್ರಕ್ರಿಯೆಯಲ್ಲಿ ರೋಗಿಯು ತಮ್ಮ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಕಳೆದುಕೊಂಡರೆ, ಅವರ ಪರವಾಗಿ ಕನಿಷ್ಠ ಇಬ್ಬರನ್ನು ನಾಮನಿರ್ದೇಶನ ಮಾಡಬೇಕು ಎಂದು ಉಲ್ಲೇಖಿಸಲಾಗಿದೆ.

ಜೈಪುರ ಸಾಹಿತ್ಯ ಉತ್ಸವ: ಚೀನಾದ ಪುನರುತ್ಥಾನದ ಪ್ರಸ್ತಾಪ; ಪ್ಯಾಲೆಸ್ಟೀನ್ ಬಗ್ಗೆ ಕನಿಕರ

ಸಾಮ್ರಾಜ್ಯಶಾಹಿತ್ವ: ಅನುಕಂಪದ ಸ್ಪರ್ಶ

• ವಿಕ್ರಂ ಕಾಂತಿಕೆರೆ

ಜೈಪುರ: ಸಾಮ್ರಾಜ್ಯಶಾಹಿತ್ವ ಮತ್ತು ಅಧಿಕಾರ ವಿಸ್ತರಣೆಯ ದಾಹಕ್ಕೆ ನಲುಗಿದ 'ಕಾಲನಿ'ಗಳ ಮತ್ತು ಸಂಕಷ್ಟಕ್ಕೆ ಒಳಗಾದ ಜನರ ಮೇಲಿನ ಕನಿಕರದ ಮಾತುಗಳು ಜೈಪುರ ಸಾಹಿತ್ಯ ಉತ್ಸವದ ಎರಡನೇ ದಿನದ ಗೋಷ್ಠಿಗಳನ್ನು ಆರ್ದ್ರಗೊಳಿಸಿದವು.

'ಸಾಮ್ರಾಜ್ಯಶಾಹಿತ್ವದ ಗಾಯಗಳು' ಎಂಬ ವಿಷಯದ ಕುರಿತ ಸಂವಾದದಲ್ಲಿ ಅಧಿಕಾರ ವಿಸ್ತರಣೆಗಾಗಿ ಪಾಶ್ಚಿಮಾತ್ಯ ದೇಶಗಳು ನಡೆಸಿದ ಕೃತ್ಯಗಳು, ಮುಖ್ಯವಾಹಿನಿಗೆ ಬಂದ ಚೀನಾ ಮತ್ತು ಐರ್ಲೆಂಡ್, ಇರಾನ್, ಟರ್ಕಿ, ಈಜಿಪ್ಟ್‌ನಲ್ಲಿ ಆದ ಪರಿಣಾಮಗಳ ಕುರಿತು ಚರ್ಚೆ ಆಯಿತು. 'ಗಾಜಾದ ಆಚೆಗಿನ ವಿಶ್ವ' ಎಂಬ ಗೋಷ್ಠಿ ಪ್ಯಾಲೆಸ್ಟಿನ್ ಜನರ ನೋವಿಗೆ ಮಿಡಿಯಿತು.

ಅನಿತಾ ಆನಂದ್ ಜೊತೆ ನಡೆದ ಸಂವಾದದಲ್ಲಿ 'ಫ್ರಮ್ ದ ರುಯಿನ್ಸ್ ಆಫ್ ಎಂಪಾಯರ್' ಕಾದಂಬರಿಯ ಲೇಖಕ ಪಂಕಜ್ ಮಿಶ್ರಾ ಅವರು 'ಪಾಶ್ಚಾತ್ಯ ದೇಶಗಳನ್ನು ಆಧುನಿಕ ಜಗತ್ತಿನ ವಿನ್ಯಾಸಕಾರರು ಎಂದು ಹೇಳಲಾಗುತ್ತಿದೆ. ಆದರೆ ಅದರ ಹಿಂದೆ ಎಷ್ಟೊಂದು ಕ್ರೌರ್ಯ ಮತ್ತು ಜನರ ಕಣ್ಣೀರು ಇದೆ ಎಂಬುದನ್ನು ಮರೆಯಬಾರದು' ಎಂದರು.

ಸಾಮ್ರಾಜ್ಯಶಾಹಿತ್ವ ಎಂದರೆ ಹಿಂಸೆ ಅಲ್ಲದೆ ಬೇರೇನೂ ಅಲ್ಲ ಎಂದು ಇತಿಹಾಸ ಪ್ರಾಧ್ಯಾಪಕಿ ಜೇನ್ ಒಮಾಯರ್ ಹೇಳಿದರು.

ಗಾಜಾದ ಆಚೆಗಿನ ವಿಶ್ವ' ಎಂಬ ಕಾದಂಬರಿಯನ್ನು ಆಧರಿಸಿ ಲಿಂಡ್ಸಿ ಹಿಲ್ಸಮ್ ಜೊತೆಗಿನ ಸಂವಾದದಲ್ಲಿ ಪಂಕಜ್ ಮಿಶ್ರಾ ಮಾತನಾಡಿ ಗಾಜಾದ ಮೇಲೆ ನಡೆಯುತ್ತಿರುವ ಕ್ರೌರ್ಯವು ಪ್ರಪಂಚದ ಇತರ ಕಡೆಗಳಲ್ಲಿ ನಡೆಯುತ್ತಿರುವ ಹಿಂಸೆಗಿಂತ ಭಿನ್ನ ಎಂದರು.

ಗಾಜಾ ಪ್ರದೇಶ ಪ್ಯಾಲೆಸ್ಟೀನಿಯರಿಗೆ ಮನೆ ಇದ್ದಂತೆ. ಆದ್ದರಿಂದ ಅಲ್ಲಿಂದ ಹೋಗಿ ಎಂದು ಒತ್ತಾಯಿಸುವುದು ವಿಷಾದದ ವಿಷಯ ಎಂದು ಕಾದಂಬರಿಕಾರ ನವತೇಜ್ ಸರ್ಣ ಹೇಳಿದರು.


ಯುದ್ಧಪೀಡಿತ ಪ್ರದೇಶದಲ್ಲಿ ವರದಿ ಮಾಡಿರುವ ಪತ್ರಕರ್ತೆ ಲಿನ್ಸಿ ಹಿಲ್ಸಮ್, ಇಸ್ರೇಲ್ ದಾಳಿಯಿಂದ 159 ಪ್ಯಾಲೆಸ್ಟೀನ್ ಪತ್ರಕರ್ತರು ಸಾವಿಗೀಡಾಗಿದ್ದಾರೆ ಎಂದರು.



'ಸಾಮ್ರಾಜ್ಯಶಾಹಿತ್ವದ ಗಾಯಗಳು' ಎಂಬ ವಿಷಯದ ಕುರಿತ ಸಂವಾದದಲ್ಲಿ ಸ್ಟೀಫನ್ ಪ್ಲಾಟ್, ಕ್ರಿಸ್ಟೊಫರ್ ಡಿ ಬೆಲೀಗ್, ಪಂಕಜ್ ಮಿಶ್ರಾ, ಅನಿತಾ ಆನಂದ್ ಮತ್ತು ಜೇನ್ ಒಮಾಯರ್ ಪಾಲ್ಗೊಂಡಿದ್ದರು

'ಆಹಾರ ಅಸ್ಪೃಶ್ಯತೆ'ಗೆ ಕೊರಗಬೇಡಿ; ಶಾಹು ಪಟೋಲೆ

ಜಾತೀಯತೆಯ ಜೊತೆಯಲ್ಲಿ ಬೆಳೆದು ಬಂದಿರುವ 'ಆಹಾರ ಅಸ್ಪೃಶ್ಯತೆ'ಗೆ ಕೊರಗುವುದು ಸರಿಯಲ್ಲ. ತಲೆತಲಾಂತರದಿಂದ ಸೇವಿಸುತ್ತ ಬಂದ ಆಹಾರ ಆಯಾ ಸಮುದಾಯದವರನ್ನು ಗಟ್ಟಿಯಾಗಿ ಉಳಿಸಿದೆ. ಆದ್ದರಿಂದ ಕೀಳು ಭಾವದಿಂದ ಆಧುನಿಕ ಶೈಲಿಯ ಆಹಾರಕ್ಕೆ ಮುಗಿಬೀಳುವುದು ಬೇಡ ಎಂದು 'ರೆಸಿಪೀಸ್ ಆಫ್ ದಲಿತ್ ಕಿಚನ್' ಪುಸ್ತಕದ ಲೇಖಕ, ಮರಾಠವಾಡ ಪ್ರದೇಶದ ಶಾಹು ಪಟೋಲೆ ಹೇಳಿದರು.



ಪಟೋಲೆ

ದಲಿತರ ಅಡುಗೆ ಮನೆಯ ಖಾದ್ಯಗಳು ಎಂಬ ವಿಷಯದ ಕುರಿತು ಆಹಾರ ವೈವಿಧ್ಯದ ತಜ್ಞ ಪುಷ್ಪೇಶ್ ಪಂತ್ ಅವರೊಂದಿಗೆ ನಡೆಸಿದ ಸಂವಾದದಲ್ಲಿ 'ಆಹಾರದಲ್ಲಿ ಅಡಗಿರುವ ಜಾತೀಯತೆಗೆ ಬ್ರಾಹ್ಮಣರನ್ನು ದೂರಬಾರದು. ನನ್ನ ಗ್ರಾಮದಲ್ಲಿ ಬ್ರಾಹ್ಮಣರೇ ಇಲ್ಲ. ಆದರೂ ಜಾತೀಯತೆ ಇದೆ. ಇರುವ ಸಮುದಾಯಗಳನ್ನೇ ಮೇಲು–ಕೀಳು ಎಂದು ವಿಂಗಡಿಸಿ ಅತ್ಯಂತ ಕೀಳು ಎಂದು ಪರಿಗಣಿಸಿದವರನ್ನು ಇತರ ಮೂರು 'ಕೀಳು' ಸಮುದಾಯದವರು ಹೀನಾಯವಾಗಿ ನಡೆಸಿಕೊಳ್ಳುತ್ತಾರೆ' ಎಂದರು.

'ಮುಸ್ಲಿಮರು ಭಾರತಕ್ಕೆ ತಡವಾಗಿ ಬಂದವರು. ಆದ್ದರಿಂದ ಅವರ ಆಹಾರ ಪದ್ಧತಿಗೂ ಸ್ಥಳೀಯರ ಆಹಾರಕ್ಕೂ ತಾಳೆ ಹಾಕುವುದು ಸರಿಯಲ್ಲ. ಬೀಫ್ ತಿನ್ನುವುದನ್ನು ನಾವು ಮುಸ್ಲಿಮರಿಂದ ಕಲಿತದ್ದಲ್ಲ. ಅದು ನಮ್ಮ ಪರಂಪರಾಗತ ಆಹಾರ' ಎಂದು ಶಾಹು ಹೇಳಿದರು.

‘ಲೋಕಾ’ ದಾಳಿ: ₹18 ಕೋಟಿ ಆಸ್ತಿ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಗಳಿಸಿದ ಆರೋಪದಲ್ಲಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳ ಮನೆಗಳ ಮೇಲೆ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು, ಒಟ್ಟು ₹18.45 ಕೋಟಿ ಮೌಲ್ಯದ ಅಕ್ರಮ ಆಸ್ತಿ ಪತ್ತೆ ಮಾಡಿದ್ದಾರೆ.

ಬೆಂಗಳೂರು, ಬೆಳಗಾವಿ, ಬಾಗಲಕೋಟೆ, ಚಿತ್ರದುರ್ಗ, ರಾಯಚೂರು ಮತ್ತು ಚಿತ್ರದುರ್ಗದ ಒಟ್ಟು 27 ಕಡೆ ಶುಕ್ರವಾರ ಬೆಳಿಗ್ಗೆಯೇ ಏಕಕಾಲದಲ್ಲಿ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದರು. ಅಧಿಕಾರಿಗಳ ಮನೆಗಳನ್ನು ಜಾಲಾಡಿದ ಪೊಲೀಸರು, ಕೋಟ್ಯಂತರ ಮೌಲ್ಯದ ಸ್ಥಿರಾಸ್ತಿ ಮತ್ತು ಚಿನ್ನಾಭರಣ ಪತ್ತೆ ಮಾಡಿದರು.

ಬೆಂಗಳೂರಿನ ಬಿಬಿಎಂಪಿಯ ಹೆಬ್ಬಾಳ ಉಪವಿಭಾಗದ ಎಂಜಿನಿಯರ್ ವಿಭಾಗದಲ್ಲಿ ಎಇ ಆಗಿರುವ ಮಾಧವ್ ರಾವ್ ಅವರಿಗೆ ಸೇರಿದ ಐದು ಸ್ಥಳಗಳಲ್ಲಿ ದಾಳಿ ನಡೆಸಿದ ಅಧಿಕಾರಿಗಳು, ₹8.57 ಕೋಟಿ ಮೌಲ್ಯದ ಅಕ್ರಮ ಆಸ್ತಿ ಪತ್ತೆ ಮಾಡಿದ್ದಾರೆ. ಅವರು ₹7.52 ಕೋಟಿ ಮೌಲ್ಯದ 48 ಎಕರೆ 27 ಗುಂಟೆ ಕೃಷಿ ಜಮೀನು ಹೊಂದಿದ್ದಾರೆ ಎಂದು ಲೋಕಾಯುಕ್ತದ ಪ್ರಕಟಣೆ ತಿಳಿಸಿದೆ.

ಒಟ್ಟು ಅಕ್ರಮ ಆಸ್ತಿಯಲ್ಲಿ ಮಾಧವ್ ಅವರ ಆಸ್ತಿಯೇ ಸುಮಾರು ಅರ್ಧ ದಷ್ಟಾ ಗುತ್ತದೆ. ಎಲ್ಲ ಪ್ರಕರಣ ಗಳಲ್ಲಿ ತನಿಖೆ ಮುಂದುವರೆದಿದೆ ಎಂದು ಲೋಕಾಯುಕ್ತ ಪೊಲೀಸರು ಮಾಹಿತಿ ನೀಡಿದರು.



ಸಚಿನ್ ಮಂಡೇದರ ಅವರು ಬ್ಯಾಂಕ್ ಲಾಕರ್‌ನಲ್ಲಿ ಇಟ್ಟಿದ್ದ ಚಿನ್ನಾಭರಣವನ್ನು ಅಧಿಕಾರಿಗಳು ವಶಕ್ಕೆ ಪಡೆದರು

₹13.02 ಕೋಟಿ ಅಕ್ರಮ ಸ್ಥಿರಾಸ್ತಿಗಳ ಮೌಲ್ಯ | **₹54.79 ಲಕ್ಷ** ನಗದು | **₹2.32 ಕೋಟಿ** ಚಿನ್ನಾಭರಣದ ಮೌಲ್ಯ | **₹1.22 ಕೋಟಿ** ವಾಹನಗಳ ಮೌಲ್ಯ | **₹1.83 ಕೋಟಿ** ಠೇವಣಿ, ಷೇರು, ಗೃಹಬಳಕೆ ವಸ್ತುಗಳ ಮೌಲ್ಯ

ಅಕ್ರಮ ಆಸ್ತಿ ವಿವರ

1. **ಮಾಧವ ರಾವ್**, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಎಂಜಿನಿಯರಿಂಗ್ ವಿಭಾಗ, ಹೆಬ್ಬಾಳ ಉಪ ವಿಭಾಗ, ಬಿಬಿಎಂಪಿ
- **7** ನಿವೇಶನಗಳು, **2** ಬಂಗಲೆ, **48** ಎಕರೆ–**27** ಗುಂಟೆ ಕೃಷಿ ಜಮೀನು ಸೇರಿ **₹7.52** ಕೋಟಿ ಮೌಲ್ಯದ ಸ್ಥಿರಾಸ್ತಿ
- ₹ **97,200** ನಗದು, **₹55** ಲಕ್ಷದ ಚಿನ್ನಾಭರಣ, **₹50** ಲಕ್ಷ ಮೌಲ್ಯದ ವಾಹನಗಳು
- **₹8.57** .ಕೋಟಿ ಆಸ್ತಿಯ ಒಟ್ಟು ಮೌಲ್ಯ

2. **ಟಿ.ಕೆ.ರಮೇಶ್**, ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ ಜಿಲ್ಲೆ
- 3 ನಿವೇಶನಗಳು, 1 ಬಂಗಲೆ ಸೇರಿ **₹1.23** ಕೋಟಿ ಮೌಲ್ಯದ ಸ್ಥಿರಾಸ್ತಿ
- **₹20,200** ನಗದು, **₹3.58** ಲಕ್ಷದ ಚಿನ್ನಾಭರಣ, **₹20** ಲಕ್ಷ ಮೌಲ್ಯದ ವಾಹನಗಳು, **₹67.50** ಲಕ್ಷದ ದಾಖಲೆಗಳು, **₹6.55** ಲಕ್ಷದ ಗೃಹಬಳಕೆ ವಸ್ತುಗಳು
- **₹2.21** ಕೋಟಿ ಆಸ್ತಿಯ ಒಟ್ಟು ಮೌಲ್ಯ

3. **ಕೆ.ಸಿ.ಶಶಿಧರ್**, ವ್ಯವಸ್ಥಾಪಕ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಚಿತ್ರದುರ್ಗ
- **1** ನಿವೇಶನ, **1** ಬಂಗಲೆ, **9** ಎಕರೆ–**14** ಗುಂಟೆ ಕೃಷಿ ಜಮೀನು ಸೇರಿ **₹1.21** ಕೋಟಿ ಮೌಲ್ಯದ ಸ್ಥಿರಾಸ್ತಿ
- **₹58,200** ನಗದು, **₹21.66** ಲಕ್ಷದ ಚಿನ್ನಾಭರಣ, **₹34.81** ಲಕ್ಷ ಮೌಲ್ಯದ ವಾಹನಗಳು
- **₹1.78** ಕೋಟಿ ಆಸ್ತಿಯ ಒಟ್ಟು ಮೌಲ್ಯ

4. **ಸಚಿನ್ ಬಸವಂತ್ ಮಂಡೇದರ**, ಎಫ್‌ಡಿಎ, ಉಪ–ನೋಂದಣಾಧಿಕಾರಿಗಳ ಕಚೇರಿ, ಬೆಳಗಾವಿ
- **1** ನಿವೇಶನ, ನಿರ್ಮಾಣ ಹಂತದ ಒಂದು ಮನೆ, **1** ಎಕರೆ–**12** ಗುಂಟೆ ಕೃಷಿ ಜಮೀನು ಸೇರಿ ₹58 ಲಕ್ಷ ಮೌಲ್ಯದ ಸ್ಥಿರಾಸ್ತಿ
- **₹1.35** ಲಕ್ಷ ನಗದು, **₹87.27** ಲಕ್ಷದ ಚಿನ್ನಾಭರಣ, **₹25** ಲಕ್ಷ ಮೌಲ್ಯದ ವಾಹನಗಳು, **₹1.01** ಕೋಟಿ ಮೌಲ್ಯ ಠೇವಣಿ ಮತ್ತು ಷೇರು ಹೂಡಿಕೆ
- **₹2.50** ಕೋಟಿ ಆಸ್ತಿಯ ಒಟ್ಟು ಮೌಲ್ಯ

5. **ಸಂಜಯ್ ಅಣ್ಣಪ್ಪ ದುರ್ಗಣ್ಣವರ್**, ಪಶು ನಿರೀಕ್ಷಕ, ನಿಲಜಿ ಪಶು ಆಸ್ಪತ್ರೆ, ರಾಯಬಾಗ್, ಬೆಳಗಾವಿ
- **4** ನಿವೇಶನಗಳು, **1** ಮನೆ, **1** ಎಕರೆ ಕೃಷಿ ಜಮೀನು ಸೇರಿ **₹50.77** ಲಕ್ಷ ಮೌಲ್ಯದ ಸ್ಥಿರಾಸ್ತಿ
- **₹2,190** ನಗದು, **₹9.92** ಲಕ್ಷದ ಚಿನ್ನಾಭರಣ, **₹4.50** ಲಕ್ಷ ಮೌಲ್ಯದ ವಾಹನಗಳು, **₹8.86** ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳು
- **₹74.07** ಲಕ್ಷ ಆಸ್ತಿಯ ಒಟ್ಟು ಮೌಲ್ಯ

6. **ಶಿವಲಿಂಗಯ್ಯ ಪಂಚಾಕ್ಷರಯ್ಯ ಹಿರೇಮಠ**, ಪಿಡಿಒ, ಹುಲಗೇರಿ ಗ್ರಾಮ ಪಂಚಾಯಿತಿ, ಬಾದಾಮಿ, ಬಾಗಲಕೋಟೆ
- **1** ನಿವೇಶನ, **1** ಮನೆ ಸೇರಿ **₹1.18** ಕೋಟಿ ಸ್ಥಿರಾಸ್ತಿ
- **₹1.97** ಲಕ್ಷ ನಗದು, **₹14.28** ಲಕ್ಷದ ಚಿನ್ನಾಭರಣ, ₹8.50 ಲಕ್ಷ ಮೌಲ್ಯದ ವಾಹನಗಳು, **₹8.86** ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳು
- **₹1.43** ಕೋಟಿ ಆಸ್ತಿಯ ಒಟ್ಟು ಮೌಲ್ಯ

7. **ನರಸಿಂಗ ರಾವ್ ಗುಜ್ಜಾರ್**, ಸಹಾಯಕ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯತ್ ಕಚೇರಿ, ರಾಯಚೂರು
- **5** ನಿವೇಶನಗಳು, **2** ಬಂಗಲೆ ಸೇರಿ **₹78** ಲಕ್ಷದ ಸ್ಥಿರಾಸ್ತಿ
- **₹38,182** ನಗದು, **₹40.40** ಲಕ್ಷದ ಚಿನ್ನಾಭರಣ, ₹1.70 ಲಕ್ಷ ಮೌಲ್ಯದ ವಾಹನಗಳು, **₹8.86** ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳು
- **₹1.20** ಕೋಟಿ ಆಸ್ತಿಯ ಒಟ್ಟು ಮೌಲ್ಯ

ಸುಧಾ, ಮಯೂರ ಓದಿರಿ

ಅತ್ಯಾಚಾರ: 28 ವಾರಗಳ ಭ್ರೂಣ ತೆಗೆಯಲು ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಾಚಾರಕ್ಕೆ ಒಳಗಾಗಿ ಗರ್ಭ ಧರಿಸಿರುವ 16 ವರ್ಷದ ಬಾಲಕಿಯ 28 ವಾರಗಳ ಭ್ರೂಣವನ್ನು ತೆಗೆಯಲು ವಾಣಿ ವಿಲಾಸ ಆಸ್ಪತ್ರೆಗೆ ಹೈಕೋರ್ಟ್ ನಿರ್ದೇಶಿಸಿದೆ.

ಸಂತ್ರಸ್ತ ಬಾಲಕಿಯ ಪರವಾಗಿ ಆಕೆಯ ತಾಯಿ ಸಲ್ಲಿಸಿದ್ದ ಅರ್ಜಿಯನ್ನು ಪುರಸ್ಕರಿಸಿರುವ ನ್ಯಾಯಮೂರ್ತಿ ಆರ್.ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದ್ದು, ‘ಬಾಲಕಿಯ ವೈದ್ಯಕೀಯ ಗರ್ಭಪಾತದ ವೆಚ್ಚವನ್ನು ಆಸ್ಪತ್ರೆಯೇ ಭರಿಸಬೇಕು’ ಎಂದು ಆದೇಶದಲ್ಲಿ ತಿಳಿಸಿದೆ.

‘ಭ್ರೂಣವನ್ನು ಡಿಎನ್‌ಎ ಪರೀಕ್ಷೆಗೆ ಕಳುಹಿಸಲು ಅನುಕೂಲವಾಗುವಂತೆ ಸಂರಕ್ಷಿಸಬೇಕು. ಅಂಗಾಂಶ ಮಾದರಿಯನ್ನು ಬೆಂಗಳೂರಿನ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ರವಾನಿಸಬೇಕು. ಸಂತ್ರಸ್ತೆಗೆ ಮನೆಯಿಂದ ಆಸ್ಪತ್ರೆಗೆ ಹೋಗಿ ಬರಲು ವಾಹನ ವ್ಯವಸ್ಥೆ ಮಾಡಬೇಕು’ ಎಂದು ಸ್ಥಳೀಯ ಠಾಣೆಯ ಪೊಲೀಸರಿಗೆ ನ್ಯಾಯಪೀಠ ನಿರ್ದೇಶಿಸಿದೆ. ‘ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಆದೇಶವನ್ನು ಪಾಲಿಸಿದ ಬಗ್ಗೆ ಎರಡು ವಾರಗಳಲ್ಲಿ ವರದಿ ನೀಡಿ’ ಎಂದೂ ಪೊಲೀಸರು ಮತ್ತು ವಾಣಿ ವಿಲಾಸ ಆಸ್ಪತ್ರೆ ವೈದ್ಯಾಧಿಕಾರಿಗೆ ಸೂಚಿಸಲಾಗಿದೆ.

ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಬೇಸರ

‘ಯುವಕರ ಹಾದಿ ತಪ್ಪಿಸಿದ ನಕ್ಸಲರು’

ಪ್ರಜಾವಾಣಿ ವಾರ್ತೆ

ಸೇಡಂ (ಕಲಬುರಗಿ ಜಿಲ್ಲೆ): ‘ಸಮಾಜದಲ್ಲಿನ ಶೋಷಣೆ, ಬಡತನ, ಅನ್ಯಾಯವನ್ನು ತಡೆಯಲು ಕ್ರಾಂತಿಯೇ ಪರಿಹಾರ ಎಂಬ ಭಾವನೆಯನ್ನು ಯುವಕರಲ್ಲಿ ಬಿತ್ತಿದ ನಕ್ಸಲೀಯರು, ಅವರ ಕೈಗೆ ಬಂದೂಕು ಕೊಟ್ಟು ಹಾದಿ ತಪ್ಪಿಸಿದರು. ಇದರ ಪರಿಣಾಮ ಎಷ್ಟೋ ಯುವಕರು ಜೈಲಿನಲ್ಲಿ ಕೊಳೆಯುವಂತಾಗಿದೆ’ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಬೇಸರ ವ್ಯಕ್ತಪಡಿಸಿದರು.

ಇಲ್ಲಿನ ಪ್ರಕೃತಿ ನಗರದಲ್ಲಿ ನಡೆಯುತ್ತಿರುವ ಭಾರತೀಯ ಸಂಸ್ಕೃತಿ ಉತ್ಸವದಲ್ಲಿ ಶುಕ್ರವಾರ ಯುವ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಸಮಾಜದಲ್ಲಿ ಪರಿವರ್ತನೆ ತರಬೇಕು ಎಂದು ಬಯಸಿರುವ ಹಲವು ಯುವಕರಿಗೆ ಹಿಂಸೆ ಮಾಡದೆಯೂ ಸಾಧಿಸಬಹುದು ಎಂಬುದನ್ನು ಹೇಳಿಕೊಡಬೇಕಿತ್ತು. ಆದರೆ, ಬಂದೂಕಿನ ನಳಿಕೆಯ ಮೂಲಕವೇ ಇದಕ್ಕೆ ಪರಿಹಾರ ಎಂದು ಯುವಕರನ್ನು ನಕ್ಸಲ್ ನಾಯಕರು ನಂಬಿಸಿದ್ದರು’ ಎಂದು ದೂರಿದ ಅವರು, ‘ದೇಶದ ಏಳಿಗೆಗೆ ಸರಿಯಾದ ದಾರಿ ಯಾವುದೆಂದು ತೋರಿಸುವ ಹೊಣೆಗಾರಿಕೆ ತಂದೆ, ತಾಯಿ ಹಾಗೂ ಸಾಮಾಜಿಕ ಸಂಸ್ಥೆಗಳ ಮೇಲಿದೆ’ ಎಂದರು.

‘ಭಾರತೀಯ ಯುವಕರು ಅಮೆರಿಕ, ಇಂಗ್ಲೆಂಡ್ ಸೇರಿ ವಿವಿಧ ದೇಶಗಳಿಗೆ ಉತ್ತಮ ಉದ್ಯೋಗಾವಕಾಶ ಹುಡುಕಿ ಹೋಗುತ್ತಿದ್ದಾರೆ. ಅವರನ್ನು ಇಲ್ಲಿಯೇ ಹಿಡಿದಿಟ್ಟುಕೊಂಡು, ದೇಶದ ಒಳಿತಿಗಾಗಿ ಸಂಶೋಧನೆಗಳನ್ನು ನಡೆಸುವಂತೆ ಮನವೊಲಿಸಬೇಕಾಗಿದೆ’ ಎಂದರು.

ಮೂಡಬಿದಿರೆಯ ಆಳ್ವಾಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಮೋಹನ ಆಳ್ವ ಮಾತನಾಡಿ, ‘ಭಾರತವು ಅತ್ಯಂತ ಬೃಹತ್ ಯುವಪಡೆಯನ್ನು ಹೊಂದಿದ ದೇಶವಾಗಿದ್ದು, ಇದರ ಮೇಲೆ ಪಾಶ್ಚಾತ್ಯ ದೇಶಗಳು ಕಣ್ಣಿಟ್ಟಿವೆ. ಭಾರತದ ಯುವಕರು ವಿದೇಶಕ್ಕೆ ರಫ್ತಾಗದಂತೆ ತಡೆಯಬೇಕು. 1ನೇ ತರಗತಿಯಿಂದ ಪಿಯುಸಿವರೆಗೆ ದೇಶದಲ್ಲಿ 39 ಕೋಟಿ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ದೇಶದ 1,500ಕ್ಕೂ ಅಧಿಕ ವಿಶ್ವವಿದ್ಯಾಲಯ, 50 ಸಾವಿರ ಕಾಲೇಜುಗಳಲ್ಲಿ 11.68 ಕೋಟಿ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. 51 ಕೋಟಿ ಯುವಕರು 25 ವಯಸ್ಸಿನ ಒಳಗಿದ್ದಾರೆ’ ಎಂದು ಹೇಳಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಕನಕಗಿರಿಯ ಸುವರ್ಣಗಿರಿ ಮಠದ ಚನ್ನಮಲ್ಲ ಸ್ವಾಮೀಜಿ ಮಾತನಾಡಿದರು. ದೆಹಲಿ ವಿಶ್ವವಿದ್ಯಾಲಯದ ವೃತ್ತಿಪರ ಶಿಕ್ಷಣ ಅಭಿವೃದ್ಧಿ ಕೇಂದ್ರದ ನಿರ್ದೇಶಕಿ ಗೀತಾ ಸಿಂಗ್ ಹಾಜರಿದ್ದರು.



ಕಲಬುರಗಿ ಜಿಲ್ಲೆಯ ಸೇಡಂನಲ್ಲಿ ಶುಕ್ರವಾರ ನಡೆದ ಭಾರತೀಯ ಸಂಸ್ಕೃತಿ ಉತ್ಸವದ ಯುವ ಸಮಾವೇಶದಲ್ಲಿ ಶಾಸಕ ಡಾ.ಸಿದ್ದಲಿಂಗಪ್ಪ ಪಾಟೀಲ, ಮೋಹನ್ ಆಳ್ವ, ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, ಅಸ್ಸಾಂ ವಿಧಾನಸಭೆಯ ಸಭಾಧ್ಯಕ್ಷ ನುಮಲ್ ಮೊಮಿನ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಅಶುತೋಷ್ ಜೋಶಿ, ರಾಜಕುಮಾರ್ ಪಾಟೀಲ್ ತೇಲ್ಕೂರ, ಗೀತಾ ಸಿಂಗ್, ಬಸವರಾಜ ಮತ್ತಿಮಡು ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಅಂಗನವಾಡಿ ಕಾರ್ಯಕರ್ತೆಯರ, ಸಹಾಯಕಿಯರ ಸಂಘದ ಪ್ರತಿಭಟನೆ

ಟೆಂಟ್ ಕಿತ್ತುಹಾಕಿದ ಸಿಬ್ಬಂದಿ: ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಿಷ್ಠ ವೇತನ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಧರಣಿ ನಡೆಸುತ್ತಿದ್ದ ಪ್ರತಿಭಟನಕಾರರನ್ನು ತೆರವು ಮಾಡಲು ಮುಂದಾದ ಘಟನೆ ಶುಕ್ರವಾರ ಮಧ್ಯಾಹ್ನ ನಡೆಯಿತು.

ಇದಕ್ಕೆ ಪ್ರತಿಭಟನಾ ನಿರತರಿಂದ ತೀವ್ರ ವಿರೋಧ ವ್ಯಕ್ತವಾಗಿದ್ದರಿಂದ ಪೊಲೀಸರು ಹಾಗೂ ಟೆಂಟ್ ಸಿಬ್ಬಂದಿ ವಾಪಸ್ ತೆರಳಿದರು.

ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘದ ನೇತೃತ್ವದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ನಾಲ್ಕು ದಿನಗಳಿಂದ ಚಳಿ, ಬಿಸಿಲು ಲೆಕ್ಕಿಸದೇ ಹೋರಾಟ ನಡೆಸುತ್ತಿದ್ದಾರೆ. ಶುಕ್ರವಾರ ಮಧ್ಯಾಹ್ನ ಪೊಲೀಸ್ ಸಿಬ್ಬಂದಿ ಸ್ಥಳಕ್ಕೆ ಬಂದು, ತೆರವು ಮಾಡುವಂತೆ ಸೂಚಿಸಿದ್ದು ಹೋರಾಟಗಾರರ ಆಕ್ರೋಶಕ್ಕೆ ಕಾರಣವಾಯಿತು. ‘ಯಾವುದೇ ಕಾರಣಕ್ಕೂ ಸ್ಥಳ ಬಿಟ್ಟು ಕದಲುವುದಿಲ್ಲ’ ಎಂದು ಮಹಿಳೆಯರು ಪಟ್ಟುಹಿಡಿದರು.

ಒಂದೆಡೆ ಕಾರ್ಯಕರ್ತೆಯರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರೆ, ಅತ್ತ ಟೆಂಟ್ ತೆರವು ಕೆಲಸ ಮುಂದುವರಿದಿತ್ತು. ಕೊನೆಗೆ ಹೋರಾಟಗಾರರ ಆಕ್ರೋಶಕ್ಕೆ ಮಣಿದ ಪೊಲೀಸರು, ಟೆಂಟ್ ಸಿಬ್ಬಂದಿಯನ್ನು ವಾಪಸ್ ಕಳುಹಿಸಿದರು. ಅದೇ ಸ್ಥಳದಲ್ಲಿ ಪ್ರತಿಭಟನೆ ಮುಂದುವರಿದಿದೆ.

‘ಈ ಸ್ಥಳದಲ್ಲಿ ಕನ್ನಡ ಸಂಘಟನೆಯೊಂದರ ಪ್ರತಿಭಟನೆಗೆ ಅನುಮತಿ ನೀಡಲಾಗಿದೆ. ಅವರು ಈ ಸ್ಥಳದಲ್ಲಿ ಶನಿವಾರ ಪ್ರತಿಭಟನೆ ನಡೆಸಲಿದ್ದಾರೆ ಎಂಬ ನೆಪವೊಡ್ಡಿ ನಮ್ಮನ್ನು ಮನೆಗೆ ಕಳುಹಿಸುವ ಪ್ರಯತ್ನ ಮಾಡಲಾಯಿತು’ ಎಂದು ಕಾರ್ಯಕರ್ತೆಯರು ದೂರಿದರು.

‘ಸರ್ಕಾರ ಬೇಡಿಕೆ ಈಡೇರಿಸುವವರೆಗೂ ಹೋರಾಟದ ಸ್ಥಳ ಬಿಟ್ಟು ಹೋಗುವುದಿಲ್ಲ’ ಎಂದು ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘದ ರಾಜ್ಯ ಅಧ್ಯಕ್ಷೆ ಬಿ.ಪ್ರೇಮಾ ಎಚ್ಚರಿಸಿದರು.

ಸೌಲಭ್ಯದ ಕೊರತೆ: ಪ್ರತಿಭಟನಾ ಸ್ಥಳದಲ್ಲಿ ಸೌಲಭ್ಯಗಳ ಕೊರತೆಯಿದ್ದು, ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿರುವ ಮಹಿಳೆಯರು, ಅವರ ಜತೆಯಿರುವ ಪುಟ್ಟ ಮಕ್ಕಳು ಪರದಾಡುತ್ತಿದ್ದಾರೆ.



ಸ್ವಾತಂತ್ರ್ಯ ಉದ್ಯಾನದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿಯನ್ನು ಸ್ಥಗಿತಗೊಳಿಸಲು ಶುಕ್ರವಾರ ಸ್ಟೇಜ್ ಮೇಲೆ ಹಾಕಿದ್ದ ಶಾಮಿಯಾನವನ್ನು ಕಿತ್ತುಹಾಕಲು ಪೊಲೀಸರು ಮುಂದಾದಾಗ ಕೆಲಕಾಲ ಸ್ಥಳದಲ್ಲಿ ಗೊಂದಲದ ವಾತಾವರಣ ಸೃಷ್ಟಿಯಾಗಿತ್ತು ಪ್ರಜಾವಾಣಿ ಚಿತ್ರ

‘ಸೌಜನ್ಯವನ್ನೂ ಮರೆತ ಸರ್ಕಾರ’

‘ರಾಜ್ಯ ಸರ್ಕಾರವು ಪೊಲೀಸರ ಮೂಲಕ ಟೆಂಟ್ ಕಿತ್ತು ಹಾಕಿಸಿ ಬಲವಂತವಾಗಿ ಪ್ರತಿಭಟನೆ ಅಂತ್ಯಗೊಳಿಸುವ ಮೂಲಕ ಹಿಟ್ಲರ್ ಧೋರಣೆ ತೋರಿದೆ. ಚುನಾವಣೆ ಸಂದರ್ಭದಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಕೊಟ್ಟ ಆಶ್ವಾಸನೆ ಈಡೇರಿಸುವುದಕ್ಕಂತೂ ಸರ್ಕಾರಕ್ಕೆ ಯೋಗ್ಯತೆ ಇಲ್ಲ. ಕೊರೆಯುವ ಚಳಿಯನ್ನೂ ಲೆಕ್ಕಿಸದೇ ನಾಲ್ಕು ದಿನಗಳಿಂದ ಅಹೋರಾತ್ರಿ ಪ್ರತಿಭಟನೆ ಮಾಡುತ್ತಿರುವ ಮಹಿಳೆಯರ ಬಳಿ ಹೋಗಿ ಅವರನ್ನು ಸಮಾಧಾನ ಪಡಿಸುವ ಸೌಜನ್ಯವೂ ಸರ್ಕಾರಕ್ಕೆ ಇಲ್ಲ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅಂಗನವಾಡಿಯ 7 ಕಾರ್ಯಕರ್ತೆಯರಿಗೆ ನೋಟಿಸ್

ಶಿವಮೊಗ್ಗ: ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಬೆಂಗಳೂರಿನಲ್ಲಿ ನಡೆಯುತ್ತಿರುವ ಮುಷ್ಕರದಲ್ಲಿ ಪಾಲ್ಗೊಂಡಿರುವ ಜಿಲ್ಲೆಯ 7 ಜನ ಅಂಗನವಾಡಿ ಕಾರ್ಯಕರ್ತೆಯರಿಗೆ ತಕ್ಷಣವೇ ಕೆಲಸಕ್ಕೆ ಹಾಜರಾಗುವಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕರು ನೋಟಿಸ್ ಕೊಟ್ಟಿದ್ದಾರೆ.

ಶಿವಮೊಗ್ಗದ ಪ್ರೇಮಾ, ಶಿಕಾರಿಪುರದ ಭಾರತಿ, ರೇಣುಕಾ, ಸಾಗರದ ತ್ರಿವೇಣಿ, ಹೊಸನಗರದ ಶಾರದಾ ಹಾಗೂ ಭದ್ರಾವತಿಯ ಶಕುಂತಲಾಗೆ ಶುಕ್ರವಾರ ನೋಟಿಸ್ ಜಾರಿ ಮಾಡಲಾಗಿದೆ.

‘ಅಂಗನವಾಡಿ ಕೇಂದ್ರಗಳನ್ನು ಅನಧಿಕೃತವಾಗಿ ಮುಚ್ಚಿ ಮುಷ್ಕರದಲ್ಲಿ ಭಾಗವಹಿಸಿದ್ದೀರಿ. ಇದರಿಂದ ಮಕ್ಕಳು ಹಾಗೂ ಪೌಷ್ಟಿಕ ಆಹಾರ ಪಡೆಯುತ್ತಿರುವ ಗರ್ಭಿಣಿಯರಿಗೆ ತೊಂದರೆಯಾಗಿದೆ. ಫೆಬ್ರುವರಿ 1ರಿಂದ ಕೆಲಸಕ್ಕೆ ಹಾಜರಾಗಬೇಕು. ಇಲ್ಲದಿದ್ದರೆ ನಿಯಮಾನುಸಾರ ಶಿಸ್ತುಕ್ರಮ ಜರುಗಿಸಲಾಗುವುದು’ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ಕೃಷ್ಣಪ್ಪ ನೋಟಿಸ್‌ನಲ್ಲಿ ಉಲ್ಲೇಖಿಸಿದ್ದಾರೆ.

‘ಕಳೆದ ಮೂರು ದಿನಗಳಿಂದ ಕೆಲಸಕ್ಕೆ ಬಾರದಿರುವುದರಿಂದ ಮಕ್ಕಳಿಗೆ ತೊಂದರೆ ಆಗಿದೆ. ಹೀಗಾಗಿ ನೋಟಿಸ್ ಕೊಟ್ಟಿದ್ದೇನೆ’ ಎಂದು ಕೃಷ್ಣಪ್ಪ ಪ್ರತಿಕ್ರಿಯಿಸಿದರು.

ರಿತೇಶ್ ಕುಮಾರ್ ಆರ್ಥಿಕ ಇಲಾಖೆ ಎಸಿಎಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್ಥಿಕ ಇಲಾಖೆ ಹೆಚ್ಚುವರಿ ಕಾರ್ಯದರ್ಶಿ ಹುದ್ದೆಯಿಂದ ನಿವೃತ್ತರಾದ ಎಲ್.ಕೆ.ಅತೀಕ್ ಅವರು ಶುಕ್ರವಾರ ರಿತೇಶ್ ಕುಮಾರ್ ಸಿಂಗ್ ಅವರಿಗೆ ಅಧಿಕಾರ ಹಸ್ತಾಂತರಿಸಿದರು.

ಅತೀಕ್ ಅವರು ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯಕಾರ್ಯದರ್ಶಿಯಾಗಿ ಮುಂದುವರಿಯಲಿದ್ದಾರೆ.

ವಿ.ರಶ್ಮಿ ಮಹೇಶ್ ಅವರನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ವರ್ಗಾಯಿಸಲಾಗಿದೆ. ನಂದಿನಿ ಕೆ.ಆರ್ ಅವರನ್ನು ಮಂಡ್ಯ ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಹುದ್ದೆಗೆ ವರ್ಗಾಯಿಸಲಾಗಿದೆ.

ಟ್ರ್ಯಾಕ್ಸನ್ ವಿದ್ಯುದೀಕರಣವಾಗಿ ನೂರು ವರ್ಷ ತುಂಬಿದ ಸಂಭ್ರಮಾಚರಣೆ

ರೈಲು ನಿರ್ವಹಣೆ ಮಾಡಿದ ಮಹಿಳೆಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ರೈಲ್ವೆಯ ಮೊದಲ ಟ್ರ್ಯಾಕ್ಸನ್ ವಿದ್ಯುದೀಕರಣವಾಗಿ ನೂರು ವರ್ಷ ತುಂಬಿದ ಸಂಭ್ರಮಾಚರಣೆಯ ಅಂಗವಾಗಿ ಕೆಎಸ್‌ಆರ್ ಬೆಂಗಳೂರು –ಮೈಸೂರು ರಾಜ್ಯ ರಾಣಿ ಎಕ್ಸ್‌ಪ್ರೆಸ್‌ರೈಲನ್ನು ಮಹಿಳಾ ಸಿಬ್ಬಂದಿಯೇ ಸಂಪೂರ್ಣವಾಗಿ ಶುಕ್ರವಾರ ನಿರ್ವಹಣೆ ಮಾಡಿದರು.

ಲೋಕೊ ಪೈಲಟ್ ಆಗಿ ಶಿವ ಪಾರ್ವತಿ, ಸಹಾಯಕ ಲೋಕೊ ಪೈಲಟ್ ರಮ್ಯಾ ಕುಮಾರಿ, ಟ್ರೈನ್ ಮ್ಯಾನೇಜರ್ ಶೈಲಜಾ, ರೈಲ್ವೆ ರಕ್ಷಣಾ ಪಡೆ (ಆರ್‌ಪಿಎಫ್) ಸಿಬ್ಬಂದಿ ಸ್ವರೂಪಿಣಿ ಮತ್ತು ವರಲಕ್ಷ್ಮಿ, ಹಾಗೂ ಪ್ರಯಾಣ ಟಿಕೆಟ್ ಪರೀಕ್ಷಕರಾಗಿ (ಟಿಟಿಇ) ಅನಿಲಾ ಜಕಾರಿಯಾ ಕಾರ್ಯ ನಿರ್ವಹಿಸಿದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ (ಕೆಎಸ್‌ಆರ್) ಬೆಂಗಳೂರು ನಿಲ್ದಾಣದ ಐದನೇ ಪ್ಲ್ಯಾಟ್‌ಫಾರ್ಮ್‌ನಲ್ಲಿ ಭಾರತದ ರಂಗೋಲಿ ಬಿಡಿಸಿ ಮಹಿಳೆಯರು ಶುಭ ಹಾರೈಸಿದರು. ಎಲ್ಲ ಮಹಿಳಾ ಸಿಬ್ಬಂದಿಗೆ ಹೂವು ನೀಡಿ ಸಿಹಿ ಹಂಚಿ ಸಂಭ್ರಮಿಸಲಾಯಿತು. ರಾಜ್ಯ ರಾಣಿ ಎಕ್ಸ್‌ಪ್ರೆಸ್ ರೈಲನ್ನು ಬಾಳೆಕಂದು, ಹೂವುಗಳಿಂದ ಅಲಂಕರಿಸಲಾಗಿತ್ತು.

ರೈಲಿಗೆ ಚಾಲನೆ ನೀಡಿ ಮಾತನಾಡಿದ ಬೆಂಗಳೂರು ವಿಭಾಗದ ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಅಶುತೋಷ್ ಮಾಥುರ್ ಅವರು, ‘1925ರ ಫೆಬ್ರುವರಿ 3ರಂದು ಮೊದಲ ಬಾರಿಗೆ ಭಾರತೀಯ ರೈಲ್ವೆಯಲ್ಲಿ ವಿದ್ಯುದೀಕರಣ ಅಳವಡಿಸಲಾಗಿತ್ತು. ಮುಂಬೈಯ ಛತ್ರಪತಿ ಶಿವಾಜಿ ಮಹಾರಾಜ ಟರ್ಮಿನಲ್‌ನಿಂದ ಕುರ್ಲಾ ನಡುವೆ ಮೊದಲ ವಿದ್ಯುತ್‌ಚಾಲಿತ ರೈಲು ಸಂಚರಿಸಿತ್ತು. ಈ ಸಾಧನೆಗೆ ನೂರು ವರ್ಷ ತುಂಬುತ್ತಿರುವುದರಿಂದ ಅದರ ಸವಿನೆನಪಿನಲ್ಲಿ ಮಹಿಳೆಯರೇ ಒಂದು ದಿನ ರೈಲನ್ನು ಸಂಪೂರ್ಣವಾಗಿ ನಿರ್ವಹಣೆ ಮಾಡಿದರು’ ಎಂದು ತಿಳಿಸಿದರು.

‘ಉಗಿ-ಚಾಲಿತ ಎಂಜಿನ್‌ಗಳಿಂದ ಆಧುನಿಕ, ಪರಿಸರ ಸ್ನೇಹಿ ವಿದ್ಯುದೀಕರಣ ವ್ಯವಸ್ಥೆಗೆ ಪರಿವರ್ತನೆಗೊಳ್ಳುವ ದಿಸೆಯಲ್ಲಿ ಒಂದು ಮಹತ್ವದ ಮೈಲಿಗಲ್ಲು’ ಎಂದರು.

ಹಿರಿಯ ವಿಭಾಗೀಯ ಎಲೆಕ್ಟ್ರಿಕಲ್ ಎಂಜಿನಿಯರ್ (ಟ್ರ್ಯಾಕ್ಷನ್ ಆಪರೇಷನ್ಸ್) ವಿ. ಸುರೇಂದ್ರನಾಥ್, ಹಿರಿಯ ವಿಭಾಗೀಯ ಸಿಬ್ಬಂದಿ ಅಧಿಕಾರಿ ಉಮಾ ಶರ್ಮಾ, ಮುಖ್ಯ ವೈದ್ಯಕೀಯ ಅಧೀಕ್ಷಕರಾದ ಡಾ. ಪ್ರಭಾವತಿ ಗಜಲಕ್ಷ್ಮಿ, ಹಿರಿಯ ವಿಭಾಗೀಯ ಪರಿಸರ ಮತ್ತು ಹೌಸ್ ಕೀಪಿಂಗ್ ವ್ಯವಸ್ಥಾಪಕಿ ಪ್ರಿಯಾ, ವಿಭಾಗೀಯ ಹಣಕಾಸು ವ್ಯವಸ್ಥಾಪಕಿ ಎ. ಕಮಲ ಪ್ರಿಯಾ ಉಪಸ್ಥಿತರಿದ್ದರು.



ಕೆಎಸ್‌ಆರ್ ಬೆಂಗಳೂರು –ಮೈಸೂರು ರಾಜ್ಯ ರಾಣಿ ಎಕ್ಸ್‌ಪ್ರೆಸ್ ರೈಲನ್ನು ಸಂಪೂರ್ಣವಾಗಿ ಮಹಿಳಾ ಸಿಬ್ಬಂದಿ ಶುಕ್ರವಾರ ನಿರ್ವಹಣೆ ಮಾಡಿದರು ಚಿತ್ರ: ಪುಷ್ಕರ್ ವಿ.



❦ ಸುಭಾಷಿತ ❦

ಶಾಸ್ತ್ರದಲ್ಲಿ ದೋಷವಿದ್ದರೆ ಹೃದಯದಲ್ಲಿ ತಿದ್ದಬಹುದು,
ಹೃದಯದಲ್ಲಿ ದೋಷವಿದ್ದರೆ ಶಾಸ್ತ್ರ ಏನು ಮಾಡುವುದು?

-ದ.ರಾ.ಬೇಂದ್ರೆ

ಶೈಕ್ಷಣಿಕ ಸ್ಥಿತಿ ಕುರಿತ ವರದಿ ಸರ್ಕಾರಕ್ಕೆ ಎಚ್ಚರಿಕೆಯ ಗಂಟೆ

ಶಿಕ್ಷಣದ ಸ್ಥಿತಿಗತಿ ಕುರಿತ ವಾರ್ಷಿಕ ವರದಿ (ಎಎಸ್‌ಇಆರ್)- 2024 ಪ್ರಕಟವಾಗಿದ್ದು, ಕರ್ನಾಟಕದಲ್ಲಿ ಕಲಿಕೆಯ ಸ್ಥಿತಿ ಹೇಗಿದೆ ಎಂಬ ಬಗ್ಗೆ ಇದು ಗಂಭೀರ ವಿಚಾರಗಳನ್ನು ತೆರೆದಿಟ್ಟಿದೆ. ವರದಿಯಲ್ಲಿ ಉಲ್ಲೇಖವಾಗಿರುವ ವಿಷಯಗಳ ಬಗ್ಗೆ ಸಂಬಂಧಪಟ್ಟವರು ತುರ್ತಾಗಿ ಗಮನಹರಿಸಬೇಕಾದ ಅಗತ್ಯ ಇದೆ. ಮೂರನೇ ತರಗತಿಯ ಶೇಕಡ 7.1ರಷ್ಟು ಮಕ್ಕಳು ಒಂದು ಅಕ್ಷರವನ್ನೂ ಓದುವ ಸಾಮರ್ಥ್ಯ ಪಡೆದಿಲ್ಲ, ಸರ್ಕಾರಿ ಹಾಗೂ ಖಾಸಗಿ ಶಾಲೆಗಳ ಬಹಳ ಕಡಿಮೆ ಪ್ರಮಾಣದಷ್ಟು ವಿದ್ಯಾರ್ಥಿಗಳು ಕೂಡಿಸುವ, ಕಳೆಯುವ, ಗುಣಿಸುವ ಹಾಗೂ ಭಾಗಿಸುವ ಕೌಶಲವನ್ನು ಪಡೆದುಕೊಂಡಿದ್ದಾರೆ ಎಂಬುದನ್ನು ವರದಿಯು ಹೇಳಿದೆ. ಸಾಹಿತ್ಯಕ ಕೌಶಲವನ್ನು ಪಡೆದುಕೊಂಡಿರುವ ಮಕ್ಕಳ ಪ್ರಮಾಣ ಕೂಡ ಬಹಳ ಕಡಿಮೆ ಎಂದು ಹೇಳಿದೆ. ಶಿಕ್ಷಣ ವ್ಯವಸ್ಥೆಯು ಹಳಿ ತಪ್ಪಿದೆ ಎಂದು ವರದಿಯು ಹೇಳುತ್ತಿದೆ. ಅದರಲ್ಲೂ ಮುಖ್ಯವಾಗಿ, ಗ್ರಾಮಾಂತರ ಪ್ರದೇಶಗಳಲ್ಲಿ ಪರಿಸ್ಥಿತಿ ಬಹಳ ಕೆಟ್ಟಿದೆ. ಈ ವರದಿಯಲ್ಲಿ ಇರುವುದು ಅಂಕಿ-ಅಂಶಗಳು ಮಾತ್ರವೇ ಅಲ್ಲ. ಕಲಿಕಾ ಅವಕಾಶಗಳ ಕೊರತೆಯ ಕಾರಣದಿಂದಾಗಿ ಅಸಂಖ್ಯ ಮಕ್ಕಳ ಭವಿಷ್ಯ ಕಮರುತ್ತಿದೆ ಎಂಬುದನ್ನು ಕೂಡ ವರದಿಯು ಹೇಳುತ್ತಿದೆ. ಕಲಿಕಾ ಮಟ್ಟವು ಬಹಳ ಕಡಿಮೆ ಇರುವುದಕ್ಕೆ ಒಂದು ಮುಖ್ಯ ಕಾರಣ ಶಿಕ್ಷಕರಿಗೆ ಅಗತ್ಯ ಪ್ರಮಾಣದಲ್ಲಿ ತರಬೇತಿ ಸಿಗದಿರುವುದು. ಹಲವು ಶಾಲೆಗಳಲ್ಲಿ ಶಿಕ್ಷಕರಿಗೆ ಸರಿಯಾದ ಅರ್ಹತೆ ಇಲ್ಲ, ಅವರಿಗೆ ಪ್ರೇರಣೆ ಇಲ್ಲ ಅಥವಾ ಮಕ್ಕಳಿಗೆ ಪರಿಣಾಮಕಾರಿಯಾಗಿ ಕಲಿಸಲು ಅಗತ್ಯವಿರುವ ಸೌಲಭ್ಯಗಳು ಇಲ್ಲ. ಇದರ ಪರಿಣಾಮವಾಗಿ ಮಕ್ಕಳಿಗೆ ಸಿಗುತ್ತಿರುವ ಶಿಕ್ಷಣದ ಗುಣಮಟ್ಟವು ಕಡಿಮೆ ಆಗಿದೆ, ಮಕ್ಕಳು ಮುಂದೆ ಶೈಕ್ಷಣಿಕವಾಗಿ ಹೆಚ್ಚಿನ ಸಾಧನೆ ತೋರುವುದಕ್ಕೆ ಅಡ್ಡಿ ಸೃಷ್ಟಿಯಾಗಿದೆ.



ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಸರ್ಕಾರ ಗಟ್ಟಿ ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾಗುತ್ತದೆ

ಈ ಸಮಸ್ಯೆಯನ್ನು ಪರಿಹರಿಸಬೇಕು ಎಂದಾದರೆ ಸರ್ಕಾರವು ಶಿಕ್ಷಕರಿಗೆ ಹೆಚ್ಚಿನ ತರಬೇತಿ ನೀಡುವುದನ್ನು ಹಾಗೂ ವೃತ್ತಿಯಲ್ಲಿ ಅವರು ಬೆಳೆಯುವುದನ್ನು ತನ್ನ ಆದ್ಯತೆಯ ಕೆಲಸವಾಗಿ ಪರಿಗಣಿಸಬೇಕು. ತಮ್ಮ ಜ್ಞಾನದ ಮಟ್ಟ ಹೇಗಿದೆ ಹಾಗೂ ತಾವು ಬೋಧಿಸುತ್ತಿರುವುದು ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿ ಇದೆ ಎಂಬುದನ್ನು ಶಿಕ್ಷಕರು ಕಾಲಕಾಲಕ್ಕೆ ಮೌಲ್ಯಮಾಪನಕ್ಕೆ ಒಳಪಡಿಸಿಕೊಳ್ಳಬೇಕು. ಶಿಕ್ಷಕರಿಗೆ ನಿರಂತರವಾಗಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು, ಆಧುನಿಕ ಬೋಧನಾ ಕ್ರಮಗಳ ಬಗ್ಗೆ ಹಾಗೂ ಶೈಕ್ಷಣಿಕ ಪರಿಕರಗಳ ಬಳಕೆಯ ಬಗ್ಗೆ ಗಮನ ನೀಡಬೇಕು. ವಿದ್ಯಾರ್ಥಿಗಳ ವೈಯಕ್ತಿಕ ಅಗತ್ಯಗಳಿಗೆ ಅನುಗುಣವಾಗಿ ಪಾಠಗಳಲ್ಲಿ ತುಸು ಬದಲಾವಣೆ ತಂದುಕೊಳ್ಳುವ, ಶಿಕ್ಷಕರಲ್ಲಿನ ಕೊರತೆಯ ಕಾರಣದಿಂದಾಗಿ ಯಾವುದೇ ಮಗು ಕಲಿಕೆಯಲ್ಲಿ ಹಿಂದೆ ಉಳಿಯದಂತೆ ನೋಡಿಕೊಳ್ಳುವ ಕೆಲಸವು ಇಂತಹ ತರಬೇತಿ ಕಾರ್ಯಕ್ರಮಗಳ ಮೂಲಕ ಆಗಬೇಕು. ಪಾಠಗಳನ್ನು ದೃಶ್ಯ ಮಾಧ್ಯಮದ ಮೂಲಕ ಹೇಳಿಕೊಡಲು ಬೇಕಿರುವ ಸೌಲಭ್ಯ, ಅಗತ್ಯವಾದ ಚಿತ್ರಪಟಗಳು, ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಆಧಾರಿತ ಪರಿಕರಗಳು ಶಾಲೆಗಳಲ್ಲಿ ಲಭ್ಯವಿರುವಂತೆ ಸರ್ಕಾರ ಮಾಡಬೇಕು. ಹೀಗೆ ಆದಾಗ ಕಲಿಕಾ ಪ್ರಕ್ರಿಯೆಯು ಮಕ್ಕಳ ಪಾಲಿಗೆ ಚೇತೋಹಾರಿಯೂ ಆಗುತ್ತದೆ.

ವಿದ್ಯಾರ್ಥಿಗಳ ಸಾಮಾಜಿಕ ಹಾಗೂ ಶೈಕ್ಷಣಿಕ ಹಿನ್ನೆಲೆ ಏನು ಎಂಬುದು ಅವರ ಕಲಿಕಾ ಮಟ್ಟದ ಮೇಲೆ ದೊಡ್ಡ ಮಟ್ಟದಲ್ಲಿ ಪರಿಣಾಮ ಉಂಟುಮಾಡುತ್ತದೆ. ಬಡ ಕುಟುಂಬಗಳಿಂದ ಬರುವ ವಿದ್ಯಾರ್ಥಿಗಳ ತಂದೆ-ತಾಯಿ ಹೆಚ್ಚಿನ ವಿದ್ಯಾರ್ಹತೆ ಹೊಂದಿರುವುದಿಲ್ಲ, ಮಕ್ಕಳಿಗೆ ಅಗತ್ಯವಿರುವ ಕಲಿಕಾ ಪರಿಸರವನ್ನು ಮನೆಯಲ್ಲಿ ರೂಪಿಸಿಕೊಡಲು ಅವರಿಗೆ ಆಗುವುದಿಲ್ಲ. ಇಂತಹ ಸಮಸ್ಯೆಯನ್ನು ಪರಿಹರಿಸಲು ಶಾಲೆಗಳಲ್ಲಿ ನಿಗದಿತ ಅವಧಿಯ ನಂತರ ವಿಶೇಷ ತರಗತಿಗಳನ್ನು ನಡೆಸುವುದು ಅಗತ್ಯವಾಗಬಹುದು. ಹೀಗೆ ಮಾಡಿದಾಗ ಕಲಿಕೆಯಲ್ಲಿ ಎಲ್ಲರನ್ನೂ ಒಳಗೊಳ್ಳಲು ಹಾಗೂ ಸಮಾನತೆಯನ್ನು ತರಲು ಸಾಧ್ಯವಾಗುತ್ತದೆ. ಶಿಕ್ಷಣದ ಗುಣಮಟ್ಟವನ್ನು ಹೆಚ್ಚು ಮಾಡಲು ಸರ್ಕಾರವು ಗಟ್ಟಿ ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಶಾಲೆಗಳಿಗೆ ಅಗತ್ಯ ಪ್ರಮಾಣದಲ್ಲಿ ಅನುದಾನದ ಖಾತರಿ ನೀಡುವುದು, ಸ್ಥಳೀಯ ಸಮುದಾಯಗಳ ನೆರವು ಪಡೆದುಕೊಳ್ಳುವುದು, ಸ್ವಯಂಸೇವಾ ಸಂಸ್ಥೆಗಳನ್ನು ಪಾಲುದಾರರನ್ನಾಗಿ ಮಾಡಿಕೊಳ್ಳುವುದು, ಶಿಕ್ಷಕರಿಗೆ ತರಬೇತಿ ಒದಗಿಸುವ ವ್ಯವಸ್ಥೆಯನ್ನು ಬಲಪಡಿಸುವುದು, ಶೈಕ್ಷಣಿಕ ಮೂಲಸೌಕರ್ಯವನ್ನು ಹೆಚ್ಚಿಸುವುದು ಆ ತೀರ್ಮಾನಗಳಲ್ಲಿ ಕೆಲವು. ಈ ಕ್ರಮಗಳನ್ನು ಸರ್ಕಾರವು ಕೈಗೊಳ್ಳದೇ ಇದ್ದರೆ ಉತ್ತಮ ಕಲಿಕಾ ಮಟ್ಟವನ್ನು ತಲುಪುವುದು ಸಾಧ್ಯವಾಗುವುದಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ ಅಗತ್ಯವಿರುವ ಇತರ ಪ್ರದೇಶಗಳಲ್ಲಿ ಶಿಕ್ಷಣ ವ್ಯವಸ್ಥೆಯನ್ನು ಸರಿಪಡಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಈ ವರದಿಯು ಸರ್ಕಾರಕ್ಕೆ ಒಂದು ಎಚ್ಚರಿಕೆಯ ಗಂಟೆ. ಅಂತಹ ಕ್ರಮಗಳನ್ನು ಕೈಗೊಂಡಾಗ ಮಾತ್ರ ಸರ್ಕಾರವು ಪ್ರತಿ ಮಗುವಿನ ಅಗತ್ಯಗಳಿಗೂ ಸ್ಪಂದಿಸುವ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಲು ಸಾಧ್ಯವಾಗುತ್ತದೆ.

ದಿನದ ಟ್ವೀಟ್

ಸಂಚಾರ ದಟ್ಟಣೆ: ಹೀಗಿದೆ ಪರಿಹಾರ



ಮೆಟ್ರೊ ರೈಲು ನಿರ್ಮಾಣ ಕಾಮಗಾರಿಗಳನ್ನು ಸಮರೋಪಾದಿಯಲ್ಲಿ ಪೂರ್ಣಗೊಳಿಸಿ. ಬಸ್ಸುಗಳ ಸಂಖ್ಯೆ ಹೆಚ್ಚಿಸಿ, ಪಾದಚಾರಿ ಮಾರ್ಗಗಳನ್ನು ಅಭಿವೃದ್ಧಿಪಡಿಸಿ. ಆಗ ಎಂತಹ ಜಾದೂ ನಡೆಯುತ್ತದೆ ಎಂದು ನೋಡಿ!

(ಬೆಂಗಳೂರಿನ ಸಂಚಾರ ದಟ್ಟಣೆ ಸಮಸ್ಯೆಗೆ ನೀಡಿರುವ ಸಲಹೆ)

ಸುಹಾಸ್ ಎ.ಆರ್.

ಕಿಡಿನುಡಿ

ಬಿಯಾಂಡ್ ಬೆಂಗಳೂರು ಎಂಬುದು ಕರ್ನಾಟಕದಲ್ಲಿ ಅತಿದೊಡ್ಡ ಹಾಸ್ಯೋಕ್ತಿಯಾಗಿದೆ. ಬೆಂಗಳೂರಿನ ದಟ್ಟಣೆ ತಗ್ಗಿಸುವ ಹೆಸರಿನಲ್ಲಿ ಅವರು ಸುತ್ತಮುತ್ತಲಿನ ಸಣ್ಣ ಪಟ್ಟಣಗಳು, ಹಳ್ಳಿಗಳನ್ನು ಬೆಂಗಳೂರಿಗೆ ಸೇರಿಸುತ್ತಿದ್ದಾರೆ. ಯಾರಿಗೆ ಮಳ್ಳ ಮಾಡ್ಲಿಕತ್ತರ ಇವ್ರು.

ಶೇಷಗಿರಿ ದೇಶಪಾಂಡೆ, ಟೆಕಿ

25 ವರ್ಷಗಳ ಹಿಂದೆ

ಮಂಗಳವಾರ, 1-2-2000

• ಹವಾಲ ಮುಗಿದ ಅಧ್ಯಾಯ ಎಲ್ಲರೂ ಆರೋಪಮುಕ್ತ

ನವದೆಹಲಿ, ಜ. 31 (ಪಿಟಿಐ)– ರಾಜಕೀಯವಾಗಿ ಸಾಕಷ್ಟು ವಿವಾದಗಳನ್ನೆಬ್ಬಿಸಿ ತಲ್ಲಣಗೊಳಿಸಿದ್ದ ರೂ. 65 ಕೋಟಿ ಜೈನ್ ಹವಾಲ ಪ್ರಕರಣದಲ್ಲಿ ಆರೋಪವನ್ನು ಎದುರಿಸುತ್ತಿದ್ದವರೆಲ್ಲ ಆರೋಪಮುಕ್ತರಾಗುವುದರೊಂದಿಗೆ ಹವಾಲ ಪ್ರಕರಣಕ್ಕೆ ತೆರೆ ಬಿದ್ದಂತಾಗಿದೆ.

ಈ ಪ್ರಕರಣದಲ್ಲಿ ಜೈನ್ ಸಹೋದರರು ಮತ್ತು ನೈವೇಲಿ ಲಿಗ್ನೈಟ್ ಕಾರ್ಪೊರೇಷನ್ನಿನ (ಎನ್‌ಎಲ್‌ಸಿ) ನಾಲ್ವರು ಮಾಜಿ ಅಧಿಕಾರಿಗಳ ಮೇಲಿನ ಆರೋಪ ಇತ್ಯರ್ಥವಾಗದೆ ಬಾಕಿ ಉಳಿದಿತ್ತು. ವಿಶೇಷ ನ್ಯಾಯಾಲಯವು ಇವರನ್ನು ಆರೋಪದಿಂದ ಇಂದು ಮುಕ್ತಗೊಳಿಸಿತು. ಇದರೊಂದಿಗೆ ಹವಾಲ ಪ್ರಕರಣದಲ್ಲಿ ಆರೋಪ ಎದುರಿಸುತ್ತಿದ್ದವರನ್ನೆಲ್ಲ ನಿರ್ದೋಷಿಗಳೆಂದು ನ್ಯಾಯಾಲಯ ತೀರ್ಪು ನೀಡಿದಂತಾಗಿದೆ.

• ಬಳ್ಳಾರಿ: ದಳ (ಯು), ಬಿಜೆಪಿ ಮಾತುಕತೆ ವಿಫಲ

ಬೆಂಗಳೂರು, ಜ. 31– ಬಳ್ಳಾರಿ ಲೋಕಸಭಾ ಕ್ಷೇತ್ರದ ಉಪಚುನಾವಣೆಗೆ ಸಂಬಂಧಿಸಿದಂತೆ ಸ್ಥಾನ ಹೊಂದಾಣಿಕೆ ಮಾಡಿಕೊಳ್ಳಲು ಬಿಜೆಪಿ ಹಾಗೂ ಜನತಾದಳ (ಯು) ನಡುವೆ ನಡೆದ ಮಾತುಕತೆ ವಿಫಲವಾಗಿ ದಳ (ಯು) ತನ್ನ ಅಧಿಕೃತ ಅಭ್ಯರ್ಥಿಯನ್ನು ಕಣಕ್ಕಿಳಿಸಿದೆ.

ತಮ್ಮ ಪಕ್ಷದ ತೀರ್ಮಾನದಂತೆ ಅಲ್ಲಂ ಚನ್ನಪ್ಪ ಅವರು ಅಧಿಕೃತವಾಗಿ ಇಂದು ನಾಮಪತ್ರ ಸಲ್ಲಿಸಿದ್ದಾರೆ ಎಂದು ಜನತಾದಳ (ಯು) ಸಂಸದೀಯ ಮಂಡಲಿ ಅಧ್ಯಕ್ಷ ಬಿ. ಸೋಮಶೇಖರ್ ಇಂದು ಇಲ್ಲಿ ಪ್ರಕಟಿಸಿದರು.

'ಬಳ್ಳಾರಿ ಲೋಕಸಭೆಯ ಉಪ ಚುನಾವಣೆಗೆ ಸಂಬಂಧಪಟ್ಟಂತೆ ಯಾವುದೇ ಕಾರಣದಿಂದಲೂ ನಮ್ಮ ಪಕ್ಷದ ಅಭ್ಯರ್ಥಿ ನಾಮಪತ್ರ ವಾಪಸ್ ಪಡೆಯುವುದಿಲ್ಲ ಹಾಗೂ ಬಿಜೆಪಿಯ ಅಭ್ಯರ್ಥಿಯನ್ನು ನಮ್ಮ ಪಕ್ಷ ಬೆಂಬಲಿಸುವುದಿಲ್ಲ. ಆದರೆ, ನಮ್ಮ ಪಕ್ಷದ ಅಭ್ಯರ್ಥಿಗೆ ಬಿಜೆಪಿ ಬೆಂಬಲ ನೀಡಲು ಮುಂದೆ ಬಂದರೆ ಸ್ವಾಗತ' ಎಂದು ಹೇಳಿದರು.

'ಈ ಬಾರಿ ನಮ್ಮ ಪಕ್ಷಕ್ಕೆ ಬೆಂಬಲ ನೀಡುವಂತೆ ನಾನು ಹಾಗೂ ವಿಧಾನಸಭೆಯಲ್ಲಿ ಪಕ್ಷದ ನಾಯಕರಾಗಿರುವ ಪಿ.ಜಿ. ಆರ್.ಸಿಂಧ್ಯ ಅವರು ಬಿಜೆಪಿ ಅಧ್ಯಕ್ಷ ಬಿ.ಎಸ್. ಯಡಿಯೂರಪ್ಪ ಅವರನ್ನು ವೈಯಕ್ತಿಕವಾಗಿ ಭೇಟಿ ಮಾಡಿ ಮಾತುಕತೆ ನಡೆಸಿದೆವು. ದುರದೃಷ್ಟವಶಾತ್ ಅವರು ಬೇರೆ ತೀರ್ಮಾನ ಕೈಗೊಂಡರು. ಅಲ್ಲದೆ, ಮಾಜಿ ಸಚಿವ ರಾಮಕೃಷ್ಣ ಹೆಗಡೆ ಅವರು ಸಹ ದೆಹಲಿ ಮಟ್ಟದಲ್ಲಿ ಬಿಜೆಪಿಯ ನಾಯಕರನ್ನು ಸಂಪರ್ಕಿಸಿ ಈ ಬಗ್ಗೆ ನಡೆಸಿದ ಮಾತುಕತೆಯೂ ಫಲ ನೀಡಲಿಲ್ಲ' ಎಂದರು.

50 ವರ್ಷಗಳ ಹಿಂದೆ

ಶನಿವಾರ, 1-2-1975

• ಪಂಚಾಯಿತಿ ಚುನಾವಣೆ ಮುಂದಕ್ಕೆ

ಬೆಂಗಳೂರು, ಜ. 31– ರಾಜ್ಯದಲ್ಲಿ ಗ್ರಾಮ ಪಂಚಾಯಿತಿಗಳ ಚುನಾವಣೆಗಳನ್ನು ಪುನಃ ಮುಂದಕ್ಕೆ ಹಾಕಲಾಗಿದೆ.

ಈ ಬಗ್ಗೆ ರಾಜ್ಯಪಾಲರು ಹೊರಡಿಸಿದ ಸುಗ್ರೀವಾಜ್ಞೆ ಜನವರಿ 29ರಿಂದ ಜಾರಿಗೆ ಬಂದಿದೆ. ಈಗ ಇರುವ ಗ್ರಾಮ ಪಂಚಾಯಿತಿಗಳೇ ಪುನಃ ಚುನಾವಣೆಗಳು ನಡೆಯುವವರೆಗೆ ಮುಂದುವರೆಯುವುವು. ಆಡಳಿತಾಧಿಕಾರಿಗಳಿರುವ ಕಡೆಗಳಲ್ಲಿ ಅವರೇ ಮುಂದುವರಿಯುವರು.

ಈಗ ವಿಧಾನಸಭೆಯಾಗಲಿ ವಿಧಾನಪರಿಷತ್ತಾಗಲಿ ಅಧಿವೇಶನದಲ್ಲಿ ಇಲ್ಲದಿರುವುದರಿಂದ ಪರಿಸ್ಥಿತಿಯ ಜರೂರನ್ನು ಗಮನಿಸಿ ಸುಗ್ರೀವಾಜ್ಞೆ ಹೊರಡಿಸಬೇಕಾಗಿದೆಯೆಂದು ಸುಗ್ರೀವಾಜ್ಞೆಯಲ್ಲಿ ರಾಜ್ಯಪಾಲರು ಸ್ಪಷ್ಟಪಡಿಸಿದ್ದಾರೆ.

'ಹಿಂದೂ ಸಂವಿಧಾನ' ಪರಿಕಲ್ಪನೆಯ ಆಳದಲ್ಲಿದೆ ಸಮತೆ ಮಮತೆಯ ಸಮಾಜದ ವಿರೋಧ

ಸಂವಿಧಾನ ಕಂಡರೆ ಕೆಲವರಿಗೇಕೆ ಭಯ?



ಪಡಸಾಲೆ

ರಘುನಾಥ ಚ.ಹ.

ಸಂವಿಧಾನದ ಅಮೃತ ಮಹೋತ್ಸವ ಆಚರಣೆಯ ಆಸುಪಾಸಿನಲ್ಲಿ ಎರಡು ಘೋರ ವಿನೋದಗಳಿಗೆ ಈ ದೇಶ ಸಾಕ್ಷಿಯಾಗಿದೆ. ಒಂದು, 'ಅಖಂಡ ಹಿಂದೂರಾಷ್ಟ್ರ'ಕ್ಕಾಗಿ 501 ಪುಟಗಳ 'ಸಂವಿಧಾನ' ಸಿದ್ಧಗೊಂಡಿರುವ ಸುದ್ದಿ ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ ಕುಂಭಮೇಳದಿಂದ ಹೊರಬಿದ್ದಿರುವುದು. ಎರಡನೆಯದು, ಅಯೋಧ್ಯೆಯಲ್ಲಿ ಬಾಲ ರಾಮನಿಗೆ ಪ್ರಾಣ ಪ್ರತಿಷ್ಠಾಪನಾ ಸಮಾರಂಭ ನಡೆದ 2024ರ ಜನವರಿ 22, ಭಾರತದ ನೈಜ ಸ್ವಾತಂತ್ರ್ಯ ದಿನ ಎನ್ನುವ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರ ಹೊಳಹು.

ಹಿಂದೂ ರಾಷ್ಟ್ರ ಸಂವಿಧಾನದ ಹೇಳಿಕೆ ಬಾಬಾ ಸಾಹೇಬ್ ಅಂಬೇಡ್ಕರ್ ಹಾಗೂ ಅವರ ನೇತೃತ್ವದಲ್ಲಿ ರೂಪುಗೊಂಡಿರುವ ಸಂವಿಧಾನಕ್ಕೆ ಎಸಗಿರುವ ಅಪಚಾರ. ಒಂದು ವರ್ಷದ ಹಿಂದಷ್ಟೇ ದೇಶಕ್ಕೆ ಸ್ವಾತಂತ್ರ್ಯ ದೊರೆತಿದೆ ಎಂದು ಹೇಳುವುದು, ಭಾರತದ ಸ್ವಾತಂತ್ರ್ಯ ಚಳವಳಿಗೆ ಹಾಗೂ ಆ ಚಳವಳಿಯಲ್ಲಿ ಜೀವ ತೆತ್ತವರಿಗೆ ಎಸಗಿರುವ ಅವಮಾನ. ಹೀಗೆ, ಏಕಕಾಲಕ್ಕೆ ಅಂಬೇಡ್ಕರ್ ಹಾಗೂ ಮಹಾತ್ಮ ಗಾಂಧಿ ನೇತೃತ್ವದ ಸ್ವಾತಂತ್ರ್ಯ ಹೋರಾಟಗಾರರನ್ನು ಅಪ್ರಸ್ತುತಗೊಳಿಸುವ ಹೇಳಿಕೆಗಳು ಕೇಂದ್ರ ಸರ್ಕಾರದ ಕಣ್ಣಿಗೆ ಅಥವಾ ಸರ್ಕಾರವನ್ನು ಪ್ರತಿನಿಧಿಸುವ ಪಕ್ಷಗಳಿಗೆ ದೇಶದ್ರೋಹದಂತೆ, ದೇಶದ ಪರಂಪರೆಗೆ ಎಸಗಿದ ಅವಮಾನದಂತೆ ಕಾಣಿಸದಿರುವುದು ದುರದೃಷ್ಟಕರ. ಸ್ವಾತಂತ್ರ್ಯ ಚರಿತೆ ಹಾಗೂ ಸಂವಿಧಾನವನ್ನು ಅಪಮಾನಗೊಳಿಸುವ ಮಾತು–ಕೃತಿಗಳಿಗೆ ಕಿವುಡು– ಕುರುಡಾಗಿರುವ ಮಂದಿಯೇ, ಅಮಿತ್ ಶಾ ಅವರ ಕುಂಭಸ್ನಾನವನ್ನು ಟೀಕಿಸಿದ ಮಲ್ಲಿಕಾರ್ಜುನ ಖರ್ಗೆ ಅವರ ಮೇಲೆ ಮುಗಿಬಿದ್ದುದನ್ನು ನೋಡಿದರೆ, ಈ ಕೂಗುಮಾರಿಗಳ ನಿಷ್ಠೆ ಮತ್ತು ಬದ್ಧತೆ ಯಾರಿಗೆ ಮತ್ತು ಯಾವುದಕ್ಕೆ ಎನ್ನುವುದನ್ನು ಹೇಳುವಂತಿದೆ.

ಅಮಿತ್ ಶಾ ಕುಂಭಮೇಳಕ್ಕೆ ಹೋಗಿದ್ದನ್ನು ಪ್ರಶ್ನಿಸಿದರೆ, ಮೆಕ್ಕಾ ಹಾಗೂ ಇಟಲಿಗೆ ಹೋಗುವವರನ್ನು ಯಾಕೆ ಪ್ರಶ್ನಿಸುವುದಿಲ್ಲ ಎನ್ನುವ ಪ್ರಶ್ನೆಗಳು ಎದುರಾಗುತ್ತವೆ. ಈ ಪ್ರಶ್ನೆ ಸರಿಯಾದುದೇ. ವ್ಯಕ್ತಿಯೊಬ್ಬನ ವೈಯಕ್ತಿಕ ನಂಬಿಕೆಗಳು ಹಾಗೂ ಧಾರ್ಮಿಕ ಆಚರಣೆಗಳನ್ನು ಗೌರವಿಸಬೇಕು. ಆದರೆ, ಸಾಂವಿಧಾನಿಕ ಹುದ್ದೆಗಳಲ್ಲಿ ಇರುವವರು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೊದಲು ನೂರು ಬಾರಿ ಯೋಚಿಸಬೇಕಾಗುತ್ತದೆ. ಅಮಿತ್ ಶಾ ಅವರು ಕೇಂದ್ರ ಸಚಿವರಾಗಿದ್ದುಕೊಂಡೂ, ಧಾರ್ಮಿಕ ಶ್ರದ್ಧೆಯುಳ್ಳ ವ್ಯಕ್ತಿಯಾಗಿ ಕುಂಭಮೇಳದಲ್ಲಿ ಭಾಗವಹಿಸುವುದರಲ್ಲಿ ಇಲ್ಲವೇ ಗಂಗಾಸ್ನಾನ ಮಾಡುವುದರಲ್ಲಿ ತಪ್ಪೇನಿಲ್ಲ. ಆದರೆ, ಹೀಗೆ ಬಹಿರಂಗವಾಗಿ ತಮ್ಮ ಧಾರ್ಮಿಕ ಶ್ರದ್ಧೆಯನ್ನು ಪ್ರಕಟಪಡಿಸುವ ವ್ಯಕ್ತಿ ಈ ಮೊದಲೂ ಹಿಂದೂ ಧರ್ಮದ ವಕ್ತಾರರಂತೆ ವರ್ತಿಸಿದ್ದರು. ವ್ಯಕ್ತಿಯೊಬ್ಬ ಸಾಂವಿಧಾನಿಕ ಹುದ್ದೆಯಲ್ಲಿದ್ದಾಗ ತನ್ನ ವ್ಯಕ್ತಿಗತ ನಂಬಿಕೆಗಳಿಂದ ಅಂತರ ಉಳಿಸಿಕೊಳ್ಳುವುದು ಅಗತ್ಯ. ಸಾಂವಿಧಾನಿಕ ಹುದ್ದೆಯಿಂದ ಹೊರಬಂದ ನಂತರ ಕುಂಭಮೇಳಕ್ಕೆ ಇಲ್ಲವೇ ಮೆಕ್ಕಾ ಅಥವಾ ವ್ಯಾಟಿಕನ್‌ಗೆ ಹೋಗುವುದರಲ್ಲಿ ಯಾವ ಸಮಸ್ಯೆಯೂ ಇಲ್ಲ.

ಸಾಂವಿಧಾನಿಕ ಹುದ್ದೆಯಲ್ಲಿರುವವರು ಧರ್ಮದಿಂದ ಅಂತರ ಕಾಯ್ದುಕೊಳ್ಳುವುದು ಎಷ್ಟು ಅಗತ್ಯವೋ ಧಾರ್ಮಿಕ ಸ್ಥಾನಗಳನ್ನು ಪ್ರತಿನಿಧಿಸುವವರು ಸಂವಿಧಾನ ನಿರ್ದೇಶಿತ ರಾಜಕೀಯ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುವುದೂ ಸರಿಯಲ್ಲ, ಧರ್ಮಸಮ್ಮತವಲ್ಲ. ಹಿಂದೂಗಳು ಏನನ್ನು ಪಾಲಿಸಬೇಕು ಎಂದು ಹಿಂದೂ ಧರ್ಮಕ್ಕೆ ಸೇರಿದ ಸಾಧುಸಂತರು ಹೇಳುವುದು ಅಸಹಜವಲ್ಲ. ಆದರೆ, ಸಂವಿಧಾನ ಹೇಗಿರಬೇಕು, ಏನನ್ನು ಒಳಗೊಂಡಿರಬೇಕು ಎಂದು ಹೇಳುವುದು ಅವರ ಕೆಲಸವಲ್ಲ. ಸಾಂವಿಧಾನಿಕ ಹುದ್ದೆಯಲ್ಲಿದ್ದುಕೊಂಡೂ ನಿರ್ದಿಷ್ಟ ಧರ್ಮದ ಬಗ್ಗೆ ಒಲವು ಪ್ರಕಟಪಡಿಸುವವರು ಸಂವಿಧಾನಕ್ಕೆ ಅಪಚಾರ ಎಸಗುತ್ತಿರುತ್ತಾರೆ ಹಾಗೂ ಧರ್ಮಗುರುಗಳ ರಾಜಕೀಯ ಚಿಂತನೆ ಅಧಾರ್ಮಿಕ ಎಂದೇ ಹೇಳಬೇಕಾಗುತ್ತದೆ.

ಸಂವಿಧಾನ ಒಂದು ನಿರ್ದಿಷ್ಟ ಸಮುದಾಯಕ್ಕೆ ಸಂಬಂಧಿಸಿದ್ದಲ್ಲ ಎನ್ನುವ ಪ್ರಾಥಮಿಕ ತಿಳಿವಳಿಕೆ ಇಲ್ಲದವರಷ್ಟೇ ಸಂವಿಧಾನವನ್ನು ಧಾರ್ಮಿಕ ನೆಲಗಟ್ಟಿನಲ್ಲಿ ನೋಡಬಲ್ಲರು. ಹಿಂದೂ ಸಂವಿಧಾನ, ಮುಸ್ಲಿಂ ಸಂವಿಧಾನ, ಕ್ರಿಶ್ಚಿಯನ್ ಸಂವಿಧಾನ ಎಂದು ಸಂವಿಧಾನವನ್ನು ಪ್ರತ್ಯೇಕವಾಗಿ ಗುರುತಿಸುವುದು ಸಾಧ್ಯವಿಲ್ಲ.

'ದಾಸ್ಯ ಮತ್ತು ಅನುಗ್ರಹದಿಂದ ಭಾರತವನ್ನು ಬಿಡುಗಡೆಗೊಳಿಸುವ ಸಂವಿಧಾನಕ್ಕಾಗಿ ನಾನು ಶ್ರಮಿಸುತ್ತೇನೆ. ಅತ್ಯಂತ ಬಡವರು ಸಹ ಇದು ತಮ್ಮ ದೇಶ ಎಂದು ಭಾವಿಸುವ, ರಾಷ್ಟ್ರ ನಿರ್ಮಾಣದಲ್ಲಿ ತಮ್ಮ ಧ್ವನಿಯನ್ನು ಅಭಿವ್ಯಕ್ತಗೊಳಿಸುವ, ಯಾವುದೇ ಉನ್ನತ ಅಥವಾ ಕೆಳ ವರ್ಗಗಳಿಲ್ಲದ, ಎಲ್ಲ ಸಮುದಾಯಗಳು ಪೂರ್ಣ ಪ್ರಮಾಣದ ಸಾಮರಸ್ಯದಿಂದ ಜೀವಿಸುವ ಭಾರತಕ್ಕಾಗಿ ನಾನು ಕೆಲಸ ಮಾಡುತ್ತೇನೆ' ಎಂದು ಗಾಂಧೀಜಿ ಹೇಳಿದ್ದರು (ಯಂಗ್ ಇಂಡಿಯಾ, 1931). ಈ ಅರಿವಿಗೆ ವಿರುದ್ಧವಾದ 'ಹಿಂದೂ ಸಂವಿಧಾನ'ದ ಪರಿಕಲ್ಪನೆಯಲ್ಲಿ ಮುಸ್ಲಿಮರನ್ನು ದಮನಿಸುವ ಕೋಮು ಮನಃಸ್ಥಿತಿ ಮೇಲ್ನೋಟಕ್ಕೆ ಕಾಣಿಸಿದರೂ, ವಿಭಜಕ ಮನೋಧರ್ಮದ ಆಳದಲ್ಲಿರುವುದು ಸಮ ಸಮಾಜದ ವಿರೋಧ. ಜಾತಿಯ ಹೆಸರಿನಲ್ಲಿ ಈ ದೇಶದ ಬಹುಸಂಖ್ಯಾತರನ್ನು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಕನಿಷ್ಠರನ್ನಾಗಿಸಿದ ವರ್ಗವೇ ಈಗ ಸಂವಿಧಾನ ಬದಲಾವಣೆಯ ಮಾತುಗಳನ್ನಾಡುತ್ತಿದೆ.

ಮನುಸ್ಮೃತಿ, ರಾಮರಾಜ್ಯ ಮತ್ತು ಚಾಣಕ್ಯನ 'ಅರ್ಥಶಾಸ್ತ್ರ'ದಲ್ಲಿನ ತತ್ವಾದರ್ಶಗಳ ನೆಲಗಟ್ಟಿನಲ್ಲಿ ವಿನ್ಯಾಸಗೊಳಿಸಲಾಗಿದೆ ಎನ್ನಲಾದ 'ಅಖಂಡ ಹಿಂದೂ ರಾಷ್ಟ್ರ'ದ ಸಂವಿಧಾನ, ಸನಾತನ ಧರ್ಮದ ಅನುಯಾಯಿಗಳಿಗಷ್ಟೇ ಚುನಾವಣೆಯಲ್ಲಿ ಸ್ಪರ್ಧಿಸುವ ಅವಕಾಶ ನೀಡುತ್ತದಂತೆ. ಆ ಚುನಾವಣಾ ವ್ಯವಸ್ಥೆಯಲ್ಲಿ ಸನಾತನ ಧರ್ಮೀಯರೊಂದಿಗೆ ಜೈನ, ಸಿಖ್, ಬೌದ್ಧ ಅನುಯಾಯಿಗಳು ಮಾತ್ರವೇ ಮತದಾನದ ಹಕ್ಕುಗಳನ್ನು ಪಡೆಯಲಿದ್ದಾರೆ. ಎಲ್ಲರಿಗೂ ಸಮಾನ ಅವಕಾಶಗಳನ್ನು ಕಲ್ಪಿಸುವ ಹಾಗೂ ಸಮ ಸಮಾಜವನ್ನು ಹಂಬಲಿಸುವ ಸಂವಿಧಾನವನ್ನು ಬದಲಿಸಲು ಹೊರಟವರಿಗೆ 'ನೊಂದವರ ನೋವ ನೋಯದವರೆತ್ತ ಬಲ್ಲರು' ಎನ್ನುವ ಮಾತು ಅರ್ಥವಾಗುವುದು ಕಷ್ಟ. ನೊಂದವರು, ಸಮಾಜದ ತರತಮಗಳನ್ನು ಅನುಭವಿಸಿದವರು ಹಾಗೂ ಗಾಯಗೊಂಡವರ ಪ್ರತಿನಿಧಿಯ ಮುಂದಾಳತ್ವದಲ್ಲಿ ರೂಪುಗೊಂಡ ಕಾರಣದಿಂದಲೇ 'ಭಾರತೀಯ ಸಂವಿಧಾನ'ವು ಜನರ ನೋವಿಗೆ ಮಿಡಿವ ಪ್ರಾಣಮಿತ್ರನಾಗಲು ಸಾಧ್ಯವಾಗಿದೆ; 'ಬಡವರ ನಗುವಿನ ಶಕ್ತಿ'ಯಾಗಿದೆ.

ದೇವರು ಹಾಗೂ ಧರ್ಮ ಸಾಮಾಜಿಕ ಸಂರಚನೆಯ ಕೇಂದ್ರದಲ್ಲಿರುವ ಸಂಗತಿಗಳು. ಒಂದಲ್ಲಾ ಒಂದು ಬಗೆಯಲ್ಲಿ ದೇವರು ಹಾಗೂ ಧರ್ಮವನ್ನು ಒಳಗೊಳ್ಳದ ಯಾವ ನಾಗರಿಕತೆಯೂ ಇಲ್ಲ, ಯಾವ ದೇಶ–ಕಾಲವೂ ಇಲ್ಲ. ಮನುಷ್ಯನನ್ನು ಸರಿದಾರಿಯಲ್ಲಿ ನಡೆಸುವುದರಲ್ಲಿ ದೇವರು–ಧರ್ಮದ ಅಸ್ತಿತ್ವವಿದೆ. ಆದರೆ, ದೇವರು ಮತ್ತು ಧರ್ಮ ಸೃಷ್ಟಿಸಿರುವ ಸಂಕೇತಗಳು ಜನರ ಶರಣಾಗತಿಯನ್ನು ಬಯಸುತ್ತವೆ. ಭಕ್ತಿ, ಪಾಪಪ್ರಜ್ಞೆಯ ಮೂಲಕ ಸಮುದಾಯವನ್ನು ನಿಯಂತ್ರಿಸಲು ಪ್ರಯತ್ನಿಸುತ್ತವೆ. ಸಂವಿಧಾನದ ಅನನ್ಯತೆ ಇರುವುದು, ವ್ಯಕ್ತಿಯಲ್ಲಿ ಹಾಗೂ ಸಮುದಾಯದಲ್ಲಿ ಆತ್ಮಾಭಿಮಾನವನ್ನು ರೂಪಿಸುವುದರಲ್ಲಿ. ಸಂವಿಧಾನ ಕೊಟ್ಟಿರುವ ಸಂಕೇತಗಳು ನಮ್ಮಿಂದ ಶರಣಾಗತಿಯನ್ನು ಬಯಸುವುದಿಲ್ಲ; ಸಹಭಾಗಿತ್ವವನ್ನು ಬಯಸುತ್ತವೆ. ದೇವರ ಸನ್ನಿಧಿಯಲ್ಲಿ ಭಕ್ತ ಶಿರಬಾಗುತ್ತಾನೆ; ರಾಷ್ಟ್ರಗೀತೆ ಹಾಡುವಾಗ ನಾವು ಎದೆಯುಬ್ಬಿಸುತ್ತೇವೆ, ರಾಷ್ಟ್ರಧ್ವಜಕ್ಕೆ ತಲೆಯೆತ್ತಿ ವಂದಿಸುತ್ತೇವೆ. ಶರಣಾಗತಿಯ ಭಕ್ತಿಮಾರ್ಗ ಒಂದೆಡೆಯಾದರೆ, ಸಂವಿಧಾನದ ಶಕ್ತಿಮಾರ್ಗ ಇನ್ನೊಂದೆಡೆ. ದೇವರು–ಧರ್ಮದ ಹೆಸರಿನಲ್ಲಿ ಸಮಾಜದಲ್ಲಿ ಅಸ್ತಿತ್ವದಲ್ಲಿರುವ ತರತಮ ಭಾವಗಳ ನಿವಾರಣೆಗೆ ಸಂವಿಧಾನದ 'ಶಕ್ತಿಮಾರ್ಗ'ವೇ ಮದ್ದು. ಈ ಸಂವಿಧಾನ ಮಾರ್ಗ ಜಾತೀಯ ಮನಸ್ಸುಗಳಿಗೆ ಮುಳ್ಳಿನ ಮಾರ್ಗವಾಗಿರುವುದರಿಂದಲೇ, ಅವರು ಧರ್ಮಾಧಾರಿತ ಸಂವಿಧಾನದ ಮಾತುಗಳನ್ನು ಚಲಾವಣೆಗೆ ತರುತ್ತಾರೆ.

ಸಂವಿಧಾನದ ಶಕ್ತಿಯನ್ನು ಅರಿಯಲು 'ಚರ್ಮ ಕುಟೀರ'ಗಳಿಗೆ ಹೋಗಬೇಕು. ಮನುಷ್ಯನೊಬ್ಬ ಕಾಲು ಚಾಚಿ ಕೂರಬಹುದಾದಷ್ಟು ಸಣ್ಣದಾದ ಕುಟೀರಗಳಲ್ಲಿ ಅಂಬೇಡ್ಕರ್ ಭಾವಚಿತ್ರವೊಂದು ಕಾಣಿಸುತ್ತದೆ. ದೇವರ ಪಟದ ಸ್ಥಾನದಲ್ಲಿರುವ ಅಂಬೇಡ್ಕರ್ ಚಿತ್ರಪಟ ಏನನ್ನು ಸೂಚಿಸುತ್ತದೆ? 'ಜೈ ಭೀಮ್' ಎನ್ನುವ ಘೋಷಣೆ ಕೋಟಿ ಕೋಟಿ ಜನರಲ್ಲಿ ರೋಮಾಂಚನ ಹುಟ್ಟಿಸುವುದರ ಜೊತೆಗೆ ಬದುಕಿನ ತಾತ್ವಿಕತೆ ಆಗಿರುವುದು ಹೇಗೆ? ಸಾಮಾಜಿಕ ಬದಲಾವಣೆಗೆ ಹಂಬಲಿಸುತ್ತಿರುವ ಅಸಂಖ್ಯ ಮನಸ್ಸುಗಳು ಅಂಬೇಡ್ಕರ್ ಚಿಂತನೆಗಳನ್ನು ನೆಚ್ಚಿಕೊಂಡಿರುವುದೇಕೆ? ಅಂತಃಕರಣದ ಅನಂತ ಬಯಲಿನಂತೆ ನೀಲಿ ಶಾಲು ಭಾಸವಾಗುವುದು ಹೇಗೆ? ಈ ಪ್ರಶ್ನೆಗಳಿಗೆ ದೊರೆಯುವ ಉತ್ತರಗಳಿಗೆ ಅಳುಕಿದ ಮಂದಿಯೇ, ಇಂಥ ಪ್ರಶ್ನೆಗಳನ್ನೇ ಹುಟ್ಟಿಸದ ಸಂವಿಧಾನದ ಕುರಿತು ಮಾತನಾಡುತ್ತಾರೆ.



ಚುರುಮುರಿ



ಸ್ನಾನ ಸಂಭ್ರಮ

• ಮಣ್ಣೆ ರಾಜು

ಗೋಪಾಲಿ, ವೈಶಾಲಿ ಮನೆಗೆ ಬಂದು, 'ಮಹಾಕುಂಭಮೇಳಕ್ಕೆ ಪ್ಯಾಕೇಜ್ ಟೂರ್ ಹೋಗಿ ಪುಣ್ಯಸ್ನಾನ ಮಾಡಿ ಬಂದ್ವಿ...' ಎಂದು ಪ್ರಸಾದ ಕೊಟ್ಟರು.

'ಪವಿತ್ರ ಸ್ನಾನದ ಪ್ರಭಾವವೋ ಏನೋ ನಿನ್ನಲ್ಲಿ ಬಹಳಷ್ಟು ಬದಲಾವಣೆ ಕಾಣ್ತಿದೆ. ಮೊದಲಿದ್ದ ಗತ್ತು, ದೌಲತ್ತು ಮರೆಯಾಗಿ ಸಹನೆ, ಸೌಜನ್ಯ ಕಾಣ್ತಿದೆ' ಅಂದ ಶಂಕ್ರಿ.

'ನನ್ನ ಹೆಂಡ್ತಿಯ ಸಿಟ್ಟು ಸಿಡುಕೂ ಕಮ್ಮಿಯಾಗಿದೆ. ಮನುಷ್ಯರಾಗಿ ನಾವು ಗೊತ್ತಿದ್ದೊ ಗೊತ್ತಿಲ್ಲದೆಯೋ ಪಾಪ ಮಾಡಿರ್ತೀವಿ. ಪವಿತ್ರ ನದಿಯಲ್ಲಿ ಮುಳುಗಿದರೆ ಪಾಪ ನಿವಾರಣೆಯಾಗಿ ಪುಣ್ಯ ಪ್ರಾಪ್ತಿಯಾಗುತ್ತದೆ ಅಂತ ಗುರೂಜಿ ಹೇಳಿದ್ದರು, ಹೋಗಿಬಂದ್ವಿ' ಅಂದ ಗೋಪಾಲಿ.

'ದಿನಾ ಜಗಳವಾಡುವ ರಾಜಕಾರಣಿಗಳು ಪವಿತ್ರ ಸ್ನಾನ ಮಾಡಿದರೆ ಅವರಲ್ಲಿ ಶಾಂತಿ, ಸಹನೆ ಮೂಡಿ ಅವರ ಕುರ್ಚಿ ಇಷ್ಟಾರ್ಥಗಳು ಈಡೇರುತ್ತಿದ್ದವೇನೋ...' ಕಾಫಿ ತಂದುಕೊಟ್ಟಳು ಸುಮಿ.

'ರಾಜಕಾರಣಿಗಳು, ಮಂತ್ರಿಮಹೋದಯರು, ಸಾಧುಸಂತರು, ಸಿನಿಮಾ ನಟನಟಿಯರೂ ನದಿಯಲ್ಲಿ ಮುಳುಗಿ ಪಾಪ ತೊಳೆದುಕೊಂಡ್ರು ಕಣ್ರೀ' ವೈಶಾಲಿ ಹೇಳಿದಳು.

'ಅಂದಹಾಗೆ... ಕುಂಭಮೇಳದಲ್ಲಿ ಮಾಲೆ ಮಾರುವ ಮೊನಾಲಿಸಾ ಸಿಕ್ಕಿದ್ಲಾ?!' ಶಂಕ್ರಿ ಕೇಳಿದ.

'ಸಿಕ್ಕಿದ್ದಳು. ಅವಳನ್ನು ನೋಡಲು ಜನವೋ ಜನ. ನೂಕುನುಗ್ಗಲಲ್ಲಿ ನಾನೂ ಹೋಗಿ ಅವಳ ಜೊತೆ ಸೆಲ್ಫಿ ತಗೊಂಡೆ' ಅಂದ ಗೋಪಾಲಿ.

'ನನ್ನ ಕಣ್ಣು ತಪ್ಪಿಸಿ ಅದ್ಯಾವಾಗ ಹೋಗಿ ಅವಳ ಜೊತೆ ಸೆಲ್ಫಿ ತಗೊಂಡ್ರೀ?' ವೈಶಾಲಿಗೆ ಸಿಟ್ಟು ಬಂತು.

'ಹಾಗಲ್ಲಾ, ಬಾಲಿವುಡ್ ಸಿನಿಮಾದಲ್ಲಿ ನಟಿಸಲು ಅವಳಿಗೆ ಆಫರ್ ಬಂದಿದೆಯಂತೆ. ಹೀರೋಯಿನ್ ಆದ್ಮೇಲೆ ಸೆಲ್ಫಿ ಕಷ್ಟ ಅಂತ...' ಗೋಪಾಲಿ ತಡವರಿಸಿದ.

'ಪರ್ವಾಗಿಲ್ಲ ಬಿಡಿ, ಅವಳ ಜೊತೆ ನಾನೂ ಸೆಲ್ಫಿ ತಗೊಂಡಿದ್ದೀನಿ...' ಎಂದು ವೈಶಾಲಿ ಮೊಬೈಲ್‌ನಲ್ಲಿ ಫೋಟೊ ತೋರಿಸಿ ಸಂಭ್ರಮಿಸಿದಳು.

ಸಂಗತ

ಸಿನಿಮಾ ಪ್ರಶಸ್ತಿ... ಗುಣಮಟ್ಟ ನಾಸ್ತಿ

ಸಂಖ್ಯಾಸಮೃದ್ಧಿ ಇದ್ದರೂ ಗುಣಮಟ್ಟದಲ್ಲಿ ಬಡತನ ಎನ್ನುವ ಸ್ಥಿತಿ ಕನ್ನಡ ಚಿತ್ರರಂಗದ್ದು

• ವಿಶಾಖ ಎನ್.

2021ರಲ್ಲಿ ತೆರೆಕಂಡ 'ಪುಷ್ಪ- ದಿ ರೈಸ್' ಸಿನಿಮಾದ ನಟನೆಗಾಗಿ ನಾಯಕ ಅಲ್ಲು ಅರ್ಜುನ್ ಅವರಿಗೆ ಶ್ರೇಷ್ಠ ನಾಯಕನಟ ವಿಭಾಗದಲ್ಲಿ ರಾಷ್ಟ್ರ ಪ್ರಶಸ್ತಿ ನೀಡಲಾಯಿತು. ವಿಲಕ್ಷಣ ಹಾವಭಾವ, ಅವಗುಣಗಳಿಂದ ಇಡುಕಿರಿದ ಪ್ರತಿನಾಯಕನ ಗುಣಗಳು ಇರುವ ಅಂತಹ ಪಾತ್ರಕ್ಕೆ ಶ್ರೇಷ್ಠ ನಟ ಪ್ರಶಸ್ತಿ ಪ್ರಕಟಿಸಿದ ತೀರ್ಪುಗಾರರ ಅಭಿರುಚಿ ಆಗ ಸಾಮಾಜಿಕ ಮಾಧ್ಯಮದಲ್ಲಿ ಚರ್ಚೆಗೆ ಒಳಪಟ್ಟಿತ್ತು. ಕರ್ನಾಟಕ ರಾಜ್ಯ ಸರ್ಕಾರ ಇತ್ತೀಚೆಗೆ 2019ನೇ ಸಾಲಿನ ಸಿನಿಮಾ ಪ್ರಶಸ್ತಿಗಳನ್ನು ಪ್ರಕಟಿಸಿದೆ. 'ಪೈಲ್ವಾನ್' ಸಿನಿಮಾ ಅಭಿನಯಕ್ಕೆ ಸುದೀಪ್ ಅವರನ್ನು ಶ್ರೇಷ್ಠ ನಟ ಎಂದು ಆಯ್ಕೆ ಸಮಿತಿಯು ಆರಿಸಿತು. ಅವರು ಪ್ರಶಸ್ತಿ ಸ್ವೀಕರಿಸುವುದಿಲ್ಲ ಎಂದು ಹೇಳಿದ್ದು ಬೇರೆಯ ಮಾತು.


ಶ್ರೇಷ್ಠ ಅಭಿನಯಕ್ಕಾಗಿ ಜನಪ್ರಿಯ ನಟರಿಗೆ ಪ್ರಶಸ್ತಿ ಕೊಟ್ಟರೆ ಸಮಾರಂಭಕ್ಕೆ ಒಂದು ಕಳೆ ಬರುತ್ತದೆ ಎನ್ನುವ ಲೆಕ್ಕಾಚಾರ ಸುದೀಪ್ ಆಯ್ಕೆಯ ಹಿಂದೆ ಇರಬಹುದು ಎಂಬ ಜಿಜ್ಞಾಸೆ ಕೂಡ ಇದೆ.

ಪ್ರಶಸ್ತಿ ಪಟ್ಟಿಯಲ್ಲಿನ ಇನ್ನೊಂದು ಆಯ್ಕೆ- 'ಇಂಡಿಯಾ Vs ಇಂಗ್ಲೆಂಡ್'. ಈ ಚಿತ್ರಕ್ಕೆ ಶ್ರೇಷ್ಠ ಜನಪ್ರಿಯ ಮನರಂಜನಾ ಚಿತ್ರ ಎಂಬ ವಿಭಾಗದಲ್ಲಿ ಪ್ರಶಸ್ತಿ ಘೋಷಿಸಲಾಗಿದೆ. ಪ್ರಶಸ್ತಿಗಳಿಗೆ ಪರಿಗಣಿಸಲಾದ, 2019ನೇ ಇಸವಿಯ ಸಿನಿಮಾಗಳ ಪಟ್ಟಿಯ ಮೇಲೆ ಒಮ್ಮೆ ಕಣ್ಣಾಡಿಸಿದರೆ, ಜನಪ್ರಿಯವಾದ ಅರ್ಧ ಡಜನ್ ಸಿನಿಮಾಗಳಾದರೂ ಕಣ್ಣಿಗೆ ಬೀಳುತ್ತವೆ. 'ಬೆಲ್ ಬಾಟಮ್', 'ಕವಲುದಾರಿ', 'ಯಜಮಾನ', 'ದಿಯಾ' ಆ ಪೈಕಿ ಕೆಲವು ಉದಾಹರಣೆಗಳು.

ಇನ್ನು, ಅತ್ಯುತ್ತಮ ಸಿನಿಮಾ ಪ್ರಶಸ್ತಿಗೆ ಆಯ್ಕೆಯಾದ ಎರಡು ಚಿತ್ರಗಳನ್ನು ಗಮನಿಸೋಣ. ಮೊದಲನೆಯ ಅತ್ಯುತ್ತಮ ಚಿತ್ರ 'ಮೋಹನದಾಸ'. ಗಾಂಧಿ ರೂಪಕದ ಪ್ರಸ್ತುತತೆ ಕಾರಣಕ್ಕೆ ಈ ಆಯ್ಕೆಯನ್ನು ಒಪ್ಪಬಹುದು. ಎರಡನೆಯ ಅತ್ಯುತ್ತಮ ಚಿತ್ರ ಎಂದು ಆಯ್ಕೆಯಾಗಿರುವುದು 'ಲವ್ ಮಾಕ್ಟೇಲ್'. ರಾಜ್‌ಕುಮಾರ್ ಅಭಿನಯದ 'ಹಾಲುಜೇನು' ಕನ್ನಡ ಸಿನಿಮಾದ ಆತ್ಮ ಇಟ್ಟುಕೊಂಡಿರುವ ಈ ಕಾಲದ ಚಿತ್ರವಿದು. ಇದು ಕೋವಿಡ್ ಸಂದರ್ಭದಲ್ಲಿ ಒಟಿಟಿ ವೇದಿಕೆಯಲ್ಲಿ ಜನಪ್ರಿಯತೆ ಪಡೆದುಕೊಂಡಿದ್ದ ಚಿತ್ರ. ಆ ದೃಷ್ಟಿಯಿಂದ ನೋಡಿದರೆ ಇದನ್ನೂ ಶ್ರೇಷ್ಠ ಜನಪ್ರಿಯ ಮನರಂಜನಾ ಸಿನಿಮಾ ವಿಭಾಗದ ಪ್ರಶಸ್ತಿಗೆ ಪರಿಗಣಿಸಬಹುದಾಗಿತ್ತು.

ಗಿರೀಶ ಕಾಸರವಳ್ಳಿ ನಿರ್ದೇಶನದ 'ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ' ಚಿತ್ರದ ಮೊದಲ ಅರ್ಧವು ಸಿನಿಮಾ ವ್ಯಾಕರಣ ಕಲಿಯಲು ಬಯಸುವ ಅನೇಕರಿಗೆ ದೃಶ್ಯ ಪಾಠವನ್ನು ಅಡಗಿಸಿ ಇಟ್ಟುಕೊಂಡಿದೆ. ಬರಗೂರು ರಾಮಚಂದ್ರಪ್ಪ ಅವರ 'ಅಮೃತಮತಿ' ಕೂಡ ವಸ್ತುವಿಷಯದ ದೃಷ್ಟಿಯಿಂದ ಗಮನ ಸೆಳೆಯುವ ಚಿತ್ರಕೃತಿ. ಅವುಗಳಿಗೆ ನೆಪಮಾತ್ರಕ್ಕೆ ಎನ್ನುವಂತೆ ಶ್ರೇಷ್ಠ ಕತೆ ವಿಭಾಗದಲ್ಲಿ (ಜಯಂತ ಕಾಯ್ಕಿಣಿ- ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ) ಒಂದು ಪ್ರಶಸ್ತಿ, ಸಂಭಾಷಣೆಗೆ ಇನ್ನೊಂದು (ಅಮೃತಮತಿ- ಬರಗೂರು ರಾಮಚಂದ್ರಪ್ಪ) ಪ್ರಶಸ್ತಿ ನೀಡಲಾಗಿದೆ. ಅಮೃತಮತಿ ಚಿತ್ರಕ್ಕೆ ತೀರ್ಪುಗಾರರ ವಿಶೇಷ ಮೆಚ್ಚುಗೆ ಎಂಬ ಕಣ್ಣೊರೆಸುವ ಪ್ರಶಸ್ತಿಯೊಂದನ್ನೂ ನೀಡಲಾಗಿದೆ; ಅದೂ ಮತ್ತೊಂದು ಚಿತ್ರದ ಜೊತೆಗೆ ಹಂಚಲಾಗಿದೆ.

ಕೋವಿಡ್ ವ್ಯಾಪಕವಾಗಿದ್ದ ನಂತರ, ಸಿನಿಮಾ ಪ್ರಶಸ್ತಿಗಳನ್ನು ಇದುವರೆಗೆ ನೀಡಿಯೇ ಇರಲಿಲ್ಲ. ಈಗ ಹಳೆಯ ಕಂತಿನ ಪ್ರಶಸ್ತಿಗಳು ಪ್ರಕಟವಾಗಿವೆ. ಇಂತಹ ಸಂದರ್ಭದಲ್ಲಿ ಆಯ್ಕೆಗಳು ಹೆಚ್ಚು ತೂಕವಾಗಿ ಇರಬೇಕಿತ್ತು. ಯಾಕೆಂದರೆ, ಆರ್ಥಿಕ ಹಿನ್ನಡೆಯ ಹೊಡೆತದ ನಂತರ ಕನ್ನಡ ಚಿತ್ರರಂಗವು ಗುಣಮಟ್ಟದ ವಿಷಯದಲ್ಲಿ ಬಹಳಷ್ಟು ಕುಸಿದಿದೆ. ಸಂಖ್ಯಾಸಮೃದ್ಧಿ ಇದ್ದರೂ ಗುಣಮಟ್ಟದಲ್ಲಿ ಬಡತನ ಎನ್ನುವ ಸ್ಥಿತಿ. ಇಂತಹ ಹೊತ್ತಿನಲ್ಲಿ ರೋಮ್ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಸ್ಪರ್ಧಾ ವಿಭಾಗಕ್ಕೆ ಹೋಗಿದ್ದ 'ಇಲ್ಲಿರಲಾರೆ...' ಹಾಗೂ ಲಾಸ್ ಏಂಜಲೀಸ್ ಚಿತ್ರೋತ್ಸವದಲ್ಲಿ ಪ್ರಶಸ್ತಿಗೆ ಭಾಜನವಾದ 'ಅಮೃತಮತಿ' ಅಧ್ಯಯನದ ದೃಷ್ಟಿಯಿಂದ ಮಹತ್ವ ಪಡೆದುಕೊಳ್ಳುತ್ತವೆ. ಜನ್ನನ ಯಶೋಧರ ಚರಿತೆಯನ್ನು ಈ ದಿನಮಾನದಲ್ಲಿ ಹೇಳುವ ಬರಗೂರು ಅವರ ಪ್ರಯತ್ನ ಸಿನಿಮಾ ತಂತ್ರಜ್ಞಾನದ ಚೌಕಟ್ಟಿನಲ್ಲಿ ಸವಾಲೊಂದನ್ನು ಸ್ವೀಕರಿಸಿದಂತೆಯೇ ಸರಿ.



ಪರ್ಯಾಯ ಪ್ರಯತ್ನಗಳಿಗೆ ಹೊರತಾಗಿಯೂ 'ಕವಲುದಾರಿ' ಸಿನಿಮಾದ ಥ್ರಿಲ್ಲರ್ ರೂಹು, 'ಬೆಲ್ ಬಾಟಮ್' ಚಿತ್ರದಲ್ಲಿ ಇರುವ ರೊಮ್ಯಾಂಟಿಕ್ ಕಾಮಿಡಿ ಹಾಗೂ ಸಸ್ಪೆನ್ಸ್ ಬೆರೆಸಿದ ಗಟ್ಟಿತನ, 'ದಿಯಾ' ಚಿತ್ರದ ಹೊಸ ಮುಖಗಳ ಭರವಸೆಗೆ ಮನ್ನಣೆ ಸಿಗಬೇಕಿತ್ತು.

ಶ್ರೇಷ್ಠ ಸಂಗೀತ ನಿರ್ದೇಶನ ಪ್ರಶಸ್ತಿಯು ವಿ.ಹರಿಕೃಷ್ಣ ಅವರಿಗೆ 'ಯಜಮಾನ' ಚಿತ್ರದ ಹಾಡುಗಳಿಗಾಗಿ ದೊರೆತಿದೆ. 'ಮುಂದಿನ ನಿಲ್ದಾಣ' ಚಿತ್ರದಲ್ಲಿ ವಾಸುಕಿ ವೈಭವ್ ಹಿಂದೂಸ್ತಾನಿ ರಾಗ ಬಳಸಿ ಹಾಡೊಂದಕ್ಕೆ ಮಾಡಿದ್ದ ಸ್ವರ ಸಂಯೋಜನೆಯ ಪ್ರಯೋಗವು (ಹಾಡು: ಇನ್ನೂನು ಬೇಕಾಗಿದೆ) ಎಲ್ಲ ದೃಷ್ಟಿಯಿಂದಲೂ ಈ ಆಯ್ಕೆಗಿಂತ ಮೇಲೇಳುತ್ತದೆ. ಆ ಸಿನಿಮಾದ ಒಂದೊಂದು ಹಾಡಿಗೂ ಒಬ್ಬೊಬ್ಬ ಸಂಗೀತ ನಿರ್ದೇಶಕರಿಂದ ಮಟ್ಟು ಹಾಕಿಸುವ ಪ್ರಯೋಗವೂ ನಡೆದಿತ್ತು. ಇಂಥವನ್ನು ಗುರುತಿಸುವ ಸಾಧ್ಯತೆಯೂ ಪ್ರಶಸ್ತಿ ಆಯ್ಕೆ ಸಮಿತಿಗೆ ಇರುತ್ತದೆ.

ಸಿನಿಮಾ ಪ್ರಶಸ್ತಿಗಳಿಗೆ ಪರಿಗಣಿಸುವಾಗ ಈಗಾಗಲೇ ದೊಡ್ಡವರಿಗೆ ಪ್ರಶಸ್ತಿ ಬಂದಿದೆ, ಅವರನ್ನು ಮತ್ತೆ ಯಾಕೆ ಪರಿಗಣಿಸಬೇಕು ಎನ್ನುವ ಅವ್ಯಕ್ತ ಧೋರಣೆಯೊಂದು ಕೆಲಸ ಮಾಡುವುದು ಎದ್ದು ಕಾಣುತ್ತಿದೆ. ಕಾಸರವಳ್ಳಿ, ಬರಗೂರು ಅವರಂಥ ನಿರ್ದೇಶಕರು ಇದೇ ಕಾರಣಕ್ಕೆ ಈಗೀಗ ನಿರ್ಲಕ್ಷ್ಯಕ್ಕೆ ಗುರಿಯಾಗುತ್ತಿದ್ದಾರೇನೊ?

ಇನ್ನೂ ನಾಲ್ಕು ವರ್ಷಗಳ ಪ್ರಶಸ್ತಿಗಳ ಕಂತುಗಳು ಪ್ರಕಟವಾಗುವುದು ಬಾಕಿ ಇದೆ. ಗುಣಮಟ್ಟಕ್ಕೆ ಹೆಚ್ಚು ಮನ್ನಣೆ ಕೊಡುವ ಆಯ್ಕೆಗಳು ಆಗಲಾದರೂ ಹೊರಬರಲಿ.

ವಾಚಕರ ವಾಣಿ

ದುರ್ಗದ ಕೋಟೆ ಉಕ್ಕಿನ ಕೋಟೆಯಾಗೇ ಇರಲಿ

ಏಳು ಸುತ್ತಿನ ಕೋಟೆ ಎಂದೇ ಪ್ರಖ್ಯಾತಿ ಪಡೆದ ಚಿತ್ರದುರ್ಗದ ಕಲ್ಲಿನ ಕೋಟೆಯು ಗಿಡ– ಮರಗಳ ಬೇರುಗಳಿಂದ ಶಿಥಿಲಗೊಳ್ಳುತ್ತಿದೆ ಎಂದು ಓದಿ (ಪ್ರ.ವಾ., ಜ. 31) ಮನಸ್ಸಿಗೆ ಆಘಾತವಾಯಿತು. ನಿರ್ವಹಣೆಯ ಲೋಪವೇ ಇದಕ್ಕೆಲ್ಲ ಕಾರಣ. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ದೂರು ಬಂದಾಗ ಮಾತ್ರ ಸಮಸ್ಯೆಗಳ ಬಗ್ಗೆ ಗಮನಹರಿಸುವುದನ್ನು ಬಿಟ್ಟು, ಆಗಾಗ್ಗೆ ಸ್ಮಾರಕ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಆಗ ಬಹಳಷ್ಟು ಸಮಸ್ಯೆಗಳನ್ನು ತಕ್ಷಣದಲ್ಲಿ ಪರಿಹರಿಸಲು ಸಾಧ್ಯವಾಗುತ್ತದೆ. ಇದಕ್ಕೆ ಬೇಕಾಗಿರುವುದು ಇಚ್ಛಾಶಕ್ತಿ. ಆದರೆ ಇಲಾಖೆಯಲ್ಲಿ ಇದರ ಕೊರತೆ ಎದ್ದು ಕಾಣುತ್ತದೆ. ಇಂತಹ ಸ್ಮಾರಕಗಳನ್ನು ಈಗ ನಮ್ಮ ಕೈಯಲ್ಲಿ ಕಟ್ಟಲು ಸಾಧ್ಯವಿಲ್ಲ. ಆದರೆ ಅವುಗಳ ಸಮರ್ಪಕ ನಿರ್ವಹಣೆ ಮಾಡುವ ಕೆಲಸ ನಮ್ಮಿಂದ ಸಾಧ್ಯ. ಆ ಕೆಲಸ ಆಗಬೇಕಾಗಿದೆ.

ಕೆ.ಪ್ರಭಾಕರ ರಾಜು, ಬೆಂಗಳೂರು

ದೇಗುಲ ಬಳಕೆ: ಸಮಗ್ರ ಯೋಜನೆ ರೂಪಿಸಿ

ದೇವಸ್ಥಾನಗಳು ಧರ್ಮದ ಜೊತೆ ಶೈಕ್ಷಣಿಕ, ಆರ್ಥಿಕ ಕೇಂದ್ರಗಳೂ ಆಗಲಿ. ರಾಜ್ಯದ ಹಲವು ಅಂಗನವಾಡಿ ಕೇಂದ್ರಗಳು ಸ್ವಂತ ಕಟ್ಟಡವಿಲ್ಲದೆ ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ. ರೈತರು ಬೆಳೆದ ತರಕಾರಿಯಂತಹ ಉತ್ಪನ್ನಗಳನ್ನು ಮಾರಾಟ ಮಾಡಲು ಅನೇಕ ಗ್ರಾಮಗಳಲ್ಲಿ ಸೂಕ್ತ ವ್ಯವಸ್ಥೆ ಇಲ್ಲವಾಗಿದೆ. ಇದು, ರೈತರ ಕೃಷಿ ಚಟುವಟಿಕೆಗೆ ಹಾಗೂ ಮಕ್ಕಳ ಶೈಕ್ಷಣಿಕ ಕಲಿಕೆಗೆ ಪ್ರಾರಂಭದಲ್ಲೇ ಬೀಳುವ ಪೆಟ್ಟು.

ಈ ಕೊರತೆಗಳ ನಿವಾರಣೆಗಾಗಿ ರಾಜ್ಯ ಸರ್ಕಾರವು ಪ್ರತಿ ಗ್ರಾಮದಲ್ಲೂ ಇರಬಹುದಾದ ಮುಜರಾಯಿ ದೇವಸ್ಥಾನದ ಆವರಣದಲ್ಲಿ ಅಂಗನವಾಡಿ ಕೇಂದ್ರ ನಡೆಸಲು ಅನುಕೂಲವಿರುವ ಸ್ಥಳವನ್ನು ಬಳಸಿಕೊಳ್ಳಬೇಕು. ಹಾಗೆಯೇ ರೈತರು ತಮ್ಮ ತರಕಾರಿ ಹಾಗೂ ಧಾನ್ಯಗಳನ್ನು ತಾವೇ ಮಾರಾಟ ಮಾಡಿಕೊಳ್ಳಲು ಅನುಕೂಲವಾಗುವಂತೆ, ಮುಜರಾಯಿ ದೇವಸ್ಥಾನಕ್ಕೆ ಲಭ್ಯವಿರುವ ಭೂಮಿಯಲ್ಲಿ ಅವಕಾಶ ನೀಡಬೇಕು. ಸರ್ಕಾರ ಈ ಬಗ್ಗೆ ಸಮಗ್ರ ಯೋಜನೆಯೊಂದನ್ನು ಜಾರಿಗೆ ತಂದರೆ, ಮುಜರಾಯಿ ಇಲಾಖೆಗೆ ಶಕ್ತಿ ಬರುತ್ತದೆ. ಅಲ್ಲದೆ ಧರ್ಮ, ಶಿಕ್ಷಣ ಹಾಗೂ ಆರ್ಥಿಕ, ಸಾಮಾಜಿಕ ವ್ಯವಸ್ಥೆಗೆ ಒತ್ತು ಕೊಟ್ಟಂತೆಯೂ ಆಗುತ್ತದೆ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಸಾಲದ ಶೂಲ: ಸರಳ ಜೀವನವೇ ಪರಿಹಾರ

ಸಾಲದ ಹೊರೆಯು ಇತ್ತೀಚೆಗೆ ಹಲವರ ಕೊರಳಿಗೆ ಉರುಳಾಗುತ್ತಿರುವುದನ್ನು ನೋಡುತ್ತಿದ್ದೇವೆ. ಇದಕ್ಕೆ ಇಂದಿನ ಬಹಳಷ್ಟು ಜನರ ಬದಲಾದ ಜೀವನಶೈಲಿಯೂ ಕಾರಣವಾಗಿದೆ. ದೇಶದಲ್ಲಿ ಸರ್ಕಾರಗಳಿಂದ ಸುಸ್ಥಿರ ಉದ್ಯೋಗ ಸೃಷ್ಟಿ ಇಲ್ಲದಿರುವುದು ವ್ಯಾಪಾರ, ಉದ್ಯೋಗಗಳಲ್ಲಿ ವಿಪರೀತ ಸ್ಪರ್ಧೆಗೆ ಕಾರಣವಾಗಿ ಜನರ ಆದಾಯ ಕಡಿಮೆಯಾಗುತ್ತಿದೆ. ಆದರೆ ಮೊಬೈಲ್ ಫೋನ್‌ಗಳಿಗೆ ಕರೆನ್ಸಿ, ವಾಹನಗಳಿಗೆ ಪೆಟ್ರೋಲ್, ಮಕ್ಕಳ ಕಾನ್ವೆಂಟ್ ಶುಲ್ಕಕ್ಕೆ ಹಣ ಹೊಂದಿಸಲು ಒಮ್ಮೊಮ್ಮೆ ಸಾಲದ ಮೊರೆ ಹೋಗಬೇಕಾಗುತ್ತದೆ.

ಚಂದದ ಮನೆ ಕಟ್ಟಲು ಹೋಗಿ, ಸಾಲದ ಹೊರೆ ಹೊತ್ತುಕೊಂಡು, ಬಳಿಕ ಇದ್ದ ಜಾಗವನ್ನೂ ಕಳೆದುಕೊಂಡವರನ್ನು ನೋಡುತ್ತಿದ್ದೇವೆ. ಬಹಳ ಜನ ಸುಲಭ ಬಡ್ಡಿ ದರದ ಬ್ಯಾಂಕ್ ಸಾಲಗಳಿಗೆ ಉದ್ದೇಶಪೂರ್ವಕವಾಗಿ ಕಟಬಾಕಿಯಾಗಿ ಅನಿವಾರ್ಯವಾಗಿ ಖಾಸಗಿ ವಲಯದ ಸಾಲಗಳಿಗೆ ಕೈ ಒಡ್ಡಿ ತೊಂದರೆ ಅನುಭವಿಸುತ್ತಿದ್ದಾರೆ. ನಮ್ಮ ರಾಜಕಾರಣಿಗಳಿಗೆ ಈಗ ಗಾಂಧೀಜಿಯ ನೆನಪು ಮರುಕಳಿಸಿದೆ. ಅದನ್ನು ಬರೀ ಪ್ರಚಾರಕ್ಕಾಗಿ ಬಳಸಿಕೊಳ್ಳುವುದನ್ನು ಬಿಟ್ಟು, ಅವರ ಸರಳ ಜೀವನತತ್ವದ ಅಳವಡಿಕೆ ಹಾಗೂ ಆ ಕುರಿತ ಜನಜಾಗೃತಿಯ ಬಗ್ಗೆ ಯೋಚಿಸುವುದು ಒಳ್ಳೆಯದು.

ರವಿ ಯಲಿಗಾರ, ಮುನವಳ್ಳಿ

ಕಾಲ್ತುಳಿತ ಪ್ರಕರಣ: ಕಲಿಸೀತೇ ಪಾಠ?

ಗಣತಂತ್ರ ದಿನದ ಪರೇಡ್‌ನಲ್ಲಿ ಉತ್ತರಪ್ರದೇಶದ ಕುಂಭಮೇಳ ಸ್ತಬ್ಧಚಿತ್ರ ಪ್ರಥಮ ಸ್ಥಾನ ಗಳಿಸಿದ ಸುದ್ದಿ ಹೊರಬಿದ್ದ ಬೆನ್ನಲ್ಲೇ, ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ ಕುಂಭಮೇಳದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ ಹಲವರು ಮೃತಪಟ್ಟಿರುವ ವಾರ್ತೆ ಬಂದು (ಪ್ರ.ವಾ., ಜ. 30), ಯಾತ್ರೆ, ಪುಣ್ಯಸ್ನಾನಗಳಲ್ಲಿ ನಂಬಿಕೆ ಇಟ್ಟವರೂ ಆತಂಕಗೊಂಡಿದ್ದಾರೆ. ಲಕ್ಷಗಟ್ಟಲೆ ಜನ ಬಂದಿರುವಾಗ ಕಾಲ್ತುಳಿತಕ್ಕೊಳಗಾಗಿ ತೊಂದರೆಗೀಡಾದವರ ಸಂಖ್ಯೆ ಅತ್ಯಲ್ಪ ಎನ್ನುವ ಹಾಗಿಲ್ಲ.

ಹಳೆಯ ಹಿಂದಿ ಸಿನಿಮಾಗಳಲ್ಲಿ 'ಕುಂಭ್ ಮೇ ಖೋಗಯೇ' ಎಂಬ ಡೈಲಾಗ್ ಇರುತ್ತಿತ್ತು. ಗುಂಪಿನಲ್ಲಿ ಹೋದವರು ಬೇರೆ ಬೇರೆ ಆಗಿ 'ಇದ್ದಾರಾ, ಸತ್ತರಾ' ಎಂಬ ಸಸ್ಪೆನ್ಸ್ ಕೊನೆಯಲ್ಲಿ ಒಡೆಯುತ್ತಿತ್ತು. ಹಾಗಾಗಿ ಈಗಲೂ ಕೆಲವು ಗಂಟೆ ಜನ ತಲ್ಲಣಗೊಂಡಿದ್ದರು. ಶ್ರದ್ಧಾಳುಗಳಲ್ಲೂ ಶಿಸ್ತಿರಬೇಕು, ಹಾಗೆ ಇರದಿದ್ದರೆ ಅಖಿಲೇಶ್ ಯಾದವ್ ಹೇಳಿದಂತೆ ನಿಯಂತ್ರಣಕ್ಕೆ ಸೇನೆಯನ್ನು ನಿಯೋಜಿಸಿದರೂ ಉಪಯೋಗವಾಗದು. ಮೋಕ್ಷ ಪ್ರಾಪ್ತಿಗೆಂದು ಹೋದವರು ದಾರುಣವಾಗಿ ಮರಣಕ್ಕೀಡಾಗಿಬಿಡುವ ಸಂಭವ ಇರುತ್ತದೆ. ಸಂಬಂಧಪಟ್ಟವರೆಲ್ಲ ಈ ಪ್ರಕರಣದಿಂದ ಪಾಠ ಕಲಿತಿದ್ದಾರಾ ಎಂಬುದನ್ನು ಕುಂಭಮೇಳ ಮುಗಿಯುವವರೆಗೂ ಕಾದು ನೋಡಬೇಕಿದೆ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಹಳೆಯ ಪುಸ್ತಕಕ್ಕೆ ಜೀವ ತುಂಬಿ

ಪರೀಕ್ಷೆ ನಂತರ ಪುಸ್ತಕವನ್ನು ತೂಕಕ್ಕೆ ಹಾಕುವುದು ಸರಿಯಲ್ಲ ಎಂಬ ಯೋಗಾನಂದ ಅವರ ಲೇಖನ (ಸಂಗತ, ಜ. 28) ಅರ್ಥಗರ್ಭಿತವಾಗಿದೆ. ಪರೀಕ್ಷೆ ನಂತರ ವಿದ್ಯಾರ್ಥಿಗಳು ಪುಸ್ತಕವನ್ನು ಅಗತ್ಯಾನುಸಾರ ಕಿರಿಯ ವಿದ್ಯಾರ್ಥಿಗಳಿಗೆ ನೀಡುವುದು ಒಳ್ಳೆಯದು. ಹಿಂದೆಲ್ಲ ಸರ್ಕಾರಿ ಶಾಲೆಗಳಲ್ಲಿ ಅಧ್ಯಾಪಕರೇ ಹಳೆಯ ಪುಸ್ತಕಗಳನ್ನು ಮಕ್ಕಳಿಂದ ಸಂಗ್ರಹಿಸಿ, ಹೊಸ ಪುಸ್ತಕ ಬರುವವರೆಗೂ ಉಪಯೋಗಿಸುವಂತೆ ಕಿರಿಯ ವಿದ್ಯಾರ್ಥಿಗಳಿಗೆ ನೀಡುತ್ತಿದ್ದರು. ಹೊಸ ಪುಸ್ತಕ ಬಂದ ನಂತರ ಅವು ಗುಜರಿ ಸೇರುತ್ತಿದ್ದವು. ಈಗ ಕೆಲವು ವಿದ್ಯಾರ್ಥಿಗಳು ಪರೀಕ್ಷೆ ಮುಗಿದ ನಂತರ ತಮ್ಮೆಲ್ಲ ಪುಸ್ತಕಗಳನ್ನು ಮೂಟೆ ಕಟ್ಟಿ ಮನೆಯ ಅಟ್ಟದ ಮೇಲೋ ಅಥವಾ ಇನ್ನೆಲ್ಲೋ ಇಟ್ಟಿರುತ್ತಾರೆ. ಅವರು ಅವುಗಳನ್ನು ತೂಕಕ್ಕೂ ಹಾಕುವುದಿಲ್ಲ ಕಿರಿಯರಿಗೂ ನೀಡುವುದಿಲ್ಲ. ಇದರಿಂದ ಯಾವುದೇ ಪ್ರಯೋಜನವಿಲ್ಲ. ಒಂದೋ ಅವರು ಕಿರಿಯರಿಗೆ ನೀಡಬೇಕು ಇಲ್ಲವೇ ತೂಕಕ್ಕೆ ಹಾಕಬೇಕು. ಕಿರಿಯರಿಗೆ ನೀಡಿದರೆ ಅವರಿಗೆ ಉಪಯೋಗಕ್ಕೆ ಬರುತ್ತದೆ ಅಥವಾ ತೂಕಕ್ಕೆ ಹಾಕಿದರೆ ಮರುಬಳಕೆಯಾಗಿ ಸ್ವಲ್ಪ ಪ್ರಮಾಣದ ಅರಣ್ಯ ನಾಶವಾದರೂ ಕಡಿಮೆಯಾಗುತ್ತದೆ, ಮನೆಯವರಿಗೂ ಮನೆ ಸ್ವಚ್ಛಗೊಳಿಸಲು ಸಹಾಯವಾಗುತ್ತದೆ.

ಸುನಿಲ್ ಟಿ.ಪಿ., ತಳಗವಾದಿ, ಮಳವಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ದೇಶದ ಆರ್ಥಿಕ ಸ್ಥಿತಿಗತಿ, ಭವಿಷ್ಯದ ದಿಕ್ಸೂಚಿ ಮುಂದಿಟ್ಟ ಸಮೀಕ್ಷೆ

ಆರ್ಥಿಕ ಸಮೀಕ್ಷೆ ಹೇಳುವುದೇನು?



ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಕೇಂದ್ರದ ಬಜೆಟ್‌ಗೂ ಒಂದು ದಿನ ಮುಂಚೆ ರೂಢಿಯಂತೆ ಆರ್ಥಿಕ ಸಮೀಕ್ಷೆ 2024–25 ಅನ್ನು ಸಂಸತ್ತಿನಲ್ಲಿ ಮಂಡಿಸಿದ್ದಾರೆ. ದೇಶದ ಆರ್ಥಿಕ ಸ್ಥಿತಿಗತಿಯನ್ನು ಬಿಂಬಿಸುತ್ತಲೇ, ಮುಂದಿನ ಬೆಳವಣಿಗೆಯ ದಿಕ್ಸೂಚಿಯನ್ನು ಅದರಲ್ಲಿ ಪ್ರಕಟಿಸಿದ್ದಾರೆ. ಪಶ್ಚಿಮದ ಆರ್ಥಿಕತೆಗಳಿಗಿಂತ ಭಿನ್ನವಾದ, ದೇಶೀಯ ಮಾದರಿಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ಸಮೀಕ್ಷೆ ಒಲವು ತೋರಿದೆ

ಪ್ರಜಾವಾಣಿ ವಾರ್ತೆ

ಆಶಾದಾಯಕ ಆರ್ಥಿಕತೆಗೆ ಬೇಕಾದಂಥ ಮೂಲಸೌಕರ್ಯ ಮತ್ತು ಹೂಡಿಕೆಯ ಅಗತ್ಯಗಳನ್ನು ಪೂರೈಸಲು ನಿರ್ದಿಷ್ಟ ಪ್ರಮಾಣ ಮತ್ತು ಗುಣಮಟ್ಟದೊಂದಿಗೆ ಪ್ರಮುಖ ಉತ್ಪನ್ನಗಳನ್ನೂ ತಯಾರಿಸಬೇಕಿದೆ. ಆದರೆ, ಈ ವಿಚಾರದಲ್ಲಿ ದೇಶವು ಹಲವು ಮಿತಿಗಳನ್ನು ಎದುರಿಸುತ್ತಿದೆ ಎಂದು ಆರ್ಥಿಕ ಸಮೀಕ್ಷೆ ಹೇಳಿದೆ.

ದೇಶವು ಸ್ಪರ್ಧಾತ್ಮಕ ಮತ್ತು ನಾವೀನ್ಯದಿಂದ ಕೂಡಿದ ಆರ್ಥಿಕತೆ ಆಗಲು ದೇಶೀಯ ಮತ್ತು ವಿದೇಶಿ ಹೂಡಿಕೆಯನ್ನು ಆಕರ್ಷಿಸಬೇಕು ಮತ್ತು ಉತ್ತೇಜಿಸಬೇಕಿದೆ. ಹೂಡಿಕೆಯ ವಿಚಾರದಲ್ಲಿ ದೇಶವು ಅಭಿವೃದ್ಧಿಶೀಲ ಆರ್ಥಿಕತೆಗಳಿಂದಷ್ಟೇ ಅಲ್ಲದೇ (ದೇಶದ ಹೊರಗೆ ಬಂಡವಾಳ ಹೂಡಲು ಇಚ್ಛಿಸದ) ಅಭಿವೃದ್ಧಿ ಹೊಂದಿದ ಆರ್ಥಿಕತೆಗಳಿಂದಲೂ ಸ್ಪರ್ಧೆ- ಸವಾಲು ಎದುರಿಸುತ್ತಿದೆ ಎಂದು ಅದು ಅಭಿಪ್ರಾಯ ಪಟ್ಟಿದೆ.

ಖಾಸಗಿ ಹೂಡಿಕೆ ಹೆಚ್ಚಿಸಿ

ದೇಶವು ಸುಸ್ಥಿರವಾಗಿ ಅಭಿವೃದ್ಧಿ ಹೊಂದಬೇಕಾದರೆ ಮುಂದಿನ ಎರಡು ದಶಕಗಳಲ್ಲಿ ಮೂಲಸೌಕರ್ಯ ಕ್ಷೇತ್ರದಲ್ಲಿ ಹೂಡಲಾಗುತ್ತಿರುವ ಬಂಡವಾಳವನ್ನು ಹೆಚ್ಚಿಸುವ ಅಗತ್ಯವಿದೆ. ಬಂಡವಾಳ ಹೂಡಿಕೆಯಲ್ಲಿ ಖಾಸಗಿಯವರೂ ತೊಡಗಿಕೊಳ್ಳಬೇಕು. ಅವರ ಹೂಡಿಕೆಯನ್ನು ಹೆಚ್ಚಿಸುವುದಕ್ಕಾಗಿ ಸರ್ಕಾರವು ದಾರಿಗಳನ್ನು ಹುಡುಕಬೇಕು ಎಂದು ಸಮೀಕ್ಷೆ ಪ್ರತಿಪಾದಿಸಿದೆ.

2024–25ನೇ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ಲೋಕಸಭಾ ಚುನಾವಣೆ ಇದ್ದುದರಿಂದ ಹೊಸ ಅನುಮತಿ ಮತ್ತು ಮಾಡಲಾದ ವೆಚ್ಚದ ಮೇಲಿನ ನಿರ್ಬಂಧಗಳಿದ್ದವು. ಅಲ್ಲದೇ, ಹಲವು ಭಾಗಗಳಲ್ಲಿ ಮುಂಗಾರು ತೀವ್ರವಾಗಿತ್ತು. ಈ ಕಾರಣಗಳಿಂದ ಮೂಲಸೌಕರ್ಯದಲ್ಲಿ ಮಾಡಲಾದ ಹೂಡಿಕೆಯ ಮೇಲೆ ಪರಿಣಾಮ ಬಿದ್ದಿತ್ತು. ಜುಲೈ ಮತ್ತು ನವೆಂಬರ್ ಅವಧಿಯಲ್ಲಿ ಹೂಡಿಕೆ ಏರಿಕೆ ಕಂಡಿದೆ. ಈ ಆರ್ಥಿಕ ವರ್ಷದ ಮುಂದಿನ ತಿಂಗಳಲ್ಲೂ ಈ ಕ್ಷೇತ್ರದಲ್ಲಿನ ಹೂಡಿಕೆ ಇನ್ನಷ್ಟು ಜಾಸ್ತಿಯಾಗುವ ಸಾಧ್ಯತೆ ಇದೆ. ಮೂಲಸೌಕರ್ಯಗಳಿಗೆ ಸಂಬಂಧಿಸಿದ ಸಚಿವಾಲಯಗಳು, ಕಳೆದ ವರ್ಷದ ಏಪ್ರಿಲ್‌ನಿಂದ ನವೆಂಬರ್ ಅವಧಿಯಲ್ಲಿ ಮೀಸಲಿಟ್ಟಿದ್ದ ಬಜೆಟ್ ಹಣದಲ್ಲಿ ಶೇ 60ರಷ್ಟನ್ನು ವೆಚ್ಚ ಮಾಡಿವೆ ಎಂದು ಅದು ವಿವರಿಸಿವೆ.


ಜಂಟಿ ಪ್ರಯತ್ನ ಬೇಕು: ಅಸ್ಥಿರವಾದ ಜಾಗತಿಕ ವಾತಾವರಣದಲ್ಲಿ ಭಾರತವನ್ನು ಉತ್ಪಾದನೆಯ ಶಕ್ತಿಕೇಂದ್ರವನ್ನಾಗಿ ರೂಪಿಸುವಲ್ಲಿ ಸರ್ಕಾರ, ಖಾಸಗಿ ವಲಯ, ಶೈಕ್ಷಣಿಕ ವಲಯ, ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳು ಹಾಗೂ ಹಣಕಾಸು ಪಾಲುದಾರರ ಪಾತ್ರವು ಮುಖ್ಯವಾಗಿದೆ. ಜಾಗತಿಕ ಮಟ್ಟದಲ್ಲಿ ಉತ್ಪಾದನೆಯ ಶಕ್ತಿಕೇಂದ್ರವಾಗಿ ಚೀನಾ ಬೆಳವಣಿಗೆ ಹೊಂದಿದ್ದು, ಇದು ಇತರೆ ದೇಶಗಳ ಉತ್ಪಾದನೆಯ ಬಯಕೆ ಮತ್ತು ಖನಿಜ, ಸರಕು, ಯಂತ್ರೋಪಕರಣ ಮತ್ತು ಇಂಧನ ಪರಿವರ್ತನೆಗೆ ಅಗತ್ಯವಾದ ಸಾಧನಗಳ ಪೂರೈಕೆಯ ಮೇಲೆ ಪರಿಣಾಮ ಬೀರುತ್ತಿದೆ. ಜತೆಗೆ ಇದರಿಂದ ಹಲವು ಸವಾಲುಗಳು ಎದುರಾಗಿವೆ. ಭಾರತವು ಬದಲಾವಣೆ ಪರ್ವದ ನಡುವೆ ಇದ್ದು, ಅದು ಹಿಂದೆಂದೂ ಕಾಣದಂಥ ಆರ್ಥಿಕ ಸವಾಲುಗಳು ಮತ್ತು ಅವಕಾಶಗಳನ್ನು ಪ್ರತಿನಿಧಿಸುತ್ತಿದೆ ಎಂದು ವಿಶ್ಲೇಷಿಸಿದೆ.

ನಿಯಮ ಸರಳೀಕರಣಕ್ಕೆ ಒಲವು

ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಕಟ್ಟುನಿಟ್ಟಿನ ನಿಯಮಗಳ ಬದಲಾಗಿ, ಪಾರದರ್ಶಕವಾದ ಮತ್ತು ವಿಶ್ವಾಸ ಆಧಾರಿತ ನಿಯಮಗಳನ್ನು ಜಾರಿಗೊಳಿಸಬೇಕು ಎಂದು ಸಮೀಕ್ಷೆ ಹೇಳಿದೆ.

ಈ ಎರಡು ಕ್ಷೇತ್ರಗಳ ನಿಯಂತ್ರಣ ಸಂಸ್ಥೆಗಳು ಸಮಾಜಕ್ಕಿರುವ ಅಗತ್ಯ ಮತ್ತು ಈ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ಸಂಸ್ಥೆಗಳು ಪಾಲಿಸಬೇಕಾದ ನಿಯಮಗಳಲ್ಲಿ ಸಮತೋಲನ ಇರುವಂತೆ ನೋಡಿಕೊಳ್ಳಬೇಕು. ಒಂದು ವೇಳೆ ಮಾರುಕಟ್ಟೆಯೇ ಪರಿಣಾಮಕಾರಿ ಪಾತ್ರ ನಿರ್ವಹಿಸುವುದಾದರೆ, ಈಗಿನ ನಿಯಂತ್ರಣ ಕ್ರಮಗಳನ್ನು ವಾಪಸ್ ಪಡೆಯಬಹುದು ಅಥವಾ ಆಯಾ ಸಂಸ್ಥೆಗಳೇ ಸ್ವಯಂ ನಿಯಂತ್ರಣ ಕ್ರಮಗಳನ್ನು ಅಳವಡಿಸಿಕೊಳ್ಳಲು ಅವಕಾಶ ನೀಡಬಹುದು. ಬಿಗಿ ನಿಯಮಗಳು, ರಾಜ್ಯಗಳ ಮೇಲೆ ಅನುಸರಣೆ ಮತ್ತು ಮೇಲ್ವಿಚಾರಣೆಯ ಹೊರೆಯನ್ನು ಇನ್ನಷ್ಟು ಹೇರುತ್ತವೆ ಎಂದು ಸಮೀಕ್ಷೆ ವಿವರಿಸಿದೆ.

ಆಧಾರ: ಆರ್ಥಿಕ ಸಮೀಕ್ಷೆ 2024–25, ಪಿಟಿಐ,



ಕೇರಳ ಮಾದರಿಗೆ ಮೆಚ್ಚುಗೆ

ಸುಸ್ಥಿರ ಅಭಿವೃದ್ಧಿ ಗುರಿಗಳ (ಎಸ್‌ಡಿಜಿ) ಸ್ಥಳೀಕರಣವು ಗ್ರಾಮೀಣಾಭಿವೃದ್ಧಿಯು ಅಂತರರಾಷ್ಟ್ರೀಯ ಗುರಿಗಳಿಗೆ ತಕ್ಕಂತೆ ಇದೆಯೇ ಎನ್ನುವುದನ್ನು ಖಾತರಿಪಡಿಸುತ್ತದೆ ಎಂದು ಆರ್ಥಿಕ ಸಮೀಕ್ಷೆ ಹೇಳಿದ್ದು, ಈ ವಿಚಾರದಲ್ಲಿ ಕೇರಳ ರಾಜ್ಯದ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದೆ. ವಸತಿ, ನೈರ್ಮಲ್ಯ, ನೀರು ಪೂರೈಕೆ ಮತ್ತು ವಿದ್ಯುತ್ ಪೂರೈಕೆಯಂಥ ವಿಚಾರಗಳಿಗೆ ಆದ್ಯತೆ ನೀಡುವ ಮೂಲಕ ಕೇರಳದ ಸದೃಢ, ಸಮುದಾಯ ಆಧಾರಿತವಾದ ಮಾದರಿಯು ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸಿದೆ. ಇದು ಸಹಭಾಗಿತ್ವದ ಬೆಳವಣಿಗೆಯನ್ನು ಉತ್ತೇಜಿಸುವುದರೊಂದಿಗೆ, ತಳಮಟ್ಟದಲ್ಲಿ ಜೀವನದ ಗುಣಮಟ್ಟವನ್ನು ಹೆಚ್ಚಿಸುತ್ತದೆ. ಎಸ್‌ಡಿಜಿಗಳ ಸ್ಥಳೀಕರಣದ ದೃಷ್ಟಿಯಿಂದ ಇದು ಅನುಕರಣೀಯ ಮಾದರಿಯಾಗಿದೆ ಎಂದು ಶ್ಲಾಘಿಸಿದೆ.

ದೇಶದಲ್ಲಿ ಹೆಚ್ಚಿದ ಆರ್ಥಿಕ ಒಳಗೊಳ್ಳುವಿಕೆ

ದೇಶದ ಗ್ರಾಮೀಣ ಭಾಗಗಳಲ್ಲಿ ಹೆಚ್ಚಿನ ಸಂಖ್ಯೆಯ ಜನರು ಅರ್ಥವ್ಯವಸ್ಥೆಯ ಭಾಗವಾಗಿಸುವಲ್ಲಿ ಗ್ರಾಮೀಣ ಭಾಗದ ಹಣಕಾಸು ಸಂಸ್ಥೆಗಳು ಪ್ರಮುಖ ಪಾತ್ರವಹಿಸಿವೆ ಎಂದು ಆರ್ಥಿಕ ಸಮೀಕ್ಷೆ ಹೇಳಿದೆ.

ಆರ್‌ಬಿಐ ನೀಡುವ ಆರ್ಥಿಕ ಒಳಗೊಳ್ಳುವಿಕೆ ಸೂಚ್ಯಂಕ ಏರಿಕೆ	
2021 ಮಾರ್ಚ್	53.9
2024 ಮಾರ್ಚ್	64.2

ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಸಾಧನೆ

- ₹6.6 ಲಕ್ಷ ಕೋಟಿ ಬ್ಯಾಂಕುಗಳಲ್ಲಿರುವ ಠೇವಣಿ ಮೊತ್ತ
- 31.3 ಕೋಟಿ ಠೇವಣಿ ಖಾತೆಗಳ ಸಂಖ್ಯೆ
- 22,069 26 ರಾಜ್ಯಗಳು, 3 ಕೇಂದ್ರಾಡಳಿತ ಪ್ರದೇಶಗಳ 700 ಜಿಲ್ಲೆಗಳಲ್ಲಿ ರುವ ಶಾಖೆಗಳು
- 92% ಗ್ರಾಮೀಣ ಮತ್ತು ಅರೆ ನಗರ ಪ್ರದೇಶಗಳಲ್ಲಿರುವ ಶಾಖೆಗಳ ಪ್ರಮಾಣ
- 14% ದೇಶದಲ್ಲಿರುವ ಎಲ್ಲ ಬ್ಯಾಂಕುಗಳ ಪೈಕಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಪಾಲು
- 30% ಎಲ್ಲ ಬ್ಯಾಂಕುಗಳ ಪೈಕಿ ಗ್ರಾಮೀಣ ಭಾಗದಲ್ಲಿ ಈ ಬ್ಯಾಂಕುಗಳ ಪ್ರಮಾಣ
- ₹4.7 ಲಕ್ಷ ಕೋಟಿ ಬ್ಯಾಂಕುಗಳು ನೀಡಿರುವ ಸಾಲ
- 3 ಕೋಟಿ ಸಾಲದ ಖಾತೆಗಳ ಸಂಖ್ಯೆ

60 ಗಂಟೆ ಕೆಲಸ: ಆರೋಗ್ಯದ ಮೇಲೆ ಪರಿಣಾಮ

ಕೆಲಸದ ಅವಧಿ 70–90 ಗಂಟೆ ಇರಬೇಕು ಎನ್ನುವ ಚರ್ಚೆಗಳು ನಡೆಯುತ್ತಿರುವಾಗಲೇ ಈ ಬಗ್ಗೆ ಆರ್ಥಿಕ ಸಮೀಕ್ಷೆಯಲ್ಲಿಯೂ ಪ್ರಸ್ತಾಪ ಮಾಡಲಾಗಿದೆ. ವಾರಕ್ಕೆ 60 ಗಂಟೆಗೂ ಹೆಚ್ಚು ಕೆಲಸ ಮಾಡುವುದು ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎಂದು ಹಲವು ಸಮೀಕ್ಷೆಗಳನ್ನು ಉಲ್ಲೇಖಿಸಿ ಆರ್ಥಿಕ ಸಮೀಕ್ಷೆ ಹೇಳಿದೆ.

ದೀರ್ಘಕಾಲದವರೆಗೆ ಒಂದೇ ಸ್ಥಳದಲ್ಲಿ ಕೆಲಸ ಮಾಡುವುದು ಮಾನಸಿಕ ಆರೋಗ್ಯಕ್ಕೆ ಹಾನಿ ಮಾಡುತ್ತದೆ ಮತ್ತು ಒಂದು ದಿನಕ್ಕೆ 12 ಗಂಟೆ ಮತ್ತು ಅದಕ್ಕಿಂತ ಹೆಚ್ಚು ಅವಧಿ ಕೆಲಸ ಮಾಡುವವರು ಬಳಲುವುದಲ್ಲದೇ, ಮಾನಸಿಕವಾಗಿ ಹಲವು ತೊಂದರೆಗಳನ್ನು ಎದುರಿಸುತ್ತಾರೆ ಎಂದು ಆರ್ಥಿಕ ಸಮೀಕ್ಷೆಯು ಹೇಳಿದೆ. ಅದಕ್ಕೆ ಪೂರಕವಾಗಿ ವಿಶ್ವ ಆರೋಗ್ಯ ಸಂಸ್ಥೆ/ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ ಮತ್ತು ಇತರ ಹಲವು ಅಧ್ಯಯನ ವರದಿಗಳನ್ನು ಸಮೀಕ್ಷೆಯಲ್ಲಿ ಉಲ್ಲೇಖಿಸಲಾಗಿದೆ.


ಕೆಲಸಗಾರರ ಖಿನ್ನತೆ, ಮನೋವೇದನೆಯಿಂದ ಜಾಗತಿಕವಾಗಿ ವರ್ಷಕ್ಕೆ 12 ಶತಕೋಟಿ ದಿನಗಳ ಕೆಲಸ ನಷ್ಟವಾಗುತ್ತಿದ್ದು, ಅದರಿಂದ ಉತ್ಪಾದಕತೆ ಕುಸಿದು, ₹86.62 ಲಕ್ಷ ಕೋಟಿ ನಷ್ಟ ಉಂಟಾಗುತ್ತಿದೆ. ಭಾರತದ ಮಟ್ಟಿಗೆ ಹೇಳಬೇಕೆಂದರೆ, ದಿನಕ್ಕೆ ₹7,000 ನಷ್ಟ ಎಂದು ಸಮೀಕ್ಷೆ ತಿಳಿಸಿದೆ.


ಕಾರ್ಮಿಕರ ಬದಲು ಎಐ: ಕ್ರಮ ಅನಿವಾರ್ಯ

ಕಾರ್ಮಿಕ ಮಾರುಕಟ್ಟೆಗಳ ಮೇಲೆ ಕೃತಕ ಬುದ್ಧಿಮತ್ತೆಯ (ಎಐ) ಪರಿಣಾಮಗಳ ಕುರಿತಂತೆ ಹೆಚ್ಚುತ್ತಿರುವ ಆತಂಕದ ಬಗ್ಗೆಯೂ ಪ್ರಸ್ತಾಪಿಸಿರುವ ಸಮೀಕ್ಷೆಯು, ಒಂದು ವೇಳೆ ಕಂಪನಿಗಳು ಎಐ ತಂತ್ರಜ್ಞಾನ ಅಳವಡಿಸಿಕೊಳ್ಳುವುದನ್ನು ದೀರ್ಘಾವಧಿಯ ನೀತಿಯನ್ನಾಗಿ ಮಾಡದಿದ್ದರೆ ಅಥವಾ ಎಐ ವಿಚಾರವನ್ನು ಅನ್ನು ಸೂಕ್ಷ್ಮವಾಗಿ ನಿರ್ವಹಿಸದಿದ್ದರೆ, ಈ ವಿಚಾರದಲ್ಲಿ ಸರ್ಕಾರ ನೀತಿ ರೂಪಿಸಬೇಕು ಮತ್ತು ಆಗುವ ನಷ್ಟವನ್ನು ಆರ್ಥಿಕ ಸಂಪನ್ಮೂಲಗಳಿಂದ ತುಂಬಬೇಕು ಎಂಬ ಬೇಡಿಕೆಗಳನ್ನು ಜಾರಿಗೊಳಿಸುವುದು ಅನಿವಾರ್ಯವಾಗುತ್ತದೆ ಎಂದು ಎಚ್ಚರಿಸಿದೆ.

ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಅಧ್ಯಯನವನ್ನು ತನ್ನ ವರದಿಯಲ್ಲಿ ಉಲ್ಲೇಖಿಸಿರುವ ಸಮೀಕ್ಷೆಯು, ಕಾರ್ಮಿಕ ಬಲದ ಬದಲಿಗೆ ಎಐ ತಂತ್ರಜ್ಞಾನವನ್ನು ಅಳವಡಿಸಿಕೊಂಡ ಕಾರ್ಪೊರೇಟ್ ಕಂಪನಿಗಳಿಗೆ, ಹೆಚ್ಚುವರಿ ಲಾಭದ ಮೇಲೆ ತೆರಿಗೆ ವಿಧಿಸುವಂತಹ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕಾಗಿ ಬರಬಹುದು ಎಂದು ಹೇಳಿದೆ.

ವಿದ್ಯುತ್ ಉತ್ಪಾದನೆ: ನವೀಕೃತ ಇಂಧನ ಮೂಲಗಳ ಸಾಮರ್ಥ್ಯ ಶೇ 46.8ಕ್ಕೆ (2024ರ ನ.30ರ ವರೆಗೆ)






ಆಯುಷ್ಮಾನ್: ಜನರ ಆರ್ಥಿಕ ಹೊರೆ ಇಳಿಕೆ

‘ಆಯುಷ್ಮಾನ್ ಭಾರತ್’ ಯೋಜನೆಯು ಆರೋಗ್ಯ ಸೇವೆಗಳ ವಿಚಾರದಲ್ಲಿ ಜನರ ಜೇಬಿನ ಹೊರೆ ಕಡಿಮೆ ಮಾಡಿದೆ. ಆರ್ಥಿಕ ದುರ್ಬಲ ವರ್ಗಗಳ ಶೇ 40ರಷ್ಟು ಮಂದಿಗೆ ₹1.25 ಲಕ್ಷ ಕೋಟಿ ಮೊತ್ತದ ಸೇವೆಗಳನ್ನು ಒದಗಿಸುವುದರೊಂದಿಗೆ ಜನರ ಸಾಮಾಜಿಕ ಭದ್ರತೆ ಹೆಚ್ಚಿಸಿದೆ. ದೇಶದ 12 ಕೋಟಿ ಕುಟುಂಬಗಳ 55 ಕೋಟಿ ಮಂದಿಯನ್ನು ಒಳಗೊಳ್ಳುವ ಮೂಲಕ ಈ ಯೋಜನೆಯು ಜಗತ್ತಿನ ಅತಿ ದೊಡ್ಡ ಆರೋಗ್ಯ ಸೇವೆಗಳ ಯೋಜನೆಯಾಗಿದೆ. 36.36 ಕೋಟಿ ಕಾರ್ಡ್‌ಗಳನ್ನು ವಿತರಿಸಲಾಗಿದೆ. ಕಾರ್ಡ್ ಹೊಂದಿರುವವರ ಪೈಕಿ ಶೇ 49ರಷ್ಟು ಮಂದಿ ಮಹಿಳೆಯರಾಗಿದ್ದು, ಆಸ್ಪತ್ರೆಗೆ ದಾಖಲಾದವರ ಪೈಕಿ ಶೇ 48ರಷ್ಟು ಮಂದಿ ಮಹಿಳೆಯರಾಗಿದ್ದಾರೆ ಎಂದು ಸಮೀಕ್ಷೆ ತಿಳಿಸಿದೆ.


ವಿದೇಶಿ ನೇರ ಬಂಡವಾಳ ಹೂಡಿಕೆ (ಎಫ್‌ಡಿಐ) ಹರಿವು ಮುಂದುವರಿಕೆ (ಲಕ್ಷ ಕೋಟಿ ₹ಗಳಲ್ಲಿ)



*ಬಂಡವಾಳ ಹೂಡಿದ ಕಂಪನಿಗಳು ಸ್ವದೇಶಕ್ಕೆ ಕೊಂಡುಹೋದ ಲಾಭದ ಮೊತ್ತ

ಯಾವ ವಲಯಕ್ಕೆ ಹೆಚ್ಚು ಎಫ್‌ಡಿಐ?

(2024-25 ಮೊದಲ ಆರು ತಿಂಗಳ ಅಂಕಿ ಅಂಶ) (ಶೇಕಡವಾರು)



ಹೊಸ ಮಾದರಿ ಸಿನಿಮಾ, ಪ್ರಯತ್ನ



ಟ್ರಾವೆಲ್ ಅಡ್ವೆಂಚರ್ ಆಧಾರಿತ ಸಿನಿಮಾಗಳಲ್ಲಿ ಪಾತ್ರಗಳ ನಡುವೆ ನಡೆಯುವ ಡ್ರಾಮಾ, ಪ್ರಕೃತಿಯನ್ನು ಸೆರೆಹಿಡಿದ ರೀತಿ, ಹಿನ್ನೆಲೆ ಸಂಗೀತ ಹಾಗೂ ಹಾಡುಗಳು ಮುಖ್ಯಭೂಮಿಕೆಯಲ್ಲಿರುತ್ತವೆ. ಈ ಅಂಶಗಳಿಗೆ ಹೆಚ್ಚಿನ ಆದ್ಯತೆ ನೀಡಿ ತೆರೆಗೆ ಬಂದಿದೆ ‘#ಪಾರು ಪಾರ್ವತಿ’. ತಿಳಿಯಾದ ಹಾಸ್ಯ, ಜೀವನ ಪಾಠ, ಮನಸೆಳೆಯುವ ಛಾಯಾಚಿತ್ರಗ್ರಹಣ, ಯುವಜನತೆಗೆ ಸಂದೇಶ ಎಲ್ಲವೂ ಈ ಸಿನಿಮಾದಲ್ಲಿದ್ದರೂ ಒಟ್ಟು ಸಿನಿಮಾ ಅವಧಿ ಪ್ರೇಕ್ಷಕನ ತಾಳ್ಮೆ ಪರೀಕ್ಷಿಸುತ್ತದೆ.

‘ಪಾರ್ವತಿ’(ಪೂನಂ ಸರ್ನಾಯಕ್) ಬೆಂಗಳೂರಿನಲ್ಲಿ ವಾಸಿಸುತ್ತಿರುವ 62 ವರ್ಷದ ಮಹಿಳೆ. ಬಾಲ್ಯದಲ್ಲೇ ವಿವಾಹ ಬಂಧನಕ್ಕೆ ಒಳಗಾದ ಈಕೆಗೆ ಐವರು ಪುತ್ರರು. ಗಂಡನ ಜೊತೆ ಮಾತುಕತೆ ನಡೆಸದೆ ಇಪ್ಪತ್ತು ವರ್ಷಗಳು ಉರುಳಿವೆ. ಆತ ಸೇನೆಯಲ್ಲಿ ಅಧಿಕಾರಿಯಾಗಿದ್ದಾನೆ. ಮಕ್ಕಳ ಜೊತೆ ಇರದೆ ಈಕೆ ಒಬ್ಬಂಟಿಯಾಗಿಯೇ ಮನೆಯೊಂದರಲ್ಲಿ ಇದ್ದಾಳೆ. ಮಕ್ಕಳ ಅತಿಯಾದ ಕಾಳಜಿ ‘ಪಾರ್ವತಿ’ಗೆ ಕಿರಿಕಿರಿ ಎನಿಸತೊಡಗಿದೆ. ಸೊಸೆಯಂದಿರ ಚುಚ್ಚು ಮಾತುಗಳನ್ನು ಕೇಳಿ ಈಕೆಗೆ ಸಾಕಾಗಿದೆ. ಇಂತಹ ಬಂಧನದಲ್ಲಿರುವ ‘ಪಾರ್ವತಿ’ಗೆ ಹಾಯಾಗಿ ಹಾರುವ ಇಚ್ಛೆ. ಐವತ್ತನೇ ವಿವಾಹ ವಾರ್ಷಿಕೋತ್ಸವಕ್ಕೆ ಗಂಡನನ್ನು ಭೇಟಿಯಾಗಿ ಅಚ್ಚರಿ ನೀಡುವ ಆಸೆ. ‘ಜರ್ನಿ ಆ್ಯಂಡ್ ಜರ್ನಿ’ ಎಂಬ ಯುಟ್ಯೂಬ್ ಚಾನೆಲ್ ನಡೆಸುವ ಸ್ನೇಹಿತೆ ‘ಪಾಯಲ್’(ದೀಪಿಕಾ ದಾಸ್) ಬಳಿ ತನ್ನ ಆಸೆ, ಇಚ್ಛೆಯನ್ನು ‘ಪಾರ್ವತಿ’ ಹೇಳಿಕೊಂಡಾಗ ಕಥೆ ತೆರೆದುಕೊಳ್ಳುತ್ತದೆ. ಇವರಿಬ್ಬರ ಪಯಣ ಅವರ ಬದುಕಿನಲ್ಲಿ ಕಲಿಸುವ ಪಾಠವೇ ಮುಂದಿನ ಕಥೆ.

ಅನನುಕ್ರಮಣಿಕೆಯ(non-linear) ನಿರೂಪಣೆಯಲ್ಲಿ ಈ ಚಿತ್ರದ ಕಥೆಯಿದೆ. ಟ್ರಾವೆಲ್ ಆಧಾರಿತ ಸಿನಿಮಾದ ಚಿತ್ರಕಥೆಯಲ್ಲಿ ಈ ಮಾದರಿಯ ಬಳಕೆ ಸಾಮಾನ್ಯ. ಇದು ಪ್ರೇಕ್ಷಕನನ್ನು ಕಥೆಯಲ್ಲಿ ಹಿಡಿದಿಡುವ ಸಾಧನವೂ ಹೌದು. ಹಾಲಿವುಡ್‌ನ ‘ಇನ್‌ಟು ದ ವೈಲ್ಡ್’ ಸಿನಿಮಾಗೆ ಹೋಲುವ ಎಳೆಯನ್ನು ‘#ಪಾರು ಪಾರ್ವತಿ’ ಹೊಂದಿದೆ. ಅಲ್ಲಿ ನಾಯಕ ಸಾಹಸವನ್ನರಿಸಿ ಒಬ್ಬಂಟಿಯಾಗಿ ಹೆಜ್ಜೆ ಇಟ್ಟರೆ, ಇಲ್ಲಿ ಇಬ್ಬರು ‘ಸೋಲೋ ಟ್ರಾವೆಲ್’ ಮಾದರಿಯಲ್ಲಿ ಮಾಡುವ ಪ್ರಯಾಣ ಹೊಸ ಲೋಕ ಸೃಷ್ಟಿಸಿದೆ. ‘ಫೋಟೋ’ ಸಿನಿಮಾ ಮಾದರಿಯ ಕೆಲವು ಟ್ರಾವೆಲ್ ಕಥೆಗಳು ವ್ಯಥೆಗಳನ್ನು ಬಿಚ್ಚಿಟ್ಟರೆ, ಇಂತಹ ಟ್ರಾವೆಲ್ ಕಥೆಗಳು ಜೀವನೋತ್ಸಾಹ ತುಂಬುತ್ತವೆ. ಕನ್ನಡದ ಮಟ್ಟಿಗೆ ಇದೊಂದು ಹೊಸ ಸಿನಿಮಾ ಹಾಗೂ ಪ್ರಯತ್ನ. ಚಿತ್ರಕಥೆಯನ್ನು ಕೆಲವೆಡೆ ಇನ್ನಷ್ಟು ಬಿಗಿಯಾಗಿಸಿದ್ದರೆ ಸಿನಿಮಾದ ಅವಧಿ ಇಳಿಸಲು ಅವಕಾಶವಿತ್ತು. ಹಲವು ದೃಶ್ಯಗಳು ಅನಗತ್ಯ ಎಂದೆನಿಸುತ್ತವೆ.

ಚಿತ್ರಕಥೆ ಪೇಲವವಾಗಿರುವ ದೃಶ್ಯಗಳನ್ನು ಅಬಿನ್ ರಾಜೇಶ್ ಛಾಯಾಚಿತ್ರಗ್ರಹಣ ಹಾಗೂ ಆರ್.ಹರಿ ಸಂಗೀತ ಮರೆಮಾಚಿದೆ. ಮಧುರದಲ್ಲಿನ ಹಾಡು, ಅದನ್ನು ಸೆರೆಹಿಡಿದಿರುವ ರೀತಿ ಅದ್ಭುತವಾಗಿದೆ. ಪಯಣದಲ್ಲಿ ಪ್ರಕೃತಿಯ ದೃಶ್ಯಗಳು ಕಣ್ಣಿಗೆ ತಂಪು ತರುತ್ತವೆ. ನಟನೆಯಲ್ಲಿ ಪೂನಂ ಹೆಚ್ಚಿನ ಅಂಕ ಗಳಿಸುತ್ತಾರೆ. ಆಂಗಿಕ ಅಭಿನಯದಲ್ಲಿ ಪಳಗಿರುವಂತೆ ಅವರು ಕಾಣಿಸುತ್ತಾರೆ. ಅವರ ಪಾತ್ರದ ಡಬ್ಬಿಂಗ್ ಕೊಂಚ ಹೆಚ್ಚು ಕಡಿಮೆಯಾಗಿದೆ ಎಂದೆನಿಸಿದರೂ ಸಮಯ ಉರುಳಿದಂತೆ ಪಾತ್ರಕ್ಕೆ ಒಗ್ಗಿಕೊಳ್ಳಲಾರಂಭಿಸುತ್ತದೆ. ದೀಪಿಕಾ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಆ್ಯಕ್ಷನ್ ದೃಶ್ಯಗಳಲ್ಲಿ ಅವರು ಮಿಂಚಿದ್ದಾರೆ. ಫವಾಜ್ ಅಶ್ರಫ್ ನಿಭಾಯಿಸಿದ ‘ಮಿದುನ್’ ಎಂಬ ‘ಹಾಫ್ ಕನ್ನಡಿಗ’ ಹುಡುಗನ ಪಾತ್ರಕ್ಕೆ ಇನ್ನಷ್ಟು ವಿಸ್ತರಣೆ ಹಾಗೂ ತೆರೆ ಅವಧಿ ನೀಡಬಹುದಿತ್ತು.

ಅಭಿಲಾಷ್ ಪಿ.ಎಸ್.

ನಾವು ನೋಡಿದ ಸಿನಿಮಾ

ಚಿತ್ರದ ಹೆಸರು: ಪಾರು ಪಾರ್ವತಿ (ಕನ್ನಡ)
- **ನಿರ್ಮಾಣ:** ಪಿ.ಬಿ.ಪ್ರೇಂನಾಥ್
- **ನಿರ್ದೇಶನ:** ರೋಹಿತ್ ಕೀರ್ತಿ
- **ತಾರಾಗಣ:** ದೀಪಿಕಾ ದಾಸ್, ಪೂನಂ ಸರ್ನಾಯಕ್, ಫವಾಜ್ ಅಶ್ರಫ್ ಮತ್ತಿತರರು


ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5940

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕನ್ನಡದ ಆದಿಕವಿ (2)
4.ಎರಡು ಸಮಪಾಲುಗಳಲ್ಲಿ ಒಂದು (2)
6.ಶವವನ್ನು ಸುಡಲು ಒಟ್ಟಿದ ಕಟ್ಟಿಗೆ ರಾಶಿ (2)
7.ಕರ್ಣನ ಹೆಸರಿಲ್ಲಿ ಉಲ್ಟಾ ಆಗಿದೆ (3)
8.ಕಸವರದ ಹತ್ತಿರವಿರುವ ಕೊಳೆ (2)
10.ಉತ್ತರದವರ ಸೊಳ್ಳೆಪರದೆ (5)
12.ವಿವಿಧತೆಯಲ್ಲಿರುವ ರೀತಿ! (2)
14.ಜಗಳಕ್ಕೊಂದು ಪರ್ಯಾಯ ಪದ (3)
15.ತಗ್ಗು ದನಿಯಿದು (2)
16.ದುಸ್ತರದಲ್ಲಿರುವ ಮಡಿಕೆಯನ್ನು ಹುಡುಕಿ (2)
17.ತುಂಬಿರುವುದನ್ನು ಉಲ್ಟಾ ಹೇಳಿ (2)

ಮೇಲಿಂದ ಕೆಳಕ್ಕೆ
2.ಜಮದಗ್ನಿ ಮತ್ತು ರೇಣುಕಾದೇವಿಯ ಮಗ (5)
3.ಕತೆಯಲ್ಲಿ ಶೂನ್ಯವಿದ್ದಾಗ ಕಟ್ಟು ಕಂಡೀತು! (2)
4.ಅಳತೆಗೆ ಮೀರಿದ ಸ್ಥಿತಿ (4)
5.ಮೂಡುತ್ತಿರುವ ಸೂರ್ಯ (5)
6.ಜ್ಞಾನಪೀಠ ಪ್ರಶಸ್ತಿ ಪಡೆದ ಮಾಸ್ತಿಯವರ ಐತಿಹಾಸಿಕ ಕಾದಂಬರಿ (7)
9.ಮಂಕು ಕವಿಸುವ ಅಸ್ತ್ರ (5)
11.ಈತ ಹತ್ತಿರದವನು (5)
13.ಬ್ರಾಹ್ಮಣನನ್ನು ಹೀಗೂ ಕರೆಯುತ್ತಾರೆ (4)
15.ಕುರಿ ದನ ಮೊದಲಾದವುಗಳ ಹಿಂಡು (2)



5939ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕಾಡತೂಸು 3.ಕರಜಾತ
5.ಮಕರ 8.ಮನವಿ
10.ರಿಕಾಪು 11.ನಾಮಕರಣ
12.ವಿನಯ 13.ಯಯಾತಿ
15.ಕಕವ 17.ಕಲಾವಿದ
18.ನಳಪಾಕ

ಮೇಲಿಂದ ಕೆಳಕ್ಕೆ:
1.ಕಾವ್ಯನಾಮ 2.ಸುಮ 3.ಕರ
4.ತಲೆಗಾಪು 6.ಕಲ್ಯಾಣಕರ್ನಾಟಕ
7.ಪರಿಣಯ 9.ವಿನಾಯಕ
12.ವಿದೂಷಕ 14.ತಿಲೋದಕ
15.ಕದ 16.ವನ

ಸುಡೊಕು 6325

		5		8		4		
	8		7		5			9
7		1		6		2		
							3	2
3	6		5		7	8		
		8					4	7
		7		5		1		3
5			9		8			
2		3				9		5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6324 ಸುಡೊಕು

6	4	1	8	5	9	7	3	2
2	9	3	6	4	7	5	8	1
8	5	7	1	3	2	6	4	9
3	6	5	2	1	4	8	9	7
7	2	9	5	8	3	4	1	6
1	8	4	7	9	6	3	2	5
9	7	8	3	6	1	2	5	4
5	1	6	4	2	8	9	7	3
4	3	2	9	7	5	1	6	8

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಫೆಬ್ರುವರಿ 1, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ತೃತೀಯ ಗಂ. 11-39 ನಕ್ಷತ್ರ: ಪೂರ್ವಾಭಾದ್ರ ಗಂ. 26-33 ಯೋಗ: ಪರಿಘ ಗಂ. 12-25 ಕರಣ: ಗರ ಗಂ. 11-39, ಮಕರ ಮಾಸದ 18 ನೇ ದಿನ, ಮಳೆನಕ್ಷತ್ರ: ಶ್ರವಣ 3.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 07-01 ಸೂರ್ಯಾಸ್ತ : 06-28
ಮುಸ್ಲಿಂ ದಿನಾಂಕ : 02 ಶಬನ್
ಅದೃಷ್ಟ ಸಂಖ್ಯೆ : 3, 2

ಮೇಷ: ಹಿತಶತ್ರುಗಳಿಂದ ವಂಚನಾ ಪ್ರಸಂಗವಿದ್ದರೂ ಜಯ ಸಿಗುವುದು ಖಂಡಿತ. ಬರವಣಿಗೆ ಮುಖಾಂತರ ಹೆಚ್ಚುವರಿ ಆದಾಯವಿರುವುದು. ನೂತನ ವಾಹನ ಕೊಳ್ಳುವಂಥ ಯೋಗವಿದೆ.

ವೃಷಭ: ಬದುಕಿನಲ್ಲಿ ಉಳಿದ ದಿನಗಳನ್ನು ಆಧ್ಯಾತ್ಮಿಕ ಮಾರ್ಗದಲ್ಲಿ ಉನ್ನತಿಯನ್ನು ಪಡೆದುಕೊಳ್ಳುವ ರೀತಿಯಲ್ಲಿ ನಡೆಸುವ ಪ್ರಯತ್ನ ಮಾಡುವಿರಿ. ಯಶಸ್ಸಿನ ಹೊಸ ಮಾರ್ಗಗಳು ಅರಿವಾಗುವುದು.

ಮಿಥುನ: ಎಂಜಿನಿಯರಿಂಗ್ ಕೆಲಸಗಾರರು ತಮ್ಮ ಕಾರ್ಯದಲ್ಲಿ ಚಾಣಕ್ಯ ನೀತಿ ಅನುಸರಿಸುವುದರಿಂದ ವ್ಯವಹಾರದಲ್ಲಿ ಪ್ರಶಂಸೆ ಕಾಣುವರು. ರಾಜಕೀಯ ವ್ಯಕ್ತಿಗಳಿಗೆ ಅಧಿಕಾರಿಗಳ ಭಯ ಉಂಟಾಗಲಿದೆ.

ಕರ್ಕಾಟಕ: ಕೃಷಿಕರು ಈಗಿನ ಕಾಲಕ್ಕೆ ತಕ್ಕಂತೆಯೇ ಯಂತ್ರೋಪಕರಣಗಳ ಬಳಕೆಯನ್ನು ಮಾಡಿಕೊಳ್ಳುವ ಬಗ್ಗೆ ಗಮನಹರಿಸಿ. ಪತಿಯ ಆರೋಗ್ಯದಲ್ಲಿ ಆರೈಕೆಯಿಂದ ಉನ್ನತಿ ಕಾಣುವುದು. ಅನಿರೀಕ್ಷಿತವಾಗಿ ಉಡುಗೊರೆ ಸಿಗಲಿದೆ.

ಸಿಂಹ: ಬಾಳಸಂಗಾತಿಯ ಆಯ್ಕೆಯ ವಿಚಾರದಲ್ಲಿ ಸೌಂದರ್ಯಕ್ಕಿಂತ ಗುಣಕ್ಕೆ ಪ್ರಾಮುಖ್ಯ ನೀಡುವುದು ಉತ್ತಮ. ಸಿಹಿ ಪದಾರ್ಥಗಳ ಮಾರಾಟದಿಂದ ಅಧಿಕ ಲಾಭ. ಶೀತದಿಂದ ಬಳಲುವಂತಾಗಬಹುದು.

ಕನ್ಯಾ: ಉದ್ಯೋಗದ ಅನಿವಾರ್ಯತೆಗಳನ್ನು ಬಿಟ್ಟು ದೇಹದ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಒಳ್ಳೆಯದು. ರೇಷ್ಮೆಯ ಉತ್ಪಾದಕರು ಆದಾಯದಲ್ಲಿ ಗಣನೀಯ ಸುಧಾರಣೆಯನ್ನು ಕಾಣುವಿರಿ.

ತುಲಾ: ಹಕ್ಕಿಯಂತೆ ಹಾರಾಡುವ ಆಸೆ ತಪ್ಪಲ್ಲ. ಆದರೆ ಸಾಧಕಬಾಧಕಗಳನ್ನು ಅರಿತುಕೊಂಡು ಹೆಜ್ಜೆ ಇಟ್ಟರೆ ಕ್ಷೇಮ. ಕಲಿತ ವಿದ್ಯೆಯನ್ನು ಬಳಸಿಕೊಳ್ಳುವ ಬಗ್ಗೆ ಪ್ರಯತ್ನವಿರಲಿ. ಕಾರ್ಯತಂತ್ರಗಳಿಗೆ ಎದುರಾಳಿಯ ಸೋಲು ನಿಶ್ಚಿತ.

ವೃಶ್ಚಿಕ: ಸ್ವಂತ ಉದ್ಯೋಗ ಘಟಕವನ್ನು ಹೊಂದಿದ್ದರೆ ಕಾರ್ಮಿಕರ ಉತ್ತಮ ಬೆಂಬಲ ಲಭ್ಯ. ಯಾವುದೇ ಹೊಸ ವ್ಯವಹಾರವನ್ನು ಶುರುಮಾಡುವುದಿದ್ದರೂ ಸಾಂಕೇತಿಕವಾಗಿ ಪ್ರಾರಂಭಿಸಿ.

ಧನು: ಹರಿತವಾದ ವಸ್ತುಗಳಿಂದ ಅನಾಹುತಗಳಾಗುವ ಸಂಭವವಿದ್ದು, ಎಚ್ಚರಿಕೆಯಿಂದ ಇರಿ. ಸಹೋದರರ ಆಗಮನದಿಂದ ಮನಸ್ಸಿಗೆ ನೆಮ್ಮದಿ ಮತ್ತು ಸಂತೋಷ ಇರಲಿದೆ. ಒಳಾಂಗಣ ವಿನ್ಯಾಸಗಾರರಿಗೆ ಹೆಚ್ಚಿನ ಬೇಡಿಕೆ ಬರಲಿದೆ.

ಮಕರ: ತಾಂತ್ರಿಕ ಪದವೀಧರರಿಗೆ ಹೆಚ್ಚಿನ ಬೇಡಿಕೆ ಇದ್ದು, ಒಳ್ಳೆಯ ಅವಕಾಶಗಳು ಒದಗಿ ಬರಲಿವೆ. ವಿದ್ಯಾರ್ಥಿಗಳು ತಮ್ಮ ಅಭ್ಯಾಸದ ಮೇಲೆ ಅಧಿಕವಾದ ಶ್ರಮವಹಿಸಿ. ಮಕ್ಕಳಿಂದ ಸಂತೋಷವಾಗುವುದು.

ಕುಂಭ: ಸಾಂಸಾರಿಕವಾದ ಸಮಸ್ಯೆಗಳಿಗೆ ಮನೆಯ ಹೊರಗಿನವರ ಬಳಿ ಸಲಹೆ ಕೇಳುವುದು ಪ್ರತಿಷ್ಠೆಗೆ ಧಕ್ಕೆ ತರುವುದರಿಂದ ಪರಿಹಾರ ಹುಡುಕಿಕೊಳ್ಳಿ. ಮಕ್ಕಳ ಮೇಲೆ ಯಾವುದೇ ರೀತಿಯ ಒತ್ತಡಗಳನ್ನು ಹೇರಬೇಡಿ.

ಮೀನ: ಸೃಜನಾತ್ಮಕ ಕೆಲಸಗಳಿಗಿಂತ ಕೆಲಸ ನಿರ್ವಹಿಸುವ ಬಗ್ಗೆ ಮನಸ್ಸು ಬೆಳೆಸಿಕೊಳ್ಳುವುದು ಉತ್ತಮ. ಸಹೋದ್ಯೋಗಿಯೊಬ್ಬನ ನೆರವಿನಿಂದ ಕಾರ್ಯಗಳು ಶೀಘ್ರ ಪೂರ್ಣಗೊಳ್ಳಲಿವೆ.


ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹433-685
ದ್ವಿತಳಿ (ಬಿ.ವಿ)	₹144-991

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹13500-14120
ದಾವಣಗೆರೆ	₹11000-11000


ಷೇರುಪೇಟೆ ವಹಿವಾಟು 740



ಎನ್‌ಎಸ್‌ಇ ನಿಫ್ಟಿ


ಹಿಂದಿನ ಅಂತ್ಯ	23,249
ಇಂದಿನ ಅಂತ್ಯ	23,508
▲	258
ದಿನದ ಗರಿಷ್ಠ	23,546

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹535
12 ಕ್ಕೆ	₹70
ಮೈಸೂರು	
100ಕ್ಕೆ	₹535

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್‌-4	₹188
ಆರ್‌ಎಸ್‌ಎಸ್‌-5	₹183
ಗುಡ್ ಲಾಟ್	₹178

(ಪ್ರತಿ ಕೆ.ಜಿಗೆ)

ವಿನಿಮಯ ದರ

$ ಡಾಲರ್	86.62
£ ಪೌಂಡ್	107.80
€ ಯುರೊ	90.17
¥ ಯೆನ್ (100ಕ್ಕೆ)	56

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1400 (1400)
ಸೋಯಾ (ರಿಫೈನ್ಡ್)	₹1260 (1260)
ಸೂರ್ಯಕಾಂತಿ (ರಿಫೈನ್ಡ್)	₹1350 (1355)
ಪಾಮೋಲಿನ್	₹1300 (1300)

ಸೆನ್ಸೆಕ್ಸ್ ಏರಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಯಲ್ಲಿ ಸತತ ನಾಲ್ಕನೇ ದಿನವಾದ ಶುಕ್ರವಾರವೂ ಗೂಳಿಯ ನಾಗಾಲೋಟ ಮುಂದುವರಿಯಿತು.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸಂಸತ್‌ನಲ್ಲಿ 2024–25ನೇ ಸಾಲಿನ ಆರ್ಥಿಕ ಸಮೀಕ್ಷೆ ಮಂಡಿಸಿದ್ದಾರೆ. ಈ ಸಮೀಕ್ಷೆಯು 2025–26ನೇ ಸಾಲಿಗೆ ಅಭಿವೃದ್ಧಿಪರ ಬಜೆಟ್ ಮಂಡನೆಯಾಗಲಿದೆ ಎಂಬ ಸುಳಿವು ನೀಡಿದೆ. ಇದು ಸೂಚ್ಯಂಕಗಳು ಏರಿಕೆಯಾಗಲು ನೆರವಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 740 ಅಂಶ ಏರಿಕೆ ಕಂಡು 77,500 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 258 ಅಂಶ ಹೆಚ್ಚಳ ಕಂಡು, 23,508 ಅಂಶಗಳಲ್ಲಿ ಸ್ಥಿರಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಎಲ್ ಆ್ಯಂಡ್ ಟಿ ಕಂಪನಿ ಶೇ 4.31 ಮತ್ತು ನೆಸ್ಲೆ ಇಂಡಿಯಾ ಷೇರಿನ ಮೌಲ್ಯದಲ್ಲಿ ಶೇ 4.25ರಷ್ಟು ಏರಿಕೆಯಾಗಿದೆ. ಇಂಡಸ್ ಇಂಡ್ ಬ್ಯಾಂಕ್, ಟೈಟನ್, ಟಾಟಾ ಮೋಟರ್ಸ್, ಟಾಟಾ ಸ್ಟೀಲ್, ಐಟಿಸಿ ಮತ್ತು ಮಾರುತಿ ಸುಜುಕಿ ಷೇರಿನ ಮೌಲ್ಯ ಹೆಚ್ಚಳವಾಗಿದೆ.

ಇಳುವರಿ ಕುಸಿತದ ನಡುವೆಯೂ ರೈತರಿಗೆ ಹರ್ಷ

ದಾಳಿಂಬೆಗೆ ಬಂಪರ್ ಬೆಲೆ

• ವಾಗೀಶ ಎ.

ಕುರುಗೋಡು (ಬಳ್ಳಾರಿ ಜಿಲ್ಲೆ): ಈ ಬಾರಿ ದಾಳಿಂಬೆಗೆ ಬಂಪರ್ ಬೆಲೆ ಸಿಕ್ಕಿದ್ದು, ಕೆ.ಜಿಗೆ ₹180 ರಿಂದ ₹250ರಂತೆ ಮಾರಾಟವಾಗುತ್ತಿದೆ. ಇದು ರೈತರಲ್ಲಿ ಮಂದಹಾಸ ಮೂಡಿಸಿದೆ.

ಚಂಡಮಾರುತ, ಅಕಾಲಿಕ ಮಳೆಯಿಂದ ಗುಜರಾತ್, ಮಹಾರಾಷ್ಟ್ರ, ರಾಜಸ್ಥಾನದಲ್ಲಿ ಈ ಬಾರಿ ಇಳುವರಿ ಕುಸಿದಿದೆ. ರಾಜ್ಯದಲ್ಲೂ ಇಳುವರಿ ಕುಸಿದಿದೆ. ಆದರೆ, ಸೂಕ್ತ ಸಮಯಕ್ಕೆ ವಿಜ್ಞಾನಿಗಳು ಮತ್ತು ತೋಟಗಾರಿಕೆ ಇಲಾಖೆಯ ಸಲಹೆ ಮೇರೆಗೆ ರೈತರು ಉತ್ತಮವಾಗಿ ದಾಳಿಂಬೆ ಬೆಳೆದಿದ್ದಾರೆ.

‘ಒಂದು ಹೆಕ್ಟೇರ್‌ನಲ್ಲಿ ದಾಳಿಂಬೆ ಬೆಳೆಯಲು ಕನಿಷ್ಠ ₹2 ಲಕ್ಷ ವೆಚ್ಚ ತಗಲುತ್ತದೆ. ರೋಗ, ಕೀಟಬಾಧೆ ಕಾಡದಿದ್ದರೆ ಕನಿಷ್ಠ 20ರಿಂದ 25 ಟನ್ ಇಳುವರಿ ಪಡೆಯಬಹುದು. ಕೆ.ಜಿಗೆ ₹100 ದರ ಸಿಕ್ಕರೂ ₹20 ಲಕ್ಷದಿಂದ ₹25 ಲಕ್ಷದವರೆಗೆ ಆದಾಯ ಗಳಿಸಬಹುದು’ ಎಂದು ರೈತ ಎಸ್.ಟಿ.ಎಂ. ಜಗದೀಶ್ ತಿಳಿಸಿದರು.

‘ಈ ಬಾರಿ ಇಳುವರಿ ಶೇ 40ರಷ್ಟು ಕಡಿಮೆಯಾದರೂ ಬೆಂಗಳೂರು, ಹೈದರಾಬಾದ್, ಚೆನ್ನೈ ಮಾರುಕಟ್ಟೆಯಲ್ಲಿ ಕೆ.ಜಿಗೆ ₹190 ರಿಂದ ₹250 ವರೆಗೆ ದರ ಇದೆ’ ಎಂದು ಹೇಳಿದರು.



ಕುರುಗೋಡು ತಾಲ್ಲೂಕಿನ ಶ್ರೀನಿವಾಸ ಕ್ಯಾಂಪ್‌ನ ತೋಟವೊಂದರಲ್ಲಿ ಬೆಳೆದಿರುವ ದಾಳಿಂಬೆ

‘ಬಳ್ಳಾರಿ ಜಿಲ್ಲೆಯ 750 ಹೆಕ್ಟೇರ್‌ನಲ್ಲಿ ದಾಳಿಂಬೆ ಬೆಳೆಯಲಾಗುತ್ತದೆ. ಕುರುಗೋಡು ತಾಲ್ಲೂಕು ಒಂದರಲ್ಲೇ 520 ಹೆಕ್ಟೇರ್‌ನಲ್ಲಿ ದಾಳಿಂಬೆ ಬೆಳೆಯಲಾಗಿದೆ. ಕಳೆದ ವರ್ಷ ದಾಳಿಂಬೆ ದರ ಕೆ.ಜಿಗೆ ₹80 ರಿಂದ ₹100 ಇತ್ತು. ಬೆಳೆಗೆ ಉತ್ತಮ ಬೆಲೆ ಸಿಗುತ್ತಿರುವುದನ್ನು ಕಂಡು ಹೆಚ್ಚಿನ ರೈತರು ಈ ಬಾರಿ ಹೊಸದಾಗಿ ದಾಳಿಂಬೆ ಬೆಳೆ ಬೆಳೆಯಲಾರಂಭಿಸಿದ್ದಾರೆ’ ಎಂದರು.

‘ದಾಳಿಂಬೆ ಬೆಳೆ ವಿಸ್ತೀರ್ಣ ಹೆಚ್ಚಿಸಲು ಸಣ್ಣ ರೈತರಿಗೆ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಮತ್ತು ದೊಡ್ಡ ಹಿಡುವಳಿದಾರರಿಗೆ ರಾಷ್ಟ್ರೀಯ ತೋಟಗಾರಿಕೆ ಮಿಷನ್‌ನಿಂದ ಪ್ರೋತ್ಸಾಹ ನೀಡಲಾಗುತ್ತಿದೆ’ ಎಂದು ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ಸಂತೋಷ ಸಪ್ಪಂಡಿ ‘ಪ್ರಜಾವಾಣಿ’ಗೆ ತಿಳಿಸಿದರು.

> ಮಾರುಕಟ್ಟೆಯಲ್ಲಿ ದಾಳಿಂಬೆಗೆ ಉತ್ತಮ ಬೆಲೆ ಸಿಗುತ್ತಿದೆ. ಆದರೆ, ರಾತ್ರಿ ವೇಳೆ ಕಳ್ಳರು ಹಣ್ಣು ಕದಿಯುತ್ತಿರುವುದು ಆತಂಕ ಮೂಡಿಸಿದೆ
>
> **ಜಗದೀಶ್ ಸ್ವಾಮಿ,** ದಾಳಿಂಬೆ ಬೆಳೆಗಾರ, ಕುರುಗೋಡು

> ದಾಳಿಂಬೆ ಕದಿಯುತ್ತಿದ್ದ ನಾಲ್ವರನ್ನು ಬಂಧಿಸಿದ್ದೇವೆ. ತೋಟದ ಸುತ್ತಮುತ್ತ ಆಯಕಟ್ಟಿನ ಸ್ಥಳಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಿಕೊಳ್ಳುವುದು ಸೂಕ್ತ
>
> **ಸುಪ್ರಿತ್ ವಿರೂಪಾಕ್ಷಪ್ಪ,** ಪಿಎಸ್ಐ, ಕುರುಗೋಡು

ಸುದ್ದಿ 2 ನಿಮಿಷ

ಪಿಎನ್‌ಬಿಗೆ ₹4,508 ಕೋಟಿ ಲಾಭ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿಎನ್‌ಬಿ), ₹4,508 ಕೋಟಿ ನಿವ್ವಳ ಲಾಭ ಗಳಿಸಿದೆ.

2023–24ನೇ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ₹2,223 ಕೋಟಿ ಲಾಭ ಗಳಿಸಲಾಗಿತ್ತು. ಇದಕ್ಕೆ ಹೋಲಿಸಿದರೆ ದುಪ್ಪಟ್ಟು ಏರಿಕೆ ಆಗಿದೆ ಎಂದು ಬ್ಯಾಂಕ್ ಶುಕ್ರವಾರ ಷೇರುಪೇಟೆಗೆ ತಿಳಿಸಿದೆ.

Punjab National Bank

ಕಳೆದ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಒಟ್ಟು ₹29,962 ಕೋಟಿ ವರಮಾನ ಸಂಗ್ರಹವಾಗಿತ್ತು. ಈ ಬಾರಿ ₹34,752 ಕೋಟಿ ಸಂಗ್ರಹವಾಗಿದೆ. ಬಡ್ಡಿ ವರಮಾನ ₹31,340 ಕೋಟಿ ಸಂಗ್ರಹವಾಗಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣ (ಜಿಎನ್‌ಪಿಎ) ಶೇ 6.24ರಿಂದ ಶೇ 4.09ಕ್ಕೆ ತಗ್ಗಿದೆ. ನಿವ್ವಳ ಎನ್‌ಪಿಎ ಶೇ 0.96ರಿಂದ ಶೇ 0.41ಕ್ಕೆ ಇಳಿದಿದೆ ಎಂದು ಬ್ಯಾಂಕ್ ತಿಳಿಸಿದೆ.

ಕಳೆದ ಡಿಸೆಂಬರ್ ತ್ರೈಮಾಸಿಕದಲ್ಲಿ ವಸೂಲಾಗದ ಸಾಲವು ₹2,994 ಕೋಟಿ ಇತ್ತು. ಈ ಬಾರಿ ₹318 ಕೋಟಿಗೆ ಇಳಿದಿದೆ. ಸಾಲ ವಸೂಲಾತಿ ಪ್ರಮಾಣದಲ್ಲಿ ಹೆಚ್ಚಳವಾಗಿದೆ ಎಂದು ತಿಳಿಸಿದೆ.

ವಿತ್ತೀಯ ಕೊರತೆ ಹೆಚ್ಚಳ

ನವದೆಹಲಿ (ಪಿಟಿಐ): 2024-25ನೇ ಆರ್ಥಿಕ ವರ್ಷದ ಏಪ್ರಿಲ್–ಡಿಸೆಂಬರ್ ಅವಧಿಯಲ್ಲಿ ಕೇಂದ್ರ ಸರ್ಕಾರದ ವರಮಾನ ಮತ್ತು ವೆಚ್ಚದ ನಡುವಿನ ಅಂತರವಾದ ವಿತ್ತೀಯ ಕೊರತೆಯು ಇಡೀ ವರ್ಷದ ಗುರಿಯ ಶೇ 56.7ರಷ್ಟಾಗಿದೆ.

ಮೌಲ್ಯದ ಲೆಕ್ಕದಲ್ಲಿ ಇದು ₹9.14 ಲಕ್ಷ ಕೋಟಿಯಾಗಿದೆ ಎಂದು ಲೆಕ್ಕಪತ್ರಗಳ ಮಹಾನಿಯಂತ್ರಕರ (ಸಿಜಿಎ) ವರದಿ ಶುಕ್ರವಾರ ತಿಳಿಸಿದೆ.

ಏಪ್ರಿಲ್‌ನಿಂದ ಡಿಸೆಂಬರ್ ಅವಧಿಯಲ್ಲಿ ₹18.43 ಲಕ್ಷ ಕೋಟಿ ನಿವ್ವಳ ತೆರಿಗೆ ಸಂಗ್ರಹವಾಗಿದೆ. ಇದೇ ಅವಧಿಯಲ್ಲಿ ಸರ್ಕಾರದ ಒಟ್ಟು ವೆಚ್ಚ ₹32 ಲಕ್ಷ ಕೋಟಿಗೆ (ಶೇ 67ರಷ್ಟು) ಮುಟ್ಟಿದೆ.

2023–24ರಲ್ಲಿ ವಿತ್ತೀಯ ಕೊರತೆಯು ಶೇ 5.6ರಷ್ಟಿತ್ತು. 2024–25ರಲ್ಲಿ ಇದನ್ನು ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಶೇ 4.9ಕ್ಕೆ ತಗ್ಗಿಸಲು ಸರ್ಕಾರವು ಬಜೆಟ್‌ನಲ್ಲಿ ಗುರಿ ನಿಗದಿಪಡಿಸಿದೆ. ಇದು ಮೌಲ್ಯದ ಲೆಕ್ಕದಲ್ಲಿ ₹16.13 ಲಕ್ಷ ಕೋಟಿ ಆಗಿದೆ.

ಮೂಲಸೌಕರ್ಯ ಪ್ರಗತಿ ಇಳಿಕೆ

ನವದೆಹಲಿ (ಪಿಟಿಐ): ದೇಶದ ಪ್ರಮುಖ ಮೂಲಸೌಕರ್ಯ ವಲಯಗಳ ಬೆಳವಣಿಗೆಯು 2024ರ ಡಿಸೆಂಬರ್‌ನಲ್ಲಿ ಶೇ 4ರಷ್ಟು ಇಳಿಕೆಯಾಗಿದೆ.

2023ರ ಡಿಸೆಂಬರ್‌ನಲ್ಲಿ ಶೇ 5.1ರಷ್ಟು ದಾಖಲಾಗಿತ್ತು. ನೈಸರ್ಗಿಕ ಅನಿಲ ಉತ್ಪಾದನೆಯಲ್ಲಿ ಕಡಿಮೆಯಾಗಿದೆ ಎಂದು ಕೇಂದ್ರ ಸರ್ಕಾರ ಶುಕ್ರವಾರ ತಿಳಿಸಿದೆ.

ಕಲ್ಲಿದ್ದಲು ಶೇ 5.3, ರಿಫೈನರಿ ಉತ್ಪನ್ನ ಶೇ 2.8, ರಸಗೊಬ್ಬರ ಶೇ 1.7 ಮತ್ತು ಉಕ್ಕು ವಲಯವು ಶೇ 5.1ರಷ್ಟು ಪ್ರಗತಿ ದಾಖಲಿಸಿದೆ. ಆದರೆ, ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಉತ್ಪಾದನೆಯಲ್ಲಿ ಇಳಿಕೆಯಾಗಿದೆ ಎಂದು ತಿಳಿಸಿದೆ. ಆದರೆ, ಸಿಮೆಂಟ್, ವಿದ್ಯುತ್ ಉತ್ಪಾದನೆಯು ಕ್ರಮವಾಗಿ ಶೇ 4 ಮತ್ತು ಶೇ 5.1ರಷ್ಟು ಬೆಳವಣಿಗೆ ಆಗಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹೊಸತು	30000-36000
ಹಳತು	45500-49500
ಕುಮಟ	
ಚಾಲಿ	30869-37199
ಚಿಪ್ಪು	15899-26269
ಕೋಕ	6079-20099
ಫ್ಯಾಕ್ಟರಿ	2509-24130
ಹಳೆಚಾಲಿ	35869-38899
ಹೊಸಚಾಲಿ	27010-32499
ಶಿವಮೊಗ್ಗ	
ಬೆಟ್ಟೆ	44099-53899
ಗೊರಬಲು	17559-29000
ರಾಶಿ	35199-51799
ಸರಕು	49589-61340
ಸಿದ್ದಾಪುರ	
ಬಿಳಿಗೋಟು	22809-28889
ಚಾಲಿ	33099-38289
ಕೋಕ	20309-23299
ಹೊಸಚಾಲಿ	23899-30659
ಕೆಂಪುಗೋಟು	20609-21319
ರಾಶಿ	42699-49569
ತಟ್ಟಿಬೆಟ್ಟೆ	28099-48909
ಶಿರಸಿ	
ಬೆಟ್ಟೆ	27399-43561
ಬಿಳಿಗೋಟು	15499-29313
ಚಾಲಿ	34099-39898
ಕೆಂಪುಗೋಟು	10999-24099
ರಾಶಿ	41289-46561
ಯಲ್ಲಾಪುರ	
ಅಪಿ	60100-70179
ಬಿಳಿಗೋಟು	11899-27199
ಚಾಲಿ	27299-39019
ಕೋಕ	4609-16899
ಕೆಂಪುಗೋಟು	12899-29901
ರಾಶಿ	40199-58629
ತಟ್ಟಿಬೆಟ್ಟೆ	30100-39319

2024–25ನೇ ಆರ್ಥಿಕ ಸಮೀಕ್ಷೆಯಲ್ಲಿ ಪ್ರಸ್ತಾಪ

ಚಿನ್ನದ ಬೆಲೆ ಇಳಿಕೆ ನಿರೀಕ್ಷೆ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದಲ್ಲಿ ಚಿನ್ನದ ಧಾರಣೆಯು ಇಳಿಕೆಯಾಗಲಿದೆ. ಆದರೆ, ಬೆಳ್ಳಿ ದರವು ಏರಿಕೆಯಾಗುವ ನಿರೀಕ್ಷೆಯಿದೆ ಎಂದು ಸಂಸತ್‌ನಲ್ಲಿ ಶುಕ್ರವಾರ ಮಂಡಿಸಿರುವ 2024–25ನೇ ಸಾಲಿನ ಆರ್ಥಿಕ ಸಮೀಕ್ಷೆ ಹೇಳಿದೆ.



ಜಾಗತಿಕ ಮಟ್ಟದಲ್ಲಿ ಪ್ರಸಕ್ತ ವರ್ಷ ಸರಕುಗಳ ಬೆಲೆಯು ಶೇ 5.1ರಷ್ಟು ಹಾಗೂ 2026ರಲ್ಲಿ ಶೇ 1.7ರಷ್ಟು ಇಳಿಕೆಯಾಗಲಿದೆ ಎಂದು ವಿಶ್ವಬ್ಯಾಂಕ್ ಪ್ರಕಟಿಸಿರುವ ಸರಕು ಮಾರುಕಟ್ಟೆಯ ಮುನ್ನೋಟವನ್ನು ಆರ್ಥಿಕ ಸಮೀಕ್ಷೆಯಲ್ಲಿ ಉಲ್ಲೇಖಿಸಲಾಗಿದೆ.

ಕಚ್ಚಾ ತೈಲದ ಬೆಲೆಯಲ್ಲಿ ಇಳಿಕೆಯಾಗಲಿದೆ. ಆದರೆ, ತಾತ್ಕಾಲಿಕವಾಗಿ ನೈಸರ್ಗಿಕ ಅನಿಲದ ಬೆಲೆಯಲ್ಲಿ ಹೆಚ್ಚಳವಾಗುವ ಸಾಧ್ಯತೆಯಿದೆ ಎಂದು ಹೇಳಿದೆ.

ವ್ಯಾಪಾರ ಅನಿಶ್ಚಿತತೆ: ದೇಶದ ಆರ್ಥಿಕ ಬೆಳವಣಿಗೆ ದರದ ಮೇಲೆ ಜಾಗತಿಕ ಬಿಕ್ಕಟ್ಟುಗಳು ಪರಿಣಾಮ ಬೀರಲಿವೆ. ವ್ಯಾಪಾರ ವಹಿವಾಟಿನ ಅನಿಶ್ಚಿತತೆ ಮುಂದುವರಿಯಲಿದೆ ಎಂದು ವರದಿ ಹೇಳಿದೆ.

ಸರ್ಕಾರವು 2047ರೊಳಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಸಾಲಿಗೆ ಸೇರ್ಪಡೆಗೊಳಿಸುವ ಗುರಿ ಹೊಂದಿದೆ. ಈ ಗುರಿ ಸಾಧನೆಗಾಗಿ ಜಿಡಿಪಿಯು ವಾರ್ಷಿಕವಾಗಿ ಶೇ 8ರಷ್ಟು ಪ್ರಗತಿ ಸಾಧಿಸಬೇಕಿದೆ ಎಂದು ಹೇಳಿದೆ.

ದೇಶದಲ್ಲಿ ಬಂಡವಾಳ ಹೂಡಿಕೆ ದರವು ಜಿಡಿಪಿಯು ಶೇ 31ರಷ್ಟಿದೆ. ಇದನ್ನು ಶೇ 35ಕ್ಕೆ ಹೆಚ್ಚಿಸಬೇಕಿದೆ. ತಯಾರಿಕಾ ವಲಯದ ಬೆಳವಣಿಗೆಗೆ ಮತ್ತಷ್ಟು ಉತ್ತೇಜನ ನೀಡಬೇಕಿದೆ. ಕೃತಕ ಬುದ್ಧಿಮತ್ತೆ, ರೋಬಾಟಿಕ್ಸ್ ಮತ್ತು ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಹೂಡಿಕೆ ಪ್ರಮಾಣವನ್ನು ಹೆಚ್ಚಿಸಬೇಕಿದೆ ಎಂದು ಹೇಳಿದೆ.

2030ರೊಳಗೆ ಕೃಷಿಯೇತರ ವಲಯದಲ್ಲಿ ವಾರ್ಷಿಕವಾಗಿ 78.5 ಲಕ್ಷ ಹೊಸ ಉದ್ಯೋಗಗಳನ್ನು ಸೃಷ್ಟಿಸಬೇಕಿದೆ ಎಂದು ಹೇಳಿದೆ.

ಜಾಗತಿಕ ಬಿಕ್ಕಟ್ಟಿನಿಂದಾಗಿ ಹಣದುಬ್ಬರ ಏರಿಕೆಯಾಗಲಿದೆ. 2023ರ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ ಶೇ 5.4ರಷ್ಟಿದ್ದ ಚಿಲ್ಲರೆ ಹಣದುಬ್ಬರವು, 2024ರ ಇದೇ ಅವಧಿಯಲ್ಲಿ ಶೇ 5.4ಕ್ಕೆ ಇಳಿಕೆಯಾಗಿದೆ ಎಂದು ಹೇಳಿದೆ.

30ಗಳಲ್ಲಿ ₹5,510 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಏರಿಕೆ ಆಗಿದೆ.

ಚಿನ್ನದ ದರವು 10 ಗ್ರಾಂಗೆ (ಶೇ 99.9 ಪರಿಶುದ್ಧತೆ) ₹1,100 ಏರಿಕೆಯಾಗಿ, ₹84,900ರಂತೆ ಮಾರಾಟವಾಗಿದೆ. ಸ್ಟ್ಯಾಂಡರ್ಡ್ ಚಿನ್ನದ (ಶೇ 99.5 ಪರಿಶುದ್ಧತೆ) ಬೆಲೆಯು ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ, ₹84,500ಕ್ಕೆ ಮುಟ್ಟಿದೆ.

ಜನವರಿ 1ರಿಂದ ಇಲ್ಲಿಯವರೆಗೆ 10 ಗ್ರಾಂ ಚಿನ್ನದ ದರವು ₹5,510 (ಶೇ 7ರಷ್ಟು) ಏರಿಕೆಯಾಗಿದೆ.

ಬೆಳ್ಳಿ ಧಾರಣೆಯು ಕೆ.ಜಿಗೆ ₹850 ಹೆಚ್ಚಳವಾಗಿ, ₹95 ಸಾವಿರ ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಕರ್ಣಾಟಕ ಬ್ಯಾಂಕ್‌ಗೆ ₹283 ಕೋಟಿ ಲಾಭ

ಪ್ರಜಾವಾಣಿ ವಾರ್ತೆ

ಮಂಗಳೂರು: 2024–25ನೇ ಸಾಲಿನ ಡಿಸೆಂಬರ್ ತ್ರೈಮಾಸಿಕದಲ್ಲಿ ಕರ್ಣಾಟಕ ಬ್ಯಾಂಕ್ ₹283 ಕೋಟಿ ನಿವ್ವಳ ಲಾಭ ಗಳಿಸಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ₹331 ಕೋಟಿ ಲಾಭ ಗಳಿಸಿತ್ತು.

ಪ್ರಸಕ್ತ ಆರ್ಥಿಕ ವರ್ಷದ ಮೊದಲ 9 ತಿಂಗಳ ಅವಧಿಯಲ್ಲಿ ₹1,020 ಕೋಟಿ ನಿವ್ವಳ ಲಾಭ ಗಳಿಸಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ನಿವ್ವಳ ಲಾಭ ₹1,032 ಕೋಟಿಯಾಗಿತ್ತು.

ಆರ್‌ಬಿಐನ ನಿರ್ದೇಶನದಂತೆ ಹೂಡಿಕೆ ಆದಾಯದ ಆಧಾರದಲ್ಲಿ ಲೆಕ್ಕಪತ್ರ ಪರಿಶೋಧನೆ ಮಾಡಿರುವುದರಿಂದ ನಿವ್ವಳ ಲಾಭದಲ್ಲಿ ಕಳೆದ ವರ್ಷಕ್ಕಿಂತ ಶೇ 1.17ರಷ್ಟು ಇಳಿಕೆ ಕಂಡುಬಂದಿದೆ. ವಾಸ್ತವವಾಗಿ ಲಾಭದಲ್ಲಿ ಇಳಿಕೆಯಾಗಿಲ್ಲ. ಹಿಂದಿನಂತೆಯೇ ಲೆಕ್ಕಪತ್ರ ಪರಿಶೋಧನೆ ಮುಂದುವರಿಸಿದ್ದರೆ ಲಾಭದಲ್ಲಿ ಇನ್ನೂ ಸುಮಾರು ₹100 ಕೋಟಿ ಏರಿಕೆಯಾಗುತ್ತಿತ್ತು ಎಂದು ಬ್ಯಾಂಕ್ ಹೇಳಿದೆ.

ಶುಕ್ರವಾರ ನಡೆದ ಬ್ಯಾಂಕ್‌ನ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಡಿಸೆಂಬರ್ 31ಕ್ಕೆ ಕೊನೆಗೊಂಡ ಮೂರನೇ ತ್ರೈಮಾಸಿಕ ಹಾಗೂ 2024–25ನೇ ಸಾಲಿನ ಮೊದಲ ಒಂಬತ್ತು ತಿಂಗಳ ಆರ್ಥಿಕ ಫಲಿತಾಂಶಗಳಿಗೆ ಅನುಮೋದನೆ ನೀಡಲಾಯಿತು.

ಒಂಬತ್ತು ತಿಂಗಳ ಅವಧಿಯಲ್ಲಿ ಒಟ್ಟು ₹1.77 ಲಕ್ಷ ಕೋಟಿ ವಹಿವಾಟು ನಡೆಸುವ ಮೂಲಕ ಬ್ಯಾಂಕ್, ಸಾರ್ವಕಾಲಿಕ ಗರಿಷ್ಠ ವಹಿವಾಟಿನ ದಾಖಲೆ ನಿರ್ಮಿಸಿದೆ.

ಸಾಲ ನೀಡಿಕೆ ಪ್ರಮಾಣ ಶೇ 11.64ರಷ್ಟು ಏರಿಕೆಯಾಗಿದೆ. ಒಟ್ಟು ₹77,859 ಕೋಟಿ ಸಾಲ ನೀಡಿದೆ. ಠೇವಣಿ ಪ್ರಮಾಣ ಶೇ 8.59ರಷ್ಟು ಏರಿಕೆಯಾಗಿ ₹100 ಲಕ್ಷ ಕೋಟಿ ಮೀರಿದೆ. ನಿವ್ವಳ ಅನುತ್ಪಾದಕ ಸ್ವತ್ತಿನ ಪ್ರಮಾಣವು ಶೇ 1.58ರಿಂದ ಶೇ 1.39ಕ್ಕೆ ಇಳಿಕೆಯಾಗಿದೆ ಎಂದು ತಿಳಿಸಿದೆ.

ಫಲಿತಾಂಶ ಪ್ರಕಟಿಸಿ ಮಾತನಾಡಿದ ಬ್ಯಾಂಕ್‌ನ ಎಂ.ಡಿ ಹಾಗೂ ಸಿಇಒ ಶ್ರೀಕೃಷ್ಣನ್ ಎಚ್., ‘ಬ್ಯಾಂಕ್‌ನಲ್ಲಿ ಜಾರಿ ಮಾಡಿರುವ ಅನೇಕ ಹೊಸ ಯೋಜನೆಗಳ ಜಾರಿಯಿಂದ ವಹಿವಾಟಿನಲ್ಲಿ ಏರಿಕೆ ಕಂಡುಬಂದಿದೆ’ ಎಂದರು.

ಕಾರ್ಯ ನಿರ್ವಾಹಕ ನಿರ್ದೇಶಕ ಶೇಖರ ರಾವ್ ಮಾತನಾಡಿ, ‘ಡಿಜಿಟಲೀಕರಣ ಹಾಗೂ ತಂತ್ರಜ್ಞಾನ ಆಧರಿತ ಸೇವೆಗಳು ನಮ್ಮ ಕಾರ್ಯಾಚರಣೆ ಸಾಮರ್ಥ್ಯವನ್ನು ಹೆಚ್ಚಿಸಿವೆ’ ಎಂದು ಹೇಳಿದರು.

ದಾಖಲೆ ಸೃಷ್ಟಿಸಿದ ಸುನಿತಾ

62 ಗಂಟೆ 6 ನಿಮಿಷ ‘ಅಂತರಿಕ್ಷದಲ್ಲಿ ನಡೆದ’ ಗಗನಯಾನಿ

ವಾಷಿಂಗ್ಟನ್(ಪಿಟಿಐ): ಭಾರತ ಮೂಲದ ಗಗನಯಾನಿ ಸುನಿತಾ ವಿಲಿಯಮ್ಸ್ ಅವರು ಒಟ್ಟು 62 ಗಂಟೆ 6 ನಿಮಿಷಗಳಷ್ಟು ‘ಬಾಹ್ಯಾಕಾಶ ನಡಿಗೆ’ ಕೈಗೊಳ್ಳುವ ಮೂಲಕ ಈವರೆಗಿನ ದಾಖಲೆ ಮುರಿದಿದ್ದಾರೆ.

ಈ ನೂತನ ದಾಖಲೆ ಸೃಷ್ಟಿಸಿದ ಮಹಿಳಾ ಗಗನಯಾನಿ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ.

ಸುನಿತಾ ವಿಲಿಯಮ್ಸ್ ಹಾಗೂ ಬುಚ್ ವಿಲಿಯಮ್ಸ್ ಕಳೆದ ಜೂನ್‌ನಲ್ಲಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್) ತೆರಳಿದ್ದು, ಗಗನನೌಕೆಯಲ್ಲಿನ ದೋಷದಿಂದಾಗಿ ಅಲ್ಲಿಯೇ ಸಿಲುಕಿದ್ದಾರೆ. ಅವರು ಗುರುವಾರ ‘ಬಾಹ್ಯಾಕಾಶ ನಡಿಗೆ’ ಕೈಗೊಂಡಿದ್ದರು.

ಬೆಳಿಗ್ಗೆ 7.43ಕ್ಕೆ ಆರಂಭಗೊಂಡ ‘ಬಾಹ್ಯಾಕಾಶ ನಡಿಗೆ’, ಮಧ್ಯಾಹ್ನ 1.09ಕ್ಕೆ ಅಂತ್ಯಗೊಂಡಿತು.

ಇದು, ಸುನಿತಾ ವಿಲಿಯಮ್ಸ್ ಅವರ 9ನೇ ಹಾಗೂ ಬುಚ್ ಅವರ ಐದನೇ ‘ಬಾಹ್ಯಾಕಾಶ ನಡಿಗೆ’ ಆಗಿದೆ.



ಸುನಿತಾ ವಿಲಿಯಮ್ಸ್

‘ಮಾಜಿ ಗಗನಯಾತ್ರಿ ಪೆಗ್ಗಿ ವಿಟ್ಸನ್ ಅವರು ಕೈಗೊಂಡಿದ್ದ 60 ಗಂಟೆ 21 ನಿಮಿಷಗಳ ‘ಬಾಹ್ಯಾಕಾಶ ನಡಿಗೆ’ ದಾಖಲೆಯನ್ನು ನಾಸಾ ಗಗನಯಾನಿ ಸುನಿತಾ ವಿಲಿಯಮ್ಸ್ ಈಗ ತಾನೆ ಮುರಿದರು’ ಎಂದು ನಾಸಾ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದೆ.

ರೇಡಿಯೊ ಸಂವಹನಕ್ಕಾಗಿ ಗಗನನೌಕೆಗೆ ಅಳವಡಿಸಿದ್ದ ಹಾರ್ಡ್‌ವೇರ್ ನಿಷ್ಕ್ರಿಯಗೊಂಡಿತ್ತು. ಅದನ್ನು ತೆಗೆದು ಹಾಕುವ ಉದ್ದೇಶದಿಂದ ಈ ಇಬ್ಬರು ಗಗನಯಾನಿಗಳು ಐಎಸ್‌ಎಸ್‌ನಿಂದ ಹೊರಬಂದಿದ್ದರು.

ಇದೇ ವೇಳೆ, ಅವರು ಕೆಲ ಮಾದರಿಗಳನ್ನು ಕೂಡ ಸಂಗ್ರಹಿಸಿದ್ದಾರೆ. ಭೂಮಿ ಸುತ್ತ ಪರಿಭ್ರಮಿಸುತ್ತಿರುವ ಪ್ರಯೋಗಾಲಯದ ಹೊರಗಿನ ಪರಿಸರದಲ್ಲಿ ಸೂಕ್ಷ್ಮಾಣು ಜೀವಿಗಳ ಅಸ್ತಿತ್ವ ಇದೆಯೇ ಎಂಬ ಬಗ್ಗೆ ಏನಾದರೂ ಮಾಹಿತಿ ಸಿಗಬಹುದೇ ಎಂಬುದನ್ನು ತಿಳಿಯುವ ಉದ್ದೇಶದಿಂದ ಮಾದರಿಗಳನ್ನು ಸಂಗ್ರಹಿಸಿದ್ದಾರೆ.

ಸೈಫ್ ಹಲ್ಲೆ ಪ್ರಕರಣ: ಆರೋಪಿಯ ಚಹರೆ ಹೋಲಿಕೆ

ಮುಂಬೈ (ಪಿಟಿಐ): ‘ಬಾಲಿವುಡ್ ನಟ ಸೈಫ್ ಅಲಿ ಖಾನ್ ಮೇಲಿನ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತನಾಗಿರುವ ಬಾಂಗ್ಲಾದೇಶದ ವ್ಯಕ್ತಿಯ ಚಹರೆಯು, ಖಾನ್ ಅವರ ಕಟ್ಟಡದಲ್ಲಿನ ಸಿ.ಸಿ ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿರುವ ವ್ಯಕ್ತಿಯ ಚಹರೆಯ ಜತೆಗೆ ಹೋಲಿಕೆಯಾಗುತ್ತದೆ’ ಎಂದು ಪೊಲೀಸರು ತಿಳಿಸಿದ್ದಾರೆ.



ಅಮೀನ್ ಫಕೀರ್

ಚಹರೆ ಗುರುತಿಸುವ ಪರೀಕ್ಷೆಯು ಇದನ್ನು ದೃಢಪಡಿಸಿದೆ ಎಂದು ಅಧಿಕಾರಿಯೊಬ್ಬರು ಶುಕ್ರವಾರ ಮಾಹಿತಿ ನೀಡಿದ್ದಾರೆ.

ಜನವರಿ 16ರಂದು ಸೈಫ್ ಅವರ ಮೇಲೆ ನಡೆದ ದಾಳಿಗೆ ಸಂಬಂಧಿಸಿದಂತೆ ಬಾಂಗ್ಲಾ ಪ್ರಜೆ ಶರೀಫುಲ್ ಇಸ್ಲಾಂ ಶೆಹಜಾದ್ ಮೊಹಮ್ಮದ್ ರೋಹಿಲ್ಲಾ ಅಮೀನ್ ಫಕೀರ್ (30) ಎಂಬುವರನ್ನು ಪೊಲೀಸರು ಬಂಧಿಸಿದ್ದರು. ದಾಳಿ ನಡೆದ ದಿನದಂದು ಬಾಂದ್ರಾದ ಸದ್ಗುರು ಶರಣ ಕಟ್ಟಡದ ಸಿಸಿಟಿವಿ ಕ್ಯಾಮೆರಾದಲ್ಲಿ ದಾಖಲಾಗಿದ್ದದ್ದು ಇದೇ ವ್ಯಕ್ತಿ ಎಂದು ಅವರು ಹೇಳಿದ್ದಾರೆ. ವ್ಯಕ್ತಿಯನ್ನು ಖಚಿತವಾಗಿ ಗುರುತಿಸುವಲ್ಲಿ ‘ಚಹರೆ ಗುರುತಿಸುವ ತಂತ್ರಜ್ಞಾನ’ ಪ್ರಮುಖ ಪಾತ್ರವಹಿಸಿದೆ ಎಂದು ಅವರು ವಿವರಿಸಿದ್ದಾರೆ.

‘ಮತದಾನದ ವಿಡಿಯೊ ದೃಶ್ಯಾವಳಿ ಸಂರಕ್ಷಿಸಿಡಿ’

ನವದೆಹಲಿ (ಪಿಟಿಐ): ಪ್ರತಿ ಮತಗಟ್ಟೆಯ ಗರಿಷ್ಠ ಮತದಾರರ ಸಂಖ್ಯೆಯನ್ನು 1,200 ರಿಂದ 1,500ಕ್ಕೆ ಹೆಚ್ಚಿಸುವ ನಿರ್ಧಾರದ ವಿರುದ್ಧದ ಅರ್ಜಿಗಳು ಇತ್ಯರ್ಥವಾಗುವವರೆಗೂ ಮತದಾನ ಪ್ರಕ್ರಿಯೆಯ ವಿಡಿಯೊ ದೃಶ್ಯಾವಳಿಗಳನ್ನು ಸಂರಕ್ಷಿಸಿಡುವಂತೆ ಸುಪ್ರೀಂ ಕೋರ್ಟ್, ಭಾರತೀಯ ಚುನಾವಣಾ ಆಯೋಗಕ್ಕೆ (ಇಸಿಐ) ನಿರ್ದೇಶನ ನೀಡಿದೆ.



ಇಂದು ಪ್ರಕಾಶ್ ಸಿಂಗ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಪ್ರತಿಕ್ರಿಯಿಸಲು ಇಸಿಐ ಪರ ವಕೀಲರು ಹೆಚ್ಚಿನ ಕಾಲಾವಕಾಶ ಕೋರಿದ ಹಿನ್ನೆಲೆಯಲ್ಲಿ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರನ್ನೊಳಗೊಂಡ ಪೀಠವು ಶುಕ್ರವಾರ ಈ ಆದೇಶ ಹೊರಡಿಸಿತು.

ಪ್ರತಿ ಮತಗಟ್ಟೆಯ ಗರಿಷ್ಠ ಮತದಾರರ ಸಂಖ್ಯೆಯನ್ನು ಹೆಚ್ಚಿಸುವ ನಿರ್ಧಾರವನ್ನು ಪ್ರಶ್ನಿಸಿ ಇಂದು ಪ್ರಕಾಶ್ ಅವರು ಪಿಐಎಲ್ ಸಲ್ಲಿಸಿದ್ದಾರೆ.

‘ಇಸಿಐ ಪರ ಹಾಜರಾದ ವಕೀಲರು ಪ್ರಮಾಣಪತ್ರ ಸಲ್ಲಿಸಲು ಹೆಚ್ಚಿನ ಸಮಯ ಕೋರಿದ್ದಾರೆ. ಪ್ರಮಾಣಪತ್ರ ಸಲ್ಲಿಸಲು ಇಂದಿನಿಂದ ಮೂರು ವಾರಗಳ ಕಾಲಾವಕಾಶ ನೀಡುತ್ತೇವೆ. ಈ ಅರ್ಜಿ ಇತ್ಯರ್ಥವಾಗುವವರೆಗೂ, ಈ ಮೊದಲು ಮಾಡುತ್ತಿದ್ದಂತೆಯೇ ಮತದಾನದ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಸಂರಕ್ಷಿಸಿಡುವಂತೆ ನಿರ್ದೇಶಿಸುತ್ತೇವೆ’ ಎಂದು ಪೀಠವು ಹೇಳಿದೆ.

ಚುನಾವಣಾ ನಿಯಮಗಳಿಗೆ ತಿದ್ದುಪಡಿ ತಂದಿರುವುದರ ವಿರುದ್ಧ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರೂ ಅರ್ಜಿ ಸಲ್ಲಿಸಿದ್ದಾರೆ. ಅವರ ಅರ್ಜಿಯ ಬಗ್ಗೆ ಪ್ರತಿಕ್ರಿಯಿಸುವಂತೆ ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಜನವರಿ 15ರಂದು ಸೂಚಿಸಿತ್ತು.

ಸಾರ್ವಜನಿಕರು ಇರುವ ಸ್ಥಳದಲ್ಲಿ ನಿಂದಿಸಿದರಷ್ಟೇ ಅಪರಾಧ: ‘ಸುಪ್ರೀಂ’

ಪ್ರಜಾವಾಣಿ ವಾರ್ತೆ

ನವದೆಹಲಿ: ಹೊರಗಿನವರು ಯಾರೂ ಇಲ್ಲದ ಸಮಯದಲ್ಲಿ, ನಾಲ್ಕು ಗೋಡೆಗಳ ನಡುವೆ ನಡೆದಿರುವ ನಿಂದನೆಯನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಎಸ್‌ಸಿ–ಎಸ್‌ಟಿ) ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ಅಪರಾಧವಾಗಿ ಪರಿಗಣಿಸಲಾಗದು ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

ಆರೋಪಿಯು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸದಸ್ಯರನ್ನು ಹೊರಗಿನವರು ಅಥವಾ ಸಾರ್ವಜನಿಕರು ಇರುವ ಸ್ಥಳದಲ್ಲಿ ನಿಂದಿಸಿದರೆ ಮಾತ್ರ ಅದು ಎಸ್‌ಸಿ–ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯ ಕಲಂ 3(1) (ಎಸ್) ಅಡಿಯಲ್ಲಿರುವ ಅಪರಾಧ ಎನಿಸುತ್ತದೆ ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಆಗಸ್ಟಿನ್ ಜಾರ್ಜ್ ಮಸೀಹ್ ಅವರಿದ್ದ ಪೀಠ ತಿಳಿಸಿದೆ.

‘ಅರೋಪಿಯು ನಿರ್ದಿಷ್ಟ ವ್ಯಕ್ತಿಗೆ ನಿಂದಿಸಿರುವುದನ್ನು ಸಾರ್ವಜನಿಕರು ವೀಕ್ಷಿಸಿರಬೇಕು ಅಥವಾ ಅದನ್ನು ಕೇಳಿಸಿಕೊಂಡಿರಬೇಕು’ ಎಂದ ಪೀಠವು, ಈ ಕಾಯ್ದೆಯಡಿ ವ್ಯಕ್ತಿಯೊಬ್ಬರ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ರದ್ದುಗೊಳಿಸಿತು.

ತಿರುಚ್ಚಿಯ ಕಂದಾಯ ನಿರೀಕ್ಷಕರನ್ನು ಅವರ ಜಾತಿಯ ಹೆಸರು ಹೇಳಿ ನಿಂದಿಸಿದ ಆರೋಪವನ್ನು ಕರುಪ್ಪುದಯಾರ್ ಎಂಬವರು ಎದುರಿಸುತ್ತಿದ್ದರು. ತಂದೆ ಸಲ್ಲಿಸಿರುವ ಅರ್ಜಿಯ ಸ್ಥಿತಿಗತಿಯನ್ನು ತಿಳಿಯಲು ಬಂದಿದ್ದ ಕರುಪ್ಪುದಯಾರ್ ತಮ್ಮನ್ನು ನಿಂದಿಸಿದ್ದಾರೆ ಎಂದು ದೂರುದಾರರು ಆರೋಪಿಸಿದ್ದರು.

ಕಂದಾಯ ನಿರೀಕ್ಷಕರು ತಮ್ಮ ಕಚೇರಿಯಲ್ಲಿದ್ದಾಗ ಅಲ್ಲಿಗೆ ಬಂದ ಆರೋಪಿ ಅರ್ಜಿಯೊಂದರ ಕುರಿತು ವಿಚಾರಿಸಿದ್ದಾರೆ. ಆದರೆ, ಅವರು ನೀಡಿದ ಉತ್ತರದಿಂದ ತೃಪ್ತಿಯಾಗಲಿಲ್ಲ. ಇದರಿಂದ ಆರೋಪಿಯು ಕಂದಾಯ ನಿರೀಕ್ಷಕರ ಜಾತಿಯ ಹೆಸರು ಹೇಳಿ ನಿಂದಿಸಿ, ಅವಮಾನಿಸಿದ್ದಾರೆ. ನಂತರ ದೂರುದಾರರ ಮೂವರು ಸಹೋದ್ಯೋಗಿಗಳು ಅಲ್ಲಿಗೆ ಬಂದು ಆರೋಪಿಯನ್ನು ಸಮಾಧಾನಪಡಿಸಿ ಅಲ್ಲಿಂದ ಕರೆದೊಯ್ದರು ಎಂಬುದನ್ನು ಪೀಠವು ಗಮನಿಸಿತು.

2021ರ ಸೆಪ್ಟೆಂಬರ್ 2ರಂದು ದಾಖಲಾಗಿರುವ ಎಫ್‌ಐಆರ್‌ನಲ್ಲಿರುವ ವಿವರಗಳ ಪ್ರಕಾರ ದೂರುದಾರರ ಕಚೇರಿಯ ನಾಲ್ಕು ಗೋಡೆಗಳ ನಡುವೆ ಈ ಘಟನೆ ನಡೆದಿದೆ. ಅವರ ಸಹೋದ್ಯೋಗಿಗಳು ಘಟನೆಯ ನಂತರ ಅಲ್ಲಿಗೆ ಬಂದಿದ್ದಾರೆ ಎಂದು ಪೀಠವು ಹೇಳಿದೆ.

‘ಆದ್ದರಿಂದ, ಸಾರ್ವಜನಿಕರು ಇರುವ ಸ್ಥಳ ಎಂದು ಕರೆಯಬಹುದಾದ ಜಾಗದಲ್ಲಿ ಈ ಘಟನೆ ನಡೆದಿಲ್ಲವಾದ್ದರಿಂದ ಅಪರಾಧವು ಎಸ್‌ಸಿ–ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯ ಕಲಂ 3(1) (ಎಸ್) ಅಡಿಯಲ್ಲಿ ಬರುವುದಿಲ್ಲ ಎಂಬ ನಿರ್ಧಾರಕ್ಕೆ ಬರುತ್ತೇವೆ’ ಎಂದು ಪೀಠವು ತಿಳಿಸಿತು.

ಬುಡಕಟ್ಟು ಮಹಿಳೆ ಬೆತ್ತಲೆಗೊಳಿಸಿ ಮೆರವಣಿಗೆ: 12 ಮಂದಿ ಬಂಧನ

ದಾಹೊದ್ (ಪಿಟಿಐ): ಅನೈತಿಕ ಸಂಬಂಧದ ಶಂಕೆ ಮೇಲೆ ಬುಡಕಟ್ಟು ಸಮುದಾಯದ 35 ವರ್ಷದ ಮಹಿಳೆಯೊಬ್ಬರನ್ನು ಗುಂಪೊಂದು ಬೆತ್ತಲೆಗೊಳಿಸಿ, ಥಳಿಸಿ ಮೆರವಣಿಗೆ ಮಾಡಿದೆ. ಕೃತ್ಯದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ನಂತರ 12 ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಗುಜರಾತ್‌ನ ಸಂಜೇಲಿ ತಾಲ್ಲೂಕಿನ ಹಳ್ಳಿಯೊಂದರಲ್ಲಿ ಜ. 28ರಂದು ಈ ಘಟನೆ ನಡೆದಿದೆ. ಸಂತ್ರಸ್ತೆಯ ಮಾವ ಮತ್ತು ಗಂಡನ ಸಹೋದರನ ನೇತೃತ್ವದಲ್ಲೇ ಗುಂಪು ಈ ಕೃತ್ಯ ಎಸಗಿದೆ. ಜ. 29ರಂದು 15 ಜನರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಎಸ್‌ಪಿ ರಾಜದೀಪ್‌ಸಿನ್ಹಾ ಜಾಲಾ ತಿಳಿಸಿದ್ದಾರೆ.

ಬಂಧಿತರಲ್ಲಿ ನಾಲ್ವರು ಮಹಿಳೆಯರು, ನಾಲ್ವರು ಪುರುಷರು ಹಾಗೂ ನಾಲ್ವರು ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕರು ಇದ್ದಾರೆ. ಸಂತ್ರಸ್ತೆಯನ್ನು ಬೆತ್ತಲುಗೊಳಿಸಿ, ಮೋಟರ್ ಬೈಕ್‌ಗೆ ಕಟ್ಟಿಕೊಂಡು ಗ್ರಾಮದಲ್ಲಿ ಮೆರವಣಿಗೆ ಮಾಡಿದ್ದಾರೆ. ನಂತರ ಆಕೆಯ ಮಾವ, ಆಕೆಯನ್ನು ಮನೆಯೊಳಗೆ ಕೂಡಿ ಹಾಕಿ, ಬೀಗ ಹಾಕಿದ್ದ. ಇದು ಗಮನಕ್ಕೆ ಬಂದ ತಕ್ಷಣವೇ ಸಂತ್ರಸ್ತೆಯನ್ನು ರಕ್ಷಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

‘ಇದು ಬಹಳ ದುರದೃಷ್ಟಕರ ಮತ್ತು ನಾಚಿಕೆಗೇಡಿನ ಘಟನೆ. ನಾವು ಈ ಘಟನೆಯ ಬಗ್ಗೆ ಸ್ವಯಂ ಪ್ರೇರಿತವಾಗಿ, ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿದ್ದೇವೆ’ ಎಂದು ರಾಜ್ಯ ಸರ್ಕಾರದ ವಕ್ತಾರ ರುಷಿಕೇಶ್ ಪಟೇಲ್ ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ. ಘಟನೆ ಬಗ್ಗೆ ರಾಜ್ಯ ಸರ್ಕಾರದ ವಿರುದ್ಧ ಕಾಂಗ್ರೆಸ್ ಮತ್ತು ಎಎಪಿ ವಾಗ್ದಾಳಿ ನಡೆಸಿದ್ದು, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿವೆ.

ಮುರ್ಮು ‘ಪಾಪ’ ಎಂದ ಮಾತು: ಹೇಳಿಕೆಗಳನ್ನು ಒಪ್ಪಲಾಗದು– ರಾಷ್ಟ್ರಪತಿ ಭವನ

ಸೋನಿಯಾ ನುಡಿ: ಬಿಜೆಪಿ, ‘ಕೈ’ ಜಟಾಪಟಿ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಕುರಿತು ಹೇಳಿದ್ದಾರೆ ಎನ್ನಲಾದ ‘ಪಾಪದ ಮಹಿಳೆ’ ಹಾಗೂ ‘ಪಾಪ’ ಎಂಬ ಹೇಳಿಕೆಗಳು ಶುಕ್ರವಾರ ವಿವಾದದ ಕಿಡಿ ಹೊತ್ತಿಸಿವೆ.



ಈ ವಿಚಾರವಾಗಿ ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ಜಟಾಪಟಿ ನಡೆದಿದೆ.

ಇನ್ನೊಂದೆಡೆ, ‘ಕಾಂಗ್ರೆಸ್ ನಾಯಕರು ರಾಷ್ಟ್ರಪತಿ ಕುರಿತಾಗಿ ಆಡಿರುವ ಮಾತುಗಳು ಅವರ ಉನ್ನತ ಸ್ಥಾನದ ಘನತೆಗೆ ಧಕ್ಕೆ ತರುವಂಥವು. ಈ ಹೇಳಿಕೆಗಳನ್ನು ಒಪ್ಪಲಾಗದು’ ಎಂದು ರಾಷ್ಟ್ರಪತಿ ಭವನ ಪ್ರತಿಕ್ರಿಯಿಸಿದೆ.

ಬಜೆಟ್ ಅಧಿವೇಶನ ಅಂಗವಾಗಿ, ರಾಷ್ಟ್ರಪತಿ ಮುರ್ಮು ಅವರು ಸಂಸತ್ತಿನ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಿದರು. ಬಳಿಕ, ಸೋನಿಯಾ ಗಾಂಧಿ, ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹಾಗೂ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಸಂಸತ್ ಭವನ ಸಂಕೀರ್ಣದಲ್ಲಿ ರಾಷ್ಟ್ರಪತಿಗಳ ಭಾಷಣ ಕುರಿತು ಚರ್ಚೆ ಮಾಡುತ್ತಿದ್ದರು.

‘ರಾಷ್ಟ್ರಪತಿಗಳ ಭಾಷಣ ನೀರಸವಾಗಿತ್ತೇ’ ಎಂದು ರಾಹುಲ್ ಅವರು ಸೋನಿಯಾ ಗಾಂಧಿ ಅವರನ್ನು ಪ್ರಶ್ನಿಸಿದ್ದಾರೆ. ಆಗ, ‘ಪಾಪ ರಾಷ್ಟ್ರಪತಿ ಅವರು ಸುದೀರ್ಘ ಭಾಷಣ ಮುಗಿಸಿದಾಗ ಬಹಳ ದಣಿದಂತೆ ಕಂಡರು.. ಅವರಿಗೆ ಮಾತನಾಡಲೂ ಕಷ್ಟವಾಗುತ್ತಿತ್ತು, ಪಾಪ’ ಎಂದು ಸೋನಿಯಾ ಗಾಂಧಿ ಪ್ರತಿಕ್ರಿಯಿಸಿದ್ದಾರೆ ಎನ್ನಲಾದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇದು ಈಗ ವಿವಾದಕ್ಕೆ ಕಾರಣವಾಗಿದೆ.

ಪ್ರಧಾನಿ ವಾಗ್ದಾಳಿ: ದೆಹಲಿಯಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಪ್ರಧಾನಿ ಮೋದಿ, ‘ರಾಜ ಮನೆತನ’ದ ಅಹಂಕಾರ ನೋಡಿ. ಬುಡಕಟ್ಟು ಹಿನ್ನೆಲೆಯ ರಾಷ್ಟ್ರಪತಿಗೆ ಅವಮಾನಿಸಿದೆ. ಬಡವರು, ದಲಿತರು, ಬುಡಕಟ್ಟು ಜನರು ಹಾಗೂ ಒಬಿಸಿಗಳ ಪೈಕಿ ಪ್ರಗತಿ ಸಾಧಿಸಿದವರನ್ನೆಲ್ಲಾ ಕಾಂಗ್ರೆಸ್ ಅವಮಾನಿಸುತ್ತದೆ’ ಎಂದಿದ್ದಾರೆ.

‘ರಾಷ್ಟ್ರಪತಿಯವರು, ದೇಶದ ಆರ್ಥಿಕ ಪ್ರಗತಿ, ರೈತರ ಕಲ್ಯಾಣ, ಮೆಟ್ರೊ ಯೋಜನೆಗಳು ಹಾಗೂ ಕ್ರೀಡಾ ಕ್ಷೇತ್ರದಲ್ಲಿನ ಸಾಧನೆ ಕುರಿತು ತಮ್ಮ ಭಾಷಣದಲ್ಲಿ ಹೊಗಳಿದ್ದಾರೆ. ಆದರೆ, ಕಾಂಗ್ರೆಸ್ ಈ ಭಾಷಣ ತಿರಸ್ಕರಿಸಿದೆ. ಇದನ್ನೂ ಕೂಡ ಕಾಂಗ್ರೆಸ್ ನೀರಸ ಎನ್ನುತ್ತದೆ’ ಎಂದು ಟೀಕಿಸಿದ್ದಾರೆ.

‘ಅತ್ಯುನ್ನತ ಸ್ಥಾನಕ್ಕೆ ಅಗೌರವ’

‘ರಾಷ್ಟ್ರಪತಿ ದ್ರೌಪದಿ ಮುರ್ಮು ಕುರಿತು ಸಂಸತ್‌ನಲ್ಲಿ ಕಾಂಗ್ರೆಸ್ ನಾಯಕರು ನೀಡಿರುವ ಹೇಳಿಕೆಗಳು, ಮುರ್ಮು ಅವರು ಅಲಂಕರಿಸಿರುವ ಅತ್ಯುನ್ನತ ಸ್ಥಾನಕ್ಕೆ ಅಗೌರವ ತೋರುವಂತಿವೆ. ಇಂತಹ ಮಾತುಗಳನ್ನು ಒಪ್ಪಲಾಗದು’ ಎಂದು ರಾಷ್ಟ್ರಪತಿ ಭವನ ಶುಕ್ರವಾರ ಹೇಳಿದೆ.

‘ಈ ನಾಯಕರಿಗೆ ಹಿಂದಿ ಸೇರಿದಂತೆ ಭಾರತೀಯ ಭಾಷೆಗಳ ಬಳಕೆ ಹಾಗೂ ಈ ಭಾಷೆಗಳಲ್ಲಿ ಬಳಸುವ ನುಡಿಗಟ್ಟುಗಳ ಕುರಿತು ಮಾಹಿತಿ ಇದ್ದಂತಿಲ್ಲ. ಹೀಗಾಗಿ ತಪ್ಪು ಅರ್ಥ ಬರುವಂತೆ ಮಾತನಾಡಿದ್ದಾರೆ ಎಂಬುದು ನಮ್ಮ ನಂಬಿಕೆ’ ಎಂದು ರಾಷ್ಟ್ರಪತಿಗಳ ಭವನ ಪ್ರಕಟಣೆ ತಿಳಿಸಿದೆ.

‘ಉಭಯ ಸದನ ಉದ್ದೇಶಿಸಿ ಭಾಷಣ ಮಾಡುವ ವೇಳೆ ರಾಷ್ಟ್ರಪತಿ ದಣಿದಿದ್ದರು ಎಂಬ ಮಾತಿನಲ್ಲಿ ಸತ್ಯವಿಲ್ಲ. ಅವರು ಯಾವ ಹಂತದಲ್ಲಿಯೂ ಆಯಾಸಗೊಂಡಿರಲಿಲ್ಲ. ನಿರ್ಲಕ್ಷಿತ ಸಮುದಾಯಗಳು, ಮಹಿಳೆಯರು ಹಾಗೂ ರೈತರ ಪರವಾಗಿ ಮಾತನಾಡುವಾಗ ದಣಿವು ತನ್ನ ಹತ್ತಿರ ಸುಳಿಯದು ಎಂಬ ನಂಬಿಕೆಯನ್ನು ರಾಷ್ಟ್ರಪತಿ ಮುರ್ಮು ಹೊಂದಿದ್ದರು ಎಂದು ಸ್ಪಷ್ಟಪಡಿಸುತ್ತೇವೆ’ ಎಂದೂ ಹೇಳಿಕೆಯಲ್ಲಿ ವಿವರಿಸಲಾಗಿದೆ.

ಬಿಜೆಪಿ ಆರೋಪಕ್ಕೆ ಖರ್ಗೆ ತಿರುಗೇಟು

ಪ್ರಧಾನಿ ಮೋದಿ ಹೇಳಿಕೆಗೆ ‘ಎಕ್ಸ್’ನಲ್ಲಿ ತಿರುಗೇಟು ನೀಡಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ,‘ನೂತನ ಸಂಸತ್ ಭವನ ಉದ್ಘಾಟನಾ ಕಾರ್ಯಕ್ರಮಕ್ಕೆ ಆಹ್ವಾನ ನೀಡದಿರುವ ಮೂಲಕ ಮೋದಿ ಸರ್ಕಾರವೇ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಅವಮಾನಿಸಿದೆ’ ಎಂದಿದ್ದಾರೆ.

‘ಕಾಂಗ್ರೆಸ್ ಹಾಗೂ ಪಕ್ಷದ ನಾಯಕರು ರಾಷ್ಟ್ರಪತಿ ಅವರನ್ನಾಗಲಿ ಅಥವಾ ಯಾವುದೇ ಪ್ರಜೆಯನ್ನಾಗಲಿ ಎಂದಿಗೂ ಅವಮಾನಿಸುವುದಿಲ್ಲ. ಇದು ನಮ್ಮ ಸಂಸ್ಕೃತಿಯೂ ಅಲ್ಲ’ ಎಂದಿದ್ದಾರೆ.

ಮಾಧ್ಯಮಗಳು ಹೇಳಿಕೆ ತಿರುಚಿವೆ: ಪ್ರಿಯಾಂಕಾ: ‘ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಕಾಂಗ್ರೆಸ್ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಅತ್ಯಂತ ಗೌರವದಿಂದ ಕಾಣುತ್ತಾರೆ. ಅವರ ಹೇಳಿಕೆಗಳನ್ನು ಮಾಧ್ಯಮಗಳು ತಿರುಚಿದ್ದು ದುರದೃಷ್ಟಕರ’ ಎಂದು ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಹೇಳಿದ್ದಾರೆ.

ಸುಧಾರಣೆ, ಸಾಧನೆ, ಪರಿವರ್ತನೆ ಆಡಳಿತದ ಸಾಮಾನ್ಯ ಧ್ಯೇಯ –ರಾಷ್ಟ್ರಪತಿ ಶ್ಲಾಘನೆ

ಸಮಗ್ರ ಪ್ರಗತಿಗಾಗಿ ಸದೃಢ ಅಡಿಪಾಯ: ಮುರ್ಮು

ನವದೆಹಲಿ (ಪಿಟಿಐ): ‘ಸುಧಾರಣೆ, ಸಾಧನೆ ಮತ್ತು ಪರಿವರ್ತನೆ ಎಂಬುದು ಭಾರತ ಸರ್ಕಾರದ ಆಡಳಿತ ಮಾದರಿಯಲ್ಲಿ ಕಂಡುಬರುವ ಸಮಾನ ಅಂಶಗಳಾಗಿವೆ’ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಶುಕ್ರವಾರ ಇಲ್ಲಿ ಪ್ರತಿಪಾದಿಸಿದರು.

ಸಂಸತ್ತಿನ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಚಾಲನೆ ನೀಡಿರುವ ವಿವಿಧ ಯೋಜನೆಗಳನ್ನು ಉಲ್ಲೇಖಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಅಭಿವೃದ್ಧಿಯನ್ನು ಹೊಸ ಎತ್ತರಕ್ಕೆ ಒಯ್ಯಲು ಭದ್ರವಾದ ಬುನಾದಿ ಅಗತ್ಯ. ನನ್ನ ಸರ್ಕಾರ ಸುಧಾರಣೆ, ಸಾಧನೆ, ಪರಿವರ್ತನೆ ಎಂಬ ಸದೃಢ ಅಡಿಪಾಯ ಸ್ಥಾಪಿಸಿದೆ ಎಂದರು.



ಸಂಸತ್ತಿನ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಲು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಾರೋಟಿನಲ್ಲಿ ಬಂದರು –ಪಿಟಿಐ ಚಿತ್ರ

8ನೇ ವೇತನ ಆಯೋಗವನ್ನು ರಚಿಸುವ ನಿರ್ಧಾರ ಉಲ್ಲೇಖಿಸಿದ ಅವರು, ಈ ಕ್ರಮವು ಬರುವ ವರ್ಷಗಳಲ್ಲಿ ಸರ್ಕಾರಿ ನೌಕರರ ವೇತನದ ಗಣನೀಯ ಏರಿಕೆಗೆ ಕಾರಣವಾಗಲಿದೆ. ಇದರ ಹೊರತಾಗಿ ಲಕ್ಷಾಂತರ ನೌಕರರಿಗೆ ಕೇಂದ್ರೀಕೃತ ಪಿಂಚಣಿ ಯೋಜನೆಯಡಿ ಶೇ 50ರಷ್ಟು ಖಾತರಿಯುಕ್ತ ಪಿಂಚಣಿ ನೀಡಲು ಸರ್ಕಾರ ತೀರ್ಮಾನಿಸಿದೆ ಎಂದು ತಿಳಿಸಿದರು.

ಮೇಕ್ ಇನ್ ಇಂಡಿಯಾ, ಆತ್ಮನಿರ್ಭರ ಭಾರತ್, ಸ್ಟಾರ್ಟ್‌ಅಪ್ ಇಂಡಿಯಾ, ಡಿಜಿಟಲ್ ಇಂಡಿಯಾ ಪರಿಕ್ರಮಗಳು ಅನೇಕ ಉದ್ಯೋಗಾವಕಾಶ ಸೃಷ್ಟಿಸಲು ನೆರವಾಗಿವೆ. ಎರಡು ವರ್ಷಗಳಲ್ಲಿ ದಾಖಲೆ 10 ಲಕ್ಷ ಜನರಿಗೆ ಸರ್ಕಾರಿ ಉದ್ಯೋಗ ಒದಗಿಸಲಾಗಿದೆ ಎಂದರು. ಸಮಗ್ರ ಆಡಳಿತ ತರಬೇತಿಗಾಗಿ (ಐ–ಗಾಟ್) ರೂಪಿಸಲಾದ ಕರ್ಮಯೋಗಿ ಡಿಜಿಟಲ್ ವೇದಿಕೆ ಉಲ್ಲೇಖಿಸಿದ ಅವರು, ಇದು ಸರ್ಕಾರಿ ನೌಕರರ ಕೌಶಲ ವೃದ್ಧಿಗೆ ಒತ್ತು ನೀಡಲಿದ್ದು, ನಿಜ ಅರ್ಥದಲ್ಲಿ ಕರ್ಮಯೋಗಿಗಳಾಗಲು ನೆರವಾಗಲಿದೆ ಎಂದು ಹೇಳಿದರು.

> **ಏಕಕಾಲದಲ್ಲಿ ಚುನಾವಣೆ ಮತ್ತು ವಕ್ಫ್ ಕಾಯ್ದೆಗೆ ತಿದ್ದುಪಡಿ ಕ್ಲಿಷ್ಟಕರವಾದ ವಿಷಯಗಳಾಗಿದ್ದವು. ಆದರೆ, ಮೋದಿ ಸರ್ಕಾರ ಇದರಲ್ಲಿ ಕ್ಷಿಪ್ರಗತಿಯ ಪ್ರಗತಿಯನ್ನು ತೋರಿದೆ.**
> **ದ್ರೌಪದಿ ಮುರ್ಮು,** ರಾಷ್ಟ್ರಪತಿ

> **ಇದು ರಾಜಕೀಯ ಭಾಷಣ. ಮೋದಿ ಸರ್ಕಾರ ರಾಷ್ಟ್ರಪತಿ ಅವರಿಂದ ಬಿಜೆಪಿಯ ಕರಪತ್ರ ಓದಿಸಿದ್ದು ದುರದೃಷ್ಟಕರ. ಸಣ್ಣ ಯೋಜನೆಗಳನ್ನೇ ಸಾಧನೆ ಎಂದು ಬಿಂಬಿಸಿಕೊಂಡಿದೆ**
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ



ಪಂಬನ್ ಸೇತುವೆ ತಮಿಳುನಾಡಿನ ರಾಮೇಶ್ವರಂ ಬಳಿಯ ಹೊಸ ಪಂಬನ್ ಸೇತುವೆ ಉದ್ಘಾಟನೆಗೂ ಮುನ್ನ ಹಳೆ ಹಾಗೂ ಹೊಸ ಸೇತುವೆ ಕೆಳಗೆ ಹಡಗೊಂದು ಸಾಗಿತು - ಪಿಟಿಐ ಚಿತ್ರ

ಎಎಪಿಯ 7 ಶಾಸಕರು ರಾಜೀನಾಮೆ

ನವದೆಹಲಿ: ಆಮ್ ಆದ್ಮಿ ಪಕ್ಷಕ್ಕೆ ಏಳು ಶಾಸಕರು ಶುಕ್ರವಾರ ರಾಜೀನಾಮೆ ನೀಡಿದ್ದಾರೆ. ಚುನಾವಣೆಯಲ್ಲಿ ಟಿಕೆಟ್ ನಿರಾಕರಿಸಿದ್ದರಿಂದ ಅವರು ಈ ನಿರ್ಧಾರ ಕೈಗೊಂಡಿದ್ದಾರೆ.

‘ನಾನು ಆಮ್‌ಆದ್ಮಿ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸುತ್ತಿದ್ದು, ನಾನು ನಿಮ್ಮ ಮೇಲೆ ಇಟ್ಟಿದ್ದ ವಿಶ್ವಾಸವನ್ನು ಕಳೆದುಕೊಂಡಿದ್ದೇನೆ’ ಎಂದು ಕಸ್ತೂರ್ ಬಾ ನಗರ ಕ್ಷೇತ್ರದ ಶಾಸಕ ಮದನ್ ಲಾಲ್ ಅವರು ಪಕ್ಷದ ಸಂಚಾಲಕ ಅರವಿಂದ್ ಕೇಜ್ರಿವಾಲ್‌ಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ. ಲಾಲ್ ಅವರು ತಮ್ಮ ಶಾಸಕ ಸ್ಥಾನಕ್ಕೂ ರಾಜೀನಾಮೆ ಸಲ್ಲಿಸಿದ್ದು, ಈ ಸಂಬಂಧ ರಾಜೀನಾಮೆ ಪತ್ರವನ್ನು ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ. ಉಳಿದಂತೆ ಭಾವ್ನ ಗೌರ್ (ಪಾಲಂ), ನರೇಶ್ ಯಾದವ್ (ಮೆಹ್ರೌಲಿ), ರೋಹಿತ್ ಮೆಹ್ರೌಲಿಯಾ (ತ್ರಿಲೋಕ್‌ಪುರಿ), ಪವನ್ ಶರ್ಮಾ (ಆದರ್ಶ್‌ನಗರ) ಕೂಡ ರಾಜೀನಾಮೆ ಪತ್ರ ಸಲ್ಲಿಸಿದ್ದಾರೆ.

ಇ.ಸಿಗೆ ಉತ್ತರಿಸಿದ ಕೇಜ್ರಿವಾಲ್



ನವದೆಹಲಿ (ಪಿಟಿಐ): ಯಮುನಾ ನದಿ ನೀರಿಗೆ ಹರಿಯಾಣದ ಬಿಜೆಪಿ ಸರ್ಕಾರ ಅಮೋನಿಯಾ ಬೆರೆಸಿದೆ ಎಂದು ಆರೋಪ ಮಾಡಿದ್ದಕ್ಕೆ ಚುನಾವಣಾ ಆಯೋಗ ಜಾರಿ ಮಾಡಿದ್ದ ಎರಡನೇ ನೋಟಿಸ್‌ಗೆ ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಶುಕ್ರವಾರ ಉತ್ತರ ನೀಡಿದರು.

ದೆಹಲಿ ಮುಖ್ಯಮಂತ್ರಿ ಆತಿಶಿ ಮತ್ತು ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಜತೆಗೆ ಕೇಜ್ರಿವಾಲ್ ಅವರು ಚುನಾವಣಾ ಆಯೋಗದ ಕಚೇರಿಗೆ ಖುದ್ದು ಭೇಟಿ ನೀಡಿ, ಉತ್ತರ ಸಲ್ಲಿಸಿದರು.

ಆಯೋಗದ ಮುಖ್ಯ ಆಯುಕ್ತ ರಾಜೀವ್ ಕುಮಾರ್ ಅವರಿಗೆ ಸಲ್ಲಿಸಿರುವ ಆರು ಪುಟಗಳ ಉತ್ತರದಲ್ಲಿ, ‘ದೆಹಲಿಗೆ ಪೂರೈಕೆಯಾಗುತ್ತಿರುವ ಸಂಸ್ಕರಿಸದ ಯಮುನಾ ನದಿ ನೀರಿನಲ್ಲಿ ಅಮೋನಿಯಾ ಮಟ್ಟ ಅತೀ ಹೆಚ್ಚಿನ ಪ್ರಮಾಣದಲ್ಲಿರುವುದನ್ನು ಗಮನಿಸಿ ಈ ಹೇಳಿಕೆ ನೀಡಿದ್ದೇನೆ. ಹರಿಯಾಣ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ಅವರು ರಾಷ್ಟ್ರ ರಾಜಧಾನಿಗೆ ಅತೀ ಹೆಚ್ಚು ಮಲೀನಗೊಂಡಿರುವ ನೀರನ್ನು ಹರಿಸುವ ಮೂಲಕ ದೆಹಲಿ ವಿಧಾನಸಭೆ ಚುನಾವಣೆ ಮೇಲೆ ಪ್ರಭಾವ ಬೀರುವ ಪಿತೂರಿ ನಡೆಸಿದ್ದಾರೆ’ ಎಂದು ಕೇಜ್ರಿವಾಲ್ ಆರೋಪಿಸಿದರು.

‘ಇದರಲ್ಲಿ ಹರಿಯಾಣ ಮುಖ್ಯಮಂತ್ರಿ ತಪ್ಪೆಸಗಿದ್ದಾರೆ. ರಾಜಧಾನಿಯ ಜನರಿಗೆ ಸಂಕಷ್ಟ ತರಲು ಯತ್ನಿಸಿದ್ದಕ್ಕಾಗಿ ಸೈನಿ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು’ ಎಂದು ಕೇಜ್ರಿವಾಲ್ ಒತ್ತಾಯಿಸಿದ್ದಾರೆ.

ಅಮೋನಿಯಾ ಬೆರಕೆಯಾಗಿರುವ ನೀರನ್ನು ಮೂರು ಬಾಟಲಿಗಳಲ್ಲಿ ತುಂಬಿಕೊಂಡು ತಂದಿದ್ದ ಕೇಜ್ರಿವಾಲ್ ಅವರು, ಈ ನೀರನ್ನು ತಮ್ಮ ಮನೆಗೆ ಕೊಂಡೊಯ್ದು ಪರಿಶೀಲಿಸುವಂತೆ ಮನವಿ ಮಾಡಿದರು.

ಮರು ಹುಟ್ಟು ಪಡೆವ ತವಕದಲ್ಲಿ ‘ಕೈ’ ಪಡೆ

• ಮಂಜುನಾಥ ಹೆಬ್ಬಾರ್

ಪ್ರಜಾ ಮತ ಜನತಂತ್ರದ ಹಬ್ಬ

ನವದೆಹಲಿ: ಇತ್ತೀಚಿನ ವಾರಗಳಲ್ಲಿ ದೆಹಲಿಯ ರಾಜಕೀಯ ಚಿತ್ರಣವು ನಾಟಕೀಯ ತಿರುವುಗಳನ್ನು ಪಡೆದುಕೊಂಡಿದೆ. ಕಳೆದೆರಡು ಚುನಾವಣೆಗಳಲ್ಲಿ ಪೇಲವ ಪ್ರದರ್ಶನ ನೀಡಿದ್ದ ಕಾಂಗ್ರೆಸ್ ಪಕ್ಷವು ಈ ಸಲ ಆಕ್ರಮಣಕಾರಿ ಪ್ರಚಾರ ತಂತ್ರಗಳನ್ನು ಅಳವಡಿಸಿಕೊಂಡಿದೆ. ರಾಷ್ಟ್ರ ರಾಜಧಾನಿಯಲ್ಲಿ ದಶಕದಲ್ಲಿ ಒಂದೇ ಒಂದು ಸ್ಥಾನ ಗೆಲ್ಲಲು ವಿಫಲವಾಗಿದ್ದ ಕಾಂಗ್ರೆಸ್ ಪಕ್ಷವು ಈ ಬಾರಿ ‘ಫೀನಿಕ್ಸ್ ಹಕ್ಕಿ’ಯಂತೆ ಬೂದಿಯಿಂದ ಮೇಲೆದ್ದು ಮರುಹುಟ್ಟು ಪಡೆಯುವ ತವಕದಲ್ಲಿದೆ.

ಈ ಚುನಾವಣೆಯಲ್ಲಿ ಬಿಜೆಪಿಯೇ ನೇರ ಎದುರಾಳಿ ಎಂದು ಪರಿಗಣಿಸಿದ್ದ ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರು ಕಾಂಗ್ರೆಸ್‌ನೊಂದಿಗೆ ಮೈತ್ರಿಯ ಮಾತೇ ಇಲ್ಲ ಎಂದು ಸ್ಪಷ್ಟಪಡಿಸಿದ್ದರು. ಎಎಪಿ ಜತೆಗಿನ ಮೈತ್ರಿಯೇ ಪಕ್ಷದ ಅವನತಿಗೆ ಕಾರಣ ಎಂದು ಕೈ ನಾಯಕರು ವಾಗ್ದಾಳಿ ನಡೆಸಿದ್ದರು. ಕಾಂಗ್ರೆಸ್ ಪಕ್ಷವನ್ನು ‘ಇಂಡಿಯಾ’ ಮೈತ್ರಿಕೂಟದಿಂದ ಹೊರದಬ್ಬಬೇಕು ಎಂದು ಎಎಪಿ ನಾಯಕರು ಆಗ್ರಹಿಸಿದ್ದರು. ದೆಹಲಿಯಲ್ಲಿ ಎಎಪಿಗೆ ಬೆಂಬಲ ನೀಡುವುದಾಗಿ ಮೈತ್ರಿಕೂಟದ ಪಕ್ಷಗಳು ಪ್ರಕಟಿಸಿದ್ದವು. ದೆಹಲಿ ರಾಜಕಾರಣದಲ್ಲಿ ಕಾಂಗ್ರೆಸ್ ಅಪ್ರಸ್ತುತ ಎಂದು ಕೇಜ್ರಿವಾಲ್ ಭಾವಿಸಿದ್ದರು. ಆದರೆ, ಕಾಂಗ್ರೆಸ್ ಪಕ್ಷವು ಏಕಾಏಕಿ ಚಿಗಿತು ಮೇಲೆದ್ದಿದೆ. ದೆಹಲಿಯಲ್ಲಿ ತನ್ನನ್ನು ತಾನು ಒಂದು ಪ್ರಬಲ ಶಕ್ತಿಯಾಗಿ ಮರುಸ್ಥಾಪಿಸುವತ್ತ ಕಾಂಗ್ರೆಸ್ ತೀವ್ರ ಗಮನ ಹರಿಸಿದೆ. ಐದು ಗ್ಯಾರಂಟಿಗಳ ಘೋಷಣೆ, ಪಕ್ಷದ ಪ್ರಭಾವಿ ನಾಯಕರನ್ನು ಕಣಕ್ಕೆ ಇಳಿಸಿರುವುದು, ಕೇಜ್ರಿವಾಲ್ ವಿರುದ್ಧ ಕೈ ನಾಯಕರಿಂದ ತೀವ್ರ ವಾಗ್ದಾಳಿ... ಇದಕ್ಕೆ ಕೆಲವು ಉದಾಹರಣೆಗಳು.

ಕೇಜ್ರಿವಾಲ್ ವಿರುದ್ಧ ಹಿರಿಯ ನಾಯಕ ಸಂದೀಪ್ ದೀಕ್ಷಿತ್, ಮುಖ್ಯಮಂತ್ರಿ ಆತಿಶಿ ವಿರುದ್ಧ ಪಕ್ಷದ ಮಹಿಳಾ ಘಟಕದ ರಾಷ್ಟ್ರೀಯ ಅಧ್ಯಕ್ಷೆ ಅಲ್ಕಾ ಲಾಂಬಾ ಅವರನ್ನು ಹುರಿಯಾಳುವನ್ನಾಗಿಸಿ ಸವಾಲೊಡ್ಡಿದೆ. ದೇವೇಂದ್ರ ಸೆಹ್ರಾವತ್, ಹಾರೂನ್ ಯೂಸುಫ್, ಫಹ್ರಾದ್ ಸೂರಿ, ದೇವೇಂದ್ರ ಯಾದವ್, ಅಭಿಷೇಕ್ ದತ್, ಚೌಧರಿ ಅನಿಲ್ ಕುಮಾರ್ ಅವರಂತಹ ಪ್ರಮುಖ ನಾಯಕರು ಅಖಾಡದಲ್ಲಿದ್ದಾರೆ. ಆಯಾ ಕ್ಷೇತ್ರಗಳಲ್ಲಿ ಅವರಿಗೆ ದೊಡ್ಡ ಬೆಂಬಲಿಗರ ಪಡೆ ಇದೆ. ಇದಲ್ಲದೆ, ಗಣನೀಯ ಸಂಖ್ಯೆಯ ಯುವಕರನ್ನು ಕಣಕ್ಕಿಳಿಸುವ ಮೂಲಕ ಯುವ ಮತದಾರರನ್ನು ಸೆಳೆಯುವ ಕಸರತ್ತು ನಡೆಸಿದೆ.

ಆದರೆ, ಕೈ ಪಾಳಯದ ಪ್ರಭಾವಿ ನಾಯಕರು 2014ರಿಂದ ಈಚೆಗೆ ಗೆಲುವಿನ ಮುಖ ಕಂಡಿಲ್ಲ. ಜತೆಗೆ, 1998ರಿಂದ 2013ರ ವರೆಗೆ ಶೀಲಾ ದೀಕ್ಷಿತ್ ಸಂಪುಟದಲ್ಲಿ ಸಚಿವರಾಗಿದ್ದ ಅನೇಕರು ನಿವೃತ್ತರಾಗಿದ್ದಾರೆ. ಹಲವು ನಾಯಕರು ಬಿಜೆಪಿ ಹಾಗೂ ಎಎಪಿಗೆ ವಲಸೆ ಹೋಗಿದ್ದಾರೆ. ಅರವಿಂದರ್ ಸಿಂಗ್ ಲವ್ಲಿ, ರಾಜ್ ಕುಮಾರ್ ಚೌಹಾಣ್ ಮತ್ತಿತರ ನಾಯಕರು ರಾಜಕೀಯ ಭವಿಷ್ಯ ಅರಸಿ ಕಮಲ ಪಾಳಯಕ್ಕೆ ಜಿಗಿದಿದ್ದಾರೆ. ಗ್ಯಾರಂಟಿಗಳು ಹಾಗೂ ಪ್ರಣಾಳಿಕೆಗಳ ಘೋಷಣೆಗೆ ಪಕ್ಷ ನೆಚ್ಚಿಕೊಂಡಿದ್ದು ರಾಜ್ಯಗಳ ನಾಯಕರನ್ನೇ. ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ವಿಪಕ್ಷ ನಾಯಕ ರಾಹುಲ್ ಗಾಂಧಿ, ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಇದರಿಂದ ದೂರ ಉಳಿದರು. ಇನ್ನೊಂದೆಡೆ, ಕೆಲವೊಂದು ಕ್ಷೇತ್ರಗಳಲ್ಲಿ ಪಕ್ಷಕ್ಕೆ ಬೂತ್ ಮಟ್ಟದ ಕಾರ್ಯಕರ್ತರೇ ಇಲ್ಲ.

ದೆಹಲಿಯಲ್ಲಿ ದಲಿತರು ಶೇ 17ರಷ್ಟು ಹಾಗೂ ಮುಸ್ಲಿಮರು ಶೇ 13ರಷ್ಟು ಇದ್ದಾರೆ. ಒಂದು ಕಾಲದಲ್ಲಿ ಪರಿಶಿಷ್ಟ ಜಾತಿಯ 12 ಮೀಸಲು ಕ್ಷೇತ್ರಗಳು ಕಾಂಗ್ರೆಸ್‌ನ ಭದ್ರಕೋಟೆಯಾಗಿದ್ದವು. ಕಳೆದೆರಡು ಚುನಾವಣೆಗಳಲ್ಲಿ ಈ ಕ್ಷೇತ್ರಗಳಲ್ಲಿ ಎಎಪಿ ಜಯಭೇರಿ ಬಾರಿಸಿದೆ. ಮುಸ್ಲಿಂ ಮತದಾರರು ನಿರ್ಣಾಯಕ ಪಾತ್ರ ವಹಿಸುವ ಆರರಿಂದ ಏಳು ಕ್ಷೇತ್ರಗಳಿವೆ. ಈ 19 ಕ್ಷೇತ್ರಗಳು ಗೇಮ್ ಚೇಂಜರ್ ಆಗುವ ಸಾಧ್ಯತೆ ಇದೆ.

2020ರ ಈಶಾನ್ಯ ದೆಹಲಿಯ ಗಲಭೆಯ ಬಳಿಕ ಅಲ್ಪಸಂಖ್ಯಾತ ಮತದಾರರ ವಿಶ್ವಾಸವನ್ನು ಎಎಪಿ ಕಳೆದುಕೊಂಡಿದೆ ಎಂದು ಹೇಳಲಾಗುತ್ತಿದೆ. ಈ ಮತದಾರರು ಕಾಂಗ್ರೆಸ್‌ಗೆ ಮರಳಿದರೆ ಫಲಿತಾಂಶದ ದಿಕ್ಕನ್ನೇ ಬದಲಾಯಿಸಬಹುದು ಎಂಬುದು ‘ಕೈ’ ನಾಯಕರ ಲೆಕ್ಕಾಚಾರ.

ಒಂದು ವೇಳೆ ಕಾಂಗ್ರೆಸ್ ಮತ ಪ್ರಮಾಣ ಹೆಚ್ಚಳವಾದರೆ ಹೊಡೆತ ಬೀಳುವುದು ತಮ್ಮ ಪಕ್ಷಕ್ಕೆ ಎಂಬುದು ಕೇಜ್ರಿವಾಲ್ ಆತಂಕ. ಪೂರ್ವಾಂಚಲಿಗಳು, ಮುಸ್ಲಿಮರು, ಕೊಳೆಗೇರಿ ನಿವಾಸಿಗಳು ಹಾಗೂ ದಲಿತರ ಮತಗಳನ್ನು ಉಭಯ ಪಕ್ಷಗಳು ಪ್ರಮುಖವಾಗಿ ನೆಚ್ಚಿಕೊಂಡಿವೆ.

ಠೇವಣಿ ಕಳೆದುಕೊಂಡಿದ್ದ 63 ‘ಕೈ’ ಅಭ್ಯರ್ಥಿಗಳು

2015 ಹಾಗೂ 2020ರ ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಒಂದೇ ಒಂದು ಸ್ಥಾನ ಗೆದ್ದಿರಲಿಲ್ಲ. ಕಳೆದ ಸಲ ಪಕ್ಷದ 63 ಅಭ್ಯರ್ಥಿಗಳು ಠೇವಣಿ ಕಳೆದುಕೊಂಡಿದ್ದರು.

ದೆಹಲಿಯಲ್ಲಿ ಎಎಪಿಯ ಉನ್ನತಿಯ ನಂತರ ಕಾಂಗ್ರೆಸ್‌ನ ಅವನತಿ ಆರಂಭವಾಯಿತು. 2013ರ ಚುನಾವಣೆಯಲ್ಲಿ ಮೊದಲ ಬಾರಿಗೆ ಸ್ಪರ್ಧಿಸಿದ ಎಎಪಿ ಶೇ 29.49 ಮತಗಳೊಂದಿಗೆ 28 ಸೀಟುಗಳನ್ನು ಗೆದ್ದುಕೊಂಡಿತ್ತು. 2008ರಲ್ಲಿ 43ರಲ್ಲಿ ಗೆದ್ದಿದ್ದ ಕೈ ಪಾಳಯವು 2013ರಲ್ಲಿ ಎಂಟು ಸ್ಥಾನಗಳನ್ನು ಗಳಿಸಿ ಹೀನಾಯವಾಗಿ ಸೋತಿತ್ತು. ಮತ ಪ್ರಮಾಣವು ಶೇ 40.31ರಿಂದ ಶೇ 24.55ಕ್ಕೆ ಕುಸಿದಿತ್ತು. ಇನ್ನೊಂದೆಡೆ, ಬಿಜೆಪಿಯ ಮತ ಪ್ರಮಾಣ ಶೇ 3ರಷ್ಟು ಕಡಿಮೆಯಾಗಿತ್ತು. ಆದರೆ, ಪಕ್ಷದ ಸೀಟುಗಳ ಸಂಖ್ಯೆಯು 23ರಿಂದ 31ಕ್ಕೆ ಏರಿತ್ತು.

2015ರಲ್ಲಿ ಕಾಂಗ್ರೆಸ್‌ನ ಮತವು ಶೇ 9.55 ಇಳಿದಿತ್ತು. ಅದೇ ಹೊತ್ತಿಗೆ ಎಎಪಿ ಮತವು ಶೇ 15ರಷ್ಟು ಜಾಸ್ತಿ ಆಗಿತ್ತು. ಕಮಲ ಪಾಳಯದ ಮತ ಪ್ರಮಾಣದಲ್ಲಿ ಬದಲಾವಣೆ ಆಗಿರಲಿಲ್ಲ. ಕಾಂಗ್ರೆಸ್‌ನ ಮತದಾರರು ದೊಡ್ಡ ಪ್ರಮಾಣದಲ್ಲಿ ಎಎಪಿಯತ್ತ ಸಾಗಿರುವುದು ಸ್ಪಷ್ಟಗೊಂಡಿತ್ತು.

2020ರ ಚುನಾವಣೆಯಲ್ಲಿ ಕೈ ಪಾಳಯದ ಮತವು ಶೇ 4.26ಕ್ಕೆ ಇಳಿದಿತ್ತು. ಎಎಪಿಯದ್ದು ಶೇ 2ರಷ್ಟು ಮತ ಕಡಿಮೆಯಾಗಿತ್ತು. ಆದರೆ, ಬಿಜೆಪಿಯ ಮತವು ಶೇ 6ರಷ್ಟು ಹೆಚ್ಚಳ ಆಗಿತ್ತು. ಆಡಳಿತ ವಿರೋಧಿಯ ಅಲೆಯಿಂದ ಕೇಸರಿ ಪಾಳಯಕ್ಕೆ ಅಲ್ಪ ಲಾಭವಾಗಿತ್ತು.

ಕುಂಭಮೇಳ: ಕಾಲ್ತುಳಿತದಲ್ಲಿ ಸಾವು; ಕುಟುಂಬದವರ ಆಕ್ರಂದನ

ನಾಲ್ವರ ಅಂತ್ಯಕ್ರಿಯೆ, ಮಡುಗಟ್ಟಿದ ಮೌನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಪ್ರಯಾಗ್‌ರಾಜ್‌ನಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ ಮೃತಪಟ್ಟ ಜಿಲ್ಲೆಯ ನಾಲ್ವರ ಅಂತ್ಯಕ್ರಿಯೆ ವಿವಿಧೆಡೆ ನೆರವೇರಿತು.

ವಡಗಾವಿಯ ನಿವಾಸಿ ಜ್ಯೋತಿ ಹತ್ತರವಾಟ ಮತ್ತು ಅವರ ಪುತ್ರಿ ಮೇಘಾ ಅವರ ಅಂತ್ಯಕ್ರಿಯೆ ಬ್ರಾಹ್ಮಣ ಸಂಪ್ರದಾಯದ ವಿಧಿ ವಿಧಾನದಂತೆ ಶುಕ್ರವಾರ ನೆರವೇರಿತು. ಜ್ಯೋತಿ ಅವರ ಪತಿ ದೀಪಕ್ ಚಿತೆಗೆ ಅಗ್ನಿಸ್ಪರ್ಶ ಮಾಡಿದರು.

ಇಬ್ಬರ ಶವಗಳನ್ನು ದೆಹಲಿಯಿಂದ ಗೋವಾಗೆ ಏರ್‌ಲಿಫ್ಟ್ ಮಾಡಿ, ಅಲ್ಲಿಂದ ಆಂಬುಲೆನ್ಸ್‌ನಲ್ಲಿ ಬೆಳಗಾವಿಗೆ ತಂದಾಗ ಗುರುವಾರ ಮಧ್ಯರಾತ್ರಿ 12.30 ಆಗಿತ್ತು. ಮರಣೋತ್ತರ ಪರೀಕ್ಷೆ ಬಳಿಕ ಶುಕ್ರವಾರ ನಸುಕಿನ 4ಕ್ಕೆ ಶವಗಳನ್ನು ಕುಟುಂಬದವರಿಗೆ ಹಸ್ತಾಂತರಿಸಲಾಯಿತು. ಬೆಳಿಗ್ಗೆ 10.30ರ ಸುಮಾರಿಗೆ ಅಂತ್ಯಕ್ರಿಯೆ ಮುಗಿಯಿತು.

ಅರುಣ ಕೋಪರ್ಡೆ ಅವರ ಅಂತ್ಯಕ್ರಿಯೆ ಗುರುವಾರ ರಾತ್ರಿ 11ಕ್ಕೆ ಇಲ್ಲಿನ ಸದಾಶಿವ ನಗರದ ಸ್ಮಶಾನದಲ್ಲಿ ನೆರವೇರಿದರೆ, ಮಹಾದೇವಿ ಬಾವನೂರ ಅವರ ಅಂತ್ಯಕ್ರಿಯೆ ಅವರ ತವರೂರಾದ ಹುಬ್ಬಳ್ಳಿ ತಾಲ್ಲೂಕಿನ ನೂಲ್ವಿ ಗ್ರಾಮದಲ್ಲಿ ನಡೆಯಿತು.

‘ಪ್ರಯಾಗ್‌ರಾಜ್‌ನಲ್ಲಿ ಪರಿಸ್ಥಿತಿ ಹತೋಟಿಗೆ ತರುವುದು ಆದ್ಯತೆ ಆಗಿದ್ದ ಕಾರಣ ಅಲ್ಲಿನ ಅಧಿಕಾರಿಗಳಿಂದ ಹೆಚ್ಚು ಸಹಕಾರ ನಿರೀಕ್ಷಿಸುವಂತಿರಲಿಲ್ಲ. ಶವಗಳನ್ನು ಆದಷ್ಟು ಬೇಗ ಅವರ ಕುಟುಂಬಕ್ಕೆ ಒಪ್ಪಿಸುವುದು ನಮ್ಮ ಆದ್ಯತೆ ಆಗಿತ್ತು’ ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ‘ಪ್ರಜಾವಾಣಿ’ಗೆ ತಿಳಿಸಿದರು.



ಶವಗಳ ಮಧ್ಯೆ ಕೂತ ಸಾಕು ನಾಯಿ

ಮೇಘಾ ಅವರು ಪ್ರೀತಿಯಿಂದ ಸಾಕಿದ್ದ ನಾಯಿ ಕೂಡ ಅಂತಿಮಯಾತ್ರೆಯಲ್ಲಿ ಹೆಜ್ಜೆಹಾಕಿತು. ತಾಯಿ ಮತ್ತು ಮಗಳ ಶವ ಮಧ್ಯೆ ದಿಕ್ಕು ತೋಚದಂತೆ ಕೂತಿದ್ದು ಕಂಡು ಜನರ ಕಣ್ಣಾಲಿಗಳು ಒದ್ದೆಯಾದವು.

‘ಮೇಘಾ ಬಂದಿದ್ದಾಳೆ ನೋಡು’ ಎಂದು ಮನೆಯವರು ಹೇಳಿದಾಗ ಶವದ ಮುಖದ ಬಳಿ ಬಂದು ಮೂಸಿತು. ‘ಇಬ್ಬರೂ ಕಾಣದ ದಿನದಿಂದ ಸಾಕುನಾಯಿ ಏನನ್ನೂ ತಿಂದಿಲ್ಲ’ ಎಂದು ಮನೆಯವರು ತಿಳಿಸಿದರು.

ಪ್ರಯಾಗ್‌ರಾಜ್‌ನಲ್ಲಿ ಮೃತಪಟ್ಟ ಬೆಳಗಾವಿಯ ಜ್ಯೋತಿ ಹಾಗೂ ಮೇಘಾ ಅವರ ಶವಗಳನ್ನು ಮನೆ ಮುಂದೆ ತಂದಾಗ, ಸಾಕುನಾಯಿ ಶವಗಳ ಮಧ್ಯದಲ್ಲೇ ಕುಳಿತುಕೊಂಡಿತು

ಕಾಲ್ತುಳಿತ; ಬಂಜಾರ ಗುರುಪೀಠದ ನಾಗಾ ಸಾಧು ಸಾವು

ಚಿತ್ರದುರ್ಗ: ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಕುಂಭಮೇಳಕ್ಕೆ ತೆರಳಿದ್ದ ನಗರದ ಬಂಜಾರ ಗುರುಪೀಠದ ನಾಗಾ ಸಾಧು ನಾಗನಾಥ್ ಮಹರಾಜ್ (48) ಅವರು ಈಚೆಗೆ ಸಂಭವಿಸಿದ ಕಾಲ್ತುಳಿತಕ್ಕೆ ಸಿಲುಕಿ ಮೃತಪಟ್ಟಿದ್ದಾಗಿ ಮಾಹಿತಿ ಬಂದಿದೆ.



ನಾಗನಾಥ್ ಮಹರಾಜ್

ಈ ವಿಷಯವನ್ನು ಬಂಜಾರ ಗುರುಪೀಠದ ಸೇವಾಲಾಲ್ ಸ್ವಾಮೀಜಿ ಖಚಿತಪಡಿಸಿದ್ದಾರೆ.

ತಾಲ್ಲೂಕಿನ ಸಿಬಾರದಲ್ಲಿರುವ ಬಂಜಾರ ಗುರುಪೀಠದಲ್ಲಿ ನಾಗನಾಥ್ ಮಹರಾಜ್ 7 ವರ್ಷಗಳಿಂದ ವಾಸಿಸುತ್ತಿದ್ದರು. 15 ದಿನಗಳ ಹಿಂದಷ್ಟೇ ಕುಂಭಮೇಳದಲ್ಲಿ ಪಾಲ್ಗೊಳ್ಳಲು ಪ್ರಯಾಗ್‌ರಾಜ್‌ಗೆ ತೆರಳಿದ್ದರು. ಪ್ರಯಾಗ್‌ರಾಜ್‌ನಲ್ಲಿ ಅವರು ಬಂಜಾರ ಗುರುಪೀಠದ ವಿಳಾಸದೊಂದಿಗೆ ಆಶ್ರಯ ಪಡೆದಿದ್ದರು. ಹೀಗಾಗಿ ಅವರು ಕರ್ನಾಟಕ ಮೂಲದವರು ಎಂಬುದು ಪತ್ತೆಯಾಗಿದೆ. ಯಾವಾಗ ಮೃತಪಟ್ಟಿದ್ದಾರೆ ಎಂಬುದನ್ನು ಖಚಿತವಾಗಿ ತಿಳಿಸಿಲ್ಲ.

‘ಗುರುಪೀಠದಲ್ಲಿ ಅವರ ಮಾತುಗಳು ನಮಗೆ ಪ್ರೇರಣೆಯಾಗಿದ್ದವು. ಅವರ ಸಾವಿನ ಸುದ್ದಿ ಕೇಳಿ ಆಘಾತವಾಗಿದೆ. ಕುಂಭಮೇಳಕ್ಕೆ ತೆರಳುವ ಮುನ್ನ ಅವರು ನನ್ನನ್ನೂ ಆಹ್ವಾನಿಸಿದ್ದರು. ಪವಾಡ ಪುರುಷರಾಗಿದ್ದ ಅವರು ನಮ್ಮ ಗುರುಪೀಠಕ್ಕೆ ಬಂದಿದ್ದೇ ಆಶ್ಚರ್ಯ. ಅವರ ಮೂಲ ಯಾವುದು ಎಂಬುದು ಯಾರಿಗೂ ಗೊತ್ತಿಲ್ಲ. ಅವರ ಸಾವಾಗಿರುವುದು ನೋವಾಗಿದೆ’ ಎಂದು ಸೇವಾಲಾಲ್ ಸ್ವಾಮೀಜಿ ಹೇಳಿದರು.

‘ಉತ್ತರ ಪ್ರದೇಶದ ಸರ್ಕಾರವು ಭಕ್ತರಿಗೆ ಕುಂಭಮೇಳದಲ್ಲಿ ಹಂತಹಂತವಾಗಿ ಪಾಲ್ಗೊಳ್ಳಲು ಅವಕಾಶ ನೀಡಿದ್ದರೆ ಕಾಲ್ತುಳಿತ ಆಗುತ್ತಿರಲಿಲ್ಲ. ಮಹಾನ್ ಜ್ಞಾನಿಯಾಗಿದ್ದ ನಾಗನಾಥ್ ಮಹರಾಜ್ ಅವರ ಪಾರ್ಥಿವ ಶರೀರ ಪ್ರಯಾಗ್‌ರಾಜ್‌ನಲ್ಲಿಯೇ ಇದೆ. ಕೂಡಲೇ ಕರ್ನಾಟಕ ಸರ್ಕಾರ ಅವರ ಮೃತಹದೇಹವನ್ನು ತರಿಸಲು ವ್ಯವಸ್ಥೆ ಮಾಡಿ ಮಠಕ್ಕೆ ನೀಡಿದರೆ ಧಾರ್ಮಿಕ ವಿಧಿ–ವಿಧಾನಗಳ ಮೂಲಕ ಅಂತ್ಯಸಂಸ್ಕಾರ ನೆರವೇರಿಸಲಾಗುವುದು’ ಎಂದು ಅವರು ಕೋರಿದ್ದಾರೆ.

ರಣಜಿ ಕ್ರಿಕೆಟ್ ಟೂರ್ನಿ: ಎಂಟರ ಘಟ್ಟಕ್ಕೆ ಸ್ಥಾನ ಖಚಿತಪಡಿಸಿಕೊಂಡ ಹರಿಯಾಣ, ಕೇರಳ

ಮಯಂಕ್ ಪಡೆಯ ಕೈಜಾರಿದ ಕನಸು

• ಗಿರೀಶ ದೊಡ್ಡಮನಿ

ಬೆಂಗಳೂರು: ಬಿಗಿ ಮುಷ್ಟಿಯೊಳಗಿನ ಮರಳು ಜಾರಿಹೋಗುವ ರೀತಿಯಲ್ಲಿಯೇ ಕರ್ನಾಟಕದ ಕೈಯಿಂದ ಈ ಬಾರಿಯ ರಣಜಿ ಟ್ರೋಫಿ ಟೂರ್ನಿಯ ಎಂಟರ ಘಟ್ಟಕ್ಕೆ ಪ್ರವೇಶಿಸುವ ಕನಸು ಕೂಡ ಉದುರಿತು. 'ಸಿ' ಗುಂಪಿನಿಂದ ಕೇರಳ ಮತ್ತು ಹರಿಯಾಣ ತಂಡಗಳು ಕ್ವಾರ್ಟರ್‌ಫೈನಲ್ ಪ್ರವೇಶಿಸುವುದು ಖಚಿತವಾಯಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕೊನೆಯ ಪಂದ್ಯದ ಎರಡನೇ ದಿನದಾಟದಲ್ಲಿ ಕರ್ನಾಟಕವು ಮೊದಲ ಇನಿಂಗ್ಸ್‌ನಲ್ಲಿ 304 ರನ್ ಗಳಿಸಿತು. ಇದಕ್ಕೆ ಉತ್ತರವಾಗಿ ಹರಿಯಾಣ ತಂಡವು ಅಂಕಿತ ಕುಮಾರ್ (118; 154ಎ, 4X19) ಹೊಡೆದ ಶತಕದ ಬಲದಿಂದ 66 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 232 ರನ್ ಗಳಿಸಿತು. ಇದರಿಂದಾಗಿ ಹರಿಯಾಣ ತಂಡವನ್ನು 154 ರನ್‌ಗಳೊಳಗೇ ಆಲೌಟ್ ಮಾಡಿ ಫಾಲೋ ಆನ್ ಹೇರುವ ಕರ್ನಾಟಕದ ಲೆಕ್ಕಾಚಾರ ಕೈಕೊಟ್ಟಿತು. ಇನಿಂಗ್ಸ್ ಜಯ ಸಾಧಿಸಿ ಬೋನಸ್ ಅಂಕ ಪಡೆಯುವ ಹಾದಿ ಬಂದ್ ಆಯಿತು.

ಗುಂಪಿನ ಕಳೆದ ಆರು ಪಂದ್ಯಗಳಿಂದ ಹರಿಯಾಣ ತಂಡವು 26 ಅಂಕ ಗಳಿಸಿದೆ. ಶುಕ್ರವಾರ ತಿರುವನಂತಪುರದಲ್ಲಿ ಬಿಹಾರ ತಂಡವನ್ನು ಇನಿಂಗ್ಸ್ ಮತ್ತು 169 ರನ್‌ಗಳಿಂದ ಸೋಲಿಸಿದ ಕೇರಳ 28 ಅಂಕ ಕಲೆಹಾಕಿದೆ. 19 ಅಂಕ ಗಳಿಸಿರುವ ಕರ್ನಾಟಕ ತಂಡವು ಹರಿಯಾಣವನ್ನು ಇನಿಂಗ್ಸ್ ಅಂತರದಿಂದ ಸೋಲಿಸಿದ್ದರೆ 7 ಅಂಕಗಳು ಸಿಗುತ್ತಿದ್ದವು. ಆಗ ಹರಿಯಾಣದ ಅಂಕಗಳೊಂದಿಗೆ ಸಮಬಲವಾಗುತ್ತಿತ್ತು. ಆಗ ಒಟ್ಟು ರನ್‌ರೇಟ್ ಆಧಾರದಲ್ಲಿ ಕರ್ನಾಟಕ ಎರಡನೇ ಸ್ಥಾನ ಪಡೆದು ಎಂಟರ ಘಟ್ಟಕ್ಕೆ ಪ್ರವೇಶಿಸುವ ಸಾಧ್ಯತೆ ಇತ್ತು. ಆದರೆ ಈಗ ಇನ್ನೂ ಎರಡು ದಿನ ಬಾಕಿ ಇರುವ ಈ ಪಂದ್ಯದಲ್ಲಿ ಕರ್ನಾಟಕ ತಂಡವು ಗೆದ್ದರೂ ಒಟ್ಟು 25 ಅಂಕಗಳಾಗುತ್ತವೆ. ಆದ್ದರಿಂದ ಈ ಗುಂಪಿನಿಂದ ಕೇರಳ ಮತ್ತು ಹರಿಯಾಣ ತಂಡಗಳು ಎಂಟರ ಘಟ್ಟಕ್ಕೆ ಅರ್ಹತೆ ಪಡೆದವು.

2015-16ರ ಋತುವಿನಲ್ಲಿ ಕೂಡ ನಾಕೌಟ್ ಹಂತ ಪ್ರವೇಶಿಸುವಲ್ಲಿ ಕರ್ನಾಟಕ ವಿಫಲವಾಗಿತ್ತು. ಅದರ ನಂತರದ ಋತುಗಳಲ್ಲಿ ಸತತವಾಗಿ ನಾಕೌಟ್ ಪ್ರವೇಶಿಸಿತ್ತು. ಆದರೆ ಈ ಬಾರಿ ಸಾಧ್ಯವಾಗಲಿಲ್ಲ. ಈ ಋತುವಿನ ಆರಂಭಿಕ ಹಂತದ ಎರಡು ಪಂದ್ಯಗಳಿಗೆ ಮಳೆ ಅಡ್ಡಿಯಾಗಿತ್ತು. ಅದರಿಂದಾಗಿ ಕೇವಲ ಎರಡು ಅಂಕಗಳು ಮಾತ್ರ ದೊರೆತಿದ್ದವು. ಉಳಿದ ನಾಲ್ಕು ಪಂದ್ಯಗಳಲ್ಲಿ ಎರಡರಲ್ಲಿ ಜಯಿಸಿತ್ತು. ಇನ್ನುಳಿದ ಪಂದ್ಯಗಳು ಡ್ರಾ ಆಗಿದ್ದವು.




ಕರ್ನಾಟಕ ತಂಡದ ಬೌಲರ್ ಯಶೋವರ್ಧನ್ ಪರಂತಾಪ್ (ಎಡಚಿತ್ರ). ಹರಿಯಾಣ ತಂಡದ ನಾಯಕ ಅಂಕಿತ್ ಕುಮಾರ್ ಶತಕ ಗಳಿಸಿ ಸಂಭ್ರಮಿಸಿದ ರೀತಿ ಪ್ರಜಾವಾಣಿ ಚಿತ್ರಗಳು/ಎಸ್‌.ಕೆ. ದಿನೇಶ್

18 ರನ್‌ಗಳಿಗೆ 5 ವಿಕೆಟ್!: ಪಂದ್ಯದ ಮೊದಲ ದಿನವಾದ ಗುರುವಾರ ಕರ್ನಾಟಕ ತಂಡವು 89 ಓವರ್‌ಗಳಲ್ಲಿ 5ಕ್ಕೆ267 ರನ್ ಗಳಿಸಿತ್ತು. ಕ್ರೀಸ್‌ನಲ್ಲಿದ್ದ ಶ್ರೀಜಿತ್ ಮತ್ತು ಯಶೋವರ್ಧನ್ ಪರಂತಾಪ್ ಅವರು ಬೌಲರ್‌ಗಳಿಗೆ ಸ್ವಲ್ಪ ಹೊತ್ತು ಪ್ರತಿರೋಧ ತೋರಿದರು.

ರಕ್ಷಣಾತ್ಮಕವಾಗಿ ಆಡುವ ಪ್ರಯತ್ನ ಫಲಿಸಲಿಲ್ಲ. ತಂಡದ ಮೊತ್ತ 286 ರನ್‌ಗಳಾಗಿದ್ದ ಸಂದರ್ಭದಲ್ಲಿ ಯಶೋವರ್ಧನ್ ಔಟಾಗುತ್ತಿದ್ದಂತೆ ಉಳಿದವರೂ ಪಟಪಟನೇ ವಿಕೆಟ್ ಚೆಲ್ಲಿದರು. ಕೇವಲ 18 ರನ್‌ಗಳ ಅಂತರದಲ್ಲಿ 5 ವಿಕೆಟ್‌ಗಳು ಪತನವಾದವು. ಹರಿಯಾಣ ಇನಿಂಗ್ಸ್ ಆರಂಭವಾಯಿತು.

ಅಂಕಿತ್ ಶತಕ: ಹರಿಯಾಣದ ನಾಯಕ ಅಂಕಿತ್ ಕುಮಾರ್ ಅವರು ಲಕ್ಷ್ಯ ದಲಾಲ್ (22 ರನ್) ಅವರೊಂದಿಗೆ ಮೊದಲ ವಿಕೆಟ್ ಜೊತೆಯಾಟದಲ್ಲಿ 74 ರನ್ ಸೇರಿಸಿದರು. ಕರ್ನಾಟಕದ ಪ್ರಸಿದ್ಧ ಕೃಷ್ಣ, ವಿದ್ವತ್ ಕಾವೇರಪ್ಪ, ವಿ. ಕೌಶಿಕ್ ಅವರ ಬೌಲಿಂಗ್‌ಗೆ ತಕ್ಕ ಉತ್ತರ ನೀಡಿದರು. ಬೌಲರ್‌ಗಳು ಎಲ್ಲ ರೀತಿಯ ಅಸ್ತ್ರಗಳನ್ನು ಪ್ರಯೋಗಿಸಿದರೂ ಅಂಕಿತ್ ಲೀಲಾಜಾಲವಾಗಿ ಆಡಿದರು.

ಕರ್ನಾಟಕದ ವೇಗಿಗಳೂ ಸ್ಟಂಪ್‌ಲೈನ್ ನೇರವಾಗಿ ಎಸೆತಗಳನ್ನು ಪ್ರಯೋಗಿಸುವಲ್ಲಿ ಹೆಚ್ಚು ಪ್ರಯತ್ನಿಸಲಿಲ್ಲ. ಆದರೆ ಆಫ್‌ಸ್ಟಂಪ್ ಆಚೆಯ ಎಸೆತಗಳ ಪ್ರಯೋಗಕ್ಕೆ ಒತ್ತು ನೀಡಿದರು.

ಇದರಿಂದಾಗಿ ಊಟದ ವಿರಾಮದವರೆಗೂ ಯಾವುದೇ ವಿಕೆಟ್ ಪತನವಾಗಲಿಲ್ಲ. ನಂತರದ ಆಟದಲ್ಲಿ ಯಶೋವರ್ಧನ್ ಬೌಲಿಂಗ್‌ನಲ್ಲಿ ಮೊದಲ ಸ್ಲಿಪ್‌ನಲ್ಲಿದ್ದ ಕೆ.ಎಲ್. ರಾಹುಲ್ ಡೈವ್ ಮಾಡಿ ಪಡೆದ ಕ್ಯಾಚ್‌ಗೆ ಲಕ್ಷ್ಯ ಪೆವಿಲಿಯನ್ ಸೇರಿದರು. ಆದರೆ ಮಯಂಕ್ ಅಗರವಾಲ್ ಯೋಜಿಸಿದ ಎಲ್ಲ ಫೀಲ್ಡಿಂಗ್ ತಂತ್ರಗಳಿಗೆ ಅಂಕಿತ್ ತಿರುಗೇಟು ನೀಡಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ ಯುವರಾಜ್ ಸಿಂಗ್ (33ರನ್) ಅವರೊಂದಿಗೆ 78 ರನ್ ಸೇರಿಸಿದರು.

ದಿನದಾಟದ ಕೊನೆಯ ಹಂತದಲ್ಲಿ ಕರ್ನಾಟಕದ ಬೌಲರ್‌ಗಳು ಒಂದಿಷ್ಟು ಸಂಚಲನ ಮೂಡಿಸಿದರು. ಯುವರಾಜ್ ವಿಕೆಟ್ ಗಳಿಸಿದ ಯಶೋವರ್ಧನ್ ಜೊತೆಯಾಟವನ್ನು ಮುರಿದರು. ಹಿಮಾಂಶು ರಾಣಾ ಅವರನ್ನು ಕೌಶಿಕ್ ಅವರು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು. ಶತಕ ಹೊಡೆದಿದ್ದ ಅಂಕಿತ್ ಆಟಕ್ಕೆ ಸ್ಪಿನ್ನರ್ ಹಾರ್ದಿಕ್ ರಾಜ್ ತೆರೆಯೆಳೆದರು. ಧೀರು ಸಿಂಗ್ ಅವರ ವಿಕೆಟ್ ಎಗರಿಸಿದ ಪ್ರಸಿದ್ಧ ಕೃಷ್ಣ ಸಂಭ್ರಮಿಸಿದರು.

ನಿಶಾಂತ್ ಸಿಂಧು (ಬ್ಯಾಟಿಂಗ್ 35) ಮತ್ತು ರೋಹಿತ್ ಶರ್ಮಾ (ಬ್ಯಾಟಿಂಗ್ 5) ಕ್ರೀಸ್‌ನಲ್ಲಿದ್ದಾರೆ. ಕರ್ನಾಟಕದ ಮೊದಲ ಇನಿಂಗ್ಸ್ ಮೊತ್ತ ಚುಕ್ತಾ ಮಾಡಲು ತಂಡಕ್ಕೆ ಇನ್ನೂ 72 ರನ್‌ಗಳು ಬೇಕು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಕರ್ನಾಟಕ 101 ಓವರ್‌ಗಳಲ್ಲಿ 304 (ಕೆ.ಎಲ್. ಶ್ರೀಜಿತ್ 37, ಯಶೋವರ್ಧನ್ ಪರಂತಾಪ್ 35; ಅನ್ಷುಲ್ ಕಾಂಭೋಜ್ 32ಕ್ಕೆ 4, ಅನುಜ್ ಠಕ್ರಾಲ್ 88ಕ್ಕೆ 4). ಹರಿಯಾಣ: 66 ಓವರ್‌ಗಳಲ್ಲಿ 5ಕ್ಕೆ 232 (ಲಕ್ಷ್ಯ ದಲಾಲ್ 22, ಅಂಕಿತ್ ಕುಮಾರ್ 118, ಯುವರಾಜ್ ಸಿಂಗ್ 33, ನಿಶಾಂತ್ ಔಟಾಗದೇ 35; ಯಶೋವರ್ಧನ್ ಪರಂತಾಪ್ 42ಕ್ಕೆ 2, ವಿ.ಕೌಶಿಕ್ 48ಕ್ಕೆ 1, ಹಾರ್ದಿಕ್ ರಾಜ್ 33ಕ್ಕೆ 1).

ಜಲಜ್‌ಗೆ 10 ವಿಕೆಟ್: ಕೇರಳಕ್ಕೆ ಇನಿಂಗ್ಸ್ ಜಯ

ತಿರುವನಂತಪುರ (ಪಿಟಿಐ): ಎರಡೇ ದಿನಗಳಲ್ಲಿ ಮುಗಿದ ಪಂದ್ಯದಲ್ಲಿ ಕೇರಳ ತಂಡವು ಬಿಹಾರ ವಿರುದ್ಧ ಇನಿಂಗ್ಸ್ ಮತ್ತು 169 ರನ್‌ಗಳಿಂದ ಜಯಿಸಿತು.

ಗುರುವಾರ ಮೊದಲು ಬ್ಯಾಟಿಂಗ್ ಮಾಡಿದ್ದ ಕೇರಳ ತಂಡವು ಮೊದಲ ಇನಿಂಗ್ಸ್‌ನಲ್ಲಿ 101. 2 ಓವರ್‌ಗಳಲ್ಲಿ 351 ರನ್ ಗಳಿಸಿತ್ತು. ಅದಕ್ಕುತ್ತರವಾಗಿ ಬಿಹಾರ ತಂಡವು 23.1 ಓವರ್‌ಗಳಲ್ಲಿ 64 ರನ್ ಗಳಿಸಿ ಆಲೌಟ್ ಆಯಿತು. ಬಿಹಾರದ ಮೇಲೆ ಫಾಲೋ ಆನ್ ಹೇರಲಾಯಿತು. ಎರಡನೇ ಇನಿಂಗ್ಸ್‌ನಲ್ಲಿ 118 ರನ್ ಗಳಿಗೆ ಬಿಹಾರ ತಂಡ ಸರ್ವಪತನವಾಯಿತು. ಕೇರಳದ ಬೌಲರ್ ಜಲಜ್ ಸಕ್ಸೆನಾ (19ಕ್ಕೆ5 ಮತ್ತು 34ಕ್ಕೆ5) ಎರಡೂ ಇನಿಂಗ್ಸ್ ಗಳಲ್ಲಿ ಐದು ವಿಕೆಟ್ ಗೊಂಚಲು ಗಳಿಸಿದರು.

37 ಬಾರಿ ವಿಫಲ

ಕರ್ನಾಟಕ ತಂಡವು ರಣಜಿ ಟ್ರೋಫಿ ಟೂರ್ನಿಯ ಇತಿಹಾಸದಲ್ಲಿ ಒಟ್ಟು 37 ಬಾರಿ ನಾಕೌಟ್ ಪ್ರವೇಶಿಸುವಲ್ಲಿ ವಿಫಲವಾಗಿದೆ. ಇದುವರೆಗೆ ಒಟ್ಟು 89 ಟೂರ್ನಿಗಳು ನಡೆದಿವೆ. 2020–21ರಲ್ಲಿ ಕೋವಿಡ್ ಕಾರಣದಿಂದ ಟೂರ್ನಿ ರದ್ದಾಗಿತ್ತು ಎಂದು ಕ್ರಿಕೆಟ್ ಅಂಕಿ ಸಂಖ್ಯೆ ಪರಿಣತರಾದ ಚನ್ನಗಿರಿ ಕೇಶವಮೂರ್ತಿ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಸರಣಿ ಭಾರತದ ಕೈವಶ

ಟಿ20: ಹಾರ್ದಿಕ್, ಶಿವಂ ಅಬ್ಬರ • ರವಿ, ರಾಣಾ ಮಿಂಚು

ಪುಣೆ (ಪಿಟಿಐ): ಸ್ಪಿನ್ನರ್ ರವಿ ಬಿಷ್ಣೋಯಿ ಮತ್ತು ಮಧ್ಯಮವೇಗಿ ಹರ್ಷಿತ್ ರಾಣಾ ಅವರ ದಾಳಿಯ ಮುಂದೆ ಇಂಗ್ಲೆಂಡ್ ತಂಡದ ಅಬ್ಬರ ಅಡಗಿತು. ಭಾರತ ತಂಡಕ್ಕೆ ಟಿ20 ಕ್ರಿಕೆಟ್ ಸರಣಿಯು ಕೈವಶವಾಯಿತು.

ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಇಂಗ್ಲೆಂಡ್ ಎದುರಿನ ನಾಲ್ಕನೇ ಟಿ20 ಪಂದ್ಯದಲ್ಲಿ ಭಾರತ ತಂಡವು 15 ರನ್‌ಗಳಿಂದ ಜಯಿಸಿತು. ಐದು ಪಂದ್ಯಗಳ ಸರಣಿಯಲ್ಲಿ 3–1ರಿಂದ ಮುನ್ನಡೆ ಸಾಧಿಸಿತು.

182 ರನ್‌ಗಳ ಗೆಲುವಿನ ಗುರಿಯನ್ನು ಬೆನ್ನಟ್ಟಿದ್ದ ಇಂಗ್ಲೆಂಡ್ ಭರ್ಜರಿ ಆರಂಭ ಮಾಡಿತು. ಬೆನ್ ಡಕೆಟ್ (39 ರನ್) ಮತ್ತು ಫಿಲಿಪ್ ಸಾಲ್ಟ್ (23 ರನ್) ಅವರು ಕೇವಲ ಆರು ಓವರ್‌ಗಳಲ್ಲಿ 62 ರನ್ ಸೇರಿಸಿದರು. ಇದರಿಂದಾಗಿ ಇಂಗ್ಲೆಂಡ್ ಗೆಲುವು ಸುಲಭವಾಗಲಿದೆ ಎಂಬ ಭಾವ ಮೂಡಿತ್ತು. ಆದರೆ ಎಡಗೈ ಸ್ಪಿನ್ನರ್ ಅಕ್ಷರ್ ಪಟೇಲ್ ಅವರು ಸಾಲ್ಟ್ ಅವರನ್ನು ಬೌಲ್ಡ್ ಮಾಡಿ, ಜೊತೆಯಾಟ ಮುರಿದರು. ಇಂಗ್ಲೆಂಡ್ ತಂಡದ ಗಾಯಕ್ಕೆ ರವಿ ಬಿಷ್ಣೋಯಿ ಉಪ್ಪು ಸವರಿದರು. 7 ಬೌಂಡರಿ ಮತ್ತು 1 ಸಿಕ್ಸರ್ ಹೊಡೆದು ಅಬ್ಬರಿಸುತ್ತಿದ್ದ ಡಕೆಟ್ ವಿಕೆಟ್ ಗಳಿಸಿದ ರವಿ, ಜೋಸ್ ಬಟ್ಲರ್‌ಗೂ ಪೆವಿಲಿಯನ್ ದಾರಿ ತೋರಿಸಿದರು.

ಆದರೆ ಕ್ರೀಸ್‌ಗೆ ಬಂದ ಹ್ಯಾರಿ ಬ್ರೂಕ್ 26 ಎಸೆತಗಳಲ್ಲಿ 51 ರನ್ ಸೂರೆ ಮಾಡಿದರು. ಅವರ ವಿಕೆಟ್ ಕಬಳಿಸಿದ ವರುಣ್ ಚಕ್ರವರ್ತಿ ಭಾರತ ತಂಡದಲ್ಲಿ ಮತ್ತೆ ಹೋರಾಟದ ಕಿಚ್ಚು ಹಚ್ಚಿದರು. ಇದರ ನಂತರ ಬೌಲರ್‌ಗಳದ್ದೇ ದರ್ಬಾರು. ಹರ್ಷಿತ್ ರಾಣಾ ಮಧ್ಯಮ ಕ್ರಮಾಂಕವನ್ನು ಕಾಡಿದರು. ಜಯದತ್ತ ಮುನ್ನಡೆಸಿದರು.

ಸಕೀಬ್ ಮಿಂಚು: ಟಾಸ್ ಗೆದ್ದ ಇಂಗ್ಲೆಂಡ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನಾಯಕ ಜೋಸ್ ಬಟ್ಲರ್ ಅವರ ಯೋಜನೆ ಆರಂಭದಲ್ಲಿ ಫಲ ನೀಡಿತು. ಬಲಗೈ ವೇಗಿ ಸಕೀಬ್ ಮೆಹಮೂದ್ ಅವರು ಪಂದ್ಯದಲ್ಲಿ ಹಾಕಿದ ತಮ್ಮ ಮೊದಲ ಓವರ್‌ನಲ್ಲಿಯೇ ಮೂವರು ಪ್ರಮುಖ ಬ್ಯಾಟರ್‌ಗಳ ವಿಕೆಟ್‌ಗಳನ್ನು ಕಬಳಿಸಿದರು. ಅದು ಇನಿಂಗ್ಸ್‌ನ ಎರಡನೇ ಓವರ್ ಕೂಡ ಆಗಿತ್ತು.

ಸಕೀಬ್ ಹಾಕಿದ ಓವರ್‌ನ ಮೊದಲ ಎಸೆತದಲ್ಲಿ ಸಂಜು ಸ್ಯಾಮ್ಸನ್, ಎರಡನೇಯ ಎಸೆತದಲ್ಲಿ ತಿಲಕ್ ವರ್ಮಾ ಮತ್ತು 6ನೇ ಎಸೆತದಲ್ಲಿ ನಾಯಕ ಸೂರ್ಯಕುಮಾರ್ ಯಾದವ್ ಔಟಾದರು. ಅದರಲ್ಲಿ ವರ್ಮಾ ಮತ್ತು ಸೂರ್ಯ ಖಾತೆಯನ್ನೇ ತೆರೆಯಲಿಲ್ಲ. ಈ ನಡುವೆಯೂ ದಿಟ್ಟತನದಿಂದ ಬ್ಯಾಟ್ ಬೀಸುತ್ತಿದ್ದ ಅಭಿಷೇಕ್ ಶರ್ಮಾ (29; 19ಎ) ಮತ್ತು ರಿಂಕು ಸಿಂಗ್ (30; 26ಎ, 4X4, 6X1) ಅವರು ಚೇತರಿಕೆ ನೀಡುವ ಪ್ರಯತ್ನ ಮಾಡಿದರು. 4ನೇ ವಿಕೆಟ್ ಜೊತೆಯಾಟದಲ್ಲಿ 45 ರನ್ ಸೇರಿಸಿದರು.

ಹಾರ್ದಿಕ್-ಶಿವಂ ಅಬ್ಬರ: ಭಾರತ ತಂಡವು 79 ರನ್‌ಗಳಿಗೆ 5 ವಿಕೆಟ್‌ಗಳನ್ನು ಕಳೆದುಕೊಂಡಿತ್ತು. ಆ ಸಂದರ್ಭದಲ್ಲಿ ಜೊತೆಗೂಡಿದ ಶಿವಂ (53; 34ಎಸೆತ, 4X7, 6X2) ಮತ್ತು ಹಾರ್ದಿಕ್ (53; 30ಎ, 4X4, 6X4) 6ನೇ ವಿಕೆಟ್ ಜೊತೆಯಾಟದಲ್ಲಿ 87 ರನ್ ಸೇರಿಸಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 181 ರನ್‌ಗಳ ಸ್ಪರ್ಧಾತ್ಮಕ ಮೊತ್ತವನ್ನು ಗಳಿಸಲು ಸಾಧ್ಯವಾಯಿತು.

ಶಿವಂ ಅವರಿಗಿಂತ ಹೆಚ್ಚು ವೇಗವಾಗಿ ಹಾರ್ದಿಕ್ ರನ್ ಗಳಿಸಿದರು. 18ನೇ ಓವರ್‌ನಲ್ಲಿ ಹಾರ್ದಿಕ್ ಔಟಾಗಿ ಜೊತೆಯಾಟ ಮುರಿಯಿತು. ಇನಿಂಗ್ಸ್ ಕೊನೆಯ ಎಸೆತದಲ್ಲಿ ಶಿವಂ ಕೂಡ ರನೌಟ್ ಆದರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 9ಕ್ಕೆ181 (ಅಭಿಷೇಕ್ ಶರ್ಮಾ 29, ರಿಂಕು ಸಿಂಗ್ 30, ಶಿವಂ ದುಬೆ 53, ಹಾರ್ದಿಕ್ ಪಾಂಡ್ಯ 53, ಸಕೀಬ್ ಮೆಹಮೂದ್ 35ಕ್ಕೆ3, ಜೆಮಿ ಓವರ್ಟನ್ 32ಕ್ಕೆ2) ಇಂಗ್ಲೆಂಡ್: 19.4 ಓವರ್‌ಗಳಲ್ಲಿ 166 (ಫಿಲಿಪ್ ಸಾಲ್ಟ್ 23, ಬೆನ್ ಡಕೆಟ್ 39, ಹ್ಯಾರಿ ಬ್ರೂಕ್ 51, ವರುಣ ಚಕ್ರವರ್ತಿ 28ಕ್ಕೆ2, ರವಿ ಬಿಷ್ಣೋಯಿ 28ಕ್ಕೆ3, ಹರ್ಷಿತ್ ರಾಣಾ 33ಕ್ಕೆ3). **ಫಲಿತಾಂಶ:** ಭಾರತ ತಂಡಕ್ಕೆ 15 ರನ್ ಜಯ. ಸರಣಿಯಲ್ಲಿ 3–1ರಿಂದ ಮುನ್ನಡೆ. ಪಂದ್ಯದ ಆಟಗಾರ: ಶಿವಂ ದುಬೆ.



ಶಿವಂ ದುಬೆ ಬ್ಯಾಟಿಂಗ್ ವೈಖರಿ —ಪಿಟಿಐ ಚಿತ್ರ

ಸಂಗ್ವಾನ್‌ಗೆ ವಿರಾಟ್ ವಿಕೆಟ್ ಸಂಭ್ರಮ

ನವದೆಹಲಿ (ಪಿಟಿಐ): ವಿರಾಟ್ ಕೊಹ್ಲಿ ಅವರ ಬ್ಯಾಟಿಂಗ್ ನೋಡಲು ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಶುಕ್ರವಾರ ಸೇರಿದ್ದ 10 ಸಾವಿರಕ್ಕೂ ಹೆಚ್ಚು ಪ್ರೇಕ್ಷಕರಿಗೆ ನಿರಾಸೆಯಾಯಿತು.

ಇಲ್ಲಿ ನಡೆಯುತ್ತಿರುವ ರೈಲ್ವೆ ತಂಡದ ವಿರುದ್ಧದ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ದೆಹಲಿ ತಂಡದಲ್ಲಿ ಆಡುತ್ತಿರುವ ವಿರಾಟ್ ಕೇವಲ 6 ರನ್ ಗಳಿಸಿ ಔಟಾದರು. ಅವರ ದೀರ್ಘ ಇನಿಂಗ್ಸ್ ನೋಡುವ ನಿರೀಕ್ಷೆಯಿಂದ ಬಂದಿದ್ದ ಜನರಿಗೆ ನಿರಾಸೆಯಾಯಿತು. ಆದರೆ ಇದೆಲ್ಲದರ ನಡುವೆ ವಿರಾಟ್ ವಿಕೆಟ್ ಗಳಿಸಿದ ರೈಲ್ವೆಯ ಹಿಮಾಂಶು ಸಂಗ್ವಾನ್ ಈಗ 'ಹೀರೊ' ಆಗಿದ್ದಾರೆ.



ವಿರಾಟ್ ಕೊಹ್ಲಿ ವಿಕೆಟ್ ಗಳಿಸಿ ಸಂಭ್ರಮಿಸಿದ ರೈಲ್ವೇಸ್ ತಂಡದ ಹಿಮಾಂಶು ಸಂಗ್ವಾನ್ (ಎಡ)

ವೇಗದ ಬೌಲರ್ ಸಂಗ್ವಾನ್ 19 ವರ್ಷದೊಳಗಿನವರ ವಿಭಾಗದ ಕ್ರಿಕೆಟ್ ಆಡುವಾಗ ದೆಹಲಿ ತಂಡವನ್ನು ಪ್ರತಿನಿಧಿಸುತ್ತಿದ್ದರು. ಅವರು ರಿಷಭ್ ಪಂತ್ ಜೊತೆಗೆ ದೆಹಲಿ ತಂಡದಲ್ಲಿ ಆಡಿದ್ದರು. ಈಗ ರೈಲ್ವೆ ತಂಡವನ್ನು ಸೇರಿದ್ದಾರೆ. ಅವರು ರೈಲ್ವೆ ಇಲಾಖೆಯಲ್ಲಿ ಟಿಕೆಟ್ ನಿರೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕೊಹ್ಲಿ ಕಳೆದ ಟೆಸ್ಟ್ ಸರಣಿಯಲ್ಲಿ ಆಫ್‌ಸ್ಟಂಪ್ ಹೊರಗಿನ ಎಸೆತಗಳನ್ನು ಆಡುವಲ್ಲಿ ವಿಫಲರಾಗಿ ಔಟಾಗುತ್ತಿದ್ದರು. ಆದರೆ ಇಲ್ಲಿ ಸಂಗ್ವಾನ್ ಹಾಕಿದ ಉತ್ತಮ ಲೆಂಗ್ತ್ ಎಸೆತವನ್ನು ಡ್ರೈವ್ ಮಾಡುವ ಪ್ರಯತ್ನದಲ್ಲಿ ಕ್ಲೀನ್‌ಬೌಲ್ಡ್ ಆದರು.

ರಾಷ್ಟ್ರೀಯ ಕ್ರೀಡಾಕೂಟ: ಶ್ರೀಹರಿ ನಟರಾಜ್‌ಗೆ ಬೆಳ್ಳಿ

ಧಿನಿಧಿ, ಗಂಗೂಲಿಗೆ ಚಿನ್ನದ ಪದಕ

ಡೆಹ್ರಾಡೂನ್/ಹಲ್ದ್ವಾನಿ (ಪಿಟಿಐ): ಕರ್ನಾಟಕದ ಧಿನಿಧಿ ದೇಸಿಂಗು ಮತ್ತು ಶಾನ್ ಗಂಗೂಲಿ ಅವರು ಉತ್ತರಾಖಂಡದ ಹಲ್ದ್ವಾನಿಯಲ್ಲಿನಡೆಯುತ್ತಿರುವ ರಾಷ್ಟ್ರೀಯ ಕ್ರೀಡಾಕೂಟದ ಈಜು ಸ್ಪರ್ಧೆಯಲ್ಲಿ ಚಿನ್ನದ ಪದಕಕ್ಕೆ ಕೊರಳೊಡ್ಡಿದರು.

ಸ್ಪರ್ಧೆಯ ಮೂರನೇ ದಿನವಾದ ಶುಕ್ರವಾರ ಕರ್ನಾಟಕ ಮತ್ತು ಮಹಾರಾಷ್ಟ್ರ ಈಜುಪಟುಗಳ ಮಧ್ಯೆ ತೀವ್ರ ಪೈಪೋಟಿ ಏರ್ಪಟ್ಟಿತು. ಎರಡೂ ರಾಜ್ಯಗಳು ತಲಾ ಎರಡು ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡವು. ಈಜು ಸ್ಪರ್ಧೆಯಲ್ಲೇ ಕರ್ನಾಟಕ ಈವರೆಗೆ ಒಟ್ಟು 15 ಪದಕಗಳನ್ನು (ಎಂಟು ಚಿನ್ನ, ನಾಲ್ಕು ಬೆಳ್ಳಿ ಮತ್ತು ಮೂರು ಕಂಚು) ಗೆದ್ದುಕೊಂಡಿದೆ.

ಮಹಿಳೆಯರ 50 ಮೀಟರ್ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ 14 ವರ್ಷ ವಯಸ್ಸಿನ ಧಿನಿಧಿ 26.96 ಸೆಕೆಂಡ್‌ನಲ್ಲಿ ಗುರಿ ಮುಟ್ಟಿದರು. ಮಹಾರಾಷ್ಟ್ರದ ಆವಂತಿಕಾ ಚೌಹಾಣ್ (27.28ಸೆ) ಬೆಳ್ಳಿ ಗೆದ್ದರೆ, ಕರ್ನಾಟಕದ ನೀನಾ ವೆಂಕಟೇಶ್ (27.34) ಕಂಚಿನ ಪದಕ ಜಯಿಸಿದರು. ಧಿನಿಧಿಗೆ ಕೂಟದಲ್ಲಿ ಇದು ನಾಲ್ಕನೇ ಚಿನ್ನ ಸೇರಿದಂತೆ ಐದನೇ ಪದಕವಾಗಿದೆ.

ಪುರುಷರ 400 ಮೀಟರ್ ಮೆಡ್ಲೆ ಸ್ಪರ್ಧೆಯಲ್ಲಿ ಶಾನ್ 4 ನಿಮಿಷ 29.10 ಸೆಕೆಂಡ್‌ನಲ್ಲಿ ಗುರಿ ತಲುಪಿ ಚಾಂಪಿಯನ್ ಆದರು. ಗುಜರಾತ್‌ನ ಆರ್ಯನ್ ನೆಹ್ರಾ (4ನಿ.31.81ಸೆ) ಮತ್ತು ಮಧ್ಯಪ್ರದೇಶದ ಅದ್ವೈತ್ ಪಾಗೆ (4ನಿ.35.83ಸೆ) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಜಯಿಸಿದರು.

ಪುರುಷರ 50 ಮೀಟರ್ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಕರ್ನಾಟಕ 24 ವರ್ಷ ವಯಸ್ಸಿನ ಶ್ರೀಹರಿ ನಟರಾಜ್ 23.37 ಸೆಕೆಂಡ್‌ನಲ್ಲಿ ಗುರಿ ಮುಟ್ಟಿ ಬೆಳ್ಳಿ ಪದಕ ಗೆದ್ದರು. ಒಲಿಂಪಿಯನ್ ಶ್ರೀಹರಿ ಅವರಿಗೆ ಕೂಟದಲ್ಲಿ ಇದು ನಾಲ್ಕನೇ ಪದಕ. ಮಹಾರಾಷ್ಟ್ರದ ಮಹೀರ್ ಅಂಬ್ರೆ (23.29ಸೆ) ಚಿನ್ನ ಗೆದ್ದರೆ, ತಮಿಳುನಾಡಿನ ಜೊಶುವಾ ಥಾಮಸ್ ಕಂಚು ತಮ್ಮದಾಗಿಸಿಕೊಂಡರು.

ಮಹಿಳೆಯರ 800 ಮೀಟರ್ ಫ್ರೀಸ್ಟೈಲ್‌ನಲ್ಲಿ ಕರ್ನಾಟಕದ ಶ್ರೀಚರಣಿ ತುಮು ಕಂಚಿನ ಪದಕ ಜಯಿಸಿದರು. ಅವರು 9 ನಿಮಿಷ 28.45 ಸೆಕೆಂಡ್‌ನಲ್ಲಿ ಗುರಿ ಮುಟ್ಟಿದರು. ದೆಹಲಿಯ ಭವ್ಯಾ ಸಚ್‌ದೇವ (9ನಿ.17.60ಸೆ) ಮತ್ತು ಅಸ್ಸಾಂನ ಸುಭ್ರಾನ್ಸಿನಿ ಪ್ರಿಯದರ್ಶಿನಿ (9ನಿ.28.43ಸೆ) ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕ ಗೆದ್ದರು.



50 ಮೀಟರ್ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಪದಕ ಗೆದ್ದ ಮಹಾರಾಷ್ಟ್ರದ ಆವಂತಿಕಾ ಚೌಹಾಣ್ (ಬೆಳ್ಳಿ), ಕರ್ನಾಟಕದ ಧಿನಿಧಿ ದೇಸಿಂಗು (ಚಿನ್ನ), ನೀನಾ ವೆಂಕಟೇಶ್ (ಕಂಚು).

ರಾಷ್ಟ್ರೀಯ ಕ್ರೀಡಾಕೂಟ: ಪದಕ ಪಟ್ಟಿ

	ತಂಡ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಮಣಿಪುರ	9	7	3	19
2	ಎಸ್‌ಎಸ್‌ಸಿಬಿ	9	6	3	18
3	ಕರ್ನಾಟಕ	9	4	4	17
4	ಮಹಾರಾಷ್ಟ್ರ	7	16	9	32
5	ಮಧ್ಯಪ್ರದೇಶ	5	3	3	11

ಬೂಮ್ರಾ, ಮಂದಾನಗೆ ಬಿಸಿಸಿಐ ಗೌರವ
ಸಚಿನ್‌ಗೆ ಜೀವಮಾನ ಸಾಧನೆ ಪ್ರಶಸ್ತಿ



ತೆಂಡೂಲ್ಕರ್



ಬೂಮ್ರಾ



ಮಂದಾನ

ಮುಂಬೈ (ಪಿಟಿಐ): ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಮತ್ತು ಮಹಿಳಾ ತಂಡದ ಬ್ಯಾಟರ್ ಸ್ಮೃತಿ ಮಂದಾನ ಅವರು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಕ್ರಮವಾಗಿ ಶ್ರೇಷ್ಠ ಆಟಗಾರ ಮತ್ತು ಆಟಗಾರ್ತಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ದಿಗ್ಗಜ ಸಚಿನ್ ತೆಂಡೂಲ್ಕರ್ ಅವರಿಗೆ ಜೀವಮಾನ ಸಾಧನೆಗಾಗಿ ಕರ್ನಲ್ ಸಿ.ಕೆ. ನಾಯ್ಡು ಪ್ರಶಸ್ತಿಯನ್ನು ನೀಡಲಾಗುತ್ತಿದೆ.

ಮುಂಬೈನಲ್ಲಿ ಶನಿವಾರ ನಡೆಯಲಿರುವ ಬಿಸಿಸಿಐ ವಾರ್ಷಿಕ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ. 31 ವರ್ಷ ವಯಸ್ಸಿನ ಬೂಮ್ರಾ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್‌ನ (ಐಸಿಸಿ) ಸರ್ ಗ್ಯಾರ್‌ಫೀಲ್ಡ್ ಸೋಬರ್ಸ್ ವರ್ಷದ ಕ್ರಿಕೆಟಿಗ ಪ್ರಶಸ್ತಿಗೂ ಆಯ್ಕೆಯಾಗಿದ್ದರು. ಅವರಿಗೆ ಬಿಸಿಸಿಐ ಪಾಲಿ ಉಮ್ರಿಗರ್ ಪ್ರಶಸ್ತಿ ನೀಡಲಿದೆ.

ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಈಚೆಗೆ ನಿವೃತ್ತಿ ಘೋಷಿಸಿದ ಸ್ಪಿನ್ ತಾರೆ ಆರ್. ಅಶ್ವಿನ್ ಅವರನ್ನು ವಿಶೇಷ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಸರ್ಫರಾಜ್ ಖಾನ್ ಮತ್ತು ಆಶಾ ಶೋಭನಾ ಕ್ರಮವಾಗಿ ಪುರುಷ ಮತ್ತು ಮಹಿಳಾ ವಿಭಾಗದಲ್ಲಿ ಉತ್ತಮ ಅಂತರರಾಷ್ಟ್ರೀಯ ಪದಾರ್ಪಣೆ ಪ್ರಶಸ್ತಿಗಳನ್ನು ಪಡೆಯಲಿದ್ದಾರೆ.

ಭಾರತದ ಅಭಿಯಾನ ಇಂದಿನಿಂದ

ನವದೆಹಲಿ (ಪಿಟಿಐ): ಭಾರತ ತಂಡವು ಡೇವಿಸ್ ಕಪ್ ಟೆನಿಸ್ ವಿಶ್ವಗುಂಪಿನ ಪಂದ್ಯದಲ್ಲಿ ಶನಿವಾರ ಪಶ್ಚಿಮ ಆಫ್ರಿಕಾದ ಸಣ್ಣ ದೇಶ ಟೋಗೊ ಎದುರು ಅಭಿಯಾನ ಆರಂಭಿಸಲಿದೆ.

ಭಾರತಕ್ಕೆ (38) ಹೋಲಿಸಿದರೆ ಟೋಗೊ (73) ರ‍್ಯಾಂಕಿಂಗ್‌ನಲ್ಲಿ ಕೆಳಹಂತದಲ್ಲಿದೆ. ರೋಹಿತ್ ರಾಜ್‌ಪಾಲ್ ನೇತೃತ್ವದ ಭಾರತ ತಂಡ ಕಣಕ್ಕಿಳಿಯಲಿದೆ. ಎನ್.ಶ್ರೀರಾಮ್ ಬಾಲಾಜಿ, ರಾಮ್ ಕುಮಾರ್ ರಾಮನಾಥನ್, ಶಶಿಕುಮಾರ್ ಮುಕುಂದ್, ರಿತ್ವಿಕ್ ಚೌಧರಿ ಬೊಲ್ಲಿಪಲ್ಲಿ, ಕರಣ್ ಸಿಂಗ್ ತಂಡದಲ್ಲಿದ್ದಾರೆ.

ಶನಿವಾರ ಸಿಂಗಲ್ಸ್ ಸ್ಪರ್ಧೆಯಲ್ಲಿ ಶಶಿಕುಮಾರ್ ಅವರು ಲಿಯೋವಾ ಅಯ್ಯೈಟ್ ಅಜಾವೊನ್ ಅವರನ್ನು; ರಾಮ್‌ಕುಮಾರ್ ಅವರು ಥಾಮಸ್ ಸೆಟಾಡ್ಜಿ ಅವರನ್ನು ಎದುರಿಸಲಿದ್ದಾರೆ.



ಶಶಿಕುಮಾರ್ ಮುಕುಂದ್

ಬಿಎಫ್‌ಸಿಗೆ ಪಂಜಾಬ್ ಸವಾಲು

ನವದೆಹಲಿ (ಪಿಟಿಐ): ಬೆಂಗಳೂರು ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್‌ನ (ಐಎಸ್‌ಎಲ್) ಪಂದ್ಯದಲ್ಲಿ ಶನಿವಾರ ಪಂಜಾಬ್ ಎಫ್‌ಸಿ ತಂಡವನ್ನು ಎದುರಿಸಲಿದೆ.

ಇಲ್ಲಿನ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಆಡಿದ ಕೊನೆಯ ನಾಲ್ಕು ಪಂದ್ಯಗಳಲ್ಲೂ ಪಂಜಾಬ್ ತಂಡಕ್ಕೆ ಗೆಲುವು ಒಲಿದಿಲ್ಲ. ಋತುವಿನ ಆರಂಭದಲ್ಲಿ ಬೆಂಗಳೂರು ವಿರುದ್ಧ 0–1ರಿಂದ ಸೋತಿದ್ದ ಆತಿಥೇಯ ತಂಡವು, ಇದೀಗ ಸುಧಾರಿತ ಪ್ರದರ್ಶನದೊಂದಿಗೆ ಮುಯ್ಯಿ ತೀರಿಸಿಕೊಳ್ಳುವ ಛಲದಲ್ಲಿದೆ.

ಬೆಂಗಳೂರು ತಂಡದ ಸ್ಥಿತಿಯೂ ಸದ್ಯ ಉತ್ತಮವಾಗಿಲ್ಲ. ಆರಂಭದಲ್ಲಿ ಅಮೋಘ ಪ್ರದರ್ಶನ ನೀಡಿದ್ದ ಸುನಿಲ್ ಚೆಟ್ರಿ ನಾಯಕತ್ವದ ತಂಡವು ಕೊನೆಯ ಐದು ಪಂದ್ಯಗಳ ಪೈಕಿ ನಾಲ್ಕನ್ನು ಸೋತಿದ್ದು, ಒಂದರಲ್ಲಿ ಡ್ರಾ ಸಾಧಿಸಿದೆ.

ಬಿಎಫ್‌ಸಿ 18 ಪಂದ್ಯಗಳಿಂದ (8 ಗೆಲುವು, 4 ಡ್ರಾ, 6 ಸೋಲು) 28 ಅಂಕಗಳೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಐದನೇ ಸ್ಥಾನದಲ್ಲಿದೆ. 16 ಪಂದ್ಯಗಳಿಂದ 20 ಅಂಕಗಳೊಂದಿಗೆ ಪಂಜಾಬ್ ಒಂಬತ್ತನೇ ಸ್ಥಾನದಲ್ಲಿದೆ. ಮೋಹನ್ ಬಾಗನ್ (40) ಮತ್ತು ಗೋವಾ ಎಫ್‌ಸಿ (33) ಕ್ರಮವಾಗಿ ಮೊದಲೆರಡು ಸ್ಥಾನದಲ್ಲಿವೆ.

ಪಂದ್ಯ ಆರಂಭ: ಸಂಜೆ 5, ನೇರಪ್ರಸಾರ: ಸ್ಪೋರ್ಟ್ಸ್ 18

19 ವರ್ಷದೊಳಗಿನವರ ಮಹಿಳಾ ಟಿ20 ಕ್ರಿಕೆಟ್ ವಿಶ್ವಕಪ್

ಫೈನಲ್‌ನಲ್ಲಿ ಭಾರತ–ದಕ್ಷಿಣ ಆಫ್ರಿಕಾ ಹಣಾಹಣಿ

ಕ್ವಾಲಾಲಂಪುರ (ಪಿಟಿಐ): ಭಾರತ ಮತ್ತು ದಕ್ಷಿಣ ಆಫ್ರಿಕಾ ತಂಡಗಳು 19 ವರ್ಷದೊಳಗಿನವರ ಮಹಿಳಾ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಶುಕ್ರವಾರ ನಡೆದ ಸೆಮಿಫೈನಲ್‌ನಲ್ಲಿ ಎಡಗೈ ಸ್ಪಿನ್ನರ್‌ಗಳಾದ ಪರುಣಿಕಾ ಸಿಸೋಡಿಯಾ (21ಕ್ಕೆ3) ಮತ್ತು ವೈಷ್ಣವಿ ಶರ್ಮಾ(23ಕ್ಕೆ3) ಅವರ ಪರಿಣಾಮಕಾರಿ ದಾಳಿಯ ಬಲದಿಂದ ಭಾರತ ತಂಡವು 9 ವಿಕೆಟ್‌ಗಳಿಂದ ಇಂಗ್ಲೆಂಡ್ ವಿರುದ್ಧ ಗೆದ್ದಿತು.

ಟಾಸ್ ಗೆದ್ದ ಇಂಗ್ಲೆಂಡ್ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಪರುಣಿಕಾ ಮತ್ತು ವೈಷ್ಣವಿ ಅವರ ದಾಳಿಯ ಮುಂದೆ ಇಂಗ್ಲೆಂಡ್ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 112 ರನ್‌ಗಳ ಸಾಧಾಣ ಮೊತ್ತ ಕಲೆಹಾಕಿತು.

ಗುರಿ ಬೆನ್ನಟ್ಟಿದ ಭಾರತ ತಂಡವು 15 ಓವರ್‌ಗಳಲ್ಲಿ 1 ವಿಕೆಟ್‌ಗೆ 117 ರನ್ ಗಳಿಸಿತು. ಜಿ. ಕಮಲಿನಿ (ಔಟಾಗದೇ 56; 50ಎ, 4X8) ಅವರ ಅರ್ಧಶತಕದ ಬಲದಿಂದ ಇನಿಂಗ್ಸ್‌ನಲ್ಲಿ ಇನ್ನೂ 5 ಓವರ್‌ಗಳು ಬಾಕಿಯಿದ್ದಾಗಲೇ ಜಯ ಗಳಿಸಿತು.



ವಿಕೆಟ್ ಪಡೆದ ಪರುಣಿಕಾ ಸಿಸೋಡಿಯಾ (ಬಲ) ಅವರನ್ನು ಅಭಿನಂದಿಸಿದ ನಿಕಿ ಪ್ರಸಾದ್ —ಎಕ್ಸ್ ಚಿತ್ರ

ಇನ್ನೊಂದು ಸೆಮಿಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡವು 5 ವಿಕೆಟ್‌ಗಳಿಂದ ಆಸ್ಟ್ರೇಲಿಯಾ ಎದುರು ಜಯಿಸಿತು. ತ್ರಿಷಾ ಅವರು 29 ಎಸೆತಗಳಲ್ಲಿ 35 ರನ್ ಗಳಿಸಿದರು.

ಫೆಬ್ರುವರಿ 2ರಂದು ಬೆಯುಮಾಸ್ ಓವಲ್ ಕ್ರೀಡಾಂಗಣದಲ್ಲಿ ನಡೆಯಲಿರುವ ಫೈನಲ್‌ನಲ್ಲಿ ಉಭಯ ತಂಡಗಳು ಸೆಣಸಲಿವೆ.

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್ : 20 ಓವರ್‌ಗಳಲ್ಲಿ 8ಕ್ಕೆ113 (ದವಿನಾ ಪೆರಿನ್ 45, ಅಬಿ ನೊರ್ಗ್ರೋವ್ 30,ಆಯುಷಿ ಶುಕ್ಲಾ 21ಕ್ಕೆ2, ಪರುಣಿಕಾ ಸಿಸೋಡಿಯಾ 21ಕ್ಕೆ3, ವೈಷ್ಣವಿ ಶರ್ಮಾ 23ಕ್ಕೆ3) ಭಾರತ: 15 ಓವರ್‌ಗಳಲ್ಲಿ 1 ವಿಕೆಟ್‌ಗೆ 117 (ಜಿ. ಕಮಲಿನಿ ಔಟಾಗದೇ 56, ಜಿ. ತ್ರಿಷಾ 35, ಪೋಬೆ ಬ್ರೆಟ್ 31ಕ್ಕೆ1) **ಫಲಿತಾಂಶ:** ಭಾರತ ತಂಡಕ್ಕೆ 9 ವಿಕೆಟ್‌ಗಳ ಜಯ. ಪಂದ್ಯದ ಆಟಗಾರ್ತಿ: ಪರುಣಿಕಾ ಸಿಸೋಡಿಯಾ